
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

11 ಜೂನ್ 2014 ಪುಟ 20 ರೂ. 15/-



ವಿಶೇಷ ಮಹಿಳೆ
ಮಾಯಾ ಏಂಜೆಲೊ




ಅಹಿಂದ ವಿರುದ್ಧ ಒಲಿಂಬ್ರಾ!

ಮೈಸೂರು
NTMS
ಶಾಲೆ ಉಳಿಸಲು ಹೋರಾಟ

ಮಂಡ್ಯ
ಕಾಂಗ್ರೆಸ್ಸಿಗೆ ಕಾಂಗ್ರೆಸ್ಸೇ ಶತ್ರು!


ಉತ್ತರ ಕನ್ನಡ
ಮತಾಂಧ ಅನಂತ್ಮಾಣಿ ಹುಚ್ಚಾಟ


ದಕ್ಷಿಣ ಕನ್ನಡ
ಭೂಮಿ ಅವ್ಯವಹಾರ ಧರ್ಮಕ್ಕೆ ಅಪಚಾರ



ಕೆನೆತ್ ಆಂಡರ್ಸನ್ ಹೊಸ ಕತೆ

ವಿಶ್ವನಾಥ್ ಸಂದರ್ಶನ
ಕಾಂಗ್ರೆಸ್ ಬದಲಾಗಬೇಕು





ಎನ್‌ಟಿಎಂಎಸ್ ಶಾಲೆಯಿಂದ ಮಕ್ಕಳನ್ನು ಓಡಿಸಿ... ಅಲ್ಲಿ ವಿವೇಕಾನಂದರನ್ನು ಸ್ಥಾಪಿಸಿ...


ಕಳೆದ 10 ದಿನಗಳಿಂದ ಮೈಸೂರಿನಲ್ಲಿ ಶಾಲೆಯೊಂದನ್ನು ಉಳಿಸಿಕೊಳ್ಳಲು ನಿರಂತರ ಧರಣಿ ಕಾರ್ಯಕ್ರಮ ನಡೆಯುತ್ತಿದೆ. ಮೈಸೂರಿನ ಬಹುತೇಕ ಪ್ರಗತಿಪರರು ಒಂದಾಗಿ ನಡೆಸುತ್ತಿರುವ ಈ ಆಂದೋಲನಕ್ಕೆ ಸಮಕಾಲೀನ ಕರ್ನಾಟಕದ ಒಟ್ಟಾರೆ ಪರಿಸ್ಥಿತಿಯಲ್ಲಿ ಬಹಳ ಮಹತ್ವವಿದೆ. ಏಕೆಂದರೆ ಈ ಶಾಲೆಯ ಇತಿಹಾಸ ಮತ್ತು ವರ್ತಮಾನಗಳು ಭಾರತದ ಶಿಕ್ಷಣ ವ್ಯವಸ್ಥೆಯ ಇತಿಹಾಸ ಮತ್ತು ವರ್ತಮಾನದೊಂದಿಗೆ ಹೆಣೆದುಕೊಂಡಿವೆ. ಅದರ ಭವಿಷ್ಯವು ಭಾರತದ ಶಿಕ್ಷಣ ವ್ಯವಸ್ಥೆಯ ಭವಿಷ್ಯವಾಗಿರುತ್ತದೆ. ಹಾಗಾಗಿ ಈ ಹೋರಾಟವು ಕೇವಲ 'ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳಿರುವ' ಒಂದು ಶಾಲೆಯನ್ನು ಉಳಿಸಿಕೊಳ್ಳಲು ನಡೆಯುತ್ತಿರುವ ಹೋರಾಟ ಮಾತ್ರವಲ್ಲ.


ಹಾಗೆಯೇ ಇದು ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಒಡ್ಡಲಾಗಿರುವ ಪರೀಕ್ಷೆಯೂ ಸಹ ಹೌದು. ಇಂತಹ ಹಲವು ಪರೀಕ್ಷೆಗಳಲ್ಲಿ ಸರ್ಕಾರ ಉತ್ತೀರ್ಣವಾಗಿಲ್ಲ ಎಂಬುದೂ ನಿಜ.

ಎನ್‌ಟಿಎಂಎಸ್ ಶಾಲೆಯೆಂದು ಕರೆಯಲ್ಪಡುವ ಈ ಶಾಲೆಯು ಶುರುವಾಗಿ 127 ವರ್ಷಗಳಾಗಿವೆ! ಆ ಕಾಲದ ಇಂತಹ ಎಷ್ಟೋ ಶಾಲೆಗಳಂತೆ ಇದೂ ಶಿಕ್ಷಣಾಸಕ್ತ ಗಣ್ಯರೊಬ್ಬರಿಂದ ಆರಂಭವಾಯಿತು. ಇದರ ಹೆಗ್ಗಳಿಕೆಯೆಂದರೆ ಇದು ಮೈಸೂರು ಸಂಸ್ಥಾನದ ಪ್ರಪ್ರಥಮ ಹೆಣ್ಣು ಮಕ್ಕಳ ಶಾಲೆ. ಆ ಕಾರಣಕ್ಕೆ ಇದು 'ಇಂದೂ ನಡೆಯುತ್ತಿರುವ ಅತ್ಯುತ್ತಮ ಶಾಲೆಗಳಲ್ಲಿ ಒಂದಾಗಿ' ಇರಬೇಕಿತ್ತೆಂದು ನಾವೆಲ್ಲರೂ ಬಯಸುವುದು ಸಹಜ ತಾನೇ? ಆದರೆ ಇದು ವಿವೇಕಾನಂದರು ಉಳಿದುಕೊಂಡಿದ್ದರೆಂಬ ಐತಿಹ್ಯವಿರುವ ಮಠದ ಪಕ್ಕದ ಶಾಲೆಯಾದ ಕಾರಣ ಸ್ಮಾರಕವನ್ನಾಗಿಸಬೇಕೆಂದು ಕೆಲವರು ಹೊರಟಿದ್ದಾರೆ. ನಡೆಯುವ ಶಾಲೆಗಳಿಗಿಂತ ಸ್ಮಾರಕಗಳು, ಸ್ಮಶಾನಗಳನ್ನೇ ಪ್ರೀತಿಸುವ ಮನಸ್ಥಿತಿಯ ಜನರವರು.

ಮೈಸೂರು ತಾತಯ್ಯ ಎಂದು ಜನರಿಂದ ಕರೆಸಿಕೊಳ್ಳಲ್ಪಡುತ್ತಿದ್ದ ವೆಂಕಟಕೃಷ್ಣಯ್ಯ ಎಂಬುವರು ಇದನ್ನು 1881ರಲ್ಲಿ ಸ್ಥಾಪಿಸಿದ್ದರು. ಅದಕ್ಕೆ ಅಂಬಸ್ ನರಸಿಂಹ ಅಯ್ಯಂಗಾರ್ ಎಂಬುವರು ನೆರವನ್ನು ಇತ್ತಿದ್ದರಂತೆ. 10 ವರ್ಷದ ನಂತರ ಮೈಸೂರಿನ ಆಗಿನ ಮಹಾರಾಜರು (ತಮ್ಮ ಪತ್ನಿಯನ್ನು ಓದಿಸುವ ಉದ್ದೇಶವೂ ಅವರಿಗಿತ್ತೆಂದು ಹೇಳಲಾಗುತ್ತದೆ) ಶಾಲೆಯನ್ನು ವಹಿಸಿಕೊಂಡರು. ನಿಧಾನಕ್ಕೆ ಅದೊಂದು ಸರ್ಕಾರೀ ಶಾಲೆಯಾಯಿತು. ಹೆಣ್ಣು ಮಕ್ಕಳು ಮಾತ್ರವಲ್ಲದೇ ಹುಡುಗರಿಗೂ ಶಾಲೆಯು ಪ್ರವೇಶ ಕೊಟ್ಟಿತು. ಇದರೊಂದಿಗೆ ನಾವು ಪುಣೆಯಲ್ಲಿ ಹೆಣ್ಣು ಮಕ್ಕಳಿಗಾಗಿ ಶಾಲೆ ತೆಗೆದ ಮತ್ತು ಅಸ್ಪೃಶ್ಯರಿಗೂ ಪ್ರವೇಶ ಕೊಟ್ಟ ಜ್ಯೋತಿ ಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆಯವರನ್ನೂ ನೆನೆಸಿಕೊಳ್ಳಬೇಕು. ಮಧ್ಯಪ್ರದೇಶದ ಭೋಪಾಲದ ಬೇಗಂಗಳು (ನವಾಬೀ) ಇದೇ ರೀತಿಯಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪ್ರಯತ್ನ ಹಾಕಿದ್ದರು. ಕೊಲ್ಹಾಪುರದ ಮಹಾರಾಜರೂ ತಮ್ಮ ಸಂಸ್ಥಾನದಲ್ಲಿ ಶಿಕ್ಷಣಕ್ಕಾಗಿ ತಮಗಿಂತ ನಾಲ್ಕು ಪಟ್ಟು ದೊಡ್ಡದಾದ ಮುಂಬೈ ಪ್ರೆಸಿಡೆನ್ಸಿಯ ಶಿಕ್ಷಣದ ಬಜೆಟ್‌ಗಿಂತ ಹೆಚ್ಚಿನ ಹಣವನ್ನು ವ್ಯಯಿಸುತ್ತಿದ್ದರು.

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ಸರ್ಕಾರವು ಇಲ್ಲಿನ ಜನಸಾಮಾನ್ಯರಿಗೆ ಮುಕ್ತ ಶಿಕ್ಷಣವನ್ನು ನೀಡಲಿಲ್ಲ. ಮೆಕಾಲೆ ತನ್ನ ಕುಪ್ರಸಿದ್ಧ 'ಮೆಕಾಲೆ ಮಿನಿಟ್ಸ್'ನಲ್ಲಿ ಬರೆದಿರುವಂತೆ 'ಬಣ್ಣ ಮತ್ತು ರಕ್ತದಲ್ಲಿ ಭಾರತೀಯರಾಗಿರುವ ಅಭಿರುಚಿ, ಮೌಲ್ಯ ಪ್ರಜ್ಞೆ ಮತ್ತು ನೀತಿಸಂಹಿತೆಗಳಲ್ಲಿ ಬ್ರಿಟಿಷರಾಗಿ ತಯಾರಾಗುವ, ದಲ್ಲಾಳಿ ಕೆಲಸ ಮಾಡಬಲ್ಲ, ಭಾರತದ ಕುಲೀನ ವರ್ಗಗಳ ಒಂದು ಆಯ್ದ ವಿಭಾಗಕ್ಕೆ' ಮಾತ್ರ ಅವರು ಶಿಕ್ಷಣ ನೀಡಲು ಉತ್ಸುಕರಾಗಿದ್ದರು. ಆದರೆ ಕ್ರೈಸ್ತ





ಮಿಷನರಿಗಳು, ದೇಶದ ವಿವಿಧ ಭಾಗಗಳಲ್ಲಿ ನ್ಯಾಷನಲ್ ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ಆರಂಭವಾದ ದೇಶೀ ಸಂಸ್ಥೆಗಳು, ಫುಲೆಯವರಂತಹವರು ಮಾತ್ರ ಬ್ರಿಟಿಷ್ ರಾಜ್ಯದಲ್ಲಿ ಸಾಮಾನ್ಯರಿಗೂ ಶಿಕ್ಷಣ ನೀಡಿದರು. ಅದನ್ನು ಬಿಟ್ಟರೆ ಒಡೆಯರ್, ಕೊಲ್ಹಾಪುರದ ರಾಜ, ಭೋಪಾಲದ ಬೇಗಂನಂತಹವರು ಶಿಕ್ಷಣಕ್ಕಾಗಿ ಹಣ ಖರ್ಚು ಮಾಡಿದರು.

ಮೈಸೂರಿನ ಎನ್‌ಟಿಎಂಎಸ್ ಶಾಲೆಯೂ ಅಂತಹದ್ದರಲ್ಲಿ ಒಂದು. ಇಂತಹ ಶಾಲೆಗಳೇ ನಂತರ ಸರ್ಕಾರೀ ಅನುದಾನಿತ ಶಾಲೆಗಳಾದವು; ಕೆಲವು ಸರ್ಕಾರದ ವಶಕ್ಕೇ ಸೇರಿಕೊಂಡವು. ಮೈಸೂರಿನ ಶಾಲೆಯಿಂದ ಓದಿ ಬೆಳೆದ ಹೆಣ್ಣು ಮಕ್ಕಳೇ ನಂತರ ಅಲ್ಲಿನ ಮಹಾರಾಣಿ ಕಾಲೇಜಿಗೂ ಸೇರುತ್ತಿದ್ದರು. ಇಂತಹ ಹತ್ತು ಹಲವು ಕಾರಣಗಳಿಂದಾಗಿ ಈ ಶಾಲೆಯೊಂದು ವಿಶೇಷ ಶಾಲೆಯಾಗಿದೆ.

ಈ ಶಾಲೆಯ ಪಕ್ಕದಲ್ಲಿದ್ದ ನಿರಂಜನ ಮಠವೆಂಬ ಜಾಗದಲ್ಲಿ ಸ್ವಾಮಿ ವಿವೇಕಾನಂದರು 1892ರಲ್ಲಿ ಒಂದು ದಿನ ತಂಗಿದ್ದರೆಂಬ ಪ್ರತೀತಿ ಇದೆ. ಆ ಎಳೆಯನ್ನು ಹಿಡಿದುಕೊಂಡು ಶಾಲೆಯನ್ನು ಕಬಳಿಸಬೇಕೆಂದು ಹೊರಟಿದ್ದವರಿಗೆ ಇಂಬು ಕೊಟ್ಟದ್ದು, ಕರ್ನಾಟಕದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದಾಗ. ಇಲ್ಲಿ ನಾವು ವಿವೇಕಾನಂದ ಸ್ಫೂರ್ತಿ ಕೇಂದ್ರ ಮಾಡ್ತೀವಿ ಅಂತ ಒಂದು ಟ್ರಸ್ಟ್‌ಅನ್ನು ಕಟ್ಟಿಕೊಂಡಿದ್ದಾರೆ. ಕೆ.ಭೈರವಮೂರ್ತಿ, ಸಿಪಿಕೆ, ದೇಜಗೌ, ಮಳಲಿ ವಸಂತಕುಮಾರ್ ಇವರುಗಳೆಲ್ಲಾ ಅದರಲ್ಲಿದ್ದಂತಿದೆ. ಯಡಿಯೂರಪ್ಪನವರ ಸರ್ಕಾರ ಬಂದಾಗ ಈ ಜಾಗವನ್ನು ತಮಗೆ ಹಸ್ತಾಂತರ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಒಟ್ಟು 66,000 ಚ.ಅಡಿ ಪ್ರದೇಶದಲ್ಲಿ ಹರಡಿಕೊಂಡಿರುವ ಈ ಜಾಗದ ಮಾರುಕಟ್ಟೆ ಮೌಲ್ಯ ಕಡಿಮೆಯೆಂದರೂ 50 ಕೋಟಿ ರೂ. ಇದೆ. ಶಾಲೆಯಲ್ಲಿ 17 ಕೊಠಡಿಗಳಿದ್ದು ಆಟದ ಮೈದಾನ, ಕುಡಿಯುವ ನೀರು, ಶೌಚಾಲಯಗಳು, ರಂಗಮಂದಿರವಿದೆ.

ಎಲ್ಲಾ ಸರ್ಕಾರೀ ಶಾಲೆಗಳಂತೆ ಇದನ್ನೂ ವ್ಯವಸ್ಥಿತವಾಗಿ ಹಾಳುಗೆಡಹುವ ಕೆಲಸವನ್ನು ನಮ್ಮ ಶಿಕ್ಷಣ ಇಲಾಖೆಯು ಲಾಗಾಯ್ತಿನಿಂದಲೂ, ಅದರಲ್ಲೂ 1991ರ ನಂತರ ಮಾಡಿಕೊಂಡು ಬಂದಿದೆ. ಹಾಗಿದ್ದೂ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗ (2008ರಲ್ಲಿ) ಇಲ್ಲಿ 103 ಮಕ್ಕಳು ಓದುತ್ತಿದ್ದರು. ಆಗಿನಿಂದ ಹಸ್ತಾಂತರದ ಪ್ರಕ್ರಿಯೆ ಶುರುವಾಗಿದೆ. ಆದರೆ ಎಲ್ಲರಿಗೂ ಇದು ಗೊತ್ತಾಗಿದ್ದು 2013ರ ಜನವರಿಯಲ್ಲಿ, ಆ ಹೊತ್ತಿಗೆ ಶಾಲೆಯಲ್ಲಿ ಕೇವಲ 23 ವಿದ್ಯಾರ್ಥಿಗಳು ಇದ್ದರು.

ಅಂದರೆ ಬಿಜೆಪಿ ಸರ್ಕಾರವು ಸದರಿ ಜಾಗವನ್ನು ಹಸ್ತಾಂತರಿಸುವ ನಿರ್ಧಾರ ಮಾಡಿದ ನಂತರ 'ಇಲ್ಲಿಂದ ಮಕ್ಕಳನ್ನು ಓಡಿಸಲಾಯಿತು'. ಈ ಮಾತನ್ನು ರೂಪಕಾರ್ಥದಲ್ಲೂ ತೆಗೆದುಕೊಳ್ಳಬಹುದು; ವಾಚ್ಯಾರ್ಥದಲ್ಲಿ ತೆಗೆದುಕೊಂಡರೂ ತಪ್ಪಾಗದು. ಏಕೆಂದರೆ, ಇಂದು ರಾಜ್ಯಾದ್ಯಂತ ಇರುವ ಸಾವಿರಾರು ಸರ್ಕಾರಿ ಶಾಲೆಗಳಿಂದ ಮಕ್ಕಳನ್ನು ಇದೇ ರೀತಿಯಲ್ಲಿ ಖಾಸಗಿ ಶಾಲೆಗಳಿಗೆ ಓಡಿಸಲಾಗಿದೆ. ಅದಕ್ಕಾಗಿ ದ್ವಂದ್ವ ಭಾಷಾ ನೀತಿ, ಒಂದೇ ಕೊಠಡಿಯಲ್ಲಿ ಒಬ್ಬರೇ ಶಿಕ್ಷಕರು ಮೂರು ತರಗತಿಗಳ ವಿದ್ಯಾರ್ಥಿಗಳಿಗೆ ಬೋಧಿಸುವುದು, ಶಿಕ್ಷಕರಿಗೆ ಶಿಕ್ಷಣೇತರ ಕೆಲಸ ನೀಡುವುದು ಇತ್ಯಾದಿ ಹಲವಾರು ವಿಧಾನಗಳನ್ನು ಅಳವಡಿಸಲಾಯಿತು. ಇವ್ಯಾವುವೂ ಆಕಸ್ಮಿಕವೂ ಅಲ್ಲ; ಅನುದ್ದೇಶಪೂರ್ವಕವೂ ಅಲ್ಲವೆಂಬುದಕ್ಕೆ ಹಲವಾರು ಸಾಕ್ಷಿಗಳಿವೆ ಮತ್ತು ತರ್ಕಗಳಿವೆ.

ನಂತರ ಶಾಲೆಗಳನ್ನು ಮುಚ್ಚಬೇಕೆಂದು ಸರ್ಕಾರವು ತೀರ್ಮಾನಿಸಿದಾಗ ವಿದ್ಯಾರ್ಥಿಗಳನ್ನು ಓಡಿಸುವ ಪ್ರಕ್ರಿಯೆಯನ್ನು ಇನ್ನೂ ತೀವ್ರಗೊಳಿಸಲಾಯಿತು. ಅದಕ್ಕೆ ಉದಾಹರಣೆಯಾಗಿ ಬೆಂಗಳೂರಿನ ಜಯನಗರದ ಪಕ್ಕದ ಬಡಾವಣೆಯ ಒಂದು ಶಾಲೆಯ ನಿದರ್ಶನ ನೋಡಬಹು... ಅಲ್ಲಿಗೆ ಇದ್ದಕ್ಕಿದ್ದಂತೆ ನುಗ್ಗಿದ ಶಿಕ್ಷಣ ಇಲಾಖೆ... ಅಧಿಕಾರಿಗಳು ಹತ್ತಿರದ ಇನ್ನೊಂದು ಶಾಲೆಗೆ ಎಲ್ಲಾ ಮಕ್ಕ... ವರ್ಗಾವಣೆಗೊಳ್ಳಬೇಕೆಂದು ತಾಕೀತು ಮಾಡಿ ... ಬಿಟ್ಟರು! ಅದೇ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ... ಯೊಬ್ಬರು ಹೇಳಿದ್ದು 'ನಿಜವಾಗಲೂ ಮಕ್ಕಳನ್ನೆಲ್ಲಾ ... ಓಡಿಸಿದರೆ ಹೇಗಿರುತ್ತೋ, ಹಾಗಿತ್ತು ಆ ದಿನದ ವೈಖ...

ಈ ರೀತಿಯ ಪರೋಕ್ಷ ಮತ್ತು ನೇರ ಮಾರ್ಗಗ... ಎನ್‌ಟಿಎಂಎಸ್ ಶಾಲೆಯಲ್ಲೂ ಅನುಸರಿಸಲಾಯಿ... ಇಂತಹ ಸುಸಜ್ಜಿತ ಶಾಲೆಯನ್ನು ಮತ್ತಷ್ಟು ಚೆನ್ನಾಗಿ ನಡೆ... ಏನೇನು ಮಾಡಬೇಕೆಂದು ಆಲೋಚಿಸುವ ಬದಲು, ಪ್ರ... ಕೋರಿ ಬಂದವರಿಗೆ ನಿರುತ್ಸಾಹದಾಯಕ ಮಾತುಗಳ... ಲಾಯಿತು. ಈ ಶಾಲೆ ಮುಚ್ಚಿಹೋಗುತ್ತದೆ; ನೀವು ಬೇ... ಸೇರಿಸುವುದು ಒಳ್ಳೆಯದು ಎಂದೆಲ್ಲಾ ಹೇಳಲಾಯಿ... ಅಂತಿಮವಾಗಿ 23 ಮಕ್ಕಳು ಮಾತ್ರ ಉಳಿದರು. ಅ... 7 ವಿದ್ಯಾರ್ಥಿಗಳು ಈಗ 7ನೇ ತರಗತಿಯಿಂದ ಮು... ಹೋಗಿರುವುದರಿಂದ 16 ಮಕ್ಕಳು ಮಾತ್ರ ಉಳಿಯು... ಹೊಸದಾಗಿ ಪ್ರವೇಶ ಕೋರಿ 21 ಮಕ್ಕಳ ಪೋಷ... ಮುಂದೆ ಬಂದಿದ್ದಾರೆ. ಆದರೆ ವಿವಿಧ ಮಾರ್ಗಗ... ಅವರನ್ನು ಬೇರೆಡೆಗೆ ದೂಡುವ ಪ್ರಯತ್ನ ಮಾಡಲಾಗು...

ಈ ಶಾಲೆಯನ್ನು ಅಲ್ಲಿಂದ 200 ಮೀ ದ... ದೇವರಾಜ ಶಾಲೆಯ ಜೊತೆ ವಿಲೀನ ಮಾಡುವ ಯೋ... ಸರ್ಕಾರದ್ದು. ಆ ಶಾಲೆಯಲ್ಲಿರುವುದು ಮುಖ್ಯೋಪಾಧ್ಯಾ... ಕೊಠಡಿ ಸೇರಿದಂತೆ ಮೂರು ಕೊಠಡಿಗಳು ಮಾ... ಜೊತೆಗೆ ಅದು ಮುಖ್ಯ ರಸ್ತೆಯಲ್ಲಿರುವ ಜನನಿಬಿಡ ... ಶೈಕ್ಷಣಿಕ ವಾತಾವರಣವಿಲ್ಲ. ಹಾಗೊಂದು ವೇಳೆ ವಿ... ಮಾಡುವುದಾದರೆ, (ಯಾವ ಶಾಲೆಯನ್ನೂ ವಿಲೀ... ಹೆಸರಿನಲ್ಲಿ ಮುಚ್ಚುವುದು ಸರಿಯಲ್ಲ ಎಂಬ ಅಭಿಪ್ರಾ... ವಿದ್ದರೂ) ದೇವರಾಜ ಶಾಲೆಯನ್ನೇ ಐತಿಹಾಸಿಕ ಮಹ... ರುವ ಎನ್‌ಟಿಎಂಎಸ್ ಜೊತೆ ವಿಲೀನ ಮಾಡಬಹು... ಎನ್‌ಟಿಎಂಎಸ್ ಎಂದರೆ ನ್ಯೂ ಟೈಪ್ ಮಾಡೆಲ್ ಸ್ಕೂ... ನಿಜಕ್ಕೂ ಇದನ್ನು ಹೊಸ ಮಾದರಿಯ ಮಾದರಿ ... ಮಾಡುವ ಎಲ್ಲಾ ಸಾಧ್ಯತೆಗಳೂ ಇದ್ದವು. ಅದಕ್ಕೆ ಸರ್ಕಾ... ಮುಂದಾಗುತ್ತಿಲ್ಲ.

ಹೀಗಾಗಿ ಮೈಸೂರಿನ ಕನ್ನಡ ಕ್ರಿಯಾ ಸಮಿತಿ ಹ... ಇನ್ನಿತರ ಪ್ರಗತಿಪರರೆಲ್ಲಾ ಸೇರಿ, ಶಾಲೆಯನ್ನು ಉಳ... ಹೋರಾಟವನ್ನು ಗಂಭೀರವಾಗಿ ತೆಗೆದುಕೊಂಡಿ... 1ವರ್ಷ 5ತಿಂಗಳಿಂದ ಈ ಹೋರಾಟ ನಡೆಯು... ಮೈಸೂರಿನ ಹೆಚ್ಚಿನ ಪ್ರಗತಿಪರರ ಜೊತೆ ... ಸಂಪರ್ಕವಿರುವ ಸಿದ್ದರಾಮಯ್ಯನವರು ಈ ವಿಚಾ... ಬಹಳ ತಡವಾಗಿ ಒಂದು ಮೌಖಿಕ ಆದೇಶದ ಮ... ಹಸ್ತಾಂತರಕ್ಕೆ ತಾತ್ಕಾಲಿಕ ತಡೆಯನ್ನು ನೀಡಿದ್ದಾರೆ. ... ನಿರ್ಣಾಯಕ ಹೆಜ್ಜೆಗಳನ್ನು ಇಡಲು ಸಿದ್ದರಾಮಯ್ಯನ... ಮನಸ್ಸು ಮಾಡದಿರುವುದು ಸ್ಪಷ್ಟವಾಗಿದೆ.

ಹಾಗಾಗಿಯೇ ಮೌಖಿಕ ಆದೇಶಕ್ಕೆ ತೃಪ್ತ... ಮೈಸೂರಿನ ಪ್ರಗತಿಪರರು ನಿರಂತರ ಧರಣಿ ಕ... ಕ್ರಮವನ್ನು ಕೈಬಿಡದೇ ನಡೆಸಿಕೊಂಡು ಹೋಗು... ಎನ್‌ಟಿಎಂಎಸ್ ಶಾಲೆಯ ಹೋರಾಟಕ್ಕೆ ಸಾಂ... ಮಹತ್ವವೂ ಇದೆ. ಇದನ್ನು ಉಳಿಸಿಕೊಳ್ಳುವುದು ... ಕರ್ತವ್ಯವಾಗಿದೆ ಮತ್ತು ಆ ನಂತರ ಕರ್ನಾಟಕದ ... ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಹೋರಾಟವೂ ಕೈ ... ನಡೆಯಬೇಕಿದೆ.

ಮಡಿಲ ಬೆಂಕಿ



ತುಂಬಿ ಬಿಟ್ಟರೆ ತಾಯಿ
ಕೆಂಡ ಮಡಿಲ ತುಂಬ
ತುಸು ಬಾಗು ಕ್ಷಣ
ಸುಡದಿರಲಿ ಅದು ನಿನ್ನ ಒಡಲ

ಹಸಿವು ತಾಯಿ ಹಸಿವು
ರೊಕ್ಕದಸಿವು ದುಃಖದಸಿವು
ಜಾತಿ ಮತದ ದಟ್ಟ ಹಸಿವು
ಹುಸಿಯ ಬಿಂಬವ ನಂಬಿದಸಿವು

ಕಳ್ಳು ತುಂಬಿದ ಕರುಳು
ಮಳ್ಳು ತುಂಬಿದ ಮೆದುಳು
ಚಾಚಿ ಬಿಟ್ಟವು ಬೆರಳು
ಕಪ್ಪಾಗುವುದೆಂದು ತಿಳಿದೂ
ಮುಂದಿನ ಹಗಲು

ಹತ್ತದಿರಲಿ ನಿಮ್ಮೊಳಗೆ ಕಿಚ್ಚು
ಬೆಚ್ಚದಿರಲಿ ಕಂದರು ಯಾವೊತ್ತೂ

ಸಿಕ್ಕಲಿ ಎಲ್ಲರಿಗೂ ಕೈತುತ್ತು
ಎಂಬುದು ತಾನೆ ನಿನ್ನಂತರಾಳದ
ಹಕೀಕತ್ತು

ನೀನೇ ಹೆತ್ತೆಯಾದರೂ
ಯಾವ ಬೆರಳು ಸಮವಿತ್ತು
ಆಪತ್ತೋ ಸುಖದೊತ್ತೋ
ಬರಲಿ ಬಿಡು ಚಿಂತೆ ಯಾಕೀವತ್ತು

ಕತ್ತಲೆಯ ಕಿತ್ತೊಗೆದು
ಬೆಳಕ ತೋರುವವರ
ಕಡಿಮೆ ಹೆತ್ತಿಲ್ಲ ನೀನು
ಅದು ಜಗಕೆಲ್ಲ ಗೊತ್ತು

ಕೆಂಡ ಸಂಪಿಗೆಯಾಗಿ
ಮಡಿಲು ಮಲ್ಲಿಗೆಯಾಗಿ
ಪರಿಮಳದ ಕೊಳದಲ್ಲಿ
ಮೀವಂತೆ ಹರಸು ತಾಯೆ



ಕೆ.ಎಂ. ಗಂಗಾಧರಪ್ಪ

ಮೋದಿ ಎಂಬ ಡಿಕ್ಟೇಟರ್‌ನ ಸೂತ್ರದ ಗೊಂಬೆಗಳು

ಈ ವಾರವಿಡೀ ಪ್ರಧಾನಿಯಾಗಿ ನರೇಂದ್ರ ಮೋದಿಯು ಪ್ರಮಾಣವಚನ ಸ್ವೀಕರಿಸಿದ ಅದ್ದೂರಿ ಕಾರ್ಯಕ್ರಮ ಮತ್ತು ಸಂಪುಟ ರಚನೆಯದ್ದೇ ಸುದ್ದಿ. ಇಂಗ್ಲಿಷ್ ಟಿವಿ ಚಾನೆಲ್‌ಗಳಲ್ಲಂತೂ ಈ ಎರಡು ವಿಷಯಗಳ ಸುತ್ತಲೇ ದಿನವಿಡೀ ಚರ್ಚೆ. ಆ ಚಾನೆಲ್‌ಗಳಲ್ಲಿ ನಡೆಯುವ ಚರ್ಚೆಗಳಿಗೆ ಬರುವವರಲ್ಲಿ ಹೆಚ್ಚಿನವರು ಮೋದಿ ಭಕ್ತರೋ ಅಥವಾ ಬಿಜೆಪಿಯ ಬೆಂಬಲಿಗರೋ ಆಗಿರುವುದರಿಂದ ಎಲ್ಲರ ಬಾಯಲ್ಲೂ 'ಭಲೆ, ಭಲೆ' ಎಂಬ ಭೋಪರಾಕುಗಳು.

ವಿಚಿತ್ರವೆಂದರೆ ಮೋದಿ ಅಲ್ಲದೆ ಬೇರೆ ಯಾರಾದರೂ ಇಂತಹ ಅದ್ದೂರಿ ಕಾರ್ಯಕ್ರಮವನ್ನು ಏರ್ಪಡಿಸಿದ್ದರೆ ಇದೇ ಮಿತ್ರಗಳು "ನಮ್ಮ ದೇಶದ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲದಿರುವಾಗ ಯಾಕೆ ಇಷ್ಟೊಂದು ದೊಡ್ಡ ಕಾರ್ಯಕ್ರಮ?" ಎಂದು ಟೀಕಿಸುತ್ತಿದ್ದರು; "ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ" ಎಂದು ಜರಿಯುತ್ತಿದ್ದರು.



ಅದೆಲ್ಲ ಬದಿಗಿರಲಿ, ಮೋದಿಯ ಸಚಿವ ಸಂಪುಟಕ್ಕೆ ಬಂದರೆ "ಚಿಕ್ಕ ಮತ್ತು ಚೊಕ್ಕದಾದ ಸಂಪುಟ", "ಹೊಸ ಮುಖಗಳು ಮತ್ತು ಹಳೆ ಅನುಭವಸ್ಥರೂ ಇರುವುದು ಪ್ರಶಂಸನೀಯ", "ಭ್ರಷ್ಟರನ್ನು ಮೋದಿ ಹೊರಗಿಟ್ಟಿದ್ದಾರೆ" ಎಂದೆಲ್ಲ ಹಲವರು ಕೊಂಡಾಡುತ್ತಿದ್ದಾರೆ. ಆದರೆ ಅದೆಲ್ಲ ಎಷ್ಟು ಸರಿ?

ಮೊದಲನೆಯದಾಗಿ ಈಗ ಮೋದಿ ಕೇವಲ 46 ಜನರನ್ನು ತನ್ನ ಸಂಪುಟಕ್ಕೆ ತೆಗೆದುಕೊಂಡಿರುವುದನ್ನು "ಸ್ಮಾಲ್ ಗವರ್ನ್‌ಮೆಂಟ್, ಬಿಗ್ ಗವರ್ನೆನ್ಸ್" ಎಂಬ ಮೋದಿಯ ನೀತಿಗೆ ಹಿಡಿದ ಕನ್ನಡಿ ಎಂದು ಮೊದಲ ದಿನ ವಿಶ್ಲೇಷಿಸಿದರು. ವಾಸ್ತವವಾಗಿ ಯುಪಿಎ ಸರ್ಕಾರ ಕೂಡ ಆರಂಭದಲ್ಲಿ ಕೇವಲ 50 ಜನರಿಗೆ ಸಚಿವ ಸ್ಥಾನವನ್ನು ಕೊಟ್ಟಿತ್ತು. ಕಾಲಾಂತರದಲ್ಲಿ ಅದು 71ಕ್ಕೆ ಏರಿತ್ತು. ಇದನ್ನು ಮರೆತಿದ್ದ ವಿಶ್ಲೇಷಕರು ಮೋದಿಯನ್ನು ಕೊಂಡಾಡಿದರು. ಆದರೆ ಅವರ ದುರಾದೃಷ್ಟಕ್ಕೆ ಮಾರನೆಯ ದಿನವೇ ಸದ್ಯದಲ್ಲೇ ಮೋದಿ ಸಂಪುಟಕ್ಕೆ ಇನ್ನಷ್ಟು ಜನರ ಸೇರ್ಪಡೆಯಾಗಲಿದೆ ಎಂಬ ಸುದ್ದಿ ಹೊರಬಿತ್ತು!

ಎರಡನೆಯದಾಗಿ "ಮೋದಿ ತಮ್ಮ ಸಚಿವರ ಆಯ್ಕೆಯಲ್ಲಿ ತುಂಬಾ ಎಚ್ಚರ ವಹಿಸಿದ್ದಾರೆ, ಆದ್ದರಿಂದ ಹೊಸಬರ ಮತ್ತು ಅನುಭವಸ್ಥರ ಮಿಶ್ರಣವನ್ನು ಯಶಸ್ವಿಯಾಗಿ ಮಾಡಿದ್ದಾರೆ" ಎಂದು ಚೆಡ್ಡಿ ಬೆಂಬಲಿಗರು ತರ್ಕಿಸಿದರು. ಹೊಸಬರ ಆಯ್ಕೆಯಲ್ಲಿ ಆರಂಭದಲ್ಲಿ ಸ್ಮೃತಿ ಇರಾನಿ ಎಂಬ ನಟಿ ಎಲ್ಲರ ಗಮನವನ್ನು ಸೆಳೆದಳು. ಅದಕ್ಕೆ ಇದ್ದ ಕಾರಣ ಆಕೆ ಮೊದಲ ಬಾರಿ ಲೋಕಸಭೆಯನ್ನು ಪ್ರವೇಶಿಸುತ್ತಿದ್ದರೂ ಆಕೆಗೆ ಮೋದಿ ಮಂತ್ರಿ ಪದವಿಯನ್ನು ಕೊಟ್ಟಿರುವುದು. ಆದರೀಗ ಆಕೆ ತನ್ನ ವಿದ್ಯಾರ್ಹತೆಯನ್ನು ಕುರಿತು ಚುನಾವಣಾ ಆಯೋಗಕ್ಕೆ ಸುಳ್ಳು ಹೇಳಿಕೆಗಳನ್ನು ಕೊಟ್ಟಿರುವುದರ ಬಗ್ಗೆ ಮತ್ತು ಆಕೆ ಪಿಯುಸಿ ತನಕ ಮಾತ್ರ ಓದಿದ್ದರೂ ಮಾನವ ಸಂಪನ್ಮೂಲದಂತಹ ಪ್ರಮುಖ ಖಾತೆ ಪಡೆದಿರುವ ಬಗ್ಗೆ ವಾದವಿವಾದಗಳು ನಡೆಯುತ್ತಿದೆ. ಈ ಗದ್ದಲದಲ್ಲಿ ಉತ್ತರ ಪ್ರದೇಶದಿಂದ ಸಂಸತ್ತಿಗೆ ಆಯ್ಕೆಯಾಗಿರುವ, ಮುಜಾಫರ್‌ನಗರದಲ್ಲಿ ಸಂಭವಿಸಿದ ಕೋಮು ಗಲಭೆಗಳಲ್ಲಿ ಪ್ರಮುಖ ಆರೋಪಿಯಾಗಿರುವ ಸಂಜೀವ್ ಕುಮಾರ್ ಬಲಿಯಾನ್ ಎಂಬ ಕೋಮುವಾದಿಯನ್ನೂ ಮೋದಿ ಸೇರಿಸಿಕೊಂಡಿರುವ ಬಗ್ಗೆ ಯಾರೂ ಚಕಾರ ಎತ್ತದಿದ್ದದ್ದು ಅಚ್ಚರಿ ಮೂಡಿಸುತ್ತಿದೆ.

ಮೂರನೆಯದಾಗಿ, ಮೋದಿ ಭ್ರಷ್ಟರನ್ನು ತನ್ನ ಸಂಪುಟದಿಂದ ಹೊರಗಿಟ್ಟಿದ್ದಾನೆ ಎಂಬುದರ ಬಗ್ಗೆ ಪ್ರಶಂಸೆ. ಇದಕ್ಕೆ ಹೆಚ್ಚಿನವರು ಕೊಡುತ್ತಿರುವ ಉದಾಹರಣೆ ಯಡಿಯೂರಪ್ಪನದ್ದು. ಹಾಗೆ ನೋಡಿದರೆ, ಯಡ್ಡಿಗೆ ಈಗ ಸರಿಯಾಗಿ ಮುಖಭಂಗವಾಗಿದೆ. ಇದೇ ಯಡಿಯೂರಪ್ಪ ಹೋದವರ್ಷ "ಮೋದಿಯನ್ನು ಪ್ರಧಾನಿ ಆಗಿಸಲೆಂದೇ ಬಿಜೆಪಿಗೆ ವಾಪಸ್ ಬಂದಿದ್ದೇನೆ" ಎಂದಿದ್ದರು. ಅದರಲ್ಲಿ ಆತ ಯಶಸ್ವಿಯೂ ಆಗಿದ್ದಾರೆ. ಸಹಜವಾಗಿಯೇ ಯಡ್ಡಿ ಕೇಂದ್ರದಲ್ಲಿ ಸಚಿವ ಸ್ಥಾನ ಪಡೆಯುವ ಆಶೆ ಹೊಂದಿದ್ದರು. ಚುನಾವಣೆಯ ಫಲಿತಾಂಶ ಹೊರಬಿದ್ದ ಕೂಡಲೇ ತನ್ನ ಪಟಾಲಂಅನ್ನು ಕಟ್ಟಿಕೊಂಡು ದೆಹಲಿಗೆ ದೌಡಾಯಿಸಿದ ಯಡ್ಡಿ ತನಗೆ ಕೃಷಿ ಸಂಪುಟ ಕೊಡಬೇಕೆಂದು ಲಾಬಿ ಶುರುಹಚ್ಚಿಕೊಂಡಿದ್ದರು.

ಚಾಣಾಕ್ಷ ಯಡ್ಡಿ ಕರ್ನಾಟಕದ ಎಲ್ಲಾ ನದಿಗಳ ನೀರನ್ನು ಕುಡಿದಿರಬಹುದು. ಆದರೆ ಆತನಿಗಿಂತಲೂ ದೊಡ್ಡ ಕುತಂತ್ರಿಯಾದ ಮೋದಿ ದೇಶದ ಎಲ್ಲಾ ನದಿ, ಕೆರೆ, ಹೊಂಡಗಳಿಂದಲೂ ನೀರು ಕುಡಿದಿರುವ ಆಸಾಮಿ. ಆದ್ದರಿಂದ ಯಡ್ಡಿಯಿಂದ ಚುನಾವಣಾ ಲಾಭ ಪಡೆದನಂತರ ಮೋದಿ ತನ್ನ ಸಹಾಯಕರ ಮೂಲಕ "ನೀವು ಹೀಗೆಲ್ಲ ಬಂದು ಲಾಬಿ ಮಾಡುವುದು ನನಗಿಷ್ಟವಿಲ್ಲ, ನೀವು ನಿಮ್ಮ ರಾಜ್ಯಕ್ಕೆ ಹಿಂದಿರುಗಿ ಅಲ್ಲಿ ಪಕ್ಷವನ್ನು ಗಟ್ಟಿಗೊಳಿಸಿ" ಎಂದು ಹೇಳಿಸಿ ಬೆಂಗಳೂರಿಗೆ ವಾಪಸ್ ಬರುವಂತೆ ಮಾಡಿದ್ದಾನೆ. ವಿಧಿ ಇಲ್ಲದೆ ಹಿಂದಿರುಗಿದ ಯಡ್ಡಿ ತಾನು ಪಕ್ಷಕ್ಕಾಗಿ ದುಡಿಯುವುದಾಗಿ ಮೋದಿಗೆ ಪತ್ರ ಬರೆದು ಉಳಿದಿರುವ ಚೂರುಪಾರು ಮಾನವನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಹಲವಾರು ಅವ್ಯವಹಾರಗಳ ಆರೋಪಗಳನ್ನು ಎದುರಿಸುತ್ತಿರುವ ಯಡ್ಡಿಯನ್ನು ಮೋದಿ ಹೊರಗಿಟ್ಟಿದ್ದಾನೆ. ಹೌದು, ಆದರೆ ಈ ಹಿಂದೆ ಕೇಂದ್ರದಲ್ಲಿ ನಗರಾಭಿವೃದ್ಧಿ ಸಚಿವನಾಗಿದ್ದಾಗ ಅನಂತ್‌ಕುಮಾರ್ ಮಾಡಿದ ಹುಡ್ಕೋ ಹಗರಣ ಕುರಿತಂತೆ ಈಗಲೂ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸುತ್ತಿದ್ದಾನೆ. ಅಂತಹವನನ್ನೇ ಮೋದಿ ತನ್ನ ಸಂಪುಟಕ್ಕೆ ಸೇರಿಸಿಕೊಂಡಿದ್ದರೂ ದೆಹಲಿಯ 'ಬಿಜೆಪಿ ಹಿತಚಿಂತಕರು' "ಮೋದಿ ಭ್ರಷ್ಟರನ್ನು ಸಂಪುಟದಿಂದ ಹೊರಗಿಟ್ಟಿದ್ದಾನೆ" ಎಂದು ಹೊಗಳುತ್ತಿದ್ದಾರೆ.

ಇಲ್ಲಿ ಒಂದು ವಿಚಾರವಂತೂ ಸ್ಪಷ್ಟವಾಗಿ ಗೋಚರಿಸುತ್ತಿದೆ. ಅದೇನೆಂದರೆ ಮೋದಿ ಅನಂತ್‌ಕುಮಾರನನ್ನು ಒಲ್ಲದ ಮನಸ್ಸಿನಿಂದಲೇ ತನ್ನ ಸಂಪುಟಕ್ಕೆ ಸೇರಿಸಿಕೊಂಡಿದ್ದಾನೆ. ಅದಕ್ಕೆ ಕಾರಣ ಅನಂತಕುಮಾರ್ ಅಡ್ವಾನಿಯ ಬೆಂಬಲಿಗ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಬೇಡವೆಂದರೂ ತಗುಲಿ ಹಾಕಿಕೊಂಡಿರುವ ಶನಿಯಂತೆ ಮೋದಿಗೆ ಭಾಸವಾಗುತ್ತಿರುವ ಅನಂತ್‌ಕುಮಾರನಿಗೆ ಸಿಕ್ಕಿರುವುದು ರಸಗೊಬ್ಬರ ಖಾತೆ! ಈ ಹಿಂದೆ ಕೇಂದ್ರದಲ್ಲಿ ಎರಡೆರಡು ಬಾರಿ ಸಚಿವನಾಗಿದ್ದ ಅನಂತ್‌ಕುಮಾರನ ಪರಿಸ್ಥಿತಿಗೆ ಹೋಲಿಸಿದರೆ ಸದಾನಂದ ಗೌಡರಿಗೆ ಲಾಟರಿ ಹೊಡೆದಿದೆ. ಯಾಕೆಂದರೆ ಇದೇ ಮೊದಲ ಬಾರಿ ಸಂಪುಟಕ್ಕೆ ಸೇರ್ಪಡೆಗೊಂಡಿರುವ ಗೌಡರಿಗೆ ಸಿಕ್ಕಿರುವುದು ತೂಕವಾದ, ತನ್ನದೇ ಬಜೆಟ್ ಹೊಂದಿರುವ ರೈಲ್ವೆ ಖಾತೆ.

ಅನಂತ್‌ಕುಮಾರನಿಗೆ ಹಿಂಬಡ್ತಿ ಕೊಟ್ಟಿರುವ ಮೋದಿ ಮತ್ತೋರ್ವ ಅಡ್ವಾನಿ ಗ್ಯಾಂಗಿನ ಸದಸ್ಯೆ ಸುಷ್ಮಾ ಸ್ವರಾಜ್‌ಗೆ ಸಂಪುಟ ಸ್ಥಾನ ಕೊಟ್ಟಿದ್ದರೂ ಅದಕ್ಕೆ ನಿರ್ಮಲಾ ಸೀತಾರಾಮನ್ ಎಂಬಾಕೆಯ ಮೂಲಕ ಕಡಿವಾಣ ಹಾಕಿದ್ದಾನೆ. ಮೊದಲೇ ಈ ನಿರ್ಮಲಾಳನ್ನು ಕಂಡರೆ ಸುಷ್ಮಾಗೆ ಅಷ್ಟಕ್ಕಷ್ಟೆ. ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಆರ್ಥಿಕ ವಹಿವಾಟೇ ಮುಖ್ಯವಾಗಿರಬೇಕು ಎಂದು ನಂಬಿರುವ ಮೋದಿ, ಸುಷ್ಮಾಗೆ ವಿದೇಶಾಂಗ ವ್ಯವಹಾರಗಳನ್ನು ಕೊಟ್ಟಿದ್ದರೂ ಅಲ್ಲಿ ಆಕೆ ಹೆಚ್ಚು ಪ್ರಭಾವ ಬೀರದಂತೆ ನೋಡಿಕೊಳ್ಳಲು ನಿರ್ಮಲಾಗೆ ವಾಣಿಜ್ಯ ಖಾತೆಯನ್ನು ದಯಪಾಲಿಸಿದ್ದಾನೆ.

ಇದೆಲ್ಲಕ್ಕಿಂತ ಹೆಚ್ಚಾಗಿ ಮೋದಿ ಸಂಪುಟವನ್ನು ಇನ್ನೊಂದು ರೀತಿಯಲ್ಲಿ ನೋಡುವುದು ಮುಖ್ಯ ಎನಿಸುತ್ತಿದೆ. ಇಲ್ಲಿ ಎದ್ದು ಕಾಣುತ್ತಿರುವ ಅಂಶ ಯಾವುದೆಂದರೆ ಮಾನವ ಸಂಪನ್ಮೂಲ, ಸಾರ್ವಜನಿಕ ಸಂಪರ್ಕ ಮತ್ತು ಸಂಸ್ಕೃತಿ ತರಹದ ಇಲಾಖೆಗಳು ಸಂಘಪರಿವಾರದವರ ಹಿಡಿತದಲ್ಲಿರುವುದು. ಬರುವ ದಿನಗಳಲ್ಲಿ ಈ ಎಲ್ಲ ಇಲಾಖೆಗಳ ಮೂಲಕ ಆರೆಸ್ಸೆಸ್ ತನ್ನ ಅಜೆಂಡಾವನ್ನು ಜಾರಿಗೆ ತರುವುದನ್ನು ನಾವೆಲ್ಲ ನೋಡಿ ಆಘಾತಗೊಳ್ಳಲಿದ್ದೇವೆ. ಎರಡನೆಯ ಮುಖ್ಯ ಅಂಶ, ಅಧಿಕಾರದಲ್ಲಿರುವವರಿಗೆ ಕೋಟ್ಯಾಂತರ ರೂಪಾಯಿಗಳಲ್ಲಿ ಅಮೇಧ್ಯ ತಂದುಕೊಡುವಂತಹ ಟೆಲಿಕಾಂ, ಇದ್ದಲು, ಪವರ್ ತರಹದ ಇಲಾಖೆಗಳು ಬಿಜೆಪಿಯ ಹಿರಿಯ ನಾಯಕರ ಕೈಯಲ್ಲೇ ಇರುವುದು. ಮೂರನೆಯ ಅಂಶ, ಯಾರಿಗೂ ಬೇಡವಾದ, 'ಆದಾಯವಿಲ್ಲದ' ಆಹಾರ ಸರಬರಾಜು, ಸಾಮಾಜಿಕ ನ್ಯಾಯ ತರಹದ ಖಾತೆಗಳು ಮೈತ್ರಿ ಪಕ್ಷಗಳ ಪಾಲಾಗಿರುವುದು. ಉದಾಹರಣೆಗೆ ಚುನಾವಣೆಯ ಮುನ್ನ ಬಿಜೆಪಿಯೊಂದಿಗೆ ಕೈಜೋಡಿಸಿದ ದಲಿತ ನಾಯಕ ರಾಮ್ ವಿಲಾಸ್ ಪಾಸ್ವಾನ್‌ಗೆ ದಕ್ಕಿರುವುದು ಇದೇ ಆಹಾರ ಸರಬರಾಜು ಖಾತೆ! ಮೋದಿ ಸಂಘ ಕನಸಿಗೆ ಭಂಗ ಎಂದು ಪಾಸ್ವಾನ್‌ಗೆ ತಡವಾಗಿ ಅರ್ಥವಾಗಿರುವಂತಿದೆ.

ಮೋದಿಯ ಸರ್ಕಾರದಲ್ಲಿ ಯಾರೇ ಇರಲಿ, ಯಾರೇ ಇಲ್ಲದಿರಲಿ, ಆತ ಗುಜರಾತ್ ಮುಖ್ಯಮಂತ್ರಿಯಾಗಿ ಹೇಗೆ ಸರ್ವಾಧಿಕಾರಿಯಂತೆ ವರ್ತಿಸಿದನೋ ಹಾಗೆಯೇ ದೆಹಲಿಯಲ್ಲೂ ವರ್ತಿಸಿರುವುದು ನಿಸ್ಸಂದೇಹ. ಆದ್ದರಿಂದ ಸ್ಮೃತಿ ಇರಾನಿಯ ಹುಸಿನಗೆ, ಸುಷ್ಮಾಳ ಅವಮಾನ, ಅನಂತ್‌ಕುಮಾರನ ಭ್ರಮನಿರಸನ, ಸದಾನಂದ ಗೌಡರ ನಗೆ, ನಿರ್ಮಲಾ ಸೀತಾರಾಮ್‌ಳ ಅರಚಾಟ... ಎಲ್ಲವೂ ನಿರುಪಯುಕ್ತ. ಏಕೆಂದರೆ ಇವರೆಲ್ಲ ಮೋದಿ ಎಂಬ ಡಿಕ್ಟೇಟರ್‌ನ ಸೂತ್ರದ ಗೊಂಬೆಗಳಷ್ಟೇ!! •

ಪತ್ರಕರ್ತರೂ ತಮ್ಮನ್ನು ಮಾರಿಕೊಂಡಿದ್ದಾರೆ

ಜಿ.ರಾಜಶೇಖರ್ ಅವರ 'ಚುನಾವಣೆ ಎಂಬ ಮ್ಯಾಚ್ ಫಿಕ್ಸಿಂಗ್' ಲೇಖನ ಅತ್ಯಂತ ಸಮಯೋಚಿತವೂ ಅರ್ಥಪೂರ್ಣವೂ ಆಗಿತ್ತು. ಪತ್ರಕರ್ತರು ಹೇಗಿರಬೇಕು ಎಂಬುದಕ್ಕೆ ಮಾದರಿಯಂತಿದ್ದ ರಾಜ್‌ದೀಪ್ ಸರ್ದೇಸಾಯಿ, ಸಾಗರಿಕಾ ಘೋಷ್ (ಅರ್ನಾಬ್ ಗೋಸ್ವಾಮಿ, ಬರ್ಖಾ ದತ್ ಸೇರಿದಂತೆ) ಮೊದಲಾದವರು ಇಂದು ಪತ್ರಕರ್ತರು ಹೇಗಿರಬಾರದು ಎಂಬುದಕ್ಕೆ ಮಾದರಿಯಂತಾಗಿರುವುದು ವಿಷಾದದ ಸಂಗತಿ. ಇಂಥ ಕೆಲವೇ ಮಂದಿಯಿಂದಾಗಿ ಪ್ರಜಾತಂತ್ರದ ನಾಲ್ಕನೆಯ ಕಂಬಕ್ಕೆ ಪಕ್ಷಪಾತದ ಗೆದ್ದಲು ಹಿಡಿದು ಅದು ನಿಸ್ವಾರ್ಥತೆಯನ್ನೇ ಕಳೆದುಕೊಳ್ಳುವ ಅಪಾಯದಂಚಿನಲ್ಲಿದೆ.



ಸಿಎನ್‌ಎನ್ ಐಬಿಎನ್ ವೀಕ್ಷಿಸುತ್ತಿದ್ದ ಯಾರಿಗೇ ಆದರೂ ಸದರಿ ಚಾನೆಲ್ ಮುಖೇಶ್ ಅಂಬಾನಿಗೆ ಮಾರಾಟವಾಗುತ್ತಿದ್ದಂತೆ ಅಲ್ಲಿನ ಬಹುತೇಕ ಪತ್ರಕರ್ತರೂ ತಮ್ಮನ್ನು ತಾವು ಮಾರಿಕೊಂಡದ್ದು ಸ್ಪಷ್ಟವಾಗಿ ತಿಳಿಯುವಂತಿತ್ತು. ಮೊದಮೊದಲು ಮೋದಿಯನ್ನು ಟೀಕಿಸುತ್ತಿದ್ದ ಮಂದಿಯೂ ನಿರ್ಲಜ್ಜವಾಗಿ ಆತನ ಭಜನಾಮಂಡಳಿಯ ಸದಸ್ಯರಾಗಿಬಿಟ್ಟರು. ಹಾಗೆ ಸ್ವಾಭಿಮಾನ ಮಾರಿಕೊಳ್ಳಲು [illegible] ಕರಣ್ ಥಾಪರ್ ಆ ಚಾನೆಲನ್ನು ಬಿಟ್ಟು ಹೊರನಡೆದರು.

2002ರ ಗುಜರಾತ್ ಕೋಮುಗಲಭೆಯ ದಾರುಣ ದೃಶ್ಯಗಳನ್ನು ಕಣ್ಣಾರೆ ಕಂಡು ಮೋದಿಯ ಪ್ರಬಲ ಟೀಕಾಕಾರನಾಗಿದ್ದ ಇದೇ ರಾಜ್‌ದೀಪ್ ಸರ್ದೇಸಾಯಿ 2014 ಚುನಾವಣಾಪೂರ್ವದಲ್ಲಿ ಬದಲಾದ ವೈಖರಿಯಂತೂ ಎಂಥವರೂ ಮೂಗಿಗೆ ಬೆರಳಿಡುವಂತೆ ಮಾಡಿತ್ತು. ಸಮೀಕ್ಷೆಗಳಲ್ಲಿ ಉದ್ದೇಶಪೂರ್ವಕವಾಗಿಯೇ ರಾಹುಲ್ ಗಾಂಧಿ ಮತ್ತು ಮೋದಿಯನ್ನು ಜನರ ಮುಂದೆ ಇರಿಸಿ, ಇಡೀ ಚುನಾವಣೆಯನ್ನು ಒಂದು ರೀತಿಯಲ್ಲಿ ಅಧ್ಯಕ್ಷೀಯ ಮಾದರಿಯ ಚುನಾವಣೆಯನ್ನಾಗಿ ಮಾಡುವಲ್ಲಿ ಸರ್ದೇಸಾಯಿಯ ನಾಚಿಕೆಗೇಡಿನ ಪ್ರಯತ್ನ ಎದ್ದು ಕಾಣುವಂತಿತ್ತು. ಸಮೀಕ್ಷೆಯಲ್ಲಿ (ಬಹುಶ ವಿಶ್ವಾಸಾರ್ಹವೋ ಆತನಿಗೇ ಗೊತ್ತು) ಮೋದಿಗೆ ಹೆಚ್ಚು ಮತಗಳು ದೊರೆತಾಗಲೆಲ್ಲ ಆತ ತಾನೇ ಗೆದ್ದಂತೆ ಸಂಭ್ರಮಿಸ ತೊಡಗಿದ. ಟಿವಿ ಚರ್ಚೆಯ ಕಾರ್ಯಕ್ರಮಗಳಲ್ಲಿ ನಿಷ್ಪಕ್ಷಪಾತ ಆಂಕರ್‌ನ ಪಾತ್ರ ವಹಿಸಬೇಕಾಗಿದ್ದಾತ ಆಪ್ (ಅರವಿಂದ ಕೇಜ್ರಿವಾಲ್‌ನನ್ನು ಪ್ರಶ್ನಿಸುವಾಗ ಆತನ ಮುಖದ ಭಾವನೆಗಳನ್ನು ನೋಡಬೇಕಿತ್ತು) ಮತ್ತು ಕಾಂಗ್ರೆಸ್ ಪಕ್ಷವನ್ನು ತರಾಟೆಗೆ ತೆಗೆದುಕೊಳ್ಳುವಾಗ ತಾನೇ ಬಿಜೆಪಿ ವಕ್ತಾರನಂತೆ ವರ್ತಿಸತೊಡಗಿದ. ಟಿವಿ ಚರ್ಚೆಗಳಲ್ಲಿ ಎನ್.ರಾಮ್, ಪರಂಜಯ್ ಥಾಕೂರ್ತಾರಂಥ ಹಿರಿಯ ಪತ್ರಕರ್ತರು ಮೋದಿಯನ್ನು ಇನ್ನೇನು ಟೀಕಿಸಲು ಶುರುಮಾಡುತ್ತಾರೆ ಎನ್ನುವ ಸುಳಿವು ದೊರೆಯುತ್ತಲೇ ಆತ ಅವರ ಮಾತನ್ನು ತಡೆದು ವಿಷಯಾಂತರ ಮಾಡಿಬಿಡುತ್ತಿದ್ದ.


ಮಣಿಪಾಲಕ್ಕೆ ಎರಡೆರಡು ಕಾರ್ಯಕ್ರಮಕ್ಕೆ ಬಂದ ಇದೇ ರಾಜ್‌ದೀಪ್ ಮೋದಿಯ ಉಡುಗೆಗಳ ಬಗ್ಗೆ ನಾಟಕೀಯ ಭಾಷಣಗಳ ಬಗ್ಗೆ ಮೆಚ್ಚುಗೆಯಿಂದ ಮಾತನಾಡಿದ್ದು ವಿಚಿತ್ರವಾಗಿತ್ತು. ಒಬ್ಬ ಮುತ್ಸದ್ದಿ ರಾಜಕಾರಣಿಗೆ ಅಂತಹ ವೇಷಭೂಷಣಗಳು, ನಾಟಕೀಯ ಭಾಷಣಗಳು ನಿಜಕ್ಕೂ ಅಗತ್ಯವೇ ಎಂದು ಆತ ಪ್ರಶ್ನಿಸಲಿಲ್ಲ. ಚುನಾವಣೆಯ ಸಂದರ್ಭದಲ್ಲಿ ಬೆಂಗಳೂರು, ಅಮೃತಸರ, ವಾರಾಣಸಿಯಲ್ಲೆಲ್ಲ ಜನರನ್ನು ಮಾತನಾಡಿಸಿ ಮೋದಿಗೆ ಪ್ರಚಾರ ನೀಡಿದ ರಾಜ್‌ದೀಪ್ ಗುಜರಾತ್‌ಗೆ ಹೋಗಿ ಮೋದಿಯ ಬಗ್ಗೆ ಅಸಮಾಧಾನ ಇರುವ ಮಂದಿಯನ್ನು ಮಾತನಾಡಿಸುವ, ಮೋದಿಯ ಅಭಿವೃದ್ಧಿಯ ಸುಳ್ಳುಗಳನ್ನು ಬಯಲಿಗೆಳೆಯುವ ಗೋಜಿಗೆ ಹೋಗಲೇ ಇಲ್ಲ (ಈ ಕೆಲಸವನ್ನು ಬಹುತೇಕ ಯಾವ ವಾಹಿನಿಗಳೂ ಮಾಡಲಿಲ್ಲ, ಆ ಮಾತು ಬೇರೆ)!

ಇನ್ನು ಸಾಗರಿಕಾ ಘೋಷ್‌ಕೊನೆ ಕೊನೆಗೆ ಮೋದಿಯ ಅಪ್ಪಟ ಮಾರ್ಕೆಟಿಂಗ್ ಮ್ಯಾನೇಜರ್ ರೀತಿಯಲ್ಲಿಯೇ ವರ್ತಿಸತೊಡಗಿದಳು. ಆಕೆಯ ಚೌಪಾಲ್ ಕಾರ್ಯಕ್ರಮಗಳು ವಾಸ್ತವದಲ್ಲಿ ಮೋದಿಯ ಪ್ರಚಾರ ಕಾರ್ಯಕ್ರಮಗಳೇ ಆಗಿದ್ದವು. ಜನರಲ್ಲಿ 'ನಿಮ್ಮ ಓಟು ಯಾರಿಗೆ?' ಎಂದು ಕೇಳುವ ಬದಲು 'ನಿಮ್ಮ ಓಟು ಯಾರಿಗೆ? ಮೋದಿಗಾ?' ಎಂದೇ ಕೇಳಿ ಅವರಿಂದ ಬಲವಂತವಾಗಿ ಹೌದೆನ್ನುವ ಉತ್ತರ ತರಿಸಿಕೊಳ್ಳುತ್ತಿದ್ದಳು. ಚರ್ಚೆಯಲ್ಲಿ ಮೋದಿಯ ವಿರುದ್ಧ ಬಂದ ಅಭಿಪ್ರಾಯಗಳನ್ನೆಲ್ಲ ಅಂತಿಮವಾಗಿ ಸಾರಾಂಶ ರೂಪದಲ್ಲಿ ಹೇಳುವಾಗ ಜಾಣತನದಿಂದ ಮೋದಿಯ ಪರವಾಗಿ ತಿರುಗಿಸಿಬಿಡುತ್ತಿದ್ದಳು; ಇಡೀ ಜಗತ್ತೇ ಮೋದಿಯ ಪರ ಇದೆ ಎಂಬ ಭಾವನೆ ಬರುವಂತೆ ಮಾಡುತ್ತಿದ್ದಳು. ಜಾಮಿಯಾ ಮಿಲಿಯಾ ಇಸ್ಲಾಮಿಯಾ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳೆಲ್ಲರೂ ಆಕ್ರೋಶಭರಿತರಾಗಿ 'ಮೋದಿಯ ಅಪರಾಧಕ್ಕೆ ಆತನಿಗೆ ಕ್ಷಮೆ ನೀಡುವ ಪ್ರಶ್ನೆಯೇ ಇಲ್ಲ, ಆತನಿಗೆ ಶಿಕ್ಷೆಯಾಗಲೇ ಬೇಕು' ಎಂದು ಹೇಳಿದ್ದರು. ಆದರೆ ಈ ಕಾರ್ಯಕ್ರಮ ತಡ ರಾತ್ರಿ ಪ್ರಸಾರವಾಯಿತು ಮತ್ತು ಮರುದಿನ ರಿಪೀಟ್ ಟೆಲಿಕಾಸ್ಟ್ ಆಗಲೇ ಇಲ್ಲ (ಸಾಮಾನ್ಯವಾಗಿ ಆಕೆಯ ಎಲ್ಲಾ ಕಾರ್ಯಕ್ರಮಗಳೂ ಮಾರನೆ ದಿನ ಮರುಪ್ರಸಾರಗೊಳ್ಳುತ್ತವೆ)!

ಮೋದಿಯಂತಹ ಕೋಮುವಾದಿಯೊಬ್ಬ ದೇಶದ ಅತ್ಯುನ್ನತ ಸ್ಥಾನ ಅಲಂಕರಿಸುವುದು ಸಾಧ್ಯವಾಗುವಂತೆ ಮಾಡುವಲ್ಲಿನ ಬಹುದೊಡ್ಡ ಶ್ರೇಯ ದೇಶದ ಪಕ್ಷಪಾತಿ ದೃಶ್ಯಮಾಧ್ಯಮಗಳಿಗೆ ಸಲ್ಲಬೇಕು. ಮಾಧ್ಯಮಗಳು ಈ ಹಿಂದೆ ಈ ಮಟ್ಟದಲ್ಲಿ ಪಕ್ಷಪಾತಿಯಾಗಿ ವರ್ತಿಸಿದ್ದಾಗಲಿ, ಕೇವಲ ಒಂದು ರಾಜಕೀಯ ಪಕ್ಷದ ತುತ್ತೂರಿಯಂತೆ ಕಾರ್ಯಾಚರಿಸಿದ್ದಾಗಲಿ ನನಗಂತೂ ಗೊತ್ತಿಲ್ಲ.

-ಶ್ರೀನಿವಾಸ ಕಾರ್ಕಳ, ಮಂಗಳೂರು


“ಪಕ್ಷದ ಹೈಕಮಾಂಡಿನಲ್ಲಿ ತಲಸ್ಪರ್ಶಿಯಾಗಿ ಬದಲಾವಣೆಯಾಗಬೇಕು...!”



ರಾಜ್ಯ ಕಂಡ ಅಪರೂಪದ ರಾಜಕಾರಣಿಗಳಲ್ಲಿ ಎಚ್. ವಿಶ್ವನಾಥ್ ಕೂಡಾ ಒಬ್ಬರು. ಅವರ ಸ್ಪಷ್ಟ ನೇರ ಮಾತುಗಳು ಎಂಥವರಿಗೂ ‘ಹೊಡೆತ’ ಕೊಡುವಂಥದ್ದು. ಯಾವುದೇ ಮುಲಾಜಿಗೆ ಒಳಗಾಗದೆ, ಕಂಡದ್ದು ಕಂಡ ಹಾಗೆ ಹೇಳುವ ವಿಶ್ವನಾಥ್ ಪಕ್ಷ ನೆಲಕಚ್ಚಿದ ಸ್ಥಿತಿ, ನಾಯಕರ ಇಬ್ಬಂದಿತನ, ಧೋರಣೆ, ಈಗಿನ ಸರ್ಕಾರ ಮಾಡಬೇಕಾದ ಕೆಲಸ ಎಲ್ಲವನ್ನು ತೀಕ್ಷ್ಣ ನೋಟದಿಂದ ಮನಸ್ಸು ಬಿಚ್ಚಿ ಇಲ್ಲಿ ಹೇಳಿದ್ದಾರೆ.....

ಸಂದರ್ಶನ

■ಎಸ್. ಸತೀಶ್
■ಈ. ಚಂದ್ರು ತಾಳೀಕಟ್ಟೆ



“ಭಾರತದ ಜನ ತಮಗಾಗಿ ಕಟ್ಟಿದ ಪಕ್ಷ ಇದು. ಇದು ಅಧಿಕಾರ ಮಾಡಲು ಜನ್ಮ ತಳೆದಿದ್ದಲ್ಲ. ದೇಶದ ಅಭಿಮಾನ, ಗೌರವ, ಸ್ವಾತಂತ್ರ್ಯಕ್ಕಾಗಿ ಹುಟ್ಟಿದ ಪಕ್ಷವಿದು. ಹಾಗಾಗೇ ಇದು ನನ್ನಂತಹವರ ಮನೆ. ನಮ್ಮ ಪಕ್ಷ ದೇಶೀಯರನ್ನೆಲ್ಲ ಒಂದುಗೂಡಿಸಿದೆ. ಇದು ಧರ್ಮವನ್ನೂ ಮೀರಿದ ಮನುಷ್ಯರ ಪಕ್ಷ. ಈ ದೇಶದಲ್ಲಿ ವಾಸಿಸುತ್ತಿರುವ ಎಲ್ಲ ಧರ್ಮೀಯರೂ ನನ್ನ ಪಕ್ಷಕ್ಕೆ ಸಮಾನರು. ಸಹೋದರರು.

“ನನ್ನ ಪಕ್ಷ ನನ್ನ ದೇಶದ ಎಲ್ಲರನ್ನೂ ಪ್ರೀತಿಸುತ್ತದೆ, ಬಾಳಿಸುತ್ತದೆ. ಭಾರತ ಎಲ್ಲರ ಭೂಮಿ ಎಂಬ ತಿಳಿವಳಿಕೆ ನನ್ನ ಪಕ್ಷಕ್ಕಿದೆ. ಧರ್ಮದ ಆಧಾರದ ಮೇಲೆ ಮನುಷ್ಯರನ್ನು ಅದು ಎಂದೂ ವಿಭಜಿಸಿಲ್ಲ, ತಾರತಮ್ಯ ಮಾಡಿಲ್ಲ, ಇಂತಹ ಕರುಣೆಯ ಹೃದಯ ಇರುವ ಕಾಂಗ್ರೆಸ್ ನನ್ನ ಮನೆ, ಈ ದೇಶದ ಎಲ್ಲರ ಮನೆ. ಬಡವರಿಗೆ ನೆರಳಾದ ಪಕ್ಷ ನನ್ನದು.....”

-ಕಾಂಗ್ರೆಸ್ ಪಕ್ಷದ ಬಗ್ಗೆ ಇಂಥ ಭಾವಾವೇಶದ ಮಾತುಗಳನ್ನು ಎಚ್.ವಿಶ್ವನಾಥ್ ತಮ್ಮ ‘ಮಲ್ಲಿಗೆಯ ಮಾತು’ ಎಂಬ ಪುಸ್ತಕದಲ್ಲಿ ಆಡಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಇನ್ನಿಲ್ಲದಂತೆ ಪ್ರೀತಿಸುವ ವಿಶ್ವನಾಥರಿಗೆ ಈ ಸಲದ ಚುನಾವಣೆಯಲ್ಲಿ ಪಕ್ಷದ ಮೀರ್‌ಸಾಧಕರೇ ಕೈ ಕೊಟ್ಟದ್ದರಿಂದ ‘ಸೋಲಿನ ಭಾಗ್ಯ’ ಕರುಣಿಸಿದ್ದಾರೆ. ಕಳೆದ ನಲವತ್ತಕ್ಕೂ ಹೆಚ್ಚು ವರ್ಷಗಳನ್ನು ಕಾಂಗ್ರೆಸ್ ಪಾರ್ಟಿಯಲ್ಲಿ ಕಳೆದಿರುವ ವಿಶ್ವನಾಥ್ ಇಲ್ಲಿ ಈಗಿನ ರಾಜಕೀಯದ ಕುರಿತು ಮಾತಾಡಿದ್ದಾರೆ. ಈ ಚುನಾವಣೆಯಲ್ಲಿ ದೇಶದಾದ್ಯಂತ ಪಕ್ಷ ನೆಲಕಚ್ಚಿರುವ ಸ್ಥಿತಿ ಕಂಡು ಮಮ್ಮಲ ಮರುಗಿದ್ದಾರೆ. ನೇರ ನಡೆ-ನುಡಿಯ ಮಾತುಗಾರ ವಿಶ್ವನಾಥ್‌ರು ಮುಚ್ಚುಮರೆ ಇಲ್ಲದೆ ಮನ ಬಿಚ್ಚಿ ನಮ್ಮೊಂದಿಗೆ ಮಾತನಾಡಿದ್ದು ಇಲ್ಲಿದೆ:


* ಕಾಂಗ್ರೆಸ್ ಸೋಲಿಗೆ ಮತ್ತು ದೇಶದ ತುಂಬ ಬಿಜೆಪಿ ತಲೆ ಎತ್ತಲು ಕಾರಣವೇನು?

- ಹೇಳುತ್ತಾ ಹೋದರೆ ಹತ್ತಾರು ಕಾರಣಗಳಿವೆ. ಕಾಂಗ್ರೆಸ್ ಸೋಲುವುದಕ್ಕೂ, ಬಿಜೆಪಿ ಗೆಲ್ಲುವುದಕ್ಕೂ ಕಾಂಗ್ರೆಸ್ಸೇ ಕಾರಣ. ದೇಶ ಮುನ್ನಡೆಸಲು ಸರಿಯಾದ ನಾಯಕತ್ವ ಈ ಸಲ ಕಾಂಗ್ರೆಸ್‌ನಿಂದ ಆಗಲಿಲ್ಲ, ಚುನಾವಣೆ ಸಮೀಪಿಸುತ್ತಿದ್ದರೂ ಸಿದ್ಧತೆ ಮಾಡಿಕೊಳ್ಳಲಿಲ್ಲ, ಟೀಮ್‌ವರ್ಕ್, ಸ್ಟ್ರಾಟೆಜಿ ಯಾವುದೂ ಎದ್ದು ಕಾಣಲಿಲ್ಲ, ರಾಹುಲ್ ಗಾಂಧಿಯನ್ನು ಪ್ರೊಜೆಕ್ಟ್ ಮಾಡಲು ಹೋಗಿದ್ದು ದೊಡ್ಡ ತಪ್ಪು, ಈ ಕಾರಣಕ್ಕೇ ಕಾಂಗ್ರೆಸ್ ತಲೆದಂಡ ತರಬೇಕಾಯಿತು.

ಹಗರಣಗಳು ಎಲ್ಲೆಡೆ ಚರ್ಚೆಯಾಗಿ ಪಕ್ಷಕ್ಕೆ ಕೆಟ್ಟ ಹೆಸರು ಮುತ್ತಿಕೊಂಡುಬಿಟ್ಟಿತು.

ಒಮ್ಮೆ ಒಂದು ಪ್ರಕರಣ ನಡೆಯಿತು. ಅದು 2012 ರ ಚಳಿಗಾಲ. ಆಗ ಸಂಸತ್ತಿನ ಅಧಿವೇಶನ ನಡೆಯುತ್ತಿತ್ತು, ಆಗ ರಾಹುಲ್ ಗಾಂಧಿ ಕೆಲವು ರಾಜ್ಯದ ಎಂಪಿಗಳನ್ನು ತಮ್ಮ ಕಚೇರಿಗೆ ಕರೆಸಿಕೊಂಡು ಮಾತಾಡಿಸಿದರು. ಈ ಪಟ್ಟಿಯಲ್ಲಿ ನಾನೂ ಇದ್ದೆ. ಅವರ ಆಪ್ತ ಸಹಾಯಕ ಖನಿಷ್ಕಾ ಸಿಂಗ್ ನನ್ನನ್ನು ಕರೆದು ನನ್ನ ಹಿನ್ನೆಲೆ ಕೇಳಿದರು. ನನಗೆ ನಗು ಬಂದು “ಇಂಥ ಸಭೆಯನ್ನು ಸುಖಾಸುಮ್ಮನೆ ಕರೆದಿದ್ದೀರಿ. ನನ್ನಂತಹ ಹಿರಿಯರ ಪೂರ್ವೇತಿಹಾಸ ತಿಳಿಯದೇ ನನ್ನನ್ನು ಕರೆಸುವುದು ತಪ್ಪು” ಎಂದು ಹೇಳಿದೆ. ಅದನ್ನು ಕೇಳಿ ಆತ ತಬ್ಬಿಬ್ಬಾದ.

ಅವತ್ತು ರಾಹುಲ್ ಹುಡುಗಾಟಿಕೆಯಿಂದ ವರ್ತಿಸಿದರು. “ಈ ದೇಶವನ್ನು ನಾನು ಮುನ್ನಡೆಸಬಹುದಾ?” ಎಂದು ಅವರು ಕೇಳಿದರು. ಅದಕ್ಕೆ ನಾನು “ರಾಹುಲ್‌ಜಿ, ನೀವು ಈ ರಾಷ್ಟ್ರವನ್ನು ಮುನ್ನಡೆಸಬಹುದು. ಆದರೆ ಒಂದು



ದೊಡ್ಡ ಪಕ್ಷದ ನಾಯಕನಾಗುವುದಕ್ಕೆ ಅಪಾರ ಅನುಭವ ಅತ್ಯಗತ್ಯವಾಗಿ ಬೇಕು” ಎಂದೆ. ಆಮೇಲೆ ರಾಹುಲ್ ಸಲಹೆಗಳಿದ್ದರೆ ಹೇಳಿ ಅಂದರು. ಆಗ ನಾನು “ನನ್ನಿಂದು ಎರಡು ಮನವಿ: ನೀವು ಮೊದಲು ಮದುವೆಯಾಗಬೇಕು” ಅಂದೆ. ಅವರು ಯಾಕೆ ಎಂದು ಕೇಳಿದಾಗ “ನಿಮ್ಮ ಮದುವೆ ನೋಡಲು ರಾಷ್ಟ್ರ ಎದುರು ನೋಡುತ್ತಿದೆ. ಅದು ಈ ದೇಶದ ಒಂದು ಸಂಸ್ಕೃತಿ. ನಲವತ್ತೆರಡು ವರ್ಷ ವಯಸ್ಸಿನ ನಿಮ್ಮ ನಡವಳಿಕೆ ಮತ್ತು ವ್ಯಕ್ತಿತ್ವವನ್ನು ಜನ ಗಮನಿಸುತ್ತಾರೆ. ಎರಡನೆಯದಾಗಿ, ನೀವು ಸಂಸದೀಯ ವ್ಯವಹಾರ ಮಂತ್ರಿಯೇ ಆಗಬೇಕು. ಏಕೆಂದರೆ ಆಗ ನಿಮಗೆ ಸಂಸತ್ತಿನ ನಡಾವಳಿಕೆಯ ಬಗ್ಗೆ ಮತ್ತು ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಅರ್ಥವಾಗುತ್ತದೆ. ಜೊತೆಗೆ ಮಂತ್ರಿ ಮಂಡಲದಲ್ಲಿ ಕೆಲಸ ಮಾಡಿದರೆ ಕ್ರೈಸಿಸ್ ಎದುರಾದಾಗ ಅದನ್ನು ಹೇಗೆ ಮ್ಯಾನೇಜ್ ಮಾಡಬಹುದು ಎಂಬುದು ಗೊತ್ತಾಗುತ್ತದೆ. ಸಂಸತ್ತಿನಲ್ಲಿ ಎಲ್ಲಾ ಮುಖ್ಯ ವಿಷಯಗಳನ್ನು ಕುರಿತ ಚರ್ಚೆಗಳಲ್ಲಿ ನೀವು ಭಾಗವಹಿಸಬೇಕು. ನೀವು ಎಲ್ಲ ಬಗೆಯ ನಾಯಕರನ್ನು ಸಂದರ್ಶಿಸಿ ಅವರಿಂದ ಸಲಹೆಗಳನ್ನು ಪಡೆಯಬೇಕು. ಹಿರಿಯರನ್ನು ಗೌರವಿಸಿ, ಅವರ ಕಾಲುಮುಟ್ಟಿ ಸಲಹೆ ಕೇಳುವಂಥ ಗುಣಗಳು ನಿಮ್ಮಲ್ಲಿ ಬರಬೇಕು. ದೇಶದ ಜನ ನಿಮ್ಮನ್ನು ಆಗ ಗುರುತಿಸುತ್ತಾರೆ” ಅಂತೆಲ್ಲಾ ಬಿಡಿಸಿ ಹೇಳಿದೆ.

ಎಲ್ಲವನ್ನು ಕೇಳಿ ಗೋಣು ಹಾಕುತ್ತ, ವಿಶಲ್ ಹೊಡೆಯುತ್ತಾ ಕೈ ಮುಟ್ಟಿ ಕಳಿಸಿದರು. ನನ್ನ ಮಾತನ್ನು ಅವರು ಸೀರಿಯಸ್ ಆಗಿ ತೆಗೆದುಕೊಳ್ಳಲೇ ಇಲ್ಲ, ಅವತ್ತೇ ಈ ಹುಡುಗನ ನಡವಳಿಕೆ, ಉಡಾಫೆ ನನಗೆ ಬೇಸರ ತರಿಸಿಬಿಟ್ಟಿತು!

* ನೆಲ ಕಚ್ಚಿರುವ ನಾಯಕತ್ವದಲ್ಲಿ ಈಗ ಏನು ಬದಲಾವಣೆಗಳಾಗಬೇಕು ಎಂದು ನಿಮಗನ್ನಿಸುತ್ತದೆ?

-ಇಂದಿರಾ ಗಾಂಧಿಯವರ ಕುಟುಂಬ ಬಿಟ್ಟು ಕಾಂಗ್ರೆಸ್ ರಾಜಕೀಯ ಇಲ್ಲ, ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಿಯಾಂಕಾ ಗಾಂಧಿನೇ ಪಕ್ಷಕ್ಕೆ ಹೊಸ ಹುರುಪು ಕೊಡಬಲ್ಲರು. ಆಕೆ **matured** ಮತ್ತು **immune** ಆಗಿದ್ದಾಳೆ (ಇಂದಿರಾ ಗಾಂಧಿ ತರಹ). ಜೊತೆಗೆ ಪಕ್ಷದ ವ್ಯವಸ್ಥೆಯಲ್ಲೂ ಎಐಸಿಸಿಯಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ಬದಲಾವಣೆಗಳಾಗಬೇಕು. ನಾಯಕರು ತಮ್ಮ ಅನುಭವವನ್ನು ಪಕ್ಷಕ್ಕೆ ಧಾರೆಯೆರೆಯಬೇಕು. ಕ್ರಿಯಾಶೀಲರು ಕಾರ್ಯೋನ್ಮುಖರಾಗಿ ಕೆಲಸ ಮಾಡುವ ವಾತಾವರಣ ಇವತ್ತು ನಿರ್ಮಾಣವಾಗಬೇಕು. ನಿಷ್ಕ್ರಿಯರೆಲ್ಲರನ್ನು ಒದ್ದೋಡಿಸಬೇಕು. ನೇರ ಚುನಾವಣೆಯಲ್ಲಿ ಗೆಲ್ಲದೆ ಹಿಂಬಾಗಿಲಿನಿಂದ ಕುರ್ಚಿ ಹಿಡಿದು ಕುಳಿತಿರುವ ಅಹಮದ್ ಪಟೇಲ್, ಮಧುಸೂದನ್ ಮಿಸ್ತ್ರಿ, ಮಾರ್ಗರೇಟ್ ಆಳ್ವ, ಆಸ್ಕರ್ ಫರ್ನಾಂಡಿಸ್‌ರಂಥವರನ್ನು ಗಂಟುಮೂಟೆ ಕಟ್ಟಿ ಮನೆಗೆ ಕಳಿಸಬೇಕು.

ಹಾಗೆಯೇ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್‌ರನ್ನು ಹೊರಗಡೆ ಬಿಡದೆ ಆಫೀಸ್‌ನಲ್ಲಿ ಕಟ್ಟಿ ಹಾಕಿದ್ದು ನಮ್ಮ ಪಕ್ಷ ಮಾಡಿದ ಮೊದಲ ತಪ್ಪು, ಬರಾಕ್ ಒಬಾಮಾ ಭಾಷಣ ಮಾಡುವಾಗ “ಮನಮೋಹನ್ ಸಿಂಗ್‌ರಂಥವರು ನನ್ನ ಪಕ್ಕ ಕುಳಿತಿರುವುದೇ ನನ್ನ ಭಾಗ್ಯ” ಅಂದಿದ್ದರು. ಅಂತಹ ಸಿಂಗ್‌ರನ್ನು ಮುಖ್ಯ ವೇದಿಕೆಗೆ ತಂದು ಇಡೀ ಜಗತ್ತೇ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದಾಗ ಅವರು ಹೇಗೆ ಭಾರತವನ್ನು ರಕ್ಷಿಸಿದರು ಎಂಬುದನ್ನು ಜನರಿಗೆ ಅರ್ಥ ಮಾಡಿಕೊಡಲು ಬಿಡಬೇಕಿತ್ತು, ಆದರೆ ಚುನಾವಣೆ ಸಮಯದಲ್ಲಿ ಅವರ ಒಂದು ಸಣ್ಣ ಫೋಟೋವನ್ನು ಬಳಸಲಿಲ್ಲ. It is a great lapse. ಇದು ಕಾಂಗ್ರೆಸ್‌ಗೆ ದೊಡ್ಡ ಅನಾಹುತ ತಂದುಬಿಟ್ಟಿತು.

ನಮ್ಮ ನೆಚ್ಚಿನ ನಾಯಕಿ ಸೋನಿಯಾ ಎಡವಿದ್ದೂ 2009 ರಲ್ಲಿ, ಆಗ ಪ್ರಣವ್ ಮುಖರ್ಜಿಯನ್ನು ಪ್ರಧಾನಿ ಮಾಡದೆ ಯುಪಿಎ-2 ಕ್ಕೂ ಸಿಂಗ್‌ರನ್ನು ಪ್ರಧಾನಿ ಮಾಡಿದ್ದು ತಪ್ಪು, ಆಗ ಮನಮೋಹನ್ ಸಿಂಗ್‌ರನ್ನು ರಾಷ್ಟ್ರಪತಿ ಮಾಡಿ ಮುಖರ್ಜಿಯವರನ್ನು ಪ್ರಧಾನಿ ಮಾಡಿದ್ದರೆ, ಮನಮೋಹನ್ ಸಿಂಗ್ ಕೂಡಾ ಖುಷಿ ಆಗಿರೋರು. ಏಕೆಂದರೆ ಅಷ್ಟೊತ್ತಿಗಾಗಲೇ ಅವರಿಗೆ ಸಾಕಾಗಿಹೋಗಿತ್ತು, ಪ್ರಣವ್ ಕೂಡ ಅಪಾರ ಅನುಭವ ಇರುವ ವ್ಯಕ್ತಿ, ಒಟ್ಟಾರೆ ಇವೆಲ್ಲ ಕಾರಣಗಳಿಂದ ಇವತ್ತು ಕಾಂಗ್ರೆಸ್ 44 ಸೀಟುಗಳಿಗೆ ಬಂದು ನಿಂತಿದೆ.

* ನರೇಂದ್ರ ಮೋದಿ ಗೆಲುವನ್ನು ಹೇಗೆ ಅರ್ಥೈಸುತ್ತೀರಿ?

-ನಿಜಕ್ಕೂ ಮೋದಿ ಗೆಲುವಿಗೆ ಕಾಂಗ್ರೆಸ್ಸೇ ಕಾರಣ. ಪ್ರಧಾನಿ ಆಗುವ ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಆತ ಇಡೀ ಬಿಜೆಪಿ ಪಕ್ಷವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ. ಕಾಂಗ್ರೆಸ್ಸಿನ ನೆಗೆಟಿವ್ ಅಂಶಗಳನ್ನು ಆತ ಎತ್ತಿತೋರಿಸಿದ್ದು ಎಲ್ಲರಿಗೂ ತಲುಪಿತು. ಮೋದಿ ಹೀಗೆ ಪ್ರಚಾರ ಮಾಡುತ್ತಾ ಹೋದಂತೆ ಕಾಂಗ್ರೆಸ್ ನಾಯಕರು ಉತ್ತರ ಕೊಡದೆ ಸುಖಾಸೀನರಾಗಿಬಿಟ್ಟರು. ಶಶಿ ತರೂರ್, ಸಲ್ಮಾನ್ ಖುರ್ಷಿದ್, ಚಿದಂಬರಂ, ಮಿಸ್ತ್ರಿ, ಮನೀಷ್ ತಿವಾರಿ, ಅಭಿಷೇಕ್ ಸಿಂಘ್ವಿ, ಮಣಿಶಂಕರ್ ಅಯ್ಯರ್‌ರಂಥ ಪೆದ್ದರು ಬೇಕಾಬಿಟ್ಟಿ ಮಾತನಾಡಿ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿಬಿಟ್ಟರು.

ಮೋದಿ “ಕಾಂಗ್ರೆಸ್ 60 ವರ್ಷದಲ್ಲಿ ಏನೂ ಮಾಡಿಲ್ಲ, ನಾನು 60 ತಿಂಗಳಲ್ಲಿ ಮಾಡುತ್ತೇನೆ, ಅಧಿಕಾರ ಕೊಡಿ” ಅಂದ. ಅದಕ್ಕೆ ಕಾಂಗ್ರೆಸ್ ಏನೂ ಉತ್ತರವನ್ನೇ ಕೊಡಲಿಲ್ಲ. ಕಾಂಗ್ರೆಸ್ ಮಾಡಿರುವ ಕೆಲಸವನ್ನು ಜನರಿಗೆ ತಲುಪಿಸುವಲ್ಲಿ ಸಂಪೂರ್ಣ ವಿಫಲವಾಯ್ತು, ತಂತ್ರಜ್ಞಾನ, ಮೀಡಿಯಾ ಇನ್ನಿತರೆ ಉಪಯೋಗಿಸಿಕೊಳ್ಳದೆ ಕಾಂಗ್ರೆಸ್ ಪರದಾಡಿತು. ಇಡೀ ದೇಶ ಸುತ್ತಿದ ಮೋದಿ ಜನರನ್ನು ಸಮ್ಮೋಹಿನಿಗೆ ಒಳಗಾಗುವಂತೆ ಮಾಡಿಬಿಟ್ಟ! ಯುವಕರಲ್ಲಿ ಭ್ರಮೆಗಳನ್ನು ಎಗ್ಗಿಲ್ಲದೆ ತುಂಬಿಬಿಟ್ಟ. ಆತ ಗುಜರಾತ್‌ನಲ್ಲಿ ಏನನ್ನೂ ಮಾಡಿಲ್ಲ, ಆದರೆ ಅಲ್ಲಿ ಬಹಳಷ್ಟನ್ನು ಸಾಧಿಸಿದ್ದೇನೆ ಎಂದು ಸುಳ್ಳನ್ನು ಮತ್ತೆ ಮತ್ತೆ ಹೇಳಿ ಅದು ನಿಜ ಎಂದು ಜನರನ್ನು ನಂಬಿಸಿದ. ಆತ ಗುಜರಾತಿನ ಅಭಿವೃದ್ಧಿ ಮಾದರಿಯನ್ನು ವೈಭವೀಕರಿಸಿದಾಗ ಕಾಂಗ್ರೆಸ್ ಕೈಕಟ್ಟಿ ಕುಳಿತಿತು. ಮೋದಿ ಜನರನ್ನು ಹೇಗೆ ಟ್ರಾಪ್ ಮಾಡಿದ ಎಂದರೆ ‘ನಾಯಕನನ್ನು ನಂಬು, ಅಲೆ ಎಂಬುದನ್ನು ನಂಬು’ ಎಂದು ಬಿಂಬಿಸಿದ.


* ದೇಶದ ಮಾಧ್ಯಮಗಳ ಸಮೀಕ್ಷೆಗಳೂ ನರೇಂದ್ರ ಮೋದಿ ಗೆದ್ದೇಬಿಟ್ಟ ಎಂದು ಮುಂಚಿತವಾಗಿಯೇ ಬಿಂಬಿಸಿದವು. ಪ್ರಜಾಪ್ರಭುತ್ವ ದೇಶದಲ್ಲಿ ಇಂತಹ ಸಮೀಕ್ಷೆಗಳನ್ನು ನಡೆಸುವುದು ಸರಿಯೇ?

-ಚುನಾವಣೆ ಆಯೋಗ ಇದಕ್ಕೆಲ್ಲಾ ಬ್ರೇಕ್ ಹಾಕಿ ಬದಲಾವಣೆ ಮಾಡಬೇಕು. ಚುನಾವಣೆ ಪೂರ್ವ ಸಮೀಕ್ಷೆಗಳಿಗೆ ಅವಕಾಶ ಮಾಡಿಕೊಡಬಾರದು. ಮೋದಿಯ ಮಾರ್ಕೆಟಿಂಗ್ ಸ್ಟ್ರಾಟೆಜಿ ಜನರನ್ನು ಮಂತ್ರಮುಗ್ಧರನ್ನಾಗಿಸಿತು. ಇಂತಹ ಪರಿಸ್ಥಿತಿಯಲ್ಲಿ ಸಮೀಕ್ಷೆಗಳು ಮತದಾರರ ಮನಸ್ಸನ್ನು ಏರುಪೇರು ಮಾಡುತ್ತಾ ಹೋಗುತ್ತವೆ. ಇದಕ್ಕೆ ದೇಶದ ಜನರ ಅನಕ್ಷರತೆಯೂ ಕಾರಣವಾಯಿತು. ಮಾಧ್ಯಮಗಳು ಜಾತಿಯಾಧಾರಿತವಾಗಿಯೂ ಕೆಲಸ ಮಾಡಿಬಿಟ್ಟವು!

* **2009** ಚುನಾವಣೆಯಲ್ಲಿ ಬಿಜೆಪಿ **18.5%** ಮತ ಪಡೆದು **116** ಸೀಟುಗಳನ್ನು ಗೆದ್ದಿತ್ತು; ಈ ಸಲದ ಚುನಾವಣೆಯಲ್ಲಿ ಕಾಂಗ್ರೆಸ್ **19.3%** ಮತಗಳಿಸಿ 44 ಸೀಟು ಗಳಿಸಿದೆಯಲ್ಲ, ಇದಕ್ಕೆ ಏನಂತೀರಿ?

-ಉತ್ತರ ಪ್ರದೇಶದಲ್ಲಿ **23%** ಮತ ಗಳಿಸಿದ ಬಿಎಸ್‌ಪಿಯು ಒಂದೂ ಸೀಟು ಗೆದ್ದಿಲ್ಲ. ಅಗಾಧ ಸಂಖ್ಯೆಯಲ್ಲಿರುವ ಮುಸ್ಲಿಮರು ಮತಗಳನ್ನು ಯಾರಿಗೆ ಹಾಕಿದರು. ಆ ರಾಜ್ಯದಲ್ಲಿ ಒಬ್ಬ ಮುಸ್ಲಿಂ ಅಭ್ಯರ್ಥಿಯೂ ಗೆದ್ದಿಲ್ಲ. ಎಲ್ಲಾ ಜನಾಂಗದವರಿಗೆ ಮತಗಟ್ಟೆಗೆ ಹೋಗುವ ಮೊದಲು ತಿಳಿವಳಿಕೆ ಹೇಳುವಂತಾಗಬೇಕು. 2009 ರಲ್ಲಿ ರಾಷ್ಟ್ರಪತಿಯವರು ಒಂದು ಭಾಷಣದಲ್ಲಿ “ನನ್ನ ಸರ್ಕಾರ ಅನಕ್ಷರತೆಯನ್ನು ಹೋಗಲಾಡಿಸಲು ದೇಶದ ಎಲ್ಲರಿಗೂ ಶಿಕ್ಷಣ ಕೊಡಬೇಕು” ಎಂದು ಹೇಳಿದ್ದರು. ಆದರೆ ಯಾವುದೂ ಕಾರ್ಯಕ್ಕೆ ಬರಲಿಲ್ಲ, ಶಿಕ್ಷಣ, ಮತದಾನದ ಬಗ್ಗೆ ಅರಿವು ಮೂಡಿಸದೆ ಸರ್ಕಾರಗಳು ನಿದ್ದೆ ಮಾಡಿದವು. ಈ ಸಂದರ್ಭದಲ್ಲಿ ದೇಶದ ಎಲ್ಲ ಸಂಘಟನೆಗಳು ಮುಂದೆ ಬಂದು ಅನಕ್ಷರತೆಯನ್ನು ಹೋಗಲಾಡಿಸಬೇಕು. ಆಗ ಚುನಾವಣೆಗಳು ಹೊಸ ಮಾರ್ಗದಲ್ಲಿ ನಡೆಯಬಹುದು.


* ರಾಜ್ಯದ ಪ್ರಸಕ್ತ ಚುನಾವಣೆಯಲ್ಲಿ ಅಹಿಂದ ಮತ ವಿಭಜನೆಯಾದದ್ದು ಯಾಕೆ?



-ಅಹಿಂದ ಮತದಾರರಿಗೆ ಸರ್ಕಾರ ಒಳ್ಳೆಯ-
ರ್ಯಕ್ರಮಗಳನ್ನು ತಂದಿದ್ದರೂ ಅವುಗಳನ್ನು ಸರಿಯಾಗಿ
ಬಿಸಲಿಲ್ಲ. ಎಲ್ಲಾ ಅಹಿಂದ ಜಾತಿಯವರನ್ನು
ಗುರುತಿಸುವಂತೆ ಮಾಡಬೇಕು. ಕ್ಷೌರಿಕ, ಮಡಿವಾಳ,
ಕುಂಬಾರ, ಉಪ್ಪಾರ ಮುಂತಾದ ಚಿಕ್ಕಪುಟ್ಟ
ಸಮುದಾಯಗಳ ನಾಯಕರನ್ನು ನಮ್ಮ ಸರ್ಕಾರ ಗುರುತಿಸಿ
ವರನ್ನು ವಿಧಾನ ಪರಿಷತ್ತು ಮತ್ತು ನಿಗಮ ಮಂಡಳಿಗಳಿಗೆ
ರಿಸಬೇಕು. ಆಗ ಅಹಿಂದ ಮತದಾರರು ಒಗ್ಗಟ್ಟಾಗಿ
ಗ್ರೆಸ್‌ನ್ನು ಬೆಂಬಲಿಸುತ್ತಾರೆ. ಇದು ಕಾಂಗ್ರೆಸ್‌ನ್ನು
ಸುತ್ತಿರುವವರಿಗೆ ಕೂಡಲೇ ಅರ್ಥವಾಗಬೇಕು.
ವರಾಜ ಅರಸು ಮಾಡಿದ್ದು ಇದನ್ನೇ!

* ನಿಮಗೆ ಚುನಾವಣೆಯಲ್ಲಿ ದ್ರೋಹ ಮಾಡಿದವರ
ನೀವು ಯಾಕೆ ಮುಂದಾಲೋಚನೆ ಮಾಡಲಿಲ್ಲ?

- ಮಾಡಿದ್ದೆ, ಕೋಮುವಾದಿ ಪಾರ್ಟಿ ಜೊತೆ ಇವರ
ಒಪ್ಪಂದ ಯಾವತ್ತೂ ಇತ್ತು ಸಿ.ಎಚ್.ವಿಜಯಶಂಕರರನ್ನು
ಸಕೆ, ಹಾಗೆ ಆತ ಕುರುಬರ ಓಟ್‌ನ್ನೆಲ್ಲಾ ತಗೋಬೇಕು,
ನಿಟ್ಟಿನಲ್ಲಿ ತಾವು ಗೆಲ್ಲಬೇಕು ಮತ್ತು ಮೈಸೂರಿನಲ್ಲಿ
ಒಕ್ಕಲಿಗ ಅಭ್ಯರ್ಥಿಯನ್ನು ಹಾಕಿ, ಇಡೀ ಒಕ್ಕಲಿಗ
ಮತಗಳನ್ನೆಲ್ಲಾ ಶಿಫ್ಟ್ ಮಾಡಿಕೊಳ್ಳಬಹುದೆಂದು
ದೇವೇಗೌಡರು ಪ್ಲಾನ್ ಮಾಡಿದರು. ಹಾಗಾಗಿ ಸಿಂಹನನ್ನು
ಸೂರಿಗೆ ಹಾಕಿಸಿದರು. So, ಯಾರನ್ನ ಕರ್ನಾಟಕದ
ಭೀಷ್ಮ ಅಂತ ಕರೆಯಬೇಕೋ ಅಂಥವರು ಹೀಗೆ
ಧಿಯಾಗಿ ಮಾರ್ಪಟ್ಟರು. ಒಂದು ಚುನಾವಣೆಯನ್ನು
ಗೆಲ್ಲೋದಕ್ಕೆ ತನ್ನ ಇಡೀ ಜೀವಮಾನದ ತತ್ವ, ಸಿದ್ಧಾಂತಗಳನ್ನು
ಬಿಡಿ ಮಾಡುವಂಥ ಕೆಲಸ ಮಾಡಿದರು. ಈ ರೀತಿ
ಮಟ್ಟಕ್ಕೆ ದೇವೇಗೌಡರು ಇಳಿಯುತ್ತಾರೆ ಅಂತ



ವು ನಿರೀಕ್ಷೆ ಮಾಡಿರಲಿಲ್ಲ. ಅದಕ್ಕಿಂತ ಮುಖ್ಯವಾಗಿ
ಸಿದ್ದರಾಮಯ್ಯನವರನ್ನು ಮಣಿಸಬೇಕು ಎಂದು ಗೌಡರು
ಹಠಕ್ಕೆ ಬಿದ್ದರು. ಆದರ ಜೊತೆಗೆ ನಮ್ಮ ಕಾಂಗ್ರೆಸ್ಸಿನ
ನಾಯಕರೂ ಕೈಜೋಡಿಸಿದರು.
ನಂತರ ದೇವೇಗೌಡರು ನಾನು ಒಕ್ಕಲಿಗ ವಿರೋಧಿ
ಎಂದೂ ಹಬ್ಬಿಸಿದರು. ನಾನಂತೂ ಯಾವತ್ತೂ ಒಕ್ಕಲಿಗರ
ವಿರೋಧಿಯಲ್ಲ. ಈ ಬಗ್ಗೆ ನನ್ನ ಜೊತೆ ಇರುವ ಆ
ಜಾತಿಯ ನಾಯಕರೇ ನನ್ನ 'ಜಾತ್ಯತೀತತೆ'ಯ ಬಗ್ಗೆ
ಹೇಳುತ್ತಾರೆ. ಭೀಷ್ಮನಂಥ ದೇವೇಗೌಡರೇ ಖುದ್ದು ನಿಂತು
ಮಾಡಿದ್ದು ಈಗ ಇತಿಹಾಸ. ಇವರ ಅಂಜುಬುರುಕತನವನ್ನೆಲ್ಲಾ
ಜನ ಜನತೆ ನೋಡಿದ್ದಾರೆ. ಇಂಥವರನ್ನು ಹೇಗೆ
ನಂಬುವುದು......!

* ಹಾವೇರಿ, ಕೊಪ್ಪಳ, ಮೈಸೂರು, ಮಂಗಳೂರು,
ಬೆಂಗಳೂರು, ಮಂಡ್ಯ, ಬೀದರ್ ಮುಂತಾದ ಕಡೆ
ಕಾಂಗ್ರೆಸ್ ಸೋಲಲು ಕಾರಣರಾದ ವೀರ್ ಸಾಧಕ'ರ
ಹೈಕಮಾಂಡ್ ಕ್ರಮ ಕೈಗೊಳ್ಳುವ ಬಗ್ಗೆ ನಿಮಗೆ
ಇದೆಯಾ?

-ಖಂಡಿತವಾಗಿ ಕ್ರಮ ತೆಗೆದುಕೊಳ್ಳಲೇಬೇಕು. ಕ್ರಮ
ಕೈಗೊಳ್ಳದೆ ಹೈಕಮಾಂಡ್ ವಿರುದ್ಧ ನಾನು ಸಂಘರ್ಷಕ್ಕೆ
ಇಳಿಯಬೇಕಾಗುತ್ತೆ. ಇಂಥವರ ಪಟ್ಟಿಯನ್ನು ಸಿದ್ಧಪಡಿಸಿದ್ದೇನೆ.
ಹೈಕಮಾಂಡ್‌ಗೆ ಹೋಗಿ ಕೊಡುತ್ತಿದ್ದೇನೆ. ಕಳೆದ ಇಪ್ಪತ್ತು
ವರ್ಷದಿಂದ ಪಕ್ಷಕ್ಕೆ ದ್ರೋಹ ಮಾಡಿದವರಿಗೆ ಯಾವುದೇ
ಕೊಟ್ಟಿಲ್ಲ, ಇವರೆಲ್ಲಾ ಕಾಂಗ್ರೆಸ್ ಪಕ್ಷವನ್ನು ದ್ವಾಪಾರ

ಮಾಡಿಕೊಂಡು, ಹಾಯಾಗಿ ಕುಳಿತು ಅಧಿಕಾರ ಸವಿಯುತ್ತಿದ್ದಾರೆ. ಕಳೆದ ಸಲ ಕಾಂಗ್ರೆಸ್ ಗೆಲ್ಲಿಸುವುದಕ್ಕೆ ಒಂದು ಟೀಮ್‌ವರ್ಕ್ ಇತ್ತು, ಈ ಬಾರಿ ಕಾಂಗ್ರೆಸ್ ಅನ್ನು ಸೋಲಿಸುವುದಕ್ಕೂ ಅದೇ ಟೀಮ್ ಕೆಲಸ ಮಾಡಿತು. ನಿಜಕ್ಕೂ ಇದು ಹೀಗೆ ಮುಂದುವರಿದರೆ ಕಾಂಗ್ರೆಸ್‌ಗೆ ಉಳಿಗಾಲವಿಲ್ಲ.

* ನೀವು ಮತ್ತು ಎಚ್.ಎಂ.ರೇವಣ್ಣರು ಕಾಂಗ್ರೆಸ್‌ಗೆ ಕರೆತಂದ ಸಿದ್ದರಾಮಯ್ಯ ಇವತ್ತು ಮುಖ್ಯಮಂತ್ರಿಯಾಗಿ ಆಡಳಿತ ನಡೆಸುತ್ತಿದ್ದಾರೆ. ಆದರೆ ರೇವಣ್ಣರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ಕೊಡಲಿಲ್ಲ, ನಿಮಗೆ ಪಕ್ಷ ಟಿಕೆಟ್ ಕೊಟ್ಟು ಸೋಲಿಸಿತು, ಇದನ್ನು ಹೇಗೆ ಅರ್ಥೈಸುತ್ತೀರಿ?

- ಸಿದ್ದರಾಮಯ್ಯನವರು ಕಾಂಗ್ರೆಸ್ ಪಾರ್ಟಿಗೆ ಬಂದಿದ್ದರಲ್ಲಿ ನಾವೆಲ್ಲಾ **instrumental** ಅಷ್ಟೆ. ಹಿರಿಯ ನಾಯಕರಾದ ಎಸ್.ಎಂ.ಕೃಷ್ಣ, ಮಲ್ಲಿಕಾರ್ಜುನ ಖರ್ಗೆ, ಮುನಿಯಪ್ಪ ಮತ್ತು ಬಹಳಷ್ಟು ಮುಖಂಡರು ಇದಕ್ಕೆ ಸಾಥ್ ಕೊಟ್ಟರು. ಬಲಿಷ್ಠವಾದ ಪಾರ್ಟಿಗೆ ಹೆಚ್ಚಿನ ಬಲ ತುಂಬಿಸಲಿಕ್ಕೆ ಮಾಸ್ ಲೀಡರ್‌ನನ್ನು ಕರೆತಂದರು. ಅಂದರೆ ಸಿದ್ದರಾಮಯ್ಯ ಬರುವವರೆಗೂ ಕಾಂಗ್ರೆಸ್ ವೀಕ್ ಆಗಿತ್ತು ಅಂತಲ್ಲ, ದೊಡ್ಡ ಪಕ್ಷಕ್ಕೆ ಜನಾಕರ್ಷಣೆವುಳ್ಳ ಒಬ್ಬ ಹಿಂದುಳಿದ ನಾಯಕ ಬಂದು ಸೇರುವುದರಿಂದ ಇನ್ನಷ್ಟು ಬಲ ಕಾಂಗ್ರೆಸ್‌ಗೆ ಬಂತು. ರೇವಣ್ಣ ಮತ್ತು ನನ್ನ ಬಗ್ಗೆ ಚರ್ಚಿಸುವುದು ಇಲ್ಲಿ ಅಪ್ರಸ್ತುತ.

* ನೀವು ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ಘಳಿಗೆಯಿಂದಲೂ ಅವರಿಗೆ ನಿಮ್ಮ 'ರಾಜಕೀಯ ಗುರು' ಅರಸು ಅವರ ಆಡಳಿತವನ್ನು ನೆನಪಿಸುತ್ತಿದ್ದೀರಿ. ಆದರೆ ಸಿದ್ದರಾಮಯ್ಯ ಆ ಬಗ್ಗೆ ಇವತ್ತಿಗೂ ಗಮನ ಕೊಡದೆ, ದಾಕ್ಷಿಣ್ಯವಿಲ್ಲದೆ ಪರ್ಡರ್ಶಿಸದೆ ಮುಗುಮ್ಮಾಗಿಯೇ ಇದ್ದಾರೆ ಅನ್ನಿಸುವುದಿಲ್ಲವೆ?

-'ಅರಸು ನಮ್ಮೆಲ್ಲರಿಗೂ ವಿಶೇಷವಾಗಿದ್ದವರು. ಅವರು ಕಾಂಗ್ರೆಸ್‌ಗೆ ಚೈತನ್ಯ ತಂದ ವ್ಯಕ್ತಿ, ರಾಜ್ಯದ ದೀನದಲಿತರಿಗೆ, ಹಿಂದುಳಿದವರಿಗೆ ತಲೆ ಎತ್ತಿ ಓಡಾಡಲು ಹುಮ್ಮಸ್ಸು ಕೊಟ್ಟವರು. ಅವರ ಕಾರ್ಯಕ್ರಮಗಳು, ನಿರ್ಧಾರಗಳು ನಮಗೆಲ್ಲಾ ಆದರ್ಶ' ಎಂದು ನಾನು ಇಡೀ ಪಕ್ಷಕ್ಕೆ ಸದಾ ಹೇಳುತ್ತಲೇ ಬಂದಿದ್ದೇನೆ. ಈ ಕಾರಣಗಳಿಗೇ ಸಿದ್ದರಾಮಯ್ಯ ಕೂಡ ಅರಸುರನ್ನು ಹಿಂಬಾಲಿಸಬೇಕು! ಇಂದಿರಾ ಗಾಂಧಿ, ಅರಸು ನಮಗೆಲ್ಲಾ ದನಿ ಕೊಟ್ಟವರು.

* ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅಧ್ಯಕ್ಷ ಪರಮೇಶ್ವರ್ ಇವರ ಮಧ್ಯೆ ಇರುವ ಬಿರುಕು ಚುನಾವಣೆಯಲ್ಲಿ ಕಾಂಗ್ರೆಸ್ ಒಗ್ಗಟ್ಟಿಗೆ ಪೆಟ್ಟು ಕೊಟ್ಟಿತೆ?

-ಇಲ್ಲ ಅಂತ ಹೇಳಲು ನನ್ನ ಮನಸ್ಸಿಗೆ ಬರುವುದಿಲ್ಲ!

* ಸಿದ್ದರಾಮಯ್ಯ ಅಷ್ಟೊಂದು ಒಳ್ಳೆಯ ಕಾರ್ಯಕ್ರಮಗಳನ್ನು ರೂಪಿಸಿದ್ದರೂ, ಅಧಿಕಾರಿಗಳು ಅವುಗಳನ್ನು ಕಾರ್ಯರೂಪಕ್ಕೆ ತರಲು ಯಾಕೆ ಶ್ರಮಿಸುತ್ತಿಲ್ಲ?

- ಸಿದ್ದರಾಮಯ್ಯನವರು ಖಡಕ್ ಮನುಷ್ಯ ಎಂಬುದು ಎಲ್ಲರಿಗೂ ಗೊತ್ತಿದೆ. ಅವರು ಯಾವ ಲಾಬಿಗೂ ಮಣಿಯದ ವ್ಯಕ್ತಿ. ಈಗ ಸಿದ್ದರಾಮಯ್ಯ ತಮ್ಮ ಕೈಗೆ ಚಾಟಿ ತೆಗೆದುಕೊಳ್ಳಬೇಕು. ಅಧಿಕಾರಿಗಳನ್ನು ಹಳ್ಳಿಗಳಿಗೆ ಕಟ್ಟುನಿಟ್ಟಾಗಿ ಅಟ್ಟಬೇಕು. ಸರ್ಕಾರದ ಕಾರ್ಯಕ್ರಮಗಳನ್ನು ಜನತೆಗೆ ತಲುಪಿಸಬೇಕು ಹಾಗೂ ತನ್ನ ಮಂತ್ರಿಮಂಡಲವನ್ನು ರಿಪೇರಿ ಮಾಡುವ ನಿಟ್ಟಿನತ್ತ ಹೆಜ್ಜೆ ಇಡಬೇಕು. ಪಕ್ಷ ಬಲವರ್ಧನೆಗೂ ಮುಂದಾಗಬೇಕು. ಇಲ್ಲದಿದ್ದರೆ ಜನ ಸಿದ್ದರಾಮಯ್ಯರನ್ನು ಇಳ್ಳಾಗಿ ಕಾಣುತ್ತಾರೆ!

* ಸಚಿವ ಸಂಪುಟದ ಸದಸ್ಯರಲ್ಲಿ ಸಮನ್ವಯದ ಕೊರತೆ ಇದೆಯೇ?

-ಇದೆ. ಇದು ಎದ್ದು ಕಾಣುತ್ತದೆ. ಕೆಲವರು ಸಚಿವರು ಉದಾಸೀನ ಮಾಡುತ್ತ ಸರ್ಕಾರದ ಕೆಲಸಗಳನ್ನು ಜನರಿಗೆ ತಲುಪಿಸುತ್ತಿಲ್ಲ. ಇಂಥವರನ್ನು ಕೂಡಲೇ ಪತ್ತೆ ಹಚ್ಚಿ ಕ್ರಮಕೈಗೊಳ್ಳುವಂತಾಗಬೇಕು.

* ಸಿದ್ದರಾಮಯ್ಯನವರು ಸಚಿವ ಸಂಪುಟವನ್ನು ಪುನರಚಿಸಿ 'ಡ್ರೀಮ್ ಟೀಮ್' ಕಟ್ಟಲು ಸಾಧ್ಯವೇ?

- ತಂಡವಾಗಿ ಕೆಲಸ ಮಾಡಬೇಕು. ಖಡಾಖಂಡಿತವಾಗಿ ಪುನರಚಿಸಬೇಕು. ಇದನ್ನು ಆದಷ್ಟು ಬೇಗ ಮಾಡಿದರೆ ಸಿದ್ದರಾಮಯ್ಯಗೆ ಒಳ್ಳೆಯದು. ಆ ಮೂಲಕ ಒಳ್ಳೆಯ ಟೀಮ್ ಕಟ್ಟಿಕೊಂಡು ಕಾರ್ಯೋನ್ಮುಖರಾಗಬೇಕು. ಇದರ ಜೊತೆಗೆ ಕೆಲಸ ಮಾಡುವ ದಕ್ಷ ಅಧಿಕಾರಿಗಳನ್ನು ಆಡಳಿತಕ್ಕೆ ಬಳಸಿಕೊಳ್ಳಬೇಕು.

* ಇಷ್ಟೊಂದು ಅನುಭವಸ್ಥ ರಾಜಕಾರಣಿಯಾದ ಸಿದ್ದರಾಮಯ್ಯರ ಒಂದು ವರ್ಷದ 'ನಿಜ ಸಾಧನೆ'ಯ ಬಗ್ಗೆ ನಿಮ್ಮ ನೇರ ಅನಿಸಿಕೆ?

-ಒಂದು ವರ್ಷದಲ್ಲಿ ಕೆಲವು ಚುನಾವಣೆಗಳು ಬಂದವು. ಉಪ ಚುನಾವಣೆಗಳ ಸಂದರ್ಭದಲ್ಲಿ ಅಭಿವೃದ್ಧಿಯ ವೇಗವು ಕುಂಠಿತವಾಯಿತು. ಸಿದ್ದರಾಮಯ್ಯನವರು ಈಗಿನ ರಾಜಕೀಯ ಸನ್ನಿವೇಶವನ್ನು ಉಪಯೋಗಿಸಿಕೊಂಡು ರಾಜ್ಯದ ಪ್ರಗತಿಗೆ 'ಹೊಸ ಹೆಜ್ಜೆ'ಗಳನ್ನು ಇಡಬೇಕು. ಹಾಗೆಯೇ ಧೈರ್ಯದಿಂದ ಮುನ್ನುಗ್ಗಿ ಜನರ ಕಣ್ಣಿಗೆ ಕಾಣಿಸುವಂಥ ಕೆಲಸ ಮಾಡಬೇಕು.

ಸಿದ್ದರಾಮಯ್ಯ ಹೋಗದೆಯಿದ್ರೆ ಇವ್ರುಕೇನಂತೆ?

ಥೂತ್ತೇರಿ

▸ ಯಾಹೂ

ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತ ಈವರೆಗೆ ಕಂಡರಿಯದಂತಹ ಸರಕಾರವೊಂದು ಅಸ್ತಿತ್ವಕ್ಕೆ ಬರುವಂತಹ ಶುಭ ಗಳಿಗೆ ಇದಂತಲ್ಲಾ, ಪ್ರಧಾನಿಯಾಗಿ ಮೋದಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಪಾಲ್ಗೊಳ್ಳದಿದ್ದುದು ಮಹಾ ಪ್ರಮಾದವೆಂಬಂತೆ ಹಲವರು ಬೊಬ್ಬೆ ಹೊಡೆಯುತ್ತಿದ್ದಾರಲ್ಲ, ಈ ಸಮಯದಲ್ಲಿ ಯಾರನ್ನಾದರೂ ಮಾತನಾಡಿಸಿ ಅಭಿಪ್ರಾಯ ಕೇಳಬೇಕೆನಿಸಿತಲ್ಲಾ, ಸಿದ್ದರಾಮಯ್ಯ ಎಸಗಿರುವ ಇಂತಹ ಘೋರ ಕೃತ್ಯಕ್ಕೆ ಸರಿ ಉತ್ತರ ವಾಟಿಸ್ಸೆಯಿಂದ ಬರಲು ಸಾಧ್ಯವೇ ಎಂಬ ಆಸೆಯಿಂದ ಫೋನ್ ಮಾಡಲಾಗಿ ರಿಂಗಾಯ್ತು.



ರಿಂಗ್ ಟೋನ್: "ಭಲೇ ಚಾನ್ಸ್ ಲಕ್ಕಿ ಚಾನ್ಸಿದೆ, ಮೋದಿಯ ಬಳಗವ ಹೊಗಳಿದರೆ, ಭಲೇ ಚಾನ್ಸಿದೆ ಲಕ್ಕಿ ಚಾನ್ಸಿದೆ"

"ಹಲೋ, ಗುಡ್ ಮಾರ್ನಿಂಗ್, ಹೇಳಿ ಸಾರ್."

"ಎಲ್ಲಿದ್ದಿ ವಾಟಿಸ್ಸೆ?"

"ಭೂಮಿ ಮ್ಯಾಲೆ ಇದ್ದಿನಿ. ಅದೇನೇಳೀ ಸಾರ್."

"ನಿಮ್ಮ ಮಂಡ್ಯ ಜಿಲ್ಲೆ ಜಗಳ ಇನ್ನೂ ಮುಗೀಲಿಲ್ವ?"

"ನಿಜವಾದ ಕಳ್ಳ ತಾನು ಕಳ್ಳ ಅಲ್ಲ ಅಂತ ತೋರ್‍ಸದಕ್ಕೆ ಜಾಸ್ತಿ ಮಾತಾಡ್ತನೆ ಮತ್ತೆ ಜೋರಾಗೂ ಮಾತಾಡ್ತನೆ ಸಾರ್."

"ಅಂತ ಕಳ್ಳ ಯಾರು?"

"ಇನ್ನಾರು ಸಾರ್? ಮೊನ್ನೆ ಟಿ.ವಿಲಿ ಕಾಣಿಸಿಕೊಂಡು ಬಾಯಿಗೆ ಬಂದಂಗೆ ಮಾತಾಡಿದನಲ್ಲ, ಅದೇ ಶಿವರಾಮ ಹುಟ್ಟು ಕಳ್ಳ."

"ಅಂಗಂತಿಯಾ?"

"ದೇವರಾಣೆ ಸಾರ್, ಯಾವುದೇ ಚುನಾವಣೆಲಿ ಕಾಸು ಮಾಡಿಕಳದೇ ಅವನ ಕಸುಬು. ಅದು ಈಗ ಜನಕ್ಕೆ ಗೊತ್ತಾಗಿ ಬುಟ್ಟದೆ. ಅದೇ ಟಿ.ವಿಲಿ ಕಾಣಿಸಿಗಂಡು ಸುಳ್ಳೇಳತದೆ. ಸಾರ್, ನನಿಗೂ ಟಿ.ವಿಲಿ ಅವಕಾಶ ಮಾಡಿಕೊಡ್ತಿರಾ?"

"ಅದಕ್ಕಲ್ಲ ದುಡ್ಡು ಖರ್ಚಾಯ್ತದೆ."

"ಎಷ್ಟು ಖರ್ಚಾಯ್ತದೆ ಸಾ?"

"ಈಗ ಮೂವತ್ತರಿಂದ ಐವತ್ತು ಲಕ್ಷದಾ ಆದಂತೆ."

"ಅಂಗರೆ ಟಿ.ವಿಲಿ ಮಾತಾಡೋರೆಲ್ಲ ದುಡ್ಡು ಕೊಟ್ಟು ಮಾತಾಡ್ತಾರೆಯಾ?"

"ಅಲ್ಲೂ ಪಾರ್ಷಿಯಾಲಿಟಿ ಇದೆ. ನೀನು ಬಂದು ಮಾತಾಡದೇ ಅದ್ರೆ ದುಡ್ಡು ಕೊಡಬೇಕು."

"ಬ್ಯಾಡಿ ಸಾರ್. ಅಲ್ಲಿ ಕಾಣಿಸಿಗಳದೂ ಬ್ಯಾಡಿ, ಜನ ಆಡಿ ಕಳದೂ ಬ್ಯಾಡಿ. ಈಗಿರಂಗೆ ಇರತಿನಿ."

"ಇನ್ನೊಂದು ವಿಷಯ. ಈ ಸಿದ್ದರಾಮಯ್ಯ ಮೋದಿ ಪ್ರಮಾಣವಚನ ತಗಲೋ ಸಮಾರಂಭಕ್ಕೆ ಕರದ್ರೂ ಹೋಗಿಲ್ಲವಲ್ಲಾ, ಇದಕೇನೇಳ್ತಿ?"

"ನಿನ್ನನ್ನೂ ಕರದಿದ್ರು ಸಾರ್. ನಾನೂ ಹೋಗಿಲ್ಲ."

"ನಿನ್ನನ್ನೂ ಕರದಿದ್ರೆ?"

"ಹೌದು ಸಾರ್. ಇನ್‌ವಿಟೇಷನ್ನೆ ಬಂದಿತ್ತು. ಈ ಬಿಜೆಪಿ ಬದ್ದಿ ಮಕ್ಕಳು ಸಿಕ್ಕಾಪಟ್ಟೆ ಸ್ವೀಟ್ ತಿನ್ನಿಸಿ, ಐದಾರು ಟೀ ಕುಡಿಸಿಬುಟ್ರು. ಹೊಟ್ಟೆ ಕೆಟ್ಟು ಟೀ ತರನೆ ಭೇದಿ ಮಾಡಿಕೊಂಡು ಮನೆಗೋಗಿ ಸುಧಾರಿಸಿಕೊಂಡೆ ಸಾರ್. ಅದ್ಕೆ ಹೋಗಕ್ಕಾಗಲಿಲ್ಲ."

"ಸಿದ್ದರಾಮಯ್ಯ ಹೋಗದೆಯಿರದು ತಪ್ಪಲ್ಲವೆ?"

"ಯಾರು ಸಾರ್ ಅಂಗಂದೋರು?"

"ಪತ್ರಿಕೆಯೋರು."

"ಪತ್ರಿಕೆಯೋರು ಬುಡಿ. ಯಾವ ಪಾಕ್ಷಕ್ಕೆ ಯಾವ ಪದ ಹಾಕಿದ್ರೆ ವಿನರ್ಥ ಕೊಡ್ತದೆ ಅನ್ನದೆ ಗೊತ್ತಿಲ್ಲ. ಅಲ್ಲ ಸಾರ್, ಸಿದ್ದರಾಮಯ್ಯ ಹೋದರೆ ಅಂತ ಇಟ್ಟುಗಳಿ. ನರಿಬುದ್ದಿ ಮೋದಿ ಅಂತ ಬೈದೋರು ಯಂಗೋದ ಜೋರು

ಹೆದ್ರಿಕಂಡು ಅಂತಿದ್ರು. ಈಗ ಹೋಗದೆಯಿರದ್ರಿಂದ ಅವ್ರುನಿಗೆ ಧಿಮಾಕು ಅಂತರೆ. ನೀವು ಹಿಂಗಂದ್ರೆ ಅವ್ರುರಂಗಂತರೆ. ಅಂಗೇಳಿದ್ರೆ ಹಿಂಗಂತರೆ. ಪತ್ರಕರ್ತರು ನನಿಗಿಂತ ಜಾಸ್ತಿ ಕುಡಿಯದರಿಂದ ಅವ್ರುರ ತಲೆಕೆಟ್ಟೋಗ್ಯದೆ ಸಾರ್. ಬರಕಳ್ಲಿ ಬುಡಿ."

"ನನ್ನನ್ನೇ ಬೈತಿಯಲ್ಲ ವಾಟಿಸ್ಸೆ."

"ಬೈಲಿಲ್ಲ ಸಾರ್, ಇರದ್ನೆ ಹೇಳಿದೆ. ಅಂಗೆ ನೋಡಿದ್ರೆ ನಮ್ಮ ಜಯಲಲಿತ, ಕೇರಳದ ಮುಖ್ಯಮಂತ್ರಿ, ಮಮತಕ್ಕ, ಒರಿಸ್ಸಾದೋರು ಯಾರೂ ಹೋಗಲಿಲ್ಲ. ಅವ್ರುರೆಲ್ಲ ಹೋಗಿ ಸಿದ್ದರಾಮಯ್ಯ ಹೋಗದ ಇದ್ರೆ ನೀನೂ ಹೋಗಬೇಕಾಗಿತ್ತು ಅಂತ ಹೇಳಬಹುದಿತ್ತು."

"ಅದೂ ನಿಜ. ಈಗ ಹೋಗದೆಯಿರದ್ರಿಂದ ಕೇಂದ್ರ ರಾಜ್ಯದ ಸಂಬಂಧ ಕೆಡತದಂತಲ್ಲಾ."

"ಯಾವ ಈಡಿಯಟ್ ಸಾರ್ ಅಂಗೇಳಿದೋನು. 1983ನೇ ಇಸವಿಯಿಂದ ಕೇಂದ್ರದಲ್ಲೊಂದು ಸರಕಾರ ಇದ್ರೆ ಇಲ್ಲೊಂದಿತ್ತು. ಆಗಲೆ ಕೆಡದೆಯಿದ್ದದ್ದು ಈಗ ಕೆಟ್ಟೋದತೆ?"

"ಮೋದಿ ಬಗ್ಗೆ ಸಿದ್ದರಾಮಯ್ಯನಿಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇದ್ರು, ರಾಜ್ಯದ ಹಿತದೃಷ್ಟಿಯಿಂದ ಹೋಗಬೇಕಿತ್ತಂತೆ."

"ಸರಿ ಸಾರ್, ಇದೇ ಮೋದಿ ಮನಮೋಹನ್‌ಸಿಂಗ್ ಪ್ರಧಾನಿಯಾಗಿ ಪ್ರಮಾಣವಚನ ತಗಳವಾಗ ಹೋಗಿದ್ನೆ? ಇಂಡಿಯಾಕ್ಕೂ ತನಗೂ ಸಂಬಂಧವೇ ಇಲ್ಲದಂಗಿದ್ದ ಆಗ. ಆಗೆಲ್ಲಿಗೋಗಿದ್ರು ಈ ಪತ್ರಕರ್ತರು?"

"ಸಿದ್ದರಾಮಯ್ಯನ್ನ ಮುಖ್ಯಮಂತ್ರಿ ಅಂತ ಆಹ್ವಾನಿಸಿದ್ರು. ಅದಕ್ಕಾಗಿ ಹೋಗಬೇಕಾಗಿತ್ತಂತಲ್ಲಾ."

"ಸರಿ ಸಾರ್, ನನಿಗೂ ಕರಿದಿದ್ರಲ್ಲ."

"ಯಾರು ಕರದಿದ್ರು?"

"ಶಿವಲಿಂಗನ್ನುನೋರು 'ವಾಟಿಸ್ಸೆ ಡೆಲ್ಲಿಗೋಗಿ ಬರನ ಬತ್ತಿಯಾ' ಅಂದಿದ್ರು ಗೊತ್ತ?"

"ಪಾಕಿಸ್ತಾನದ ಪ್ರಧಾನಿನೇ ಬಂದಿರುವಾಗ ಇವ್ರುದೇನು ಅಲ್ಲ."

"ಪಾಕಿಸ್ತಾನದ ಪ್ರಧಾನಿ ಬಂದಿದ್ದು ಪ್ರಾಮಾಣಿಕವಾಗಿಲ್ಲ, ಆ ಹಾಳು ಮೋದಿ ಸಾಬರ ಸಾಯಿಸ್ತನಂತೆ. ಹೋದ್ರೆ ಸುಮ್ಮನಾಗಬಹುದು ಅಂತ ಬಂದ. ಇದೇ ಕರದೋರು ಹುಟ್ಟು ಕಳ್ರು. ಅವರ ನಡವಳಿಕೆ ನಂಬಂಗಿಲ್ಲ. ಇಡೀ ಚುನಾವಣೇಲಿ ಪಾಕಿಸ್ತಾನ ಬೈದ್ರು. ಬುದ್ಧಿಜೀವಿಗಳ ಕುಂಡಗೆ ಕಲ್ಲುಸ್ಟಿವಿ ಅಂದ್ರು, ಅದೇ ಬಾಯಿಲಿ ನವಾಜ್ ಶರೀಫನ್ನ ಕರಿತರೆ ಅಂದ್ರೆ, ಅವ್ರುರು ನಿಜವಾದ ದೇಶದ್ರೋಹಿಗಳು."

"ಬೂಟಾಟಿಕೆ ಅಂತಿಯಾ?"

"ಹಂಡ್ರೆಡ್ ಪರಸೆಂಟ್. ಅಲ್ಲಾ ಸಾರ್ ಇಡೀ ದೇಶದಲ್ಲಿ ಸಾಬರಿಗೆ ಟಿಕೆಟ್ ಕೊಡದೆಯಿರೂ ಪಾರ್ಟಿ ಯಂತದೂ ಅಂತ ಯಾರಿಗಾದ್ರು ಗೊತ್ತಾಯ್ತದೆ. ಈ ನನಮಕ್ಕಳಿಗೆ ಗೊತ್ತಾಗದು ಬ್ಯಾಡವೆ."

"ಸೋನಿಯಾ ಮತ್ತು ರಾಹುಲ್ ಹೋಗಿದ್ರು, ಸಿದ್ದರಾಮಯ್ಯನಿಗೇನಾಗಿತ್ತು ಅಂತರೆ?"

"ಅವ್ರುರೆಲ್ಲ ಇದ್ರು ಸಾರ್, ಹೋಗ್ತನೆ. ಸಿದ್ದರಾಮಯ್ಯನಿಗೆ ಅದಕ್ಕಿಂತ್ಲೂ ಭಾರಿ ಕೆಲಸಿತ್ತೇನೊ, ಹೋಗಿಲ್ಲ."

"ಕೆಳ ಸೇತುವೆ ಉದ್ಘಾಟನೆ, ಕಿತ್ತೂರು ಚೆನ್ನಮ್ಮನ ಪುತ್ಥಳಿ ಕೊಡದೂ ಒಂದು ಕಾರ್ಯಕ್ರಮನೆ? ಇಂತ ಜುಜುಬಿ ಕಾರ್ಯಕ್ರಮಕ್ಕಿಂತ, ಮೋದಿ ಪ್ರಧಾನಿಯಾಗದ ಕಣ್ತಿಂದ ನೋಡಬೇಕಿತ್ತು ಅಂತರಲ್ಲಾ ವಾಟಿಸ್ಸೆ."

"ಅಂಗಂದೋರನ್ನ ತೋರಿಸಿ ಸಾರ್ ಮಕ್ಳುಗಿತಿನಿ. ಅಲ್ಲ ಸಾರ್, ನಮ್ಮ ಕಿತ್ತೂರು ಚೆನ್ನಮ್ಮನ್ನ ನೆನಿಸಿಗಂಡ್ರೆ ಈಗ್ಲೂ ರೋಷ ಉಕ್ಕುತ್ತೆ ಅಂತದ್ರಲ್ಲಿ ಥ್ವಾರ ತರದೋನು ಪ್ರಮಾಣ ತಗಳದ ನೋಡಕ್ಕೋಗಬೇಕಾಗಿತ್ತೆ?"

"ಅಂಗಂತಿಯಾ?"

"ಸ್ವಾಭಿಮಾನ ಇರಬೇಕು ಸಾರ್. ಅದೊಂದೊಂದು ಮಾಡೋದೊಂದು ಮಾಡುವರ್. ನಿಮಗೊಂದು ವಿಷಯ ಹೇಳ್ಲೇನಿ ಸಾರ್, ಇದೇ ಸಿದ್ದರಾಮಯ್ಯ ಪ್ರಮಾಣವಚನ ತಗಳ್ದಾಗ ಯಾರೊಗಿದ್ರು ಸಾರ್? ನಾಕೈದು ಜನ ಮಾಜಿ ಮುಖ್ಯಮಂತ್ರಿಗಳು ಊರಲ್ಲಿದ್ರೂ ಹೋಗಲಿಲ್ಲ. ಅಗ ಬರಿಯಕ್ಕೇನಾಗಿತ್ತು ಈ ಪತ್ರಕರ್ತರಿಗೆ? ಅದ್ಕೆ ನನ್ನ ಬಂದಿನ ಟಿ.ವಿಗೆ ಕರದು ಕೂರಿಸಿ ಎಲ್ಲಾನು ಹೇಳ್ತೀನಿ."


"ಏನೇಳ್ತಿ?"

"ಇನಿಷ್ಟ ನನ್ನಂಗಾರ ಬದುಕಿ ಅಂತ!"

ಥೂತ್ತೇರಿ!!!

ಮಂಡ್ಯದಲ್ಲಿ ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಶತ್ರು!






ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ರಮ್ಯಾ ಸೋತಿದ್ದೇ ಸೋತಿದ್ದು, ಕಾಂಗ್ರೆಸ್ ಬೀದಿಕಾಳಗ ಮತ್ತಷ್ಟು ಬಿರುಸುಗೊಂಡಿದೆ. ಮಂಡ್ಯದ ಮಟ್ಟಿಗೆ ಸೀಮಿತವಾಗಿದ್ದ ಹೈಡ್ರಾಮಾ ಈಗ ಬೆಂಗಳೂರಿನಾಚೆ ದೆಹಲಿಗೆ ಶಿಫ್ಟಾಗಿದೆ. ಅಂಬಿ-ಕೃಷ್ಣ ಬಣಗಳ ಮೇಲಾಟದಿಂದಾಗಿಯೇ ತಾನು 5,518 ಮತಗಳ ಕೂದಲೆಳೆಯ ಅಂತರದಲ್ಲಿ ಸೋಲಬೇಕಾಯಿತು ಅಂತ ರಾಹುಲ್ ಗಾಂಧಿ ಎದುರು ದೂರು ಒಡ್ಡಿರುವ ರಮ್ಯಾ 'ಅಂಬಿ ಬೆಂಬಲಿಗರು ಚುನಾವಣೆಯಲ್ಲಿ ನನಗೆ ಸಹಕರಿಸದೆ ಜೆಡಿಎಸ್‌ನ ಪುಟ್ಟರಾಜು ಪರ ಕೆಲಸ ಮಾಡಿರೋದರಿಂದ ಅವರಿಗೆ ತಕ್ಕ ಶಾಸ್ತಿ ಮಾಡಿ' ಅಂತ ಗೋಳಾಡಿದ್ದಾರೆ. ತನ್ನ ದೂರಿನಲ್ಲಿ ಅಂಬಿ ಪಡೆಯ ಅಮರಾವತಿ ಚಂದ್ರಶೇಖರ್, ಶೆಟ್ಟಹಳ್ಳಿ ಲಿಂಗರಾಜು, ಬಿ. ವಿವೇಕಾನಂದ, ಮಾಜಿ ಶಾಸಕ ಎಲ್.ಆರ್. ಶಿವರಾಮೇಗೌಡ, ಎಲ್‌ಡಿ.ರವಿ, ಎಂ.ಡಿ.ರಮೇಶ್‌ರಾಜು, ನಗರಸಭಾಧ್ಯಕ್ಷ ಸಿದ್ದರಾಜು ಮೊದಲಾದವರ ತಲೆದಂಡ ಆಗಲೇಬೇಕೆಂದು ಪಟ್ಟು ಹಿಡಿದಿದ್ದಾರೆ. ಇದಕ್ಕೆ ಪ್ರತ್ಯುತ್ತರ ನೀಡುವ ಉದ್ದೇಶದಿಂದ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅಮರಾವತಿ ಚಂದ್ರಶೇಖರ್, ಲಿಂಗರಾಜು, ಎಲ್.ಡಿ.ರವಿ, ಎಲ್.ಆರ್.ಶಿವರಾಮೇಗೌಡ 'ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದು, ಕೆಲವರಿಗಷ್ಟೇ ಮಣೆ ಹಾಕಿದ್ದು ರಮ್ಯಾ ಸೋಲಿಗೆ ಕಾರಣ' ಎಂದು ಬೊಬ್ಬೆ ಹೊಡೆದಿದ್ದಾರೆ. ಆದರೆ ಪ್ರತಿ ಜವಾಬು ನೀಡುವ ಆತುರದಲ್ಲಿ ತಮಗೆ ಮಣೆ ಹಾಕದ ರಮ್ಯಾಗೆ ಕೈಕೊಟ್ಟಿರೋದನ್ನು ಆ ಮೂಲಕ ಅವರೇ ಒಪ್ಪಿಕೊಂಡಿರೋದು ಹೈಕಮಾಂಡ್‌ನ ತನಿಖೆಯನ್ನು ಸಲೀಸು ಮಾಡಿಬಿಟ್ಟಿದೆ!


ಅಂಬಿ ಬಣವೇ ಕಾರಣ

ಈ ಚುನಾವಣೆಯಲ್ಲಿ ರಮ್ಯಾ ಸೋಲಿನಲ್ಲಿ ಅಂಬಿ ಬಣದ ಪಾತ್ರ ಬಹಳ ದೊಡ್ಡದು. ಅದರಲ್ಲಿ ನೋ ಡೌಟ್. ಒಂದೊಮ್ಮೆ ಅಂಬಿ ಬಣ ವೈಯಕ್ತಿಕ ಮುನಿಸುಗಳನ್ನು ಪಕ್ಕಕ್ಕಿಟ್ಟು ಪಕ್ಷದ ಏಳ್ಗೆಗಾಗಿ ಚುನಾವಣೆಯಲ್ಲಿ ಕೆಲಸ ಮಾಡಿದ್ದರೆ ರಮ್ಯಾ ಕಡಿಮೆ ಅಂತರದಲ್ಲಿ ಸೋಲುವ ಬದಲು ದೊಡ್ಡ ಅಂತರದಲ್ಲೇ ಮತ್ತೊಮ್ಮೆ ಗೆದ್ದು ಬರುತ್ತಿದ್ದರು. ಇದೇ ಕಾರಣಕ್ಕೆ ಶಾಸಕ ನರೇಂದ್ರಸ್ವಾಮಿ, ಮಾಜಿ ಶಾಸಕ ಸುರೇಶ್‌ಗೌಡ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು 'ಟೀಮ್ ಅಂಬಿ'ಯ ವಿರುದ್ಧ ಕೆಂಡ ಕಾರಿದ್ದಾರೆ. ಕಳೆದ ಉಪಚುನಾವಣೆಯಲ್ಲಿ ನಾಗಮಂಗಲದಲ್ಲಿ ರಮ್ಯಾಗೆ 12 ಸಾವಿರ ಮತಗಳ ಭರ್ಜರಿ ಲೀಡ್ ಸಿಕ್ಕಿತ್ತು. ಆದರೆ ಈ ಸಲ ಲೀಡ್ ಅಂತರ ಜುಜುಬಿ 2500 ಮತಗಳಿಗೆ ಕುಸಿದಿದೆ. ಇಲ್ಲಿ ಶಾಸಕ ಚಲುವರಾಯಸ್ವಾಮಿ, ಸಿ.ಎಸ್.ಪುಟ್ಟರಾಜುಗೆ ಕೊಡಿಸಿದ ಮತಗಳಿಗಿಂತ ಅಂಬಿ ಬಣದ ಎಲ್.ಆರ್.ಶಿವರಾಮೇಗೌಡ ಮಾಡಿದ ಪಕ್ಷದ್ರೋಹವೇ ಈ ಲೀಡ್ ವ್ಯತ್ಯಾಸಕ್ಕೆ ಕಾರಣ ಎಂದು ಕಿಡಿಕಾರಿರುವ ಮಾಜಿ ಶಾಸಕ ಸುರೇಶ್‌ಗೌಡ ಇನ್ನೂ ಒಂದು ಹೆಜ್ಜೆ ಮುಂದೆಹೋಗಿ 'ರಮ್ಯಾಳಿಂದ ಹಣ ಪಡೆದು ಹಂಚಬೇಡಿ, ರಮ್ಯಾಗೆ ವೋಟ್ ಮಾಡಬೇಡಿ ಎಂದು ಹೇಳುತ್ತಿರುವ ರೆಕಾರ್ಡ್ ನನ್ನ ಬಳಿ ಇದೆ' ಎಂದು ಶಿವರಾಮೇಗೌಡನಿಗೆ ಛಾಟಿ ಬೀಸಿದ್ದಾರೆ. ಕುತಂತ್ರ ರಾಜಕಾರಣದಲ್ಲಿ ಪಳಗಿರುವ ಶಿವರಾಮೇಗೌಡನಿಂದಾಗಿಯೇ ತಾನು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲಬೇಕಾಯಿತಲ್ಲದೆ ಈಗ ರಮ್ಯಾ ಸೋಲಿಗೂ ಶಿವರಾಮೇಗೌಡನೇ ಕಾರಣ ಎಂಬ ಸುರೇಶ್‌ಗೌಡರ ಬಹಿರಂಗ ಹೇಳಿಕೆಯಲ್ಲೂ ಸತ್ಯವಿದೆ.


ಇನ್ನು ಮಳವಳ್ಳಿಯಲ್ಲಿ ಅಂಬಿ ಬಣ ಎಷ್ಟೇ ಬಾಯಿ ಬಡಿದುಕೊಂಡರೂ ನರೇಂದ್ರಸ್ವಾಮಿ 14,500ಕ್ಕೂ ಅಧಿಕ ಮತಗಳ ಲೀಡ್ ಕೊಡಿಸಿದ್ದಾರೆ. ಜೆಡಿಎಸ್ ಅಭ್ಯರ್ಥಿ ಪುಟ್ಟರಾಜು ಈ ಬಾರಿ ಮಾಜಿ ಶಾಸಕ ಅನ್ನದಾನಿ ನಂಬಿಕೊಳ್ಳದೆ ಸ್ವತಃ ಕೈಮೀರಿ ಖರ್ಚು ಮಾಡಿದ್ದರು. ಪುಟ್ಟರಾಜುವಿನ ಅತಿಭಯಂಕರ ಹಣದ ಹರಿದಾಟದ ನಡುವೆಯೂ ಕಾಂಗ್ರೆಸ್‌ಗೆ ಈ ಹಿಂದೆ ಲಭಿಸಿದ್ದ 23 ಸಾವಿರ ಲೀಡ್‌ನಲ್ಲಿ 8,500 ಮತಗಳಷ್ಟೇ ಕಡಿಮೆಯಾಗಿದ್ದವು. ಕಳೆದ ಬಾರಿ ಕೈಸುಟ್ಟ ಮಳವಳ್ಳಿಯಲ್ಲಿ ಪುಟ್ಟರಾಜು ಚೆಲ್ಲಾಡಿದ ಹಣದ ರಭಸ ಎಂತದ್ದಿತ್ತೆಂದರೆ ನರೇಂದ್ರಸ್ವಾಮಿ, ರಮ್ಯಾ ಪರ ಗಟ್ಟಿಯಾಗಿ ನಿಲ್ಲದಿದ್ದರೆ ರಮ್ಯಾಗೆ ಲೀಡ್ ಸಿಗುವುದಿರಲಿ ಹಿನ್ನಡೆಯನ್ನೇ ಅನುಭವಿಸಬೇಕಾಗುತ್ತಿತ್ತು. ರಮ್ಯಾ ಸೋಲಿಗೆ ಅಂಬಿ ಬಣ ನಡೆಸಿದ ಕುತಂತ್ರವೇ ಕಾರಣ ಅಂತ ಶಾಸಕ ನರೇಂದ್ರಸ್ವಾಮಿಯೂ ಮಾಧ್ಯಮದ ಮೂಲಕ ಶಿವರಾಮೇಗೌಡ, ಲಿಂಗರಾಜು, ಅಮರಾವತಿ ಚಂದ್ರಶೇಖರ್ ಮುಖದಲ್ಲಿ ಬೆವರಿಳಿಸಿದ್ದಾರೆ.



ಎಲ್.ಆರ್. ಶಿವರಾಮೇಗೌಡ



ಅಮರಾವತಿ ಚಂದ್ರಶೇಖರ್



ನರೇಂದ್ರಸ್ವಾಮಿ

ಕಳೆದ ಉಪಚುನಾವಣೆಯಲ್ಲಿ ಶ್ರೀರಂಗಪಟ್ಟಣದಲ್ಲಿ ರಮ್ಯಾಗೆ 10 ಸಾವಿರ ಲೀಡ್ ಬರಲು ಅಂಬಿ-ಎಸ್.ಎಂ.ಕೃಷ್ಣ ಬಣಗಳು ಒಂದಾಗಿದ್ದು ಕಾರಣವಾಗಿತ್ತು. ಆದರೆ ಈ ಬಾರಿ ರಮ್ಯಾ ಸೋಲಿಸಲೇಬೇಕೆಂದು ಸ್ಕೆಚ್ ಹಾಕಿದ ಶ್ರೀರಂಗಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶೆಟ್ಟಹಳ್ಳಿ ಲಿಂಗರಾಜು ಮತ್ತವನ ಅಳಿಯ ಸಚ್ಚಿದಾನಂದರ ಜೋಡಿ ಜೆಡಿಎಸ್‌ಗೆ 2800 ಮತಗಳ ಲೀಡ್ ಬಿಟ್ಟುಕೊಟ್ಟಿದೆ. 'ರಮ್ಯಾ ನಮ್ಮನ್ನು ಕಡೆಗಣಿಸುತ್ತಿದ್ದಾರೆ, ನಮಗೆ ಬೆಲೆ ಕೊಡುತ್ತಿಲ್ಲ, ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ' ಎಂದೆಲ್ಲಾ ಮೊದಲು ಹಾರಾಡಿದ್ದೇ ಶೆಟ್ಟಹಳ್ಳಿ ಲಿಂಗರಾಜು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಂಬಿ ತನ್ನ ವೈರಿ ಎಸ್.ಎಂ.ಕೃಷ್ಣರ ಬೆಂಬಲಿಗ ರವೀಂದ್ರ ಶ್ರೀಕಂಠಯ್ಯನಿಗೆ ಸಿಕ್ಕಿದ್ದ ಟಿಕೆಟ್ ತಪ್ಪಿಸಿ ತನ್ನ ಶಿಷ್ಯ ಲಿಂಗರಾಜುಗೆ ಕೊಡಿಸಿದ್ದರು. ಆ ಚುನಾವಣೆಯಲ್ಲಿ ಕೇವಲ 27 ಸಾವಿರ ಮತ ಪಡೆದು ಲಿಂಗರಾಜು ಹೀನಾಯವಾಗಿ ಸೋತು ಸುಣ್ಣವಾಗಿದ್ದರು. ಟಿಕೆಟ್ ಕೈ ತಪ್ಪಿದ ರವೀಂದ್ರ ಶ್ರೀಕಂಠಯ್ಯ ಪಕ್ಷೇತರನಾಗಿ ಸ್ಪರ್ಧಿಸಿ ಗಣನೀಯ ಮತ ಗಳಿಸಿದ್ದರು. ಇದನ್ನೇ ಮನಸ್ಸಲ್ಲಿಟ್ಟುಕೊಂಡ ಅಂಬಿ, ರವೀಂದ್ರ ಉಪಚುನಾವಣೆ ವೇಳೆ ಕಾಂಗ್ರೆಸ್ ಸೇರಲು ಮುಂದಾದಾಗ ಆತ ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾನೆ ಹಾಗಾಗಿ ಕಾಂಗ್ರೆಸ್‌ಗೆ ಸೇರಿಸಿಕೊಳ್ಳಬಾರದೆಂದು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಹಾಗೂ ಸಿ.ಎಂ.ಸಿದ್ದರಾಮಯ್ಯರ ಮೇಲೆ ಒತ್ತಡ ಹೇರಿದ್ದರು. ಆದರೆ ರಮ್ಯಾ ಗೆಲ್ಲಲೇಬೇಕಾದ ಅನಿವಾರ್ಯತೆಯ ಮುಂದೆ ಅಂಬಿ ಒತ್ತಡಕ್ಕೆ ನಯಾಪೈಸೆಯ ಬೆಲೆ ಸಿಕ್ಕಿರಲಿಲ್ಲ. ಪಕ್ಷದ ನಾಯಕರೇ ರವೀಂದ್ರ ಶ್ರೀಕಂಠಯ್ಯನನ್ನು ಕಾಂಗ್ರೆಸ್‌ಗೆ ಬರಮಾಡಿಕೊಂಡಿದ್ದರು. ರವೀಂದ್ರ ಬಂದ ಕಾರಣದಿಂದ ಕಳೆದ ಉಪಚುನಾವಣೆಯಲ್ಲಿ ರಮ್ಯಾಗೆ ಶ್ರೀರಂಗಪಟ್ಟಣದಲ್ಲಿ 10 ಸಾವಿರ ಮತಗಳ ಲೀಡ್ ಸಿಕ್ಕಿತ್ತು,

ಈ ಬಾರಿಯ ಚುನಾವಣೆಯಲ್ಲಿ ರಮ್ಯಾ ಪರ ಪ್ರಚಾರಕ್ಕೆ ಶ್ರೀರಂಗಪಟ್ಟಣಕ್ಕೆ ಬಂದ ಎಸ್.ಎಂ.ಕೃಷ್ಣ ರವೀಂದ್ರ ಸೇರಿಸಿದ್ದ ಜನರನ್ನು ಕಂಡು 'ನಿಜವಾದ ನಾಯಕ ಎಂದರೆ ನೀನೇ, ಕಳೆದ ಚುನಾವಣೆಯಲ್ಲಿ ಕೆಲವರ ಸ್ವಾರ್ಥದಿಂದ ನಿನಗೆ ಟಿಕೆಟ್ ತಪ್ಪಿ ಕಾಂಗ್ರೆಸ್ ಶಾಸಕನೊಬ್ಬನನ್ನು ಕಳೆದುಕೊಳ್ಳಬೇಕಾಯಿತು' ಎನ್ನುವ ಮೂಲಕ ಅಂಬಿಗೆ ತಿರುಗೇಟು ನೀಡಿದ್ದರು. ಇದನ್ನೇ ಮನಸ್ಸಿಗೆ ಹಚ್ಚಿಕೊಂಡ ಅಂಬಿ ಬೆಂಬಲಿಗರು ಕೃಷ್ಣ ಹಾಗೂ ರಮ್ಯಾಗೆ ಸರಿಯಾದ ಪಾಠ ಕಲಿಸುವುದಕ್ಕೋಸ್ಕರ ಇಲ್ಲಿ ಜೆಡಿಎಸ್‌ಗೆ 2500 ಮತಗಳ ಲೀಡ್ ಸಿಗುವಂತೆ ಮಾಡಿದ್ದಾರೆ.


ಇನ್ನು ಪಾಂಡವಪುರದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಂಬಿ ಶಿಷ್ಯ ಎಲ್.ಡಿ.ರವಿ ಠೇವಣಿ ಕಳೆದುಕೊಂಡು ಗಳಿಸಿದ್ದೇ 2500 ಚಿಲ್ಲರೆ ಮತ. ಇಂತಹ ಎಲ್.ಡಿ.ರವಿ ಕೂಡ ನನ್ನ ವಿರುದ್ಧ ಪ್ರಚಾರ ಮಾಡಿದ್ದಾರೆ ಎಂದು ರಮ್ಯಾ ದೂರಿದ್ದಾರೆ. ಇನ್ನು ಅಂಬಿ ಬಲಗೈ ಬಂಟ ಅಮರಾವತಿ ಚಂದ್ರಶೇಖರ್ ಶುರುವಿನಿಂದಲೇ ರಮ್ಯಾಗೆ ಟಿಕೆಟ್ ಕೊಡಬಾರದು ಎಂದು ಪಟ್ಟು ಹಿಡಿದಿದ್ದವ. ಜಿಲ್ಲಾಧ್ಯಕ್ಷ ಸ್ಥಾನದಿಂದ ಆತ್ಮಾನಂದರನ್ನು ಕಿತ್ತುಹಾಕಿ, ಅಂಬಿ ಬಣದ ಪಿ.ಎಂ.ಸೋಮಶೇಖರ್‌ನನ್ನು ಆ ಸ್ಥಾನಕ್ಕೆ ಕೂರಿಸಲು ಯೋಜನೆ ರೂಪಿಸಿ ನಾಯಕರ ಮೇಲೆ ಅಂಬಿಯಿಂದ ಒತ್ತಡ ಹಾಕಿಸಿದ್ದೇ ಈ ಅಮರಾವತಿ ಚಂದ್ರಶೇಖರ್. ಆದರೆ ಆತ್ಮಾನಂದರನ್ನು ಬದಲಾಯಿಸದ ಪರಮೇಶ್ವರ್ ಅಂಬಿ ಬಣದ ಸೋಮಶೇಖರ್‌ಗೆ ಕಾರ್ಯಾಧ್ಯಕ್ಷನ ಸ್ಥಾನ ಸೃಷ್ಟಿಸಿ ಕೈ ತೊಳೆದುಕೊಂಡಿದ್ದರು. ಟೀಮ್ ಅಂಬಿಗೆ ಇದು ಸರಿಕಾಣಲಿಲ್ಲ. ಅಂಬರೀಶ್ ವಿರುದ್ಧ ದಿನೇದಿನೇ ರಾಜ್ಯ ನಾಯಕರಲ್ಲಿ ಬೆಳೆಯುತ್ತಿರುವ ಅಸಹನೆ, ಅಂಬಿ ಮಾತಿಗೆ ಎಸ್.ಎಂ. ಕೃಷ್ಣ ಬಣ ಸೊಪ್ಪು ಹಾಕದಿರುವುದನ್ನು ಕಂಡ ಅಂಬಿ ಬೆಂಬಲಿಗರೂ ರಮ್ಯಾರನ್ನು ಈ ಬಾರಿ ಸೋಲಿಸಿ ನಮ್ಮ ಶಕ್ತಿ ಏನೆಂಬುದನ್ನು ರಾಜ್ಯನಾಯಕರಿಗೆ ಹಾಗೂ ಹೈಕಮಾಂಡ್ ನಾಯಕರಿಗೆ ತಿಳಿಸೋಣ ಎಂದು ನಿರ್ಧರಿಸಿಬಿಟ್ಟಿದ್ದರು. ಎಂಪಿ ಟಿಕೆಟ್ ಮೇಲೆ ಕಣ್ಣಿಟ್ಟು ಸಿಗದೆ ನಿರಾಶನಾದ ಮಾಜಿ ಶಾಸಕ ಎಲ್.ಆರ್.ಶಿವರಾಮೇಗೌಡ ಅಂಬಿ ಬಣದ ಸಿಟ್ಟಿಗೆ ತುಪ್ಪ ಸುರಿದ ಪರಿಣಾಮ ರಮ್ಯಾ ಹಠಾವೋ ಅಭಿಯಾನ ಒಳಗೊಳಗೇ ಚಾಲನೆ ಪಡೆದುಕೊಂಡಿತ್ತು. ಅದರಂತೆ ಮಂಡ್ಯ ವಿಧಾನಸಭಾ ಮತಕ್ಷೇತ್ರದಲ್ಲಿ ಅಂಬಿ ಬೆಂಬಲಿಗರು ರಮ್ಯಾ ವಿರುದ್ಧ ಕೆಲಸ ಮಾಡಿದ್ದರಿಂದಲೇ ಕಳೆದ ಉಪಚುನಾವಣೆಯಲ್ಲಿ 14 ಸಾವಿರದಷ್ಟಿದ್ದ ಲೀಡ್ ಅಂಬಿ ಸಿಂಪಥಿಯ ಹೊರತಾಗಿಯೂ 7 ಸಾವಿರಕ್ಕೆ ಕುಸಿದಿತ್ತು. ಸಚಿವ ಅಂಬರೀಶ್ ಕೈಗೆ ಸಿಗಲ್ಲ ಎಂಬ ಬೇಸರ, ಅನಾರೋಗ್ಯದಿಂದ ಅಭಿವೃದ್ಧಿ ಕಾರ್ಯಗಳೂ ನಡೆಯುತ್ತಿಲ್ಲವರ ಬಗ್ಗೆ ಈಗಾಗಲೇ ಜನ ಭ್ರಮನಿರಸನಗೊಂಡಿದ್ದು ರಮ್ಯಾಗೆ ಇಲ್ಲಿ ಏಳು ಸಾವಿರ ಮತಗಳ ಲೀಡ್ ಸಿಕ್ಕಿರೋದು ರಮ್ಯಾ ವರ್ಚಸ್ಸಿನಿಂದಲೇ ಹೊರತು ಅದರಲ್ಲಿ ಅಂಬಿ ಪಾಲಿಲ್ಲ ಎಂಬುದು ನಿಷ್ಠಾವಂತ ಕಾಂಗ್ರೆಸ್ಸಿಗರ ಅಭಿಪ್ರಾಯ. ಅಂಬರೀಶ್ ಮತ್ತವರ ಬೆಂಬಲಿಗರ ಅಸಹಕಾರವೇ ರಮ್ಯಾ ಸೋಲಿಗೆ ಕಾರಣವಾಗಿದೆ ಎಂದು ಕ್ಷೇತ್ರದ ಮತದಾರರೇ ಮಾತಾಡಿಕೊಳ್ಳುತ್ತಿದ್ದಾರೆ.

ಸಂಸದೆಯಾದ ನಂತರ ರಮ್ಯಾ ತನ್ನ ಶಿಷ್ಯರನ್ನು ಕಡೆಗಣಿಸಿದ್ದಾಳೆ ಎಂಬ ನಂಬಿಕೆಯಲ್ಲಿದ್ದ ಅಂಬಿಯ ಅಸಹನೆಗೆ ಅನಾರೋಗ್ಯದ ಸಂದರ್ಭದಲ್ಲಿ ರಮ್ಯಾ ಆಡಿದ ಮಾತುಗಳು ತುಪ್ಪ ಸುರಿದಿದ್ದವು. ಅದಕ್ಕೋಸ್ಕರ ಆರೋಗ್ಯವನ್ನೇ ನೆಪ ಮಾಡಿಕೊಂಡ ಅಂಬಿ ಒಂದೆರಡು ದಿನ ಮಾತ್ರ ಕಾಟಾಚಾರಕ್ಕೆಂಬಂತೆ ಪ್ರಚಾರ ಮಾಡಿ ಬೆಂಗಳೂರು ಸೇರಿಕೊಂಡಿದ್ದರು. ತನ್ನ ಶಿಷ್ಯಪಡೆ ಈ ಬಾರಿ ಪಕ್ಷ ವಿರೋಧಿ ಕೆಲಸ ಮಾಡುವುದು ಗೊತ್ತಿದ್ದರೂ ಅಂಬರೀಶ್ ತಡೆಯಲು ಗೋಜಿಗೇ ಹೋಗಲಿಲ್ಲ. ಇದು ರಮ್ಯಾ ಸೋಲಿನಲ್ಲಿ ಪರ್ಯವಸನಗೊಂಡಿತು. 'ಟೀಮ್ ಅಂಬಿ'ಯ ಒಳಸಂಚು ಮತ್ತು ಅಂಬಿಯ ತಟಸ್ಥತೆ ಹೊರತಾಗಿಯೂ ಐದು ಲಕ್ಷಕ್ಕೂ ಅಧಿಕ ಮತ ಗಳಿಸಿದ್ದಲ್ಲದೆ ಗೆಲುವಿನ ಸನಿಹದವರೆಗೂ ಬಂದದ್ದು ರಮ್ಯಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಅಂಬಿ ಬಳಗವು ತಮಗೆ 'ಮಣೆ' ಹಾಕಲಿಲ್ಲ ಎನ್ನುವ ಜಿದ್ದು ಬಿಟ್ಟಿದ್ದರೆ ರಮ್ಯಾ ಈ ಬಾರಿಯೂ ಅತ್ಯಧಿಕ ಮತಗಳಿಂದ ಗೆಲ್ಲುತ್ತಿದ್ದರಲ್ಲಿ ಯಾವ ಸಂಶಯವೂ ಇಲ್ಲ.

ಒಟ್ಟಾರೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಕಳೆದೊಂದು ವರ್ಷದಿಂದ ನಡೆಯುತ್ತಿರುವ ಅಂಬಿ-ಕೃಷ್ಣ ಬಣಗಳ ಕಾದಾಟ ಕೈಗೆ ಡ್ಯಾಮೇಜ್ ಮಾಡುತ್ತಲೇ 'ಹೊರೆ'ಗೆ ಭರ್ಜರಿ ಕಟಾವು ಕೊಡುತ್ತಿದೆ. ಅಂಬಿ ಬಣ ಹಾಕಿದ ಸ್ಕೆಚ್‌ಗೆ ಬಲಿಯಾಗಿ ಸೋತಿರುವ ರಮ್ಯಾ ಮಂಡ್ಯದ ಬಾಡಿಗೆ ಮನೆ ಖಾಲಿಮಾಡಿ ಬೆಂಗಳೂರಿಗೆ ತೆರಳಿದ್ದಾರೆ. ಕಾಂಗ್ರೆಸ್ ಸೋಲಿಸಲು ಕಾಂಗ್ರೆಸ್ಸಿಗರೇ ಸಾಕು ಎಂಬ ಮಾತನ್ನು ಮಂಡ್ಯದ ಕಾಂಗ್ರೆಸ್ಸಿಗರು ಅಕ್ಷರಶಃ ನಿಜಮಾಡಿ ತೋರಿಸಿದ್ದಾರೆ. ಬಣ ರಾಜಕೀಯದಿಂದ ರಮ್ಯಾ ಸೋತಿರುವುದು ರಾಹುಲ್ ಗಾಂಧಿಗೆ ಸಾಕಷ್ಟು ಬೇಸರ ತರಿಸಿದ್ದು, ಇದಕ್ಕೆ ತಕ್ಕ ತಲೆದಂಡ ಆಗೇ ಆಗುತ್ತದೆಂದು ರಮ್ಯಾ ಬೆಂಬಲಿಗರು ಹೇಳಿಕೊಳ್ಳುತ್ತಿದ್ದಾರೆ. ಈ ಅಂಬಿ ಬಣವೇ ಅಂಬಿಗೆ ತಿರುಗುಬಾಣವಾಗುವ ಸಾಧ್ಯತೆಯ ಮಾತೂ ಕೇಳಿಬರುತ್ತಿದೆ. ರಮ್ಯಾ ಪರ ಪ್ರಚಾರದಿಂದ ದೂರ ಉಳಿಯಲು ಅಂಬಿ ಅನಾರೋಗ್ಯದ ನೆಪ ಹೇಳಿಕೊಂಡಿದ್ದರು. ಈಗ ಅದೇ ಅನಾರೋಗ್ಯದ ನೆಪವೊಡ್ಡಿ ಅಂಬರೀಶ್‌ರನ್ನು ಸಚಿವ ಸಂಪುಟದಿಂದ ಕೈಬಿಟ್ಟು ರಮ್ಯಾರನ್ನು ವಿಧಾನಪರಿಷತ್‌ಗೆ ಆಯ್ಕೆ ಮಾಡಿ ಮಂಡ್ಯ ಉಸ್ತುವಾರಿ ಸಚಿವೆಯನ್ನಾಗಿಸುತ್ತಾರೆಂಬ ಮಾತುಗಳೂ ಚಾಲ್ತಿಯಲ್ಲಿವೆ. ಇದಕ್ಕೆ ಪ್ರತಿಕ್ರಿಯಿಸಿರುವ ಸಚಿವ ಅಂಬಿ 'ಸಚಿವೆಯನ್ನೇಕೆ ಮುಖ್ಯಮಂತ್ರಿಯನ್ನಾಗೆ ರಮ್ಯಾಳನ್ನು ಕೂರಿಸಲಿ. ನನಗೆ ಸಂತೋಷ' ಅಂತ ವ್ಯಂಗ್ಯದಲ್ಲಿ ತಮ್ಮ ಸಿಟ್ಟು ಹೊರಹಾಕಿದ್ದಾರೆ. ಜಿದ್ದಿಗೋಸ್ಕರ ನಮ್ಮ ಪಕ್ಷವನ್ನೇ ಸೋಲಿಸಲು ಹಿಂದೆಮುಂದೆ ನೋಡದ ನಾವು ರಮ್ಯಾಳನ್ನು ಉಸ್ತುವಾರಿ ಸಚಿವೆಯನ್ನಾಗಿಸಿದರೆ ಸುಮ್ಮನಿರ್ತೀವಾ ಎಂದು ಅಂಬಿ ಬೆಂಬಲಿಗರೂ ಗುಟುರು ಹಾಕುತ್ತಿದ್ದಾರೆ. ಈ ಬೀದಿ ಕಾಳಗದಲ್ಲಿ ಯಾವ ಬಣ ಮೇಲುಗೈ ಸಾಧಿಸುತ್ತದೋ ಎಂಬುದು ಜಿಲ್ಲೆಯ ಜನರಲ್ಲಿ ಕುತೂಹಲ ಮೂಡಿಸಿದೆ. ಒಟ್ಟಿನಲ್ಲಿ ಮಂಡ್ಯದಲ್ಲಿ ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಶತ್ರು!

● ಮಂಡ್ಯ ನಾಗೇಶ್

ಉತ್ತರ ಕನ್ನಡ: ಎಚ್ಚರ! ಮತಾಂಧ ಅನಂತ್ಮಾಣಿಗೆ ಮದವೇರುತ್ತಿದೆ!



ಮೂರೂ ಬಿಟ್ಟೋನು ಊರಿಗೇ ದೊಡ್ಡೋನು-ನಾಗಿದೆ ಉತ್ತರ ಕನ್ನಡದಿಂದ ಅಚಾನಕ್ ಗೆದ್ದು ...ದನಾಗಿರುವ ಸೋಗಲಾಡಿ ಅನಂತಕುಮಾರ್ ಹೆಗಡೆ ...ಫ್ ಅನಂತ್ಮಾಣಿಯ ಅನಾಹುತಕಾರಿ ಆರ್ಭಟದ ... ಹಿಂದೂತ್ವ ಹೊಟ್ಟೆಪಾಡಿನ ಕಸುಬು ಮಾಡಿಕೊಂಡಿ... ಈ ಅಧಿಕಪ್ರಸಂಗಿ ಮಾಣಿಯ ಭೂತ-ವರ್ತಮಾನ ...ಲೋಕಿಸಿದರೆ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ...ಷ್ಟು ಭಯಾನಕವಾಗಿ ಕಾಡುತ್ತದೆ. ಗೆದ್ದಿದ್ದೇ ತಡ ಈ ...ಣಿಯ ದ್ವೇಷಾಸೂಯೆಯ ನಂಜಿನ ನಾಲಿಗೆ ...ಮಲಗಾಮಿಲ್ಲದೆ ಹಿಂದೂಗಳೇತರರ ಬೈದು ತೀಟೆ ...ಸಿಕೊಳ್ಳಲಾರಂಭಿಸಿದೆ.

...ಸಂಸದನಾಗುವ ಯಾವ ಯೋಗ್ಯತೆಯೂ ಇಲ್ಲದೆ ...ಎ ಪ್ರಜಾತಂತ್ರದ ಪವಾಡದಿಂದ ಆಯ್ಕೆಯಾಗಿರುವ ... ಆತ್ಮಾವಲೋಕನ ಮಾಡಿಕೊಳ್ಳಬೇಕಿದ್ದ ಅನಂತ್ಮಾಣಿ ...ಸ್ಲಿಮ್-ಕ್ರಿಶ್ಚಿಯನ್ ವಿರುದ್ಧ ದಿಗ್ವಿಜಯ ಮಾಡಿದಂತೆ ...ಡುತ್ತಿದ್ದಾನೆ. ಹಿಂದೂಗಳನ್ನು ಜನಾಂಗೀಯ ದಂಗೆಗೆ ...ಗೊಳಿಸುವಂಥ ವಿಧ್ವಂಸಕ ಭಾಷಣ ಜಿಲ್ಲೆಯ ಪ್ರತಿ ...ಲ್ಲೂಕಲ್ಲಿ ವಿಜಯೋತ್ಸವದ ನೆಪದಿಂದ ಬಿಗಿಯುತ್ತಿದ್ದಾನೆ. ...ಲಸಾಮರ್ಥ್ಯ-ಜಿಲ್ಲಾಭಿವೃದ್ಧಿಯ ಧೋರಣೆಗಳೇ ಇಲ್ಲದ ...ಬುದ್ಧಿಯನ್ನೆಲ್ಲ ಹಿಂದೂತ್ವ ಕೇಸರಿ ರುಮಾಲಲ್ಲಿ ಸುತ್ತಿಡಲು ...ಣಿ ಹವಣಿಸುತ್ತಿದ್ದಾನೆ. ಪ್ರಗತಿ-ಸಾಮರಸ್ಯ-...ನವೀಯತೆಯಿಂದ ಜನರನ್ನು ಗೆಲ್ಲಲು ಬಂಡವಾಳವೇ ...ಲ್ಲಿ ಇಲ್ಲ ಎಂಬುದು ಈ ಖಾಲಿ ಬುರುಡೆಯ ಅಶಿಕ್ಷಿತನಿಗೆ ...ತ್ತು. ಆತನ ಸಂಸ್ಕಾರವೇ ಹಿಂಸೋನ್ಮಾದದ್ದು; ಆರೆಸ್ಸೆಸ್, ...ಜಾವೇ ಗರಡಿಯಲ್ಲಿ ಗೂಂಡಾ ಆಗಿ ಬೆಳೆದ ಮಾಣಿಗೆ ...ದೂತ್ವ ರಾಜಕಾರಣವೇ ಬದುಕಾಗಿರುವುದು ಕೆನರಾದ ...ಂತವೇ ಸರಿ.

...ಖುದ್ದು ಮಾಣಿಗೆ ತಾನು ಈ ಸಲ ಗೆಲ್ಲುತ್ತೇನೆಂಬ ... ಭರವಸೆಯೂ ಇರಲಿಲ್ಲ. ಬಿಜೆಪಿಯ ಸಾಮಾನ್ಯ ...ರ್ಯಕರ್ತನಿಂದ ಹಿಡಿದು ಕಾಗೇರಿಯಂಥ ಅತಿರಥರಿಗೆ ...ಣಿ ಆಯ್ಕೆಯಾಗುತ್ತಾನೆಂಬ ನಿರೀಕ್ಷೆ ಇರಲಿಲ್ಲ; ಆತ ...ವುದೂ ಬೇಡವಾಗಿತ್ತು. ಆದರೆ ಪ್ರಜಾಪ್ರಭುತ್ವದ ...ಜಿಕ್ ಹಾಗಿತ್ತು! ಮೋದಿ ಮೇನಿಯಾಕ್ಕೆ ಚಿತ್ತಾಗಿದ್ದ ...ತದಾರ ಮಾಣಿಗೆ ಶಾಪ ಹಾಕುತ್ತಲೇ ಕಮಲಕ್ಕೆ ಮತ ...ದ್ದರು; ಮತ್ತೊಂದೆಡೆ ಮಂತ್ರಿ ದೇಶಪಾಂಡೆಯ ...ಹಂಕಾರಕ್ಕೆ ಕೆರಳಿದ್ದು ಜನರಿಗೆ ಗತಿಯಿಲ್ಲದಾಗಿತ್ತು. ...ಗಿ ಮಾಣಿಯ ಹದಿನಾಲ್ಕು ಶೇಖರಣೆ ಕಂಡು ...ತವಾಗಿದ್ದ ಮತದಾರ ತನಗರಿವಿಲ್ಲದೆ ಆತನನ್ನು ಮತ್ತೆ ...ಸಿ ಗಂಡಾಂತರಕ್ಕೆ ಬಿದ್ದಂತಾಗಿದೆ.

...ತ್ರಕರ್ತರಿಗೂ ಬೆದರಿಕೆ!!

...ಸ್ವಯಂಕೃತಾಪರಾಧ ಮಹಿಮೆಯಿಂದ ಗೆಲ್ಲುವ ...ವಸೆಯೇ ಕಳೆಕೊಂಡಿದ್ದ ಅನಂತ್ಮಾಣಿ ವಿಜಯದ ...ದಾಘಾತದಿಂದ ಪಿಕ್ರೀಸ್ ಆಗಿ ಹೋಗಿದ್ದಾನೆ! ...ದೂತ್ವದ ಫ್ಯಾಸಿಸ್ಟ್ ಆಡಳಿತ ಭಾರತದಲ್ಲಿ ಬಂದಿದೆ ...ಮ ತಾಲಿಬಾನ್ ಶೈಲಿಯಲ್ಲಿ ವಿಜಯ ವಿಶ್ಲೇಷಣೆ ...ಡುತ್ತಿದ್ದಾನೆ. ಆತ ಪತ್ರಕರ್ತರಿಗೂ ಬೆದರಿಕೆ ಹಾಕುತ್ತಿದ್ದಾನೆ. "ನಮ್ಮ ಕೇಸರಿ ಸರ್ಕಾರದ ಕಾರ್ಯವೈಖರಿ ಬಗ್ಗೆ ...ಮಲು ಪತ್ರಕರ್ತರಿಗೆ ದಮ್ ಬೇಕು...!" ಎಂದು ...ರಿಕೆ ಒಡ್ಡಿದ್ದಾನೆ. ತನ್ನ ಅಡ್ಡ ಕಸುಬು- ಕರ್ಮಗೇಡಿತನ ...ಮು ಕಿತಾಪತಿ ಬಗ್ಗೆ ಬರೆದರೆ ಹುಷಾರ್ ಎಂದೇ ...ರ್ಥ! ಈ ಹುಸಿ ಹಿಂದೂವಾದಿಗೆ ಜನರೇ ಪಾಠ ...ಸ ಬಯಸುತ್ತಿದೆ. ಮಾಣಿ ಕಮ್ಯುನಲ್ ಮುಟ್ಟಾಟಿಕೆ ...ಕೆಳ್ಳಿ ಅರಿತಿದ್ದಾರೆಂಬ ತಿಳಿದಿರುವುದರಿಂದ, ದೊಡ್ಡ ... ತೆರಬೇಕಾಗುವುದು ಖಂಡಿತ!

ಮಾಣಿ ಪಕ್ಕಾ ಕರ್ಮಗೇಡಿ; ಈತನ ಪುನರಾಯ್ಕೆ ಎಂದರೆ ನತದೃಷ್ಟ ಉತ್ತರ ಕನ್ನಡದ ದೌರ್ಭಾಗ್ಯದ ದಿನಗಳು ಸದ್ಯಕ್ಕಂತೂ ಮುಗಿವ ಲಕ್ಷಣವಿಲ್ಲವೆಂದೇ ಅರ್ಥ. ಈತ ಅದೆಂಥ ಕೃತಘ್ನ ಮತ್ತು ಹೊಣೆಗೇಡಿ ಎಂದರೆ, ಚೆಡ್ಡಿ ಪಡೆಯ ವಾರಾನ್ನದ ಹುಡುಗನಾಗಿದ್ದ ತನಗೆ ರಾಜಕೀಯ ದೀಕ್ಷೆ ನೀಡಿ ದೊಡ್ಡ ಮನುಷ್ಯ ಮಾಡಿದ ಗುರು ದಿವಂಗತ ಚಿತ್ತರಂಜನ್‌ರನ್ನೇ ಮರೆತು ಮೆರೆಯುತ್ತಿದ್ದಾನೆ. ಚಿತ್ತರಂಜನ್ ಶಾಸಕನಾಗಿದ್ದಾಗಲೇ ಹಿಂದೂತ್ವದ ಹುಲಿ ಸವಾರಿ ಮಾಡಿ ಹತನಾಗಿರುವಾತ. ಈತನ ಸಾವಿನ ರಹಸ್ಯ ಇವತ್ತಿಗೂ ನಿಗೂಢವಷ್ಟೇ ಅಲ್ಲ ಸಂಶಯಾಸ್ಪದವಾಗೇ ಇದೆ. ಕೇಂದ್ರದಲ್ಲಿ ವಾಜಪೇಯಿ ಸರ್ಕಾರ ಇದ್ದಾಗಲೂ ಮಾಣಿಯಿಂದ ರಾಜನ್ ಸಾವಿನ ತನಿಖೆ ನಿಷ್ಠೂರವಾಗಿ ನಡೆಯುವಂತೆ ಮಾಡಲಾಗಲಿಲ್ಲ. ಆ ಬಳಿಕ ಮತ್ತೆ ಮೂರು ಸಲ ಸಂಸದನಾದಾಗಲೂ ಮಾಣಿ ಕೇಸರಿ ಬಣ್ಣದ ಮಾತಾಡುತ್ತಲೇ ಕಾಲಹರಣ ಮಾಡಿದನೇ ಹೊರತು ರಂಜನ್ ಮತ್ತು ಹಿಂದೂತ್ವಕ್ಕೆ ಬಲಿಯಾದ ಭಟ್ಕಳದ ತಿಮ್ಮಪ್ಪ ನಾಯ್ಕ್ ಕೊಲೆ ತನಿಖೆ ಬಗ್ಗೆ ತಲೆಯೇ ಕೆಡಿಸಿಕೊಳ್ಳಲಿಲ್ಲ.

ಮಹತ್ವದ ಸಂಗತಿಯೆಂದರೆ, ರಂಜನ್ ಗುಂಡಿನ ದಾಳಿಗೆ ಆಹುತಿಯಾದ ನಂತರ ಆತನ ಪುಣ್ಯತಿಥಿ ದಿನದಂದೇ ಭಟ್ಕಳದ ಬೀದಿ-ಬೀದಿಯ ಗೋಡೆಗಳ ಮೇಲೊಂದು ಪೋಸ್ಟರ್ ರಾತ್ರಿ ಬೆಳಗಾಗುವುದರಲ್ಲಿ ಪ್ರತ್ಯಕ್ಷ ಆಗುತ್ತಿತ್ತು. 'ರಂಜನ್ ಹಂತಕ ಅನಂತಕುಮಾರ್' ಎಂದಿರುತ್ತಿತ್ತು ಭಿತ್ತಿ ಪತ್ರದ ಒಕ್ಕಣಿಕೆ! ಇಷ್ಟಾದರೂ ಸ್ಪಷ್ಟ ತನಿಖೆ ಮಾಣಿಯಿಂದ ಮಾಡಿಸಲೇಕಾಗಿಲ್ಲ? ಸಿಬಿಐ ರಂಜನ್ ಕೊಲೆ ತನಿಖೆಗೆ 'ಸಿ' ರಿಪೋರ್ಟ್ ಜಡಿದಿದೆ. ಇದೊಂದು ಪತ್ತೆಯಾಗದ ಪ್ರಕರಣ ಎಂದು ಸಾರಿದೆ. ಇದು ಅನಂತ್ಮಾಣಿಯ ಹಿಂದೂತ್ವದ ಬೂಟಾಟಿಕೆಗೆ ಜೀವಂತ ನಿದರ್ಶನ! ರಂಜನ್-ತಿಮ್ಮಪ್ಪ ನಾಯ್ಕ್‌ರಂಥವರ ಸಮಾಧಿಯ ಮೇಲೆ ಸಂಸದಗಿರಿಯ ಮಹಲು ಕಟ್ಟಿದ ಮಾಣಿ ಈಗ ಮತ್ತೆ ಜನರನ್ನು ದಿಕ್ಕು ತಪ್ಪಿಸುವ ಮಾತುಗಾರಿಕೆ ಶುರು ಹಚ್ಚಿಕೊಂಡಿದ್ದಾನೆ.

ಅತ್ತ ಮೋದಿಯ ಪಟ್ಟಾಭಿಷೇಕ ಆಗುತ್ತಿದ್ದರೆ ಇತ್ತ ಮಾಣಿಯ ಕಮ್ಯುನಲ್ ವರಸೆಗಳಿಗೆ ಖತರ್‌ನಾಕ್ ಖದರು ಬಂದುಬಿಟ್ಟಿದೆ! ವಿಜಯೋತ್ಸವ, ಮತದಾರರಿಗೆ ಕೃತಜ್ಞತೆ ಸಲ್ಲಿಸುವ ನೆಪದಲ್ಲಿ ಈತ ಕೆನರಾ ಕ್ಷೇತ್ರದಾದ್ಯಂತ ದಾಂಗುಡಿ ಇಡುತ್ತಿದ್ದಾನೆ. ಹೋದ-ಹೋದಲ್ಲಿ ಪ್ರಗತಿ, ನಮ್ರತೆ, ಕೃತಜ್ಞತಾಭಾವ, ಜನ ನಿಷ್ಠೆ ತೋರಿಸದೆ ಮತೋನ್ಮತ್ತನಾಗಿ ತೂರಾಡುತ್ತಿದ್ದಾನೆ! ಅರ್ಥ ತುಂಬಿದ ಕೊಡದಂತೆ ಆವಾಜ್ ಮಾಡುತ್ತಿದ್ದಾನೆ. ತನ್ನ ಅಯೋಗ್ಯತೆ ಮರೆಮಾಚುವ ಮಾಣಿಯ ಕೋಮು ಕಲಹದ ಮಾತುಗಳಿಗೆ ಮೋದಿ ಬಳಗದ ಬೆಂಬಲವೇನಾದರೂ ಸಿಕ್ಕರೆ ಉತ್ತರ ಕನ್ನಡಕ್ಕೆ ಕೇಡು ಖಂಡಿತ. ಮಾಣಿಗೆ ಮೂಗುದಾರ ಹಾಕಲು ಕಾಗೇರಿಯಂಥ ಬಿಜೆಪಿ 'ಸಜ್ಜನ'ರು ಮುಂದಾಗಬೇಕಿದೆ. ಇಲ್ಲದಿದ್ದರೆ ಮೊದಲೇ ಅನಂತ್ಮಾಣಿಯ ಕೆಂಗಣ್ಣಿಗೆ ತುತ್ತಾಗಿರುವ ಕಾಗೇರಿ, ಶಿವಾನಂದ ನಾಯ್ಕ್.... ಮುಂತಾದ ಚೆಡ್ಡಿಗಳೇ ಆತ ಹಾಕುವ ಬೆಂಕಿಗೆ ಮುಗ್ಧರೊಂದಿಗೆ ಹವಿಸ್ಸಾಗುವುದು ಗ್ಯಾರಂಟಿ!!


ಮಾಣಿಯ ಕ್ರಿಮಿನಲ್ ಮಾತು ಮೊದಲು ಮೊಳಗಿದ್ದು ಹಳಿಯಾಳದಲ್ಲಿ. ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಸೊಕ್ಕಿನಿಂದಲೇ ಮಾತಾಡಿದ ಮಾಣಿ 'ಮೋದಿ-ಬಿಜೆಪಿ ವಿಜಯ ಎಂದರೆ ನಿಜ ಅರ್ಥದಲ್ಲಿ ಹಿಂದೂತ್ವದ ದಿಗ್ವಿಜಯ.... ಇನ್ನು ಮುಂದೆ ನಮ್ಮ ಹಿಂದೂತ್ವ ಒಪ್ಪಿ ತೆಪ್ಪಗಿರುವವರಷ್ಟೇ ಈ ದೇಶದಲ್ಲಿರುತ್ತಾರೆ... ಒಪ್ಪದವರು ಗೆಟ್‌ಲಾಸ್ಟ್...' ಎಂದಬ್ಬರಿಸಿದ್ದಾನೆ! ಇಷ್ಟಕ್ಕೆ ಅನಂತ್ಮಾಣಿಯ ಆತಂಕಕಾರಿ ಅವಾಂತರ ನಿಂತಿಲ್ಲ. 'ಒಂದು ಸಾವಿರ ವರ್ಷದ ನಂತರ ಹಿಂದೂ ರಕ್ತಕ್ಕೆ ಬೆಲೆ ಕೊಡುವ ಕೇಂದ್ರ ಸರ್ಕಾರ ಬಂದಿದೆ... ಯಾರೇನೇ ಹೇಳಲಿ... ಪತ್ರಿಕೆಯವರು ಬೇಕಾದ್ದು ಬರೆಯಲಿ... ಈ ಬಾರಿ ಬಿಜೆಪಿಯಿಂದ ಗೆದ್ದ ಸಂಸದರೆಲ್ಲರೂ ಶುದ್ಧ ಹಿಂದೂಗಳು... ಮುಸಲ್ಮಾನರು ಹೆಚ್ಚಾಗಿರುವ ಉತ್ತರ ಪ್ರದೇಶದಲ್ಲೇ ನಾವು ಒಂದೇ ಒಂದು ಮುಸ್ಲಿಮನಿಗೆ ಟಿಕೆಟ್ ಕೊಟ್ಟಿಲ್ಲ... ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ಗೆದ್ದಿರುವ ಬಿಜೆಪಿಗರೆಲ್ಲ ಹಿಂದೂಗಳು. ಹಿಂದೂಗಳು ಹಿಂದೂಗಳಿಗಾಗಿ ಅವರನ್ನು ಆರಿಸಿದ್ದಾರೆ....' ಎಂದು ಮದದಿಂದ ತುಂಡುಗಪ್ಪಳ ಹಾಕಿದ್ದಾನೆ.

ಅನಂತ್ಮಾಣಿ ಪ್ರಕಾರ ಈ ಬಾರಿ ಬಿಜೆಪಿ ಅಧಿಕಾರ ಹಿಡಿದಿರುವುದು ಮೋದಿಯ ಗುಜರಾತ್ ಮಾದರಿಯ ಅಭಿವೃದ್ಧಿಯಿಂದ ಅಲ್ಲವಂತೆ. ಮೋದಿಯ ಪ್ರಖರ ಹಿಂದೂತ್ವ ಆತನನ್ನು ಪಿಎಂ ಮಾಡಿದೆಯಂತೆ. ಮೋದಿ ಬಳಗದ ಆಡಳಿತಕ್ಕೆ ಇದಕ್ಕಿಂತ ದೊಡ್ಡ ದೃಷ್ಟಿ ಬೊಟ್ಟು ಬೇರೆ ಬೇಕಾ? 'ಬಹುಸಂಖ್ಯಾತ ಹಿಂದೂಗಳ ಬಗೆಗಿನ ಮೋದಿಯ ನೀತಿ-ನಿಲುವು ಬಿಜೆಪಿಗೆ ಭರ್ಜರಿ ಗೆಲುವು ತಂದುಕೊಟ್ಟಿದೆ...' ಎಂದು ಚುನಾವಣಾ ಫಲಿತಾಂಶದ ವಿಶ್ಲೇಷಣೆ ಮಾಡಿರುವ ಈ ಅನ್‌ಪಡ್ ಪೆದ್ದ್ಯಾ ಪರೋಕ್ಷವಾಗಿ ಸಂಸದನಾದ ತನಗೆ ಅಭಿವೃದ್ಧಿ ಕೆಲಸ ಸಂಬಂಧಿಸಿದ್ದಲ್ಲ ಎಂದು ತರ್ಕ ಮಾಡಿದ್ದಾನೆ.

ರಾಜ್ಯ ಸರ್ಕಾರದ ಆಯ್ಕೆ ಎಲೆಕ್ಷನ್ ಇದೆಯಲ್ಲ, ಅದು ನಡೆಯುವುದು ಅಭಿವೃದ್ಧಿ ಆಧಾರದಲ್ಲಂತೆ; ಕೇಂದ್ರ ಸರ್ಕಾರದ ಆಯ್ಕೆ, ನಡೆಯುವುದು ನೀತಿ-ನಿರ್ಧಾರ-ನಿಲುವುಗಳ ಮೇಲಂತೆ ಎಂಬುದು ಈ ಪ್ರಜಾತಂತ್ರ ಪಂಡಿತನ ವಾದ! ಇದರರ್ಥ ಇಷ್ಟೆ. ಕೇಂದ್ರ ಸರ್ಕಾರದ ಕೆಲಸ-ಭಾರತ ಹಿಂದೂ ರಾಷ್ಟ್ರ ಮಾಡಿ, ಹಿಂದೂಗಳೇತರರನ್ನು ಓಡಿಸುವುದು; ಅಭಿವೃದ್ಧಿ-ಪ್ರಗತಿ ರಾಜ್ಯ ಸರ್ಕಾರ ಮಾಡಬೇಕು. ಹಾಗಾದರೆ ಸಂಸದನಾದ ಮಾಣಿ ಹಿಂದೂತ್ವದ ಮಂಕುಬೂದಿ ಎರಚುತ್ತ ಅಡ್ಡ ಕಸುಬಿನಲ್ಲಿ ಹಾಯಾಗಿ ತೊಡಗಿಕೊಳ್ಳಲು ಅನುಕೂಲ ಆಗುತ್ತದೆ, ಅಲ್ಲವಾ? ಇದು ಬಿಜೆಪಿ ಸಂಸದ ಅನಂತ್ಮಾಣಿಯ 'ಪ್ರಗತಿಯ ಮಾದರಿ'!!

ಅನಂತ್ಮಾಣಿ ಅಮಾಯಕ ಹಿಂದೂಗಳ ಭಾವುಕತೆ ಕೆರಳಿಸಿ ಬೇಳೆ ಬೇಯಿಸಿಕೊಳ್ಳುವ ಕುಕಲಾ ಪ್ರವೀಣ್ಯ. ಆತ ತನ್ನ ಭಾಷಣಕ್ಕೆ ಅಂತ್ಯ ಹಾಡುವುದಕ್ಕೆ ಈಗ ಹೊಸ ವಿಧಾನ ಕಂಡುಹಿಡಿದಿದ್ದಾನೆ. ಇಷ್ಟು ದಿನ ಭಾಷಣದ ಆರಂಭ-ಅಂತ್ಯದಲ್ಲಿ 'ಭಾರತ ಮಾತಾಕೀ ಜೈ' ಎಂದು ನೆರೆದ ಜನರಿಂದ ಹೇಳಿಸುತ್ತಿದ್ದ ಅನಂತ್ಮಾಣಿ ಈಗ ಅದಕ್ಕೆ ಮತ್ತೊಂದು ಪ್ರಚೋದನಾತ್ಮಕ್ಕೆ ಸಾಲು ಸೇರಿಸಿದ್ದಾನೆ! 'ನಮ್ಮ ರಕ್ತ - ಹಿಂದೂ ರಕ್ತ' ಎಂದು ಸಭಿಕರಿಂದ ಹೇಳಿ ಅನ್ಯ ಧರ್ಮೀಯರ ವಿರುದ್ಧ ಎತ್ತಿ ಕಟ್ಟುವ ಪಾತಕ ಮಾಣಿ ಮಾಡುತ್ತಿದ್ದಾನೆ. ಹಳಿಯಾಳದಲ್ಲಿ ಇಷ್ಟು ನಾಟಕ ಮಾಡಿದ ಮಾಣಿ ಪಕ್ಕದ ದಾಂಡೇಲಿಗೆ ಹೋದಾಗ ಮತ್ತಷ್ಟು ರಕ್ತರಂಜಿತ ಮಾತಾಡಿದ್ದಾನೆ.

"ಈ ಬಾರಿಯ ಲೋಕಸಭಾ ಎಲೆಕ್ಷನ್ ಗೆಲುವು ಬರೀ ರಾಜಕೀಯ ಗೆಲುವಲ್ಲ... ಹಿಂದೂ ರಾಷ್ಟ್ರವಾದದ ವಿಜಯ... ಹಿಂದೂ ಮಂದಿಯ ದಿಗ್ವಿಜಯ... ಆದರೆ ಇದೇ ನಮ್ಮ ಅಂತಿಮ ಗುರಿಯಲ್ಲ...!! ಯಾವಾಗ ದಿಲ್ಲಿಯ ಕೆಂಪು ಕೋಟೆ ಮೇಲೆ ಭಗವಾಧ್ವಜ ಹಾರಿಸುತ್ತೇವೆಯೋ ಅಂದು ನಮ್ಮ ನಿಜವಾದ ಸಂಭ್ರಮ ಆಗಬೇಕು... ಅದೇ ನಮ್ಮ ವಿಜಯೋತ್ಸವವೇ ಹೊರತು ಇಂದಿನದಲ್ಲ..." ಎಂದು ಕೇಸರಿ ಕೃಪಾಣದ ಪೊಕ್ಕು ಸಂಸದ ಅನಂತ್ಮಾಣಿ ಆರ್ಭಟಿಸಿದ್ದಾನೆ. ಮಾಣಿಯ ಜಾತ್ಯತೀತ ರಾಷ್ಟ್ರ ಕಲ್ಪನೆಯೂ ಆತಂಕಕಾರಿ ಆಗಿದೆ. ಆತನ ಪ್ರಕಾರ ಭಾರತ ಜಾತ್ಯತೀತ ದೇಶ ಅಲ್ಲ. ಹಾಗೆನ್ನುವುದು ಬರೀ ಬೊಗಳೆಯಂತೆ. ಜಾತ್ಯತೀತ ವಾದದ ಮುಖವಾಡದ ಮಂದಿಯ ಬೋಂಗು ಇದಂತೆ. ಒಬ್ಬನೇ ಅಪ್ಪ ಇರುವಂತೆ ಭಾರತಕ್ಕೆ ಹಿಂದೂತ್ವ ಒಂದೇ ಧರ್ಮವಂತೆ. ಇಂಥ ಹಸಿ-ಹಸಿ ಅಪದ್ಧ-ಅಕ್ರಮ-ಸಂವಿಧಾನಬಾಹಿರ ಡೈಲಾಂಗ್ ಉರು ಹಚ್ಚಿಕೊಂಡು ಮಾಣಿ ಅಮಾಯಕರ ಎದುರು ಒದರುತ್ತಿದ್ದಾನೆ. ಈತನ ಹುಚ್ಚಾಟದ ಮಾತುಗಾರಿಕೆ ದಾರಿ ತಪ್ಪಿ ಯಾವುದಾದರೂ ಹಿಂದೂ ಸಾಬಿಗೆ ಬೆಂಕಿ ಹಾಕಿದರೆ ಅಲ್ಲೇ ಆತ ಮೈ ಕಾಯಿಸಿಕೊಳ್ಳುತ್ತಾನೆ. ಬೆಂಕಿ ಹಾಕಿದ ಹಿಂದೂ ಜೈಲು-ಕೋರ್ಟು ಅಂಡಲೆಯಬೇಕಷ್ಟೇ. ಇದು ಮಾಣಿಯ ಇತಿಹಾಸ ಸಾಹಸ. ಅದನ್ನು ಕಳೆದ ಎಲೆಕ್ಷನ್ ಹೊತ್ತಲ್ಲಿ ಹಿಂದೆ ಆತನ ಸಹಚರರಾಗಿ ಬೇಡದ್ದು ಮಾಡಿ ಈಗ ಕೋರ್ಟು ಅಲೆಯುತ್ತಿರುವ ಹಿಂದೂ ಹುಡುಗರೇ ಹೊರಹಾಕಿದ ಕಠೋರ ಸತ್ಯ. ಹಿಂಬಾಲಕರು ಕೇಸುಗಳಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿದ್ದರೆ ಮಾಣಿ ಸುಖದ ಸುಪ್ಪತ್ತಿಗೆಯಲ್ಲಿ ಸಂಸದಗಿರಿ ಅನುಭೋಗಿಸುತ್ತಿದ್ದಾನೆ.



ದೇಶಪಾಂಡಗೆ ಧಮಕಿ!!

ಕೆನರಾ ಕ್ಷೇತ್ರದಿಂದ ನಾಲ್ಕು ಬಾರಿ ಗೆದ್ದಾಗೆಲ್ಲ ಅನಂತ್ಮಾಣಿಗೆ ಕಾಂಗ್ರೆಸ್ ಕಿಂಗ್ ದೇಶಪಾಂಡೆಯ ಒಳ ಸಹಕಾರ ದೊಡ್ಡ ಮಟ್ಟದಲ್ಲಿ ಸಿಕ್ಕಿತ್ತು. ಈ ಬಾರಿಯೂ ಮಾಣಿ ಗೆದ್ದಿದ್ದರೆ ಅದು ಮೋದಿಯಿಂದೇನಲ್ಲ; ಸಾಕ್ಷಾತ್ ದೇಶಪಾಂಡೆಯಿಂದಲೇ! ದೇಶಪಾಂಡೆಯ ಪಾಳೆಗಾರಿಕೆ, ಕುಟುಂಬ ಪ್ರಭುತ್ವ; ಜನಸಾಮಾನ್ಯರ ತುಚ್ಛವಾಗಿ ನಡೆಸಿಕೊಳ್ಳುವ ರಾಜಪ್ರಭುತ್ವ ಮತ್ತು ಜಿಲ್ಲೆಯ ಬಹುಸಂಖ್ಯಾತ ಬ್ರಾಹ್ಮಣ ಮತ್ತು ದೀವರನ್ನು ತುಳಿದ ಪರಿಗೆ ಬೇಸತ್ತ ಜನರು ಆತನ ಮಗ ಪ್ರಶಾಂತನಿಗಿಂತ ಯೂಸ್‌ಲೆಸ್ ಮಾಣಿಯೇ 'ಅಡ್ಡಿಲ್ಲ' ಎಂದು ಆಯ್ಕೆ ಮಾಡಿದ್ದಾರೆ.

ಆದರೆ ಅದ್ಯಾಕೋ ಮಾಣಿಗೆ ಗೆದ್ದರೂ ದೇಶಪಾಂಡೆ ಮೇಲಿನ ಸಿಟ್ಟು ಮಾತ್ರ ಈ ಬಾರಿ ಇಳಿದಿಲ್ಲ. ಹಿಂದಿನ ನಂಟು-ಅಂಟು ಎಲ್ಲ ಕಳಚಿಕೊಂಡಂತೆ ಮಾಣಿ ವಿಜಯೋತ್ಸವ ಭಾಷಣಗಳಲ್ಲಿ ದೇಶಪಾಂಡೆ ಮೇಲೆ ಹರಿಹಾಯುತ್ತಿದ್ದಾನೆ. "ದುಡ್ಡೇ ಎಲ್ಲ ಕಡೆ ಕೆಲಸ ಮಾಡದು. ಬರೀ ದುಡ್ಡು ಗೆಲ್ಲಲಾರದು. ದುಡ್ಡಿಂದ ಜನರ ಖರೀದಿಸಿ ಮಗನ ಗೆಲ್ಲಿಸಬಹುದೆಂದು ದೇಶಪಾಂಡೆ ಭ್ರಮಿಸಿದ್ದರು. ಅವರಿಗೆ ಜನ ಪಾಠ ಕಲಿಸಿದ್ದಾರೆ; ಕುಬೇರನ ಎದುರು ಕುಚೇಲನಾದ ನನ್ನ ಗೆಲ್ಲಿಸಿದ್ದಾರೆ..." ಎಂದು ಮಾಣಿ ತನಗೆ ತಾನೇ ತಾರೀಫು ಮಾಡಿಕೊಳ್ಳುತ್ತ ದೇಶಪಾಂಡೆಗೆ ತಿವಿಯುತ್ತಿದ್ದಾನೆ.

ಅಷ್ಟೇ ಅಲ್ಲ ಡಾನ್ ದೇಶಪಾಂಡೆಗೆ ಧಮಕಿಯೂ ಹಾಕಿದ್ದಾನೆ. "ದರ್ಪ ಬಿಟ್ಟು ಸಜ್ಜನಿಕೆಯಿಂದ ಕೆಲಸ ಮಾಡು... ಇಲ್ಲದಿದ್ರೆ ನಿನ್ನ ಕಾರು ಜಿಲ್ಲೆಯಲ್ಲಿ ಓಡಾಡಲಿಕ್ಕೆ ಬಿಡೋದಿಲ್ಲ..." ಎಂದು ವಾರ್ನಿಂಗ್ ಕೊಟ್ಟಿದ್ದಾನೆ ಮಾಣಿ. ದಿಲ್ಲಿಯಲ್ಲಿ ಬಿಜೆಪಿ ಸರ್ಕಾರ ಇದೆಯೆಂದು ಪರೋಕ್ಷವಾಗಿ ಬೆದರಿಸಿದ್ದಾನೆ! ಈ ಮದ್ದಾನೆಗಳ ಗುದ್ದಾಟ ಜಿಲ್ಲೆಗೆ ಭಾಗ್ಯ ತಂದೀತಾ?!

ಉತ್ತರ ಕನ್ನಡದ ಶಾಂತಿ-ನೆಮ್ಮದಿ ಕೆಡಿಸುವ ಹಠದಲ್ಲಿರುವ ಮಾಣಿಗೆ ಅಂಕುಶ ಹಾಕುವವರ್ಯಾರು? ಜಿಲ್ಲೆಗೆ ಕೇಡುಗಾಲವಾ ಇದು? ಹಾಗಂತ ಮಾಣಿಗೆ ಗೆಲ್ಲಿಸಿದವರೇ ಈಗ ಹಣೆಹಣೆ ಚಚ್ಚಿಕೊಳ್ಳುವಂತಾಗಿದೆ!

● ವರದಿಗಾರ

ಹೀಗೂ ಉಂಟು

ಎ.ವಿ.ಬಾಳಿಗ ಬಳಗದ ಸ್ನೇಹಿತರು ವಿಶ್ವ ಸ್ಕಿಜೋಫ್ರೀನಿಯ ಜಾಗೃತಿ ದಿವಸ (24 ಮೇ 2014-ಶನಿವಾರ) ದ ಉದ್ಘಾಟನೆಗೆ ನನ್ನನ್ನು ಆಹ್ವಾನಿಸಿದರು. ಸ್ಕಿಜೋಫ್ರೀನಿಯ ದಿನಕ್ಕೆ ನಾನು ಯಾಕೆ ಎಂದು ತಿಳಿಯದಾಯಿತು. ಇದು ವಿಶ್ವ ಸ್ಕಿಜೋಫ್ರೀನಿಯ ಜಾಗೃತಿ ದಿವಸ ಆಗಿದ್ದರೂ ಇದು ಇತರ ಸೈಕೊಸಿಸ್ ಕುರಿತು ಜಾಗೃತಿ ಉಂಟುಮಾಡುವ ಕಾರ್ಯಕ್ರಮವೂ ಆಗಿದ್ದು, ಈ ವರ್ಷ ಜಗತ್ತಿನಾದ್ಯಂತ ಈ ದಿನಕ್ಕೆ ಆಯ್ಕೆ ಮಾಡಿಕೊಂಡ ಥೀಮ್ ಮಾನಸಿಕ ಅಸ್ವಸ್ಥತೆಗೆ ತಗಲಿರುವ ಕಳಂಕದ ವಿರುದ್ಧ ಹೋರಾಡುವುದು ಎಂದು ತಿಳಿದಾಗ ಒಪ್ಪಿಕೊಂಡೆ. ನನಗಿರುವ ಖಿನ್ನತೆಯ ಸಮಸ್ಯೆಯ ಕುರಿತು ಮುಚ್ಚುಮರೆಯಿಲ್ಲದೆ ಮಾತನಾಡುವ ನಾನು ಈ ಕಾರ್ಯಕ್ರಮ ಉದ್ಘಾಟಿಸಲು ಸೂಕ್ತ ವ್ಯಕ್ತಿ ಎಂದು ಡಾ. ಭಂಡಾರಿ ಮತ್ತು ಬಾಲ್ಯ ಸ್ನೇಹಿತ ಡಾ. ದೀಪಕ್ ಮಲ್ಯ ಹೇಳಿ ಒಪ್ಪಿಸಿದರು. ಒಪ್ಪಿಕೊಂಡೆ.

ಅಂದು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ನಾನು ನನಗಿರುವ ಖಿನ್ನತೆಯ ಸಮಸ್ಯೆ ಎದುರಿಸಿದ್ದನ್ನು ಮತ್ತು ಅದನ್ನು ಹತ್ತಿಕ್ಕಲು ಮೀರಿದ್ದನ್ನು, ಕೇಂದ್ರವಾಗಿಟ್ಟುಕೊಂಡು ಹೇಗೆ ಮಾನಸಿಕ ಸಮಸ್ಯೆಗಳಿಗೆ ವೈದ್ಯಕೀಯ ಸಹಾಯ ಮಾತ್ರ ಸಾಲದು ಅದರೊಂದಿಗೆ ಹೇಗೆ ಸಮಾಜದ ಸಹಕಾರ ಮತ್ತು ಸಮಸ್ಯೆ ಹೊಂದಿದ ವ್ಯಕ್ತಿ ಜೀವನದೊಂದಿಗೆ/ ಲೋಕದೊಂದಿಗೆ



ತೊಡಗಿಸಿಕೊಳ್ಳುವುದು ಸಹ ಅವಶ್ಯ ಎಂದು ಹತ್ತು ಹದಿನೈದು ನಿಮಿಷದಲ್ಲಿ ಮಾತನಾಡಿದೆ.


ಅದರ ಮಾರನೆ ದಿನ (25 ಮೇ 2014-ಆದಿತ್ಯವಾರ) ಉದಯವಾಣಿ ಪತ್ರಿಕೆ ಈ ಕಾರ್ಯಕ್ರಮದ ವರದಿಯಲ್ಲಿ "ನನ್ನ ಮನೆಯವರು ನನ್ನನ್ನು ಬರವಣಿಗೆಗೆ ತೊಡಗಿಸಿದ್ದರಿಂದ ನಾನು ಈ ವ್ಯಾಧಿಯಿಂದ ಹೊರಬರಲು ಸಾಧ್ಯವಾಯಿತು ಎಂದರು" ಎಂದು ವರದಿ ಮಾಡಿತು.

ಅಂದಿನ ಕಾರ್ಯಕ್ರಮಕ್ಕೆ ಬಂದ ಉದಯವಾಣಿ ಪತ್ರಕರ್ತ ಯಾರೋ ತಿಳಿಯದು. ಅವನು ಅದೇನು ಕೇಳಿಸಿಕೊಂಡನೊ ತಿಳಿಯದು. ವರದಿಯಲ್ಲಿ ನನಗೇ ಸ್ಕಿಜೋಫ್ರೀನಿಯ ಇದೆ ಎಂಬಂತೆ ವರದಿ ಬರೆದಿದ್ದಾನೆ. ಮತ್ತು ನನ್ನನ್ನು ನನ್ನ ಮನೆಯವರು ಬರವಣಿಗೆಗೆ ತೊಡಗಿಸಿದ್ದು ಎಂದು ಬೇರೆ ವರದಿ ಮಾಡಿದ್ದಾನೆ.

'ನಗಬೇಕೋ ಅಳಬೇಕೋ ತಿಳಿಯುತ್ತಿಲ್ಲ' - ಅಂತ ಜನ ಹೇಳುವ ಸಂದರ್ಭ ಎಂಥದ್ದು ಹೇಗಿರುತ್ತದೆ ಎಂದು ತಿಳಿಯಿತು.

● ಸಂವರ್ತ ಸಾಹಿಲ್

ಭೂಮಿ ಅವ್ಯವಹಾರ 'ಧರ್ಮ'ಕ್ಕೆ ಅಪಚಾರ



ಈ ಇಡೀ ವಿವಾದವನ್ನು ಹೊರಗೆಳೆದು ಸಾರ್ವಜನಿಕರ ಗಮನಕ್ಕೆ ತಂದಿದ್ದು ನಾಗರಿಕ ಸೇವಾ ಟ್ರಸ್ಟ್ ಎಂಬ ಸ್ವಯಂ ಸೇವಾ ಸಂಸ್ಥೆ ಹಾಗೂ ಅದರ ಅಧ್ಯಕ್ಷ ಸೋಮನಾಥ ನಾಯಕ್. ದೀನದಲಿತರಿಗೆ ಸೇರಬೇಕಿದ್ದ ಸಾವಿರಾರು ಎಕರೆ ಜಮೀನನ್ನು ಧರ್ಮಾಧಿಕಾರಿ ಸ್ಥಾನದಲ್ಲಿರುವ ಪ್ರಭಾವಿ ವ್ಯಕ್ತಿಗಳು ಸುಳ್ಳು ಘೋಷಣೆಗಳ ಮೂಲಕ ಕಬ್ಜಾದಲ್ಲಿರಿಸಿಕೊಂಡಿದ್ದಾರೆಂದು ಮನಗಂಡು ಸೋಮನಾಥ ನಾಯಕ್ ಅವರ ನೇತೃತ್ವದಲ್ಲಿ ನಾಗರಿಕ ಸೇವಾ ಟ್ರಸ್ಟ್ ಈಗಾಗಲೇ ಕೆಲವಾರು ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದೆ.

ಕರ್ನಾಟಕದ ಧಾರ್ಮಿಕ ಕ್ಷೇತ್ರಗಳಲ್ಲೆಲ್ಲಾ ಧರ್ಮಸ್ಥಳಕ್ಕೆ ಬಹಳ ವಿಶಿಷ್ಟವಾದ ಸ್ಥಾನವಿದೆ. ಆ ಕ್ಷೇತ್ರದಲ್ಲಿ ದೇವರು ನೆಲೆಗೊಂಡಿದ್ದಾನೆಂದೇ ಬಹಳಷ್ಟು ಭಕ್ತಾದಿಗಳು ನಂಬಿಕೊಂಡಿದ್ದಾರೆ. ಆದರೆ ಇತ್ತೀಚೆಗೆ ಧರ್ಮಸ್ಥಳದಿಂದ ಹೊರಬರುತ್ತಿರುವ ಕೆಲವು ಸುದ್ದಿಗಳಿಂದಾಗಿ ಭಕ್ತ ಸಮೂಹಕ್ಕೆ ಭಾರೀ ಆಘಾತವಾಗಿರುವುದಂತೂ ಸತ್ಯ. ಧರ್ಮಸ್ಥಳ ಕ್ಷೇತ್ರದ ನಟ್ಟನಡುವೆಯೇ ಸೌಜನ್ಯ ಎಂಬ ಅಪ್ರಾಪ್ತ ವಯಸ್ಕ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಕೇಸು ಧರ್ಮಸ್ಥಳ ಮಾತ್ರವಲ್ಲದೆ ತಾಲೂಕು ಕೇಂದ್ರವಾದ ಬೆಳ್ತಂಗಡಿ ಮತ್ತು ಜಿಲ್ಲಾ ಕೇಂದ್ರ ಮಂಗಳೂರುಗಳಲ್ಲೂ ಭಾರೀ ಪ್ರತಿಭಟನೆಗಳ ಸರಮಾಲೆಯನ್ನೇ ಎಬ್ಬಿಸಿದೆ. ಮಾತ್ರವಲ್ಲದೆ ಹಿಂದಿನ ಎರಡು ದಶಕಗಳಿಂದ ಬಲಾಢ್ಯ ಶಕ್ತಿಗಳಿಗೆ ಬಲಿಯಾದ ಹತ್ತಾರು ಮಹಿಳೆಯರ ಕುಟುಂಬ ವರ್ಗದವರು ಬಹಿರಂಗವಾಗಿ ಮುಂದೆ ಬಂದು ತಮ್ಮ ಆಕ್ರೋಶ ಹೊರಗೆಡವಿದ್ದಾರೆ. ಹೀಗೆ ತೀವ್ರಗೊಂಡ ಪ್ರತಿಭಟನೆಯ ಹಿನ್ನೆಲೆಯಲ್ಲಿ ಸದ್ಯಕ್ಕೆ ಕುಮಾರಿ ಸೌಜನ್ಯಳ ಕೊಲೆ ಕೇಸು ಸಿಬಿಐ ಅಂಗಳದಲ್ಲಿದೆ.

ಈಗ ಇದೇ ಧರ್ಮಸ್ಥಳದ ಭಕ್ತರಿಗೆ ಆಘಾತವಾಗುವಂಥ ಮತ್ತೊಂದು ಸುದ್ದಿ ಹೊರಬಿದ್ದಿದೆ. ಈ ಪ್ರಕರಣದ ನೇರ ಆರೋಪಿ ಬೇರಾರೂ ಅಲ್ಲ; ಸ್ವತಃ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀಯುತ ವೀರೇಂದ್ರ ಹೆಗ್ಗಡೆಯವರೇ! ಈ ಕುಟುಂಬ ಕಾನೂನುಪ್ರಕಾರ ದೀನದಲಿತರಿಗೆ, ಬಡಗೇಣಿದಾರರಿಗೆ ಸೇರಬೇಕಾದ ಸಾವಿರಾರು ಎಕರೆ ಭೂಮಿಯನ್ನು ಕಾನೂನಿಗೆ ವಂಚಿಸಿ ಕಬ್ಜಾ ಮಾಡಿರುವ ಪ್ರಕರಣ ಸರ್ಕಾರಿ ದಾಖಲಾತಿಗಳ ಮೂಲಕವೇ ಬಯಲಿಗೆ ಬಂದಿದೆ.

ಈ ಇಡೀ ವಿವಾದವನ್ನು ಹೊರಗೆಳೆದು ಸಾರ್ವಜನಿಕರ ಗಮನಕ್ಕೆ ತಂದಿದ್ದು ನಾಗರಿಕ ಸೇವಾ ಟ್ರಸ್ಟ್ ಎಂಬ ಸ್ವಯಂ ಸೇವಾ ಸಂಸ್ಥೆ ಹಾಗೂ ಅದರ ಅಧ್ಯಕ್ಷ ಸೋಮನಾಥ ನಾಯಕ್. ದೀನದಲಿತರಿಗೆ ಸೇರಬೇಕಿದ್ದ ಸಾವಿರಾರು ಎಕರೆ ಜಮೀನನ್ನು ಧರ್ಮಾಧಿಕಾರಿ ಸ್ಥಾನದಲ್ಲಿರುವ ಪ್ರಭಾವಿ ವ್ಯಕ್ತಿಗಳು ಸುಳ್ಳು ಘೋಷಣೆಗಳ ಮೂಲಕ ಕಬ್ಜಾದಲ್ಲಿರಿಸಿಕೊಂಡಿದ್ದಾರೆಂದು ಮನಗಂಡು ಸೋಮನಾಥ ನಾಯಕ್ ಅವರ ನೇತೃತ್ವದಲ್ಲಿ ನಾಗರಿಕ ಸೇವಾ ಟ್ರಸ್ಟ್ ಈಗಾಗಲೇ ಕೆಲವಾರು ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದೆ.

ಶ್ರೀ ವೀರೇಂದ್ರ ಹೆಗ್ಗಡೆ ಹಾಗು ಕುಟುಂಬ ವರ್ಗದವರ ಕಬ್ಜಾದಲ್ಲಿರುವ ಸಾವಿರಾರು ಎಕರೆ ಜಮೀನುಗಳ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದುಕೊಂಡ ಅಧಿಕೃತ ದಾಖಲಾತಿಗಳು ಈ ವಿಶಿಷ್ಟ ಭೂಹಗರಣದ ಒಳಹೂರಣವನ್ನು ಬಿಚ್ಚಿಟ್ಟಿವೆ. ಅಧಿಕೃತ ಸರ್ಕಾರಿ ದಾಖಲೆಗಳು ಬಿಚ್ಚಿಟ್ಟಿರುವ ಈ ವಿವಾದದ ವಿವರಗಳು ಇಲ್ಲಿವೆ.

ಈ ಕಾನೂನಿನ ಅನುಸಾರ ಶ್ರೀ ವೀರೇಂದ್ರ ಹೆಗ್ಗಡೆಯವರ ಕುಟುಂಬದ ವಿರುದ್ಧ ಎಲ್‌ಆರ್‌ವೈ 72/1974-75 ಸಂಖ್ಯೆಯ ಪ್ರಕರಣವೂ ದಾಖಲಾಯ್ತು. ಈ ಪ್ರಕರಣದ ದಾಖಲೆಗಳಲ್ಲಿ ಕಂಡುಬಂದಿರುವ ಪ್ರಕಾರ ಡಿ.ವೀರೇಂದ್ರ ಹೆಗ್ಗಡೆಯವರ ಕುಟುಂಬ ವರ್ಗದ ವಶದಲ್ಲಿದ್ದ ಭೂಮಿ ಒಟ್ಟು 4671 ಎಕರೆ ಎಂದು ನಮೂದಾಗಿತ್ತು.

ಆದರೆ ತಮ್ಮ ಕುಟುಂಬ 4671.06 ಎಕ್ರೆ ಜಮೀನು ಹೊಂದಿದೆಯೆಂದು ಘೋಷಿಸಿಕೊಂಡ ವೀರೇಂದ್ರ ಹೆಗ್ಗಡೆ ಕುಟುಂಬ ವರ್ಗದವರು ಈ ಭೂಮಿಯ ಮೂಲವನ್ನು ಬಹಿರಂಗಪಡಿಸಿಲ್ಲ. ದೇವಸ್ಥಾನದ್ದೇ ಅಥವಾ ಇವರ ಕುಟುಂಬದ್ದೇ ಎಂಬುದು ಕೂಡ ಸ್ಪಷ್ಟವಾಗಿಲ್ಲ. ಇವರಿಗೆ ಯಾವಾಗ, ಯಾರಿಂದ, ಹೇಗೆ ಬಂತು? ಇವರಿಗೆ ಈ ಭೂಮಿಯ ಒಡೆತನ ಅನಾದಿಯಿಂದಲೇ ಇತ್ತೇ? ಹಾಗಾದರೆ ದೇವಸ್ಥಾನದ ಭೂಮಿ ಏನಾಯ್ತು? ಎಂಬಿತ್ಯಾದಿ ಹತ್ತಾರು ಅಂಶಗಳನ್ನು ಸ್ವತಃ ಘೋಷಣೆದಾರರು ಭೂನ್ಯಾಯ ಮಂಡಳಿಗೆ ತನ್ನ ಹೇಳಿಕೆಗಳಲ್ಲಿ ವಿವರಿಸಬೇಕಿತ್ತು. ಅದು ಕಾನೂನುಬದ್ಧವಾದ ಹಾಗೂ ನ್ಯಾಯಸಮ್ಮತವಾದ ನಡವಳಿಕೆಯಾಗುತ್ತಿತ್ತು. ಹೋಗಲಿ, ಸಂಬಂಧಿಸಿದ ಅಧಿಕಾರಿಗಳಾದರೂ 4671 ಎಕರೆಗಳಷ್ಟು ಬೃಹತ್ ಗಾತ್ರದ ಭೂಮಿ ಪ್ರಕರಣದ ಬಗ್ಗೆ ಕೂಲಂಕುಶ ತನಿಖೆ ಮಾಡಬೇಕಿತ್ತು, ಆದರೆ ಇದ್ಯಾವುದೂ ನಡೆಯಲೇ ಇಲ್ಲ ಎಂಬುದು ಆಶ್ಚರ್ಯವಾದರೂ ಸತ್ಯ.

ಇಂಥಾ ಕಾನೂನು ಉಲ್ಲಂಘನೆ ಹೇಗೆ ಸಾಧ್ಯವಾಯಿತು? ಈಗ ಈ ಪ್ರಕರಣದ ಬಗ್ಗೆ ಹೋರಾಟ ನಡೆಸುತ್ತಿರುವ ಸೋಮನಾಥ ನಾಯಕ್ ಅವರು ಇತ್ತೀಚೆಗೆ ಅಧಿಕಾರಿಗಳಿಗೆ ನೀಡಿದ ಹೇಳಿಕೆಯನ್ನು ನೋಡೋಣ. "ಘೋಷಣೆದಾರರು (ವೀರೇಂದ್ರ ಹೆಗ್ಗಡೆ) ಪವಿತ್ರ ಧರ್ಮಸ್ಥಳ ಶ್ರೀ ಮಂಜುನಾಥಸ್ವಾಮಿ ದೇವಸ್ಥಾನದ ಧರ್ಮಾಧಿಕಾರಿಗಳಾಗಿದ್ದು ಅಂದಿನ ಸರಕಾರಿ ಅಧಿಕಾರಿ ವರ್ಗದಲ್ಲಿ ಪ್ರಭಾವೀ, ಬಲಾಢ್ಯ ವ್ಯಕ್ತಿಯಾಗಿದ್ದರು. ಈ ದೇವಸ್ಥಾನಕ್ಕೆ ಸಾವಿರಾರು ಎಕ್ರೆ ಕೃಷಿಭೂಮಿ ಇತ್ತು. ಹಾಗೂ ಕೋಟ್ಯಾಂತರ ರೂಪಾಯಿ ಆದಾಯ ಇತ್ತು, ಇದೆ. ಪ್ರಕೃತ ವಾರ್ಷಿಕ ರೂ 450 ಕೋಟಿಯಿಂದ ರೂ. 600 ಕೋಟಿ ತನಕ ಆದಾಯ ಇರಬಹುದೆಂದು ಪತ್ರಿಕಾ ವರದಿಗಳಿಂದ ತಿಳಿದುಬಂದಿದೆ."

ಅದು ಹಾಗಿರಲಿ. 1974ರಲ್ಲಿ ದಾಖಲಾದ ಪ್ರಕರಣವನ್ನು ಇತ್ಯರ್ಥಪಡಿಸುವ ಸಾಹಸಕ್ಕೆ ಸುಮಾರು 38 ವರ್ಷಗಳ ಕಾಲ ಯಾವ ಅಧಿಕಾರಿಯೂ ಮುಂದಾಗಲಿಲ್ಲ ಎಂಬುದು ವಿಚಿತ್ರ ಸತ್ಯ. ಅಂತೂ ಇಂತೂ 2012ರಲ್ಲಿ ಪುತ್ತೂರು ಉಪವಿಭಾಗದ ಸಹಾಯಕ ಕಮಿಷನರ್ ಹಾಗೂ ಬೆಳ್ತಂಗಡಿ ತಾಲೂಕು ಭೂನ್ಯಾಯ ಮಂಡಳಿ ಅಧ್ಯಕ್ಷರಾಗಿದ್ದ ಶ್ರೀ ಸುಂದರ ಭಟ್ ಎಂ. ಪುತ್ತೂರು ಎಂಬ ಮಹಾನುಭಾವ ಈ ಪ್ರಕರಣ ಬಗ್ಗೆ ತಾ.6.3.2012ರಂದು ಅಂತಿಮ ಆದೇಶ ಹೊರಡಿಸಿ ಪುಣ್ಯ ಕಟ್ಟಿಕೊಂಡಿದ್ದಾರೆ.

ಅದೂ ಎಂಥಾ ತೀರ್ಪು ಅಂತೀರಿ? ಈಗಾಗಲೇ ಸಾಕಷ್ಟು ವಿವಾದಗಳನ್ನು ಹುಟ್ಟುಹಾಕಿದ್ದ ಈ ಪ್ರಕರಣಕ್ಕೆ ಸಂಬಂಧಿಸಿದ ಸದರಿ ಆದೇಶವೇ ಈಗ ಮತ್ತಷ್ಟು ವಿವಾದಗಳನ್ನು ಹುಟ್ಟುಹಾಕುತ್ತಿದೆ. ಯಾಕೆಂದರೆ ಈ ಆದೇಶದಲ್ಲಿ ತೋರಿಕೆಗಾದರೂ ಒಂದಷ್ಟು ಕಾನೂನು ಪಾಲಿಸುವ ಗೋಜಿಗೆ ಹೋಗದೆ, ಎಲ್ಲ ರೀತಿಯ ನಿಯಮಾವಳಿಗಳನ್ನು ಗಾಳಿಗೆ ತೂರಲಾಗಿದೆ.

ಇದೇ ಸುಂದರ್ ಭಟ್ ಎಂಬ ಅಧಿಕಾರಿ ಮಡೆಸ್ನಾನ ಕುಖ್ಯಾತಿಯ ಕುಕ್ಕೆ ಸುಬ್ರಮಣ್ಯ ದೇವಸ್ಥಾನದ ಆಡಳಿತಾಧಿಕಾರಿಯೂ ಆಗಿದ್ದರು. ಕಾನೂನು ಪಾಲಿಸಬೇಕಾಗಿದ್ದ ಈ ಅಧಿಕಾರಿ, ಕಾನೂನಿಗೆ ವಿರುದ್ಧವಾದ ಈ ಅನಿಷ್ಟ ಆಚರಣೆಯ ಪರವಾಗಿ ಕೆಲಸ ಮಾಡಿದ್ದಾರೆಂದು ಹಲವಾರು ಪ್ರಗತಿಪರ, ದಲಿತ ಸಂಘಟನೆಗಳು ಆರೋಪಿಸಿ ಈತನ ಮೇಲೆ ಅಟ್ರಾಸಿಟಿ ಕೇಸು ದಾಖಲಿಸಬೇಕೆಂದು ಒತ್ತಾಯಿಸಿದ್ದವು. ಮಾತ್ರವಲ್ಲದೆ ಸಂವಿಧಾನಬದ್ಧವಾಗಿ ದಲಿತರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕೊಡದೆ ಈತ ಸತಾಯಿಸಿದ ಬಗ್ಗೆಯೂ ಆರೋಪಗಳು ಕೇಳಿಬಂದಿವೆ. ಇದೇ ಮಹಾನುಭಾವ ನೀಡಿರುವ 'ಭೂನ್ಯಾಯ' ಹೇಗಿದೆ ಎಂದು ನೋಡೋಣ.

1974ರಲ್ಲಿ ವೀರೇಂದ್ರ ಹೆಗ್ಗಡೆ ಕುಟುಂಬ ಘೋಷಿಸಿದ್ದ 4671 ಎಕರೆ ಜಮೀನುಗಳು ಒಟ್ಟು 9 ತಾಲೂಕುಗಳ, 43 ಗ್ರಾಮಗಳಲ್ಲಿ 592 ಸರ್ವೆ ನಂಬರ್‌ಗಳಲ್ಲಿ ಹರಡಿಕೊಂಡಿವೆ. ಇಷ್ಟೊಂದು ವಿಸ್ತಾರದ ಪ್ರಕರಣದಲ್ಲಿ ಭೂನ್ಯಾಯ ಮಂಡಳಿಯ ಅಧ್ಯಕ್ಷ ಸುಂದರ್ ಭಟ್ ನೀಡಿದ ಆದೇಶ ಕೇವಲ 2 ಪುಟಗಳು ಮಾತ್ರ. ಯಾವ ಕಾರಣಕ್ಕೂ ಇದು ಸ್ಪೀಕಿಂಗ್ ಆರ್ಡರ್ ಆಗಿರುವುದಿಲ್ಲ, ಸಾಕಷ್ಟು ಉಲ್ಲೇಖ, ವಿಮರ್ಶೆ ಮಾಡಿ ತಮ್ಮ ಆದೇಶ ಸಮರ್ಥಿ[...] ಕೊಳ್ಳುವ ಗೋಜಿಗೇ ಹೋಗದ ಸುಂದರ ಭಟ್ಟ[...] ಘೋಷಣೆದಾರರ ಪರ ಪೂರ್ವನಿಶ್ಚಿತ ಆದೇ[...] ಹೊರಡಿಸಿಬಿಟ್ಟಿದ್ದಾರೆ.

ಆದರೆ ಈ 38 ವರ್ಷಗಳ ಅವಧಿಯಲ್ಲಿ ಕೆಲವ[...] ಪ್ರಾಮಾಣಿಕ ಅಧಿಕಾರಿಗಳೂ ಬಂದುಹೋಗಿದ್ದಾ[...] ನಿಷ್ಪಕ್ಷಪಾತ ತನಿಖೆ ನಡೆಸಿ, ಭೂಮಿಯನ್ನು ಮುಟ್ಟುಗೋಲ[...] ಹಾಕಿಕೊಳ್ಳುವ ಅಗತ್ಯವನ್ನೂ ವಿವರಿಸಿದ್ದಾರೆ. ಆದರೆ ಇಂಥ[...] ಅಧಿಕಾರಿಗಳು ತಮ್ಮ ನಿಷ್ಠುರ ಕ್ರಮ ತೆಗೆದುಕೊಳ್ಳು[...] ಮೊದಲೇ ಎತ್ತಂಗಡಿಯಾಗಿರುವುದು ದೀನ ದಲಿತರ[...] ಬಡ ಗೇಣಿದಾರರ ದುರ್ದೈವವೇ ಸರಿ. ಇಂಥಾ ಕೆಲವೊಂದ[...] ಅಧಿಕಾರಿಗಳ ಶಿಫಾರಸ್ಸು ಪತ್ರಗಳತ್ತ ಕಣ್ಣು ಹಾಯಿಸೋಣ[...]

1976ರ ರೆವೆನ್ಯೂ ಇನ್ಸ್‌ಪೆಕ್ಟರ್‌ರ ವರದಿ

ಭೂನ್ಯಾಯ ಮಂಡಳಿಯ ವಿಶೇಷ ತಹಶೀಲ್ದಾರರಿ[...] ರೆವಿನ್ಯೂ ಇನ್ಸ್‌ಪೆಕ್ಟರ್ (ಭೂ.ನ್ಯಾ) 17.4.1976ರಂದ[...] ನೀಡಿದ 5 ಅಂಶಗಳ ಟಿಪ್ಪಣಿಯು ಘೋಷಣೆದಾರರ[...] ನೀಡಿದ ಮಾಹಿತಿ ನಂಬಲು ಅರ್ಹ ಅಲ್ಲ ಎಂಬುದ[...] ಖಚಿತ ಪುರಾವೆಯಾಗಿದೆ. ಮುಖ್ಯವಾಗಿ, ಹೆಗ್ಗಡೆಯವ[...] ತನ್ನ ಘೋಷಣಾ ಪತ್ರದಲ್ಲಿ ತನ್ನ ಕುಟುಂಬ ಹೊಂದಿರು[...] ಎಲ್ಲಾ ಭೂಮಿಗಳ ವಿವರ ಕಾಣಿಸಿಲ್ಲವೆಂದು ಈ ವರದಿಯ[...] ನಮೂದಿಸಲಾಗಿದೆ. ಈ ವರದಿಯ ಪ್ರಕಾರ ಬೆಳ್ತಂಗ[...] ತಾಲೂಕಿನ ಉಜಿರೆ ಗ್ರಾಮದಲ್ಲಿ 87 ಸಬ್‌ಡಿವಿಜನ್‌ಗಳ[...] ಭೂಮಿ ಹೊಂದಿದ್ದರೂ 16 ಸಬ್‌ಡಿವಿಜನ್‌ಗಳನ್ನು ಮಾ[...] ಕಾಣಿಸಿದ್ದಾರೆ. ಹಾಗೆಯೇ ಧರ್ಮಸ್ಥಳದಲ್ಲಿ 466ರ ಪೈ[...] 212 ಮಾತ್ರ, ತೋಟತ್ತಾಡಿಯಲ್ಲಿ 130ರ ಪೈಕಿ ಕಾಣಿಸಿ[...] 48. ಚಿಬಿದ್ರೆಯಲ್ಲಿ 30ರ ಪೈಕಿ ಕಾಣಿಸಿದ್ದು [...] ಚಾರ್ಮಾಡಿಯಲ್ಲಿ 32ರಲ್ಲಿ ಕಾಣಿಸಿದ್ದು 4 ಮಾತ್ರ!!

ಮತ್ತೊಂದು ಅಂಶವನ್ನು ಗಮನಿಸುವುದಾದರೆ ವೀರೇ[...] ಹೆಗ್ಗಡೆಯವರ ತಾಯಿ ಶ್ರೀಮತಿ ರತ್ನಮ್ಮ ಹೆಗ್ಗಡ್ತಿಯವ[...] ಚಾರ್ಮಾಡಿ ಗ್ರಾಮದ H:NO.39ರಲ್ಲಿ ಸ್ವ[...] ಕೃಷಿಮಾಡುವ ಭೂಮಿಯನ್ನು ಘೋಷಣಾ ಪತ್ರದ[...] ಮರೆಮಾಡಲಾಗಿದೆ. ಇಂತಹ ಪ್ರಮುಖ ಅಂಶಗಳನ[...] ಸಹಾಯಕ ಕಮಿಷನರ್ ಹಾಗೂ ಭೂನ್ಯಾಯ ಮಂಡಳಿ[...] ಅಧ್ಯಕ್ಷ ಸ್ಥಾನದಲ್ಲಿ ವಕ್ಕರಿಸಿದ್ದ ಸುಂದರ್ ಭಟ್ ಗಣನೆ[...] ತೆಗೆದುಕೊಳ್ಳದೇ ತನ್ನ ಅಂತಿಮ ಆದೇಶ ಹೊರಡಿಸಿದ್ದಾ[...]

1987ರ ಸ್ಪೆಷಲ್ ತಹಸೀಲ್ದಾರ್ ವರದಿ

ಈ ಪ್ರಕರಣದ ಬಗ್ಗೆ ಸಾಕಷ್ಟು ಒಳಸುಳಿವುಗಳ[...] ನೀಡುವ, ಬೆಳ್ತಂಗಡಿ ತಾಲೂಕಿನ ಸ್ಪೆಷಲ್ ತಹಸೀಲ್ದಾರ್‌ರವ[...] ತಾರೀಕು 11-03-1987 ರಂದು ದಕ್ಷಿಣ ಕನ್ನ[...] ಜಿಲ್ಲಾಧಿಕಾರಿಗಳಿಗೆ ಈ ಪ್ರಕರಣದ ಬಗ್ಗೆ ಬರೆದಿರು[...] ಪತ್ರ ಹೀಗಿದೆ: "ದಿನಾಂಕ 12.10.84ರಂದು [...] ಕಚೇರಿಯಿಂದ ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಬರೆ[...] ಪತ್ರವನ್ನು ಪರಿಶೀಲಿಸುವಾಗ ಶ್ರೀ ಹೆಗ್ಗಡೆಯವರ ಹೆಸರಿನ[...] ಬೆಂಗಳೂರು, ಮಂಡ್ಯ, ಹಾಸನ, ಶಿವಮೊಗ್ಗ, ತೀರ್ಥಹ[...] ಚಿಕ್ಕಮಗಳೂರುಗಳಲ್ಲೂ ಸ್ಥಿರಾಸ್ತಿಗಳಿರುವುದಾಗಿಯೂ, [...] ಎಲ್ಲಾ ಆಸ್ತಿಗಳನ್ನು ಅವರು ತಮ್ಮ ಘೋಷಣೆಯ[...] ಸೇರಿಸದಿರುವುದರಿಂದ ಅವುಗಳ ಬಗ್ಗೆ ಪೂರ[...] ಮಾಹಿತಿಯನ್ನು ಒದಗಿಸುವಂತೆಯೂ ಶ್ರೀ ಹೆಗ್ಗಡೆಯವ[...] ಬಹಳಷ್ಟು ಬಾರಿ ಬರೆಯಲಾಗಿದೆ. ಆದರೂ ಅವರಿ[...] ಈ ಮಾಹಿತಿಗಳು ಈ ತನಕ ಕಚೇರಿಗೆ ಬಂದಿರುವುದಿ[...] ಈ ಘೋಷಣೆಯ ಇತ್ಯರ್ಥದಲ್ಲಿ ಈಗಾಗಲೇ ಸಾಕ[...] ವಿಳಂಬವಾಗಿರುತ್ತದೆ. ಈಗ ಪುನಃ ಅವರಿ[...] ನೆನಪೋಲೆಯನ್ನು ಕಳುಹಿಸಲಾಗಿದೆ."

ಅಂದರೆ ಇಲ್ಲಿ ಒಂದು ವಿಷಯ ಸ್ಪಷ್ಟ. ಈ ಮೇಲ್ಕ[...] 4671 ಎಕರೆ ಭೂಮಿಯಲ್ಲದೆ ಇನ್ನೂ ಸಾಕ[...] ಭೂಮಿಯನ್ನು ಹೆಗ್ಗಡೆ ಕುಟುಂಬ ಹೊಂದಿತ್ತು ಹಾ[...] ಆ ಬಗ್ಗೆ ಮಾಹಿತಿ ಒದಗಿಸುವಂತೆ ಅಧಿಕಾರಿಗಳು ಪದೇಪ[...] ಕೇಳಿದರೂ ಮಾನ್ಯ ಧರ್ಮಾಧಿಕಾರಿಗಳು ಮಾಹಿ[...] ಒದಗಿಸಲಿಲ್ಲ. ಯಾರಾದರೂ ತಮ್ಮ ಆಸ್ತಿ ಪಾಸ್ತಿಯ ಮಾಹಿ[...] ಒದಗಿಸದೆ ತಪ್ಪಿಸಿಕೊಳ್ಳಲು ಕಾರಣವೇನಿರಬಹುದು? ಅ[...] ಹುಣ್ಣಿಗೆ ಕನ್ನಡಿ ಬೇಕಿಲ್ಲ ಬಿಡಿ. ಅದು ಯಾರಿಗಾದ[...] ಅರ್ಥವಾಗುವಂಥದ್ದೇ.

1992ರ ತಹಶೀಲ್ದಾರ್ ಚೆನ್ನಗಂಗಪ್ಪನವರ ವರದಿ

ಬೆಳ್ತಂಗಡಿ ತಹಶೀಲ್ದಾರರಾಗಿದ್ದ ಪ್ರಾಮಾಣಿಕತೆ ಮ[...] ಜನಪರ ಕಾಳಜಿಗಳಿಗೆ ಹೆಸರಾಗಿದ್ದ ಈ.ಚೆನ್ನಗಂಗಪ್ಪನವ[...] ದಿನಾಂಕ: 22-07-1992ರಂದು ಪುತ್ತೂರು ಸಹಾ[...] ಕಮಿಷನರ್ ಆಗಿದ್ದ ಬಿ.ಬಸವರಾಜು ಅವರಿಗೆ ಸಲ್ಲಿಸಿ[...] ಅಧಿಕೃತ ವರದಿ ಹಾಗೂ ಶಿಫಾರಸ್ಸು ಪತ್ರ ಈ ಪ್ರಕರ[...] ಮತ್ತೊಂದು ಆಯಾಮವನ್ನು ತೆರೆದಿಡುತ್ತದೆ. ವೀರೇ[...] ಹೆಗ್ಗಡೆ ಮತ್ತು ಕುಟುಂಬದವರು ಕೆಲವು ಅಧಿಕಾರಿ[...] ನೆರವಿನೊಂದಿಗೆ ಕಾನೂನುಬಾಹಿರವಾಗಿ ಜಮೀನು ಮಾ[...] ಮಾಡುತ್ತಿರುವ ಕೃತ್ಯದ ವಿರುದ್ಧ ಸ್ವತಃ ಅಂದಿನ ತಹಶೀಲ[...] ಅಧಿಕೃತವಾಗಿ ಹೀಗೆ ನಮೂದಿಸಿದ್ದಾರೆ:

ಈ ವಿವಾದದ ಹಿನ್ನೆಲೆ ಏನು?


ಇತಿಹಾಸದುದ್ದಕ್ಕೂ ದೇವರು, ಧರ್ಮದ ಹೆಸರಿನಲ್ಲಿ ಅಥವಾ ಸೈನ್ಯದ ಬಲದಿಂದ ಅಥವಾ ತಮ್ಮದೇ ತೋಳ್ಬಲದಿಂದ ಪಾಳೇಗಾರೀ ಶಕ್ತಿಗಳು ಭೂಮಿಯನ್ನು ಕಬ್ಜಾ ಮಾಡಿಕೊಂಡು ದೀನದಲಿತರನ್ನು ಗೇಣಿದಾರರನ್ನು ಇನ್ನಿಲ್ಲದಂತೆ ಶೋಷಿಸುತ್ತಿದ್ದದ್ದು ತಿಳಿದ ಸಂಗತಿ. ಸ್ವಾತಂತ್ರ್ಯಾನಂತರದಲ್ಲಿ ನಡೆದ ಅನೇಕ ಹೋರಾಟಗಳ ಫಲವಾಗಿ ಇಂಥಾ ಶೋಷಣೆಗೆ ಕೊನೆ ಹಾಡುವ ಉದ್ದೇಶದಿಂದ ಭೂಮಿತಿ ಕಾಯ್ದೆ ಜಾರಿಗೆ ಬಂತು.

ಅದರ ಪ್ರಕಾರ ಒಂದು ಕುಟುಂಬ ಗರಿಷ್ಠ 56 ಎಕರೆ ಕೃಷಿ ಭೂಮಿಯನ್ನು ಮಾತ್ರ ಹೊಂದತಕ್ಕದೆಂದು ಮಿತಿಗೊಳಿಸಲಾಯ್ತು. ಮಿಗತೆ ಭೂಮಿಯನ್ನು ಸರ್ಕಾರ ವಶಕ್ಕೆ ಪಡೆದುಕೊಂಡು ಗೇಣಿದಾರರಿಗೆ ಅಥವಾ ಇನ್ನಿತರೆ ಭೂರಹಿತ ಕೂಲಿಕಾರ ಕುಟುಂಬಗಳಿಗೆ ಹಂಚಿಕೆ ಮಾಡಬೇಕೆಂಬುದು ಸದರಿ ಕಾನೂನಿನ ಮುಖ್ಯ ತಿರುಳು. ಇಂಥಾ ಭೂವಿವಾದಗಳನ್ನು ಇತ್ಯರ್ಥಪಡಿಸಲಿಕ್ಕೆಂದೇ ಪ್ರತಿಯೊಂದು ತಾಲೂಕಿನಲ್ಲೂ 'ಭೂನ್ಯಾಯ ಮಂಡಳಿ' (Land Tribunal) ಎಂಬ ಅಧಿಕೃತ ಸರ್ಕಾರಿ ಸಂಸ್ಥೆಯೊಂದು ನಿಯೋಜಿತಗೊಂಡಿರುತ್ತದೆ. ಸ್ಥಳೀಯ ಶಾಸಕರು ಹಾಗೂ ಅಧಿಕಾರಿಗಳೂ ಈ ಸಂಸ್ಥೆಯ ಭಾಗವಾಗಿರುತ್ತಾರೆ.


ಹೀಗೆ ಬೆಳ್ತಂಗಡಿ ತಾಲೂಕಿನಲ್ಲೂ ಒಂದು ಭೂನ್ಯಾಯಮಂಡಳಿ ಇದೆ. 1974ರಲ್ಲಿ ಈ ಮಂಡಳಿಯಲ್ಲಿ 4671 ಎಕರೆ ಒಡೆತನದ ವೀರೇಂದ್ರ ಹೆಗ್ಗಡೆ ಕುಟುಂಬದ ಪ್ರಕರಣ ದಾಖಲಾಯ್ತು. ಅಲ್ಲಿಂದ ಇಲ್ಲಿಯವರೆಗೆ ಹತ್ತಾರು ಮಂದಿ ಅಧಿಕಾರಿಗಳು, ಶಾಸಕರು ಬದಲಾಗಿದ್ದಾರೆ. ಆದರೆ 2012ರಲ್ಲಿ ಒಂದು ಕಾಟಾಚಾರದ ಏಕಪಕ್ಷೀಯ ಪೂರ್ವ ನಿರ್ಧರಿತ-ತೀರ್ಪು ಹೊರಡಿಸುವವರೆಗೆ. ಅಂದರೆ 38 ವರ್ಷಗಳ ವ್ಯಥಾ ಕಾಲಹರಣ ಮಾಡಿದೆ.

ಈ ಪ್ರಕರಣದ ಬಗ್ಗೆ ಯಾವುದೇ ಪರಿಣಾಮಕಾರಿ ತನಿಖೆಯನ್ನೂ ಕೈಗೊಳ್ಳದೇ, ಅಧಿಕೃತ ಆದೇಶವನ್ನೂ ಹೊರಡಿಸದೆ ಕಾಲಕ್ಷೇಪ ಮಾಡಿರುವುದಕ್ಕೆ ಏನು ಹೇಳಬೇಕು? ಇಂಥಾ ಚಾರಿತ್ರಿಕ ವಿಳಂಬ ವೀರೇಂದ್ರ ಹೆಗ್ಗಡೆ ಪ್ರಕರಣದ ಒಂದು ವಿಶೇಷವೇ ಸರಿ. ಇಂಥಾ ವಿಳಂಬವನ್ನು ಸಮರ್ಥನೆ ಮಾಡಿಕೊಳ್ಳುವ ಧೈರ್ಯ ವೀರೇಂದ್ರ ಹೆಗ್ಗಡೆಯವರಿಗಾಗಲಿ ಅಥವಾ ಸಂಬಂಧಿತ ಅಧಿಕಾರಿ ವರ್ಗಕ್ಕಾದರೂ ಇದೆಯೆ?

ಇದು ಗಣ್ಯಾತಿಗಣ್ಯರೆನಿಸಿಕೊಂಡಿರುವ ವೀರೇಂದ್ರ ಹೆಗ್ಗಡೆಯವರ ಪ್ರಭಾವದ ಪರಿಣಾಮ ಮಾತ್ರವೇ ಅಲ್ಲ; ಅವರ ಕುಟುಂಬಕ್ಕೆ ಹಿಂದಿನಿಂದಲೂ ಇಂಥಾ ಪ್ರಭಾವಳಿಯಿದೆ. ರಾಜಕಾರಣಿಯೂ ಆಗಿದ್ದ ಅವರ ತಂದೆ ರತ್ನವರ್ಮ ಹೆಗ್ಗಡೆಯವರು ಶಾಸಕರೂ ಆಗಿದ್ದರು ಎಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಲೇಬೇಕು.



1987ರ ಸ್ಪೆಷಲ್ ತಹಸೀಲ್ದಾರ್ ವರದಿ



1992ರ ತಹಶೀಲ್ದಾರ್ ಚನ್ನಗಂಗಪ್ಪನವರ ವರದಿ

ಸದರಿ ಘೋಷಣೆದಾರರು (ವೀರೇಂದ್ರ ಹೆಗ್ಗಡೆ) ದಲ್ಲಿ ತಾಲೂಕು ಕಚೇರಿ ಬಳಿ ಹೊಂದಿರುವ ಾಳುವ ಭೂಮಿಯನ್ನು ಸೆಂಟ್ಸ್ ಒಂದಕ್ಕೆ 6000 8000 ರೂಪಾಯಿಗೆ "ಮೂಲ ಗೇಣಿ" ನೆಲೆಯಲ್ಲಿ ಂದಣಿ ಮಾಡಿಸಿ, 99 ವರ್ಷಗಳ ಕಾಲ ಲೀಸ್ ಮಲ್ಲಿ ಮಾರುತ್ತಿರುವುದಾಗಿ ತಿಳಿದು ಬಂದಿದೆ. ಶ್ರೀ ಂದ್ರ ಹೆಗ್ಗಡೆಯವರ ಹೆಚ್ಚುವರಿ ಭೂಮಿಯ ಘೋಷಣೆ ರ್ಣಯವಾಗದಿರುವಾಗ ಮಾರಾಟ ಮಾಡುತ್ತಿರುವುದು ಾನು ವಿರುದ್ಧವಾಗಿರುತ್ತದೆ."

ವೀರೇಂದ್ರ ಹೆಗ್ಗಡೆಯವರೊಂದಿಗೆ ಶಾಮೀಲಾಗಿ ಮಿಯ ದಾಖಲೆ ಪತ್ರಗಳನ್ನು ತಿದ್ದುಪಡಿ ಮಾಡಿರುವ ಾರಿಗಳ ಬಗ್ಗೆಯೂ ಇದೇ ಪತ್ರದಲ್ಲಿ ತಹಸೀಲ್ದಾರ್ ಂದಿಸಿದ್ದಾರೆ: "ಮೂಲಗೇಣಿ ಎಂಬ ನೋಂದಣಿ ನನ್ನು ಆಧಾರವಾಗಿಟ್ಟುಕೊಂಡು ಅಲ್ಲಿಯ ಕಂದಾಯ ಕ್ಷಕರು ಪಹಣಿ ಕಾಲಂ 11ರಲ್ಲಿ 'ಮೂಲಗೇಣಿ' ಎ ದಾಖಲು ಮಾಡುತ್ತಿರುವುದಾಗಿ ವರದಿಯಾಗಿದೆ. ಭೂಸುಧಾರಣಾ ಕಾಯಿದೆ ಪ್ರಕಾರ 1974ರ ನಂತರ ವುದೇ ವಿಧದ ಗೇಣಿಯನ್ನು ಪಹಣಿಯಲ್ಲಿ ದಾಖಲು ಡುವಂತಿಲ್ಲ, ಈ ರೀತಿ ಗೇಣಿ ನೀಡಿದ ಜಮೀನು ಸರ್ಕಾರಕ್ಕೆ ಮುಟ್ಟುಗೋಲು ಹಾಕಬೇಕಾಗಿರುತ್ತದೆ. 'ಮೂಲಗೇಣಿ' ನೋಂದಣಿ ಪತ್ರದಲ್ಲಿ 99 ವರುಷದ ಎಂದಿದೆ. ಈ ರೀತಿಯ ಲೀಸ್ ಭೂಮಿ ಸುಧಾರಣಾ ಕಾಯಿದೆ ಸೆಕ್ಷನ್ 44ರ ಮೇರೆಗೆ ಸರಕಾರಕ್ಕೆ ಟ್ಟುಗೋಲು ಹಾಕಬೇಕಾಗಿರುತ್ತದೆ... ಆದ್ದರಿಂದ ಾನು ವಿರುದ್ಧವಾಗಿ ಪಹಣಿಯಲ್ಲಿ ಮಾಡುತ್ತಿರುವ ಖಲೆಗಳನ್ನು ರದ್ದು ಮಾಡಲು ಹಾಗೂ ಕಾನೂನು ಿಸಿ ಆಗುತ್ತಿರುವ ಮಾರಾಟವನ್ನು ತಪ್ಪಿಸಿ 'ಸೆಕ್ಷನ್ ಮೇರೆಗೆ' ತೀರ್ಪು ನೀಡಲು ಅನುಕೂಲಕರ ವರಣ ನಿರ್ಮಿಸಬೇಕೆಂದು ಕೇಳಿಕೊಳ್ಳುತ್ತೇನೆ."

ಬೆಳ್ತಂಗಡಿ ತಹಸೀಲ್ದಾರ್ ಅವರಂಥ ನಿಷ್ಠುರ ಾರಿಗಳಿಗೆ ಸಂಪೂರ್ಣ ಅಧಿಕಾರ ನೀಡಿದ್ದ ಪಕ್ಷದಲ್ಲಿ ಾರು ಎಕರೆಗಳ ಈ ಕಾನೂನುಬಾಹಿರ ಭೂಮಿಯನ್ನು ಟ್ಟುಗೋಲು ಹಾಕಿಕೊಂಡು ದಶಕಗಳೇ ಕಳೆದಿರುತ್ತಿದ್ದವು. ಾತು ಬೇರೆ ಕಾನೂನಿನ ಕಣ್ಣಿಗೆ ಮಣ್ಣೆರಚಿ, ಭೂಮಿಯ ನ್ನು ಪ್ರಭಾವಿಗಳ ಕೈಯಲ್ಲೇ ಉಳಿಸಲು ಕಳ್ಳ ಾರಿಗಳ ಕೂಟ ಮತ್ತೊಂದು ತಂತ್ರವನ್ನು ಹೆಣೆಯಿತು. ಪರಿಷ್ಕೃತ ಘೋಷಣೆ ಎಂಬ ಮತ್ತೊಂದು ಸುಳ್ಳುಗಳ !

1992ರ ಪರಿಷ್ಕೃತ ಘೋಷಣೆ

ಭೂನ್ಯಾಯ ಮಂಡಳಿಯ ಸೂಚನೆಯ ಮೇರೆಗೆ ಒಂದು ಷ್ಕೃತ ಘೋಷಣೆ'ಯನ್ನು ತಾ.11.10.1992ರಲ್ಲಿ ಹೆಗ್ಗಡೆ ಂಬಿಕರು ಸಲ್ಲಿಸಿರುವುದು ಕಂಡುಬಂದಿದೆ. 1974ರಲ್ಲಿ ಲ ಘೋಷಣೆ ಸಲ್ಲಿಸಿ ಬರೋಬ್ಬರಿ 18 ವರ್ಷಗಳ ಮತ್ತೊಂದು ಪರಿಷ್ಕೃತ ಘೋಷಣೆ! ಆದರೆ ಇದಕ್ಕೆ ಯಲ್ಲಿ ಅವಕಾಶವೂ ಇರುವುದಿಲ್ಲ, ಈ ಪರಿಷ್ಕೃತ ಷಣೆಯ ಪ್ರಕಾರ ಒಂದಷ್ಟು ಭೂಮಿಯನ್ನು ರ್ತಿತ ಭೂಮಿಯೆಂದೂ, ಮತ್ತಷ್ಟು ಭೂಮಿಯನ್ನು ಡೀಮ್ಡ್ ಪರಿವರ್ತಿತ ಭೂಮಿಯೆಂದೂ, ಮಗದಷ್ಟು ಭೂಮಿಯನ್ನು ಪ್ಲಾಂಟೇಷನ್ ಭೂಮಿಯೆಂದೂ, ಇನ್ನೊಂದಿಷ್ಟು ಭೂಮಿಯನ್ನು ತೋಟಗಾರಿಕೆಯಡಿಯಲ್ಲಿ, ಅದೂ ಸಾಲದೆಂಬಂತೆ ಕೃಷಿ ಯೋಗ್ಯವಲ್ಲದ ಭೂಮಿಯೆಂಬಿತ್ಯಾದಿ ವರ್ಗೀಕರಣ ಮಾಡಿ ಒಟ್ಟು ಭೂಮಿ ತಮ್ಮ ಕಬ್ಜೆಯಲ್ಲೇ ಉಳಿಸಿಕೊಳ್ಳಲು ಏನು ಬೇಕೋ ಆ ಎಲ್ಲ ಷಡ್ಯಂತ್ರವನ್ನೂ ನಡೆಸಿರುವುದು ಮೇಲುನೋಟಕ್ಕೆ ಕಂಡು ಬರುತ್ತದೆ.

ಪರಿವರ್ತನೆ ಆದ ಭೂಮಿ

ಈ ಪರಿಷ್ಕೃತ ಘೋಷಣೆ ಪ್ರಕಾರ 208 ಎಕ್ರೆ ಭೂಮಿ ಪರಿವರ್ತನೆಯಾಗಿದೆ. ಹಾಗಾದರೆ ಈ ಭೂಪರಿವರ್ತನೆ ಆಗಿದ್ದು ಯಾವಾಗ? ಪರಿವರ್ತನೆಯಾದ ಭೂಮಿಯ ದಾಖಲಾತಿಗಳಾದರೂ ಎಲ್ಲಿವೆ? ಭೂನ್ಯಾಯಮಂಡಳಿಯಲ್ಲಿ ಪ್ರಕರಣ ಬಾಕಿಯಿರುವಾಗ ಕಾನೂನುಬಾಹಿರ ಪರಿವರ್ತನೆ ಹೇಗೆ ಸಾಧ್ಯವಾಯಿತು? ಈ ಯಾವೊಂದು ಅಂಶವನ್ನೂ ಎಳ್ಳಷ್ಟಾದರೂ ಪರಿಶೀಲನೆ ಮಾಡುವ ಗೋಜಿಗೆ ಹೋಗದೆ ಒಪ್ಪಿಕೊಂಡಿರುವ ಭೂನ್ಯಾಯ ಮಂಡಳಿ ಯಾವ ದೇಶದ ಕಾನೂನಿನಡಿ ಕೆಲಸ ಮಾಡುತ್ತಿದೆ?

ಡೀಮ್ಡ್ ಪರಿವರ್ತಿತ ಭೂಮಿ

334.93 ಎಕ್ರೆ ಭೂಮಿಯನ್ನು "ಕಟ್ಟಡಗಳು, ರಸ್ತೆ ಇತ್ಯಾದಿಗಳಿಂದ ಕೂಡಿರುವ ಕೃಷಿ ಭೂಮಿಯೆಂದು ಪರಿಗಣಿಸಲಾಗದ ಡೀಮ್ಡ್ ಪರಿವರ್ತಿತ ಜಮೀನು" ಎಂಬುದು ಘೋಷಣೆದಾರರ ಹೇಳಿಕೆ. ಆದರೆ ಈ ಸ್ಥಳಗಳ ತನಿಖೆ ಮಾಡದೇ, ದಾಖಲೆ ಪರಿಶೀಲಿಸದೇ, ಘೋಷಣೆದಾರರನ್ನು ವಿಚಾರಣೆ ಮಾಡದೇ ಇದನ್ನು ಭೂನ್ಯಾಯ ಮಂಡಳಿಯು ಸಾರಾಸಗಟಾಗಿ ಒಪ್ಪಿರುವುದು ಯಾರ ಹಿತವನ್ನು ಕಾಪಾಡಲಿಕ್ಕೆ?

1974ರಲ್ಲಿ ಈ ಎಲ್ಲಾ ಭೂಮಿಗಳು ಕೃಷಿಭೂಮಿಯಾಗಿತ್ತು ಎಂಬ ವಿಚಾರವನ್ನು ನಾವು ಪರಿಗಣನೆಗೆ ತೆಗೆದುಕೊಳ್ಳಲೇಬೇಕು. ಈಗಲೂ ಕೆಲವೇ ಕಟ್ಟಡ ಹೊರತುಪಡಿಸಿ 90%ಕ್ಕೂ ಹೆಚ್ಚು ಕೃಷಿ ಭೂಮಿಯಾಗಿದೆ ಎಂದು ಸೋಮನಾಥ ನಾಯಕ್ ತಮ್ಮ ದೂರಿನಲ್ಲಿ ದಾಖಲಿಸಿದ್ದಾರೆ.

ಪ್ಲಾಂಟೇಷನ್ ಜಮೀನು

431.235 ಎಕ್ರೆ ಭೂಮಿ (ಈ ಪೈಕಿ 316 ಎಕ್ರೆ ಮೂಡುಗೆರೆ ತಾಲೂಕಿನಲ್ಲಿ) ಎಂದು ನಮೂದಿಸಿದ ಸ್ಥಳದ ಪೈಕಿ ಮೂಡುಗೆರೆ ತಾಲೂಕಿನಲ್ಲಿದ್ದ ಸುಮಾರು 100 ಎಕ್ರೆ ಮಾತ್ರ 1974ರಲ್ಲಿ ಪ್ಲಾಂಟೇಷನ್ ಆಗಿತ್ತು. ಮಿಕ್ಕ ಸ್ಥಳ ಅಡಿಕೆ, ಭತ್ತ ಬೆಳೆಯುವ ಕೃಷಿಭೂಮಿಯಾಗಿತ್ತು. ಆರ್‌ಟಿಸಿಗಳಲ್ಲೂ ಈ ಅಂಶ ದಾಖಲಾಗಿದೆ. ಆದರೆ ಸಾರಾಸಗಟಾಗಿ ಇದನ್ನು ಪ್ಲಾಂಟೇಷನ್ ಎಂದು ಭೂನ್ಯಾಯ ಮಂಡಳಿ ಪರಿಗಣಿಸಿರುವುದು ಯಾವ ನಿಯಮಾವಳಿ ಅಡಿಯಲ್ಲಿ? ಘೋಷಣೆದಾರರು "ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಭೂನ್ಯಾಯ ಮಂಡಲಿಗೆ ಹಾಜರುಪಡಿಸಿದ್ದಾರೆಯೇ, 431 ಎಕ್ರೆ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಮಾಡಿದ್ದಾರೆಯೇ ಎಂಬ ಬಗ್ಗೆ ಆದೇಶದಲ್ಲಿ ಉಲ್ಲೇಖ ಇಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಪ್ಲಾಂಟೇಶನ್' ಎಂಬ ಭೂ ವರ್ಗೀಕರಣ ಇರಲಿಲ್ಲ, ಗುಂಜ, ಪುಂಜ, ಬಾಗಾಯ್ತು ಎಂದು ಮಾತ್ರ ಇತ್ತು, 1974ರಲ್ಲಿ ಬೆಳ್ತಂಗಡಿಯಲ್ಲಿ ಘೋಷಣೆದಾರರು ಹೊಂದಿದ್ದ ಭೂಮಿ 'ಪ್ಲಾಂಟೇಶನ್' ಎಂದು ಪರಿಗಣಿಸಿದ್ದು ಯಾವ ಆಧಾರದಲ್ಲಿ ಎಂದು ಆದೇಶದಲ್ಲಿ ಉಲ್ಲೇಖ, ಸಮರ್ಥನೆ ಇಲ್ಲ, ಮಾಹಿತಿ ಹಕ್ಕಿನಲ್ಲಿ ನಾವು ಈ ಸಂಬಂಧ ಕೇಳಿದ ಹಲವು ದಾಖಲೆಗಳು ಸಿಕ್ಕಿಲ್ಲ, ಪ್ರಾಯಶಃ ಕಾಣೆ ಮಾಡಲಾಗಿದೆ!" ಎಂಬ ಅರ್ಜಿದಾರರ ಆರೋಪವನ್ನು ತಳ್ಳಿಹಾಕುವುದು ಹೇಗೆ ಸಾಧ್ಯ?

ಭೂಮಿಯ ಲೆಕ್ಕಾಚಾರದಲ್ಲಿ ವ್ಯತ್ಯಾಸ

ಸಾವಿರಾರು ಎಕರೆ ಭೂಮಿಯ ಬಗ್ಗೆ ತಮಗೆ ಅನುಕೂಲಕರವಾದ ಲೆಕ್ಕಾಚಾರವನ್ನು ತಯಾರು ಮಾಡುವಾಗ ವಿಸ್ತೀರ್ಣದಲ್ಲಿ ಒಂದಕ್ಕೊಂದು ತಾಳೆಯೇ ಇಲ್ಲದೆ ನೂರಾರು ಎಕರೆ ಭೂಮಿ ವ್ಯತ್ಯಾಸವಾಗಿರುವ ಅಂಶವನ್ನು ನಾಯಕ್ ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರ ಪ್ರಕಾರ "ಯಾವುದೇ ರೀತಿಯಿಂದ ಲೆಕ್ಕಾಚಾರ ಮಾಡಿದರೂ ವ್ಯತ್ಯಾಸವಂತೂ ಕಾಣುತ್ತಿದೆ! ಇದನ್ನು ತಾಂತ್ರಿಕ ದೋಷ, ಕೂಡಿಸುವಿಕೆಯಲ್ಲಿ ತಪ್ಪು ಎಂದು ಹೇಳಲಾಗದು. ಉದ್ದೇಶಪೂರ್ವಕವಾಗಿ ಮಾಡಿರುವುದಾಗಿ ಅನ್ನಿಸುತ್ತದೆ."

1974ರ ಬಳಿಕ ಖರೀದಿಸಿದ ಭೂಮಿ ಎಷ್ಟು?

1974ರಲ್ಲಿ ಘೋಷಣಾ ಪತ್ರ ಸಲ್ಲಿಸಿದ ಬಳಿಕ 2012ರಲ್ಲಿ ಆದೇಶ ಆಗುವ ಮೊದಲು ಘೋಷಣೆದಾರರು ಭೂಮಿ ಖರೀದಿಸುವಂತಿಲ್ಲ, ಆದರೆ ಮೈಸೂರು ಜಿಲ್ಲೆಯ ಆಲನಹಳ್ಳಿಯಲ್ಲಿ 1990-91ರಲ್ಲಿ ಒಟ್ಟು 42.22 ಎಕ್ರೆ ಭೂಮಿ ಖರೀದಿಸಿರುವುದಾಗಿ ಮಾಹಿತಿ ಹಕ್ಕಿನಲ್ಲಿ ಪಡೆದ ಟಿಪ್ಪಣಿಯಲ್ಲಿ ಕಂಡುಬರುತ್ತದೆ. ಮತ್ತೊಂದು ದಾಖಲೆಯಲ್ಲಿ 343.27 ಎಂಬ ಲೆಕ್ಕವೂ ಇದೆ. ಆದರೆ ಈ ಬಗ್ಗೆ ಹೆಚ್ಚಿನ ವಿವರಗಳು ಗೊತ್ತಿಲ್ಲ! ಘೋಷಣೆದಾರರ ತಮ್ಮಂದಿರಾದ ಶ್ರೀ ಹರ್ಷೇಂದ್ರ, ಶ್ರೀ ಸುರೇಂದ್ರ, ಶ್ರೀ ರಾಜೇಂದ್ರ ಇವರು ಮೂಡಿಗೆರೆ ತಾಲೂಕಿನ ಗೋಣಿಬೀಡು ಹೋಬಳಿಯಲ್ಲಿ ಒಟ್ಟು 106.81 ಎಕ್ರೆ ಹೊಂದಿದ ಟಿಪ್ಪಣಿ ಮಾಹಿತಿ ಹಕ್ಕಿನಲ್ಲಿ ಸಿಕ್ಕಿದೆ.

ಇವುಗಳ ಬಗ್ಗೆ ಹಾಗೂ ಈ ಅವಧಿಯಲ್ಲಿ ಇವರುಗಳು ಖರೀದಿಸಿದ ಇತರ ಸ್ಥಳಗಳ ಬಗ್ಗೆ ಭೂನ್ಯಾಯಮಂಡಳಿ ತನಿಖೆ ಮಾಡುವುದು ಹಾಗಿರಲಿ; ಕನಿಷ್ಠ ಈ ಬಗ್ಗೆ ಆದೇಶದಲ್ಲಿ ಉಲ್ಲೇಖವನ್ನೂ ಮಾಡಿಲ್ಲ. ಕಾನೂನು ಪಾಲಿಸುವುದಾದರೆ, 1974ರ ಬಳಿಕ 6.3.2012ರ ತನಕ ಘೋಷಣೆದಾರರು ಮತ್ತು ಕುಟುಂಬದವರು ಸ್ಥಳ ಖರೀದಿಸಿಲ್ಲ ಎಂದು ಘೋಷಣೆದಾರರಿಂದ ಪ್ರಮಾಣಪತ್ರ ಸ್ವೀಕರಿಸಬೇಕು. ಒಂದು ವೇಳೆ ಹಾಗೆ ಅಕ್ರಮವಾಗಿ ಖರೀದಿ ಮಾಡಿದ್ದ ಪಕ್ಷದಲ್ಲಿ ಅಂಥಾ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಇವರು ಹೊಂದಿರುವ/ ಖರೀದಿಸಿರುವ / ದಾನಪತ್ರರೂಪದಲ್ಲಿ ಪಡೆದ ಭೂಮಿಯ ವಿವರಗಳನ್ನೂ ಸರಕಾರ ಪಡೆದು ಕಾನೂನು ಕ್ರಮ ಜರುಗಿಸಬೇಕಾದ ತುರ್ತು ಅಗತ್ಯವಿದೆ.

ಹೀಗೆ ಈ ಇಡೀ ಪ್ರಕರಣದಲ್ಲಿ ಒಂದಲ್ಲ ಎರಡಲ್ಲ; ಸಾಲು ಸಾಲು ಕಾನೂನು ಉಲ್ಲಂಘನೆಯಾಗಿರುವುದು ಮೇಲುನೋಟಕ್ಕೆ ಕಂಡುಬರುವ ವಿಚಾರ.


ಮೇಲಿನೆಲ್ಲ ಅಂಶಗಳನ್ನು ತನಿಖೆಮಾಡಿದ ಬಗ್ಗೆ ಭೂನ್ಯಾಯ ಮಂಡಳಿ ವಿವರಿಸುವುದಿರಲಿ, ಇದರ ಉಲ್ಲೇಖವನ್ನೂ ಮಾಡಿಲ್ಲ, ಇದರ ಹಿಂದಿರುವ ಉದ್ದೇಶ ಸ್ಪಷ್ಟ: ಘೋಷಣೆದಾರರ ಪರವಾಗಿ ಇವರು ವರ್ತಿಸಿದ್ದಾರೆ ಹಾಗೂ ತನ್ಮೂಲಕ ಸರಕಾರದ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ಮಾಡಿದ್ದಾರೆ. ದೀನ ದಲಿತರಿಗೆ, ಭೂರಹಿತರಿಗೆ ಹಂಚಬೇಕಾಗಿದ್ದ ಸಾವಿರಾರು ಎಕರೆ ಭೂಮಿಯನ್ನು ಪಟ್ಟಭದ್ರ ಭೂಮಾಲಿಕರ ಕೈಗೇ ಕೊಟ್ಟು ಅಧಿಕಾರದ ದುರುಪಯೋಗ ಮಾಡಿದ್ದಾರೆ.

ಈಗ ಸರ್ಕಾರದ ಮುಂದೆ ಉಳಿದಿರುವುದು ಒಂದೇ ದಾರಿ. ಪ್ರಕರಣದಲ್ಲಿ ಮಿಗತೆ ಭೂಮಿಯನ್ನು ಸರಕಾರ ಸ್ವಾಧೀನ ಪಡೆಯಲಿಕ್ಕಾಗಿ ಭೂನ್ಯಾಯಮಂಡಳಿಯ ತಪ್ಪು ಆದೇಶದ ವಿರುದ್ಧ ಮಾನ್ಯ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಬೇಕು. ಹೈಕೋರ್ಟ್‌ನಲ್ಲಿ ಸೂಕ್ತ ಆದೇಶ ಪಡೆದು ಘೋಷಣೆದಾರರಿಂದ ಮಿಗತೆ ಭೂಮಿ ಮತ್ತು ಅಕ್ರಮವಾಗಿ ಖರೀದಿಸಿದ ಭೂಮಿಗಳನ್ನು ವಶಪಡಿಸಿಕೊಂಡು ಭೂರಹಿತರಿಗೆ, ಅದರಲ್ಲೂ ದಲಿತರಿಗೆ ಭೂಮಿ ಹಂಚಲು ತುರ್ತು ಕ್ರಮಕೈಗೊಳ್ಳಬೇಕು ಎಂಬ ನಾಗರಿಕ ಸೇವಾ ಟ್ರಸ್ಟ್‌ನ ಆಗ್ರಹವನ್ನು ಈ ಸರ್ಕಾರ ಗಂಭೀರವಾಗಿ ಪರಿಗಣಿಸುವುದೇ?

ಸಾಮಾಜಿಕ ನ್ಯಾಯದ ಬಗ್ಗೆ ಕಾಳಜಿ ವ್ಯಕ್ತಪಡಿಸುವ ಮುಖ್ಯಮಂತ್ರಿಗಳು ಖುದ್ದು ಆಸಕ್ತಿವಹಿಸಿ 'ನ್ಯಾಯದ ಮುಂದೆ ಎಲ್ಲರೂ ಸಮಾನರು' ಎಂಬುದನ್ನು ಈ ಪ್ರಕರಣಕ್ಕೂ ಅನ್ವಯಿಸಲು ಮುಂದಾಗಿ ಕಾನೂನಿನ ಚೌಕಟ್ಟಿನಲ್ಲಿ ತಾರ್ಕಿಕ ಅಂತ್ಯ ಕಾಣಿಸುವುದಾದರೆ ಇದು ಕರ್ನಾಟಕದ ಚರಿತೆಯಲ್ಲಿ ಹೊಸದೊಂದು ಅಧ್ಯಾಯವನ್ನೇ ತೆರೆದಂತಾಗುತ್ತದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಶಾಸಕರಿಗೂ ಕಿಮ್ಮತ್ತಿಲ್ಲ





ಬೆಳ್ತಂಗಡಿಯ ಶಾಸಕ ವಸಂತ ಬಂಗೇರಾ ಭೂನ್ಯಾಯ ಮಂಡಳಿಯ ಸದಸ್ಯರಲ್ಲಿ ಒಬ್ಬರು. ಇವರು ಧರ್ಮಸ್ಥಳದಲ್ಲಿ ನಡೆಯುತ್ತಿರುವ ಅಕ್ರಮ/ಅನೈತಿಕ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕೆಂದು ಸರ್ಕಾರದ ಮೇಲೆ ಒತ್ತಡ ತಂದಿರುವ ವಿಚಾರ ಈ ಹಿಂದೆಯೇ ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಈಗ 6.3.2012ರಂದು ಪ್ರಕಟಿಸಲಾಗಿರುವ ಭೂನ್ಯಾಯ ಮಂಡಳಿ ಆದೇಶಕ್ಕೆ ಸದರಿ ಶಾಸಕರೂ ಸಹಿ ಹಾಕಿರುವುದು ಕಂಡುಬಂದಿಲ್ಲ. ಈ ಮಂಡಳಿಯ ಸಭೆಗಳಿಗೆ ಹಾಜರಾಗುವುದನ್ನು ಅವರು ಹಿಂದೆಯೇ ನಿಲ್ಲಿಸಿದ್ದರು ಎಂದು ಅವರ ಸಮೀಪವರ್ತಿಗಳು ಹೇಳುತ್ತಾರೆ. ಇದರ ಅರ್ಥ ಈ ಮಂಡಳಿ ಸ್ಥಳೀಯ ಶಾಸಕರ ದೃಷ್ಟಿಯಿಂದಲೂ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿತ್ತು ಎಂದಲ್ಲವೆ? ಹೀಗೆ ಸ್ಥಳೀಯ ಶಾಸಕರನ್ನೂ ಬೈಪಾಸ್ ಮಾಡಿ ಆದೇಶ ಹೊರಡಿಸಬೇಕೆಂದರೆ ಈ ಲಾಬಿ ಎಷ್ಟು ಪ್ರಬಲವಾಗಿ ಕೆಲಸ ಮಾಡಿರಬಹುದು ಎಂದು ಊಹಿಸಿ.

ಮಾಹಿತಿಹಕ್ಕಿನಲ್ಲಿ ಲಭ್ಯವಾಗಿರುವ 6.3.2012ರಲ್ಲಿ ಘೋಷಿಸಲಾದ ಅಂತಿಮ ಆದೇಶಕ್ಕಿಂತ ಮೊದಲು ಭೂನ್ಯಾಯ ಮಂಡಳಿಯು ಸಿದ್ಧಪಡಿಸಿದ್ದ 'ಕರಡು ಆದೇಶ'ದ ಮೂಲಪ್ರತಿಯು (ಸಹಿರಹಿತ) ಮತ್ತೊಂದು ಕುತೂಹಲಕಾರಿ ಅಂಶವನ್ನು ಹೊರಹಾಕುತ್ತದೆ. ಇದರ ಪ್ರಕಾರ "974.24 ಎಕ್ರೆ ಭೂಮಿ ಘೋಷಣೆದಾರರ ಹಿಡುವಳಿಗೆ ಬರತಕ್ಕದ್ದೆಂದೂ, 4 ಮೇಜರ್ ಸದಸ್ಯರನ್ನು ಕುಟುಂಬ ಹೊಂದಿರುವ ಕಾರಣ 'ಡಿ' ವರ್ಗದ 56 ಎಕ್ರೆ ಪ್ರತಿಯೊಬ್ಬರಿಗೂ ಹೊಂದಲು ಅರ್ಹತೆ ಇರುವ ಪ್ರಕಾರ 216.00 ಎಕ್ರೆ ಹೊರತುಪಡಿಸಿ ಮಿಕ್ಕ ಜಮೀನು 714.24 ಎಕ್ರೆಯನ್ನು ಸರಕಾರಕ್ಕೆ ನಿಹಿತಗೊಳಿಸುವುದೆಂದು ಆದೇಶಿಸಲಾಗಿದೆ" ಎಂಬ ಒಕ್ಕಣೆ ಇದೆ.

ಈ ಕರಡು ಆದೇಶದ ಒಕ್ಕಣೆಗೂ ಸುಂದರ ಭಟ್ಟಿ ಹೊರಡಿಸಿರುವ ಅಂತಿಮ ಆದೇಶಕ್ಕೂ ಎತ್ತಣಿಂದೆತ್ತಾ ಸಂಬಂಧವಯ್ಯಾ?





ಅಹಿಂದ ವಿರುದ್ಧ ಒಲಿಂಬ್ರಾ!

ಸದಾನಂದ ಗೌಡರಿಗೆ ರೈಲ್ವೆ ಖಾತೆ, ಅನಂತ್ ಕುಮಾರ್‌ಗೆ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ. ದಾವಣಗೆರೆಯ ಶರಣಾತಿ ಶರಣ ಸಿದ್ಧೇಶ್‌ಗೆ ನಾಗರಿಕ ವಿಮಾನಯಾನ ಖಾತೆ. ಕನ್ನಡ ತಾಯಿಯ ತಪಸ್ಸಿನ ಫಲವೋ ಕನ್ನಡ ಮಕ್ಕಳ ಪೂಜಾಫಲವೋ ಗೊತ್ತಿಲ್ಲ; ಮೋದಿ ಕನಸಿನ ಭವ್ಯ ಭಾರತದಲ್ಲಿ ಕೇಂದ್ರ ಸಚಿವ ಸಂಪುಟದ ಗಣ್ಯಾತಿಗಣ್ಯ ಖಾತೆಗಳಲ್ಲದೆ ಹೋದರೂ ತಕ್ಕಮಟ್ಟಿಗಿನ ಬರಕತ್ತು ಇಲಾಖೆಗಳ ಯೋಗಾಯೋಗ ಕೂಡಿಬಂದಿದೆ.

ಸದಾನಂದಗೌಡರು ಇನ್ನು ಮುಂದೆ ಲಾಲು, ಮಮತಾ ಬ್ಯಾನರ್ಜಿ, ಖರ್ಗೆ ಗತ್ತಿನಲ್ಲೇ ದೇಶದ ರೈಲ್ವೆ ಸಾಮ್ರಾಜ್ಯವನ್ನಾಳುವುದನ್ನು ಕನ್ನಡಿಗರು ಕಣ್ತುಂಬಿಕೊಳ್ಳಬಹುದು. ಏನೆಲ್ಲಾ ರಾಸಾಯನಿಕ ಕ್ರಿಯೆ ಪ್ರಕ್ರಿಯೆ ನಡೆದು ತನ್ಮೂಲಕ ಎಂತೆಂಥಾ ಸರಸ-ರಸಗೊಬ್ಬರದ ಸಮೃದ್ಧಿಯಾಗಲಿದೆ ಎಂಬುದನ್ನು ರಾಡಿ ನೀರಾಡಿಯಲ್ಲೂ ಅಂಜದೆ ಅಳುಕದೆ ಮುನ್ನುಗ್ಗುವ ಅನಂತ್‌ಕುಮಾರ್ ಕೈಚಳಕವನ್ನೂ ಕಣ್ಣಾರೆ ಕಾಣಬಹುದು. ಇನ್ನು ಸಿದ್ಧೇಶ್ ಶರಣರ ವೈಮಾನಿಕ ಚಾತುರ್ಯ ಮತ್ತು ಲೀಲಾ ವಿನೋದಾವಳಿಗಳಂತೂ ಸಪ್ತ ಸಾಗರಗಳಾಚೆಗೂ ಹೋಗಿ ಬದುಕಿಬಂದ ಏರ್‌ಇಂಡಿಯಾ ಯಾತ್ರಿಕ ಸೌಭಾಗ್ಯವೇ ಮೈವೆತ್ತಂತಿರುತ್ತದೆ!

ಒಂದಲ್ಲ ಎರಡಲ್ಲ ಮೂವರು ಕನ್ನಡಿಗರನ್ನು ಕೇಂದ್ರ ಮಂತ್ರಿಗಳನ್ನಾಗಿಸಿದ್ದಕ್ಕೆ ನಾಡಿನ ಜನ ಮೋದಿಗೆ ಕೃತಜ್ಞತೆ ಸಲ್ಲಿಸಲೇಬೇಕು. ಜೊತೆಗೆ ಬಿಜೆಪಿಗೆ ಶಿರಬಾಗಲೇಬೇಕು ನಿಜ.

ಆದರೆ; ಇಲ್ಲೊಂದು ಅನುಮಾನ ಕಾಡುತ್ತಿದೆ. ಒಂದಲ್ಲ ಎರಡಲ್ಲ ಮೂರು ಖಾತೆಗಳನ್ನೇನೋ ಮುಡಿಗೇರಿಸಿಕೊಂಡ ಕನ್ನಡಿಗರಿಗೆ ಮೋದಿ ಕೃಪೆಯ ಕಿಂಚಿತ್ತಾದರೂ ಪ್ರಯೋಜನವಾಗಬೇಕಲ್ಲವೇ? ಕನಿಷ್ಠ ಇಡೀ ರೈಲ್ವೆಯ ಕನ್ನಡಿಗರ ಪಾಲಿನ ಉದ್ಯೋಗಗಳನ್ನೆಲ್ಲ ಆಕ್ರಮಿಸಿಕೊಂಡ ತಮಿಳರ ಹಾಗೆ ಬೆರಳೆಣಿಕೆಯ ಕೆಲಸಗಳಾದರೂ ಕನ್ನಡಿಗರ ಕೈಗೆಟುಕಬೇಕಲ್ಲವೆ? ಇರಲಿ, ಮೋದಿ ಸಂಪುಟದಲ್ಲಿ ಕಂಗೊಳಿಸುವ ಈ ರತ್ನತ್ರಯರನ್ನು ಕೇಂದ್ರ ಮಂತ್ರಿಗಳಾಗಿಸಿದ್ದರ ಹಿಂದೆ ಯಾವ ಪುರುಷಾರ್ಥವಿದೆ? ಹೆಕ್ಕಿಹೆಕ್ಕಿ ಈ ಮೂವರನ್ನೇ ಮಂತ್ರಿಗಳನ್ನಾಗಿಸಿದ್ದರ ಹಿಂದಿರುವ ಉದ್ದೇಶವಾದರೂ ಎಂಥಾದ್ದು?

ಒಲಿಂಬ್ರಾ

ಅದು ಬಿಜೆಪಿಯ ವಲಿಂಬ್ರಾ ಪಾಲಿಟಿಕ್ಸ್. ಹೇಗೆ ಮುಖ್ಯಮಂತ್ರಿ ಸಿದ್ದರಾಮಯ್ಯ 'ಅಹಿಂದ' ಪಾಲಿಟಿಕ್ಸ್ ಮೂಲಕ ಅಲ್ಪಸಂಖ್ಯಾತ, ಹಿಂದುಳಿದ ಮತ್ತು ದಲಿತ ಸಮೂಹಗಳ ಏಕತೆಗೆ ಹೆಣಗಾಡುತ್ತಿದ್ದಾರೋ ಅದಕ್ಕೆ ತೀರ ವ್ಯತಿರಿಕ್ತವಾಗಿ ಮೇಲ್ಜಾತಿ ಪಾಳೇಗಾರಿಕೆ ಸಂಸ್ಕೃತಿಯನ್ನು ಸ್ಥಾಪಿಸಲು ಹೊರಟ ಬಿಜೆಪಿ ಷಡ್ಯಂತ್ರಕ್ಕೆ ಮೋದಿ ಸಂಪುಟವೇ ಮುನ್ಸೂಚನೆಯಂತಿದೆ.

ನಿಜಕ್ಕೂ ಸೀನಿಯಾರಿಟಿಯೇ ಆಧಾರವಾಗಿದ್ದರೆ ಯಾವುದೇ ಕಾರಣಕ್ಕೂ ಸದಾನಂದಗೌಡ ಮಂತ್ರಿಯಾಗುತ್ತಿರಲಿಲ್ಲ, ಅನಂತ್‌ಕುಮಾರ್ ಬದಲಿಗೆ ಉತ್ತರ ಕನ್ನಡದಿಂದ ನಿರಂತರವಾಗಿ ಗೆದ್ದು ಬರುತ್ತಿರುವ ಅನಂತ್ ಅಶೀಸರ ಮಂತ್ರಿಯಾಗಬೇಕಿತ್ತು. ಇನ್ನು ಸಾಮಾಜಿಕ ನ್ಯಾಯವಾಗಲಿ, ಶೋಷಿತರ ಉದ್ಧಾರವಾಗಲಿ, ಹಿಂದೂ ಏಕತೆಯಾಗಲಿ ಉದ್ದೇಶವಾಗಿದ್ದರೆ ಅನಂತ್, ಸದಾನಂದಗೌಡರಿಗಿಂತಲೂ ರಾಜಕೀಯವಾಗಿ ಹಿರಿಯರಾದ ರಮೇಶ್ ಜಿಗಜಿಣಗಿಗೆ ಅದೃಷ್ಟ ಕುದುರಬೇಕಿತ್ತು. ಸುರೇಶ್ ಅಂಗಡಿ, ಹಿಂದುಳಿದ ಬಲಿಜ ಜನಾಂಗದ ಪಿ.ಸಿ. ಮೋಹನ್, ನವಯುವಕ ಪ್ರತಾಪ ಸಿಂಹ, ಮಹಿಳಾ ಮಣಿ ಕರಂದ್ಲಾಜೆ- ಹೀಗೆ ತರಹೇವಾರಿ ಮಾನದಂಡಗಳನ್ನೆಲ್ಲ ಬದಿಗೊತ್ತಿ ದಾವಣಗೆರೆಯ ನಿಷ್ಕ್ರಿಯ ಸಿದ್ಧೇಶ್, ಆರ್ಥಿಕವಾಗಿ ಸಂತೃಪ್ತ ಮತ್ತು ರಾಜಕೀಯವಾಗಿ ನಿರ್ಲಿಪ್ತ ಅನಂತ್‌ಕುಮಾರ್ ಮತ್ತು ಸಾಂಘಿಕವಾಗಿ ನಿಷ್ಪ್ರಯೋಜಕ ಸದಾನಂದಗೌಡರನ್ನೇ ಆಯ್ದು ಮೋದಿ ಸಂಪುಟದ ಸಚಿವರನ್ನಾಗಿಸಿದ್ದಕ್ಕೆ ಸಂಘ ಪರಿವಾರದ 'ಒಲಿಂಬ್ರಾ' ತಂತ್ರವಲ್ಲದೆ ಬೇರೆ ಕಾರಣಗಳಿಲ್ಲ.

ಅಂದರೆ ಮುಂಬರುವ ದಿನಗಳಲ್ಲಿ ಬಿಜೆಪಿ ಓಟ್ ಬ್ಯಾಂಕೆಂದರೆ ಅದು ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣ ಕೇಂದ್ರಿತವಾಗಿರುತ್ತದೆ. ಕರ್ನಾಟಕದ ಬಲಾಢ್ಯ ಧನಾಢ್ಯ ಮತ್ತು ಚಾಣಾಕ್ಷ ಜಾತಿಗಳಾದ ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣರ ನೇತೃತ್ವದಲ್ಲಿ ಮಿಕ್ಕೆಲ್ಲಾ ಸಣ್ಣಪುಟ್ಟ ಜಾತಿಗಳನ್ನು ಅದುಮಿಟ್ಟುಕೊಂಡು ಅಥವಾ ಖರೀದಿಸಿಟ್ಟುಕೊಂಡು ಅಧಿಕಾರ ಹಿಡಿಯುವ ಷಡ್ಯಂತ್ರದ ಮುನ್ನುಡಿಯಂತಿದೆ ಮೋದಿ ಸಂಪುಟ.

ರೊಕ್ಕಸ್ಥ ಸಿದ್ಧೇಶ್

ದಾವಣಗೆರೆಯ ಸಂಸದ ಜಿ.ಎಂ. ಸಿದ್ಧೇಶ್ ಜಾತಿಯಲ್ಲಿ ಲಿಂಗಾಯತ ನಿಜ. ಹಾಗಂತ ಲಿಂಗವಂತ ಸಮೂಹದ ನಾಯಕನಲ್ಲ. ಯಡಿಯೂರಪ್ಪ, ಬಿ.ಬಿ. ಶಿವಪ್ಪ, ಜಿ.ಎಸ್.ಬಸವರಾಜ್, ಶೆಟ್ಟರ್ ಥರದವರಿಗೆ ಹೋಲಿಸಿದರೆ ಸಿದ್ಧೇಶ್ ಓರ್ವ ಜನನಾಯಕನಾಗಲಿ, ವೀರಶೈವದ ಪ್ರತಿನಿಧಿಯಾಗಲಿ ಎನ್ನಿಸಿಕೊಳ್ಳುವುದಿಲ್ಲ. ಸಿದ್ಧೇಶ್ ಹೇಳಿಕೇಳಿ ಯಡಿಯೂರಪ್ಪನವರ ನಿಯತ್ತಿನ ಚೇಲಾ ಮತ್ತು ಧನದಾಹಿ ರೊಕ್ಕಸ್ಥ. ಲಿಂಗವಂತ ಸಮೂಹದ ಒಳಿತಿಗಾಗಲಿ ಅದರ ಹಿತಾಸಕ್ತಿಗಾಗಲಿ ಯಾವತ್ತಿಗೂ ಬೀದಿಗಿಳಿದವನಲ್ಲ. ಕೇಂದ್ರ ಮಂತ್ರಿಯಾಗುವಷ್ಟು ವರ್ಚಸ್ಸಾಗಲಿ, ವಿದ್ಯೆಯಾಗಲಿ, ಪ್ರತಿಭೆಯಾಗಲಿ, ಬುದ್ಧಿಮತ್ತೆಯಾಗಲಿ ಆತನಲ್ಲಿಲ್ಲವೇ ಇಲ್ಲ. ಶಾಮನೂರು ಪಾಳೇಗಾರಿಕೆ ಕಂಡು ರೋಸತ್ತ ದಾವಣಗೆರೆಯ ಜನಸಾಮಾನ್ಯರ ಆಕ್ರೋಶದ ಫಲವಾಗೇ ಯಾವುದೇ ಪ್ರಯತ್ನ ಪ್ರತಿಭೆಯಿಲ್ಲದೆ ಗೆಲ್ಲುತ್ತಾ ಬಂದವನು ಸಿದ್ಧೇಶ್!

ತಂದೆ ಗೌಡರ ಮಲ್ಲಿಕಾರ್ಜುನಪ್ಪ ಒಂದಲ್ಲ ಎರಡು ಬಾರಿ ಬಿಜೆಪಿಯಿಂದ ಗೆದ್ದು ಸಂಸದನಾಗಿದ್ದರು. ಆ ಕಾಲಕ್ಕೆ ದಾವಣಗೆರೆಯಿಂದ ನಿರಂತರವಾಗಿ ಕಾಂಗ್ರೆಸ್ಸಿನಿಂದ ಗೆದ್ದು ಬರುತ್ತಿದ್ದ ಚನ್ನಯ್ಯ ಒಡೆಯರ್ ಜಾತಿಯಿಂದ ಹಿಂದುಳಿದ ಕುರುಬ. ಮೊದಲೇ ವಯಸ್ಸಾಗಿತ್ತಾದ್ದರಿಂದ ಬೆಂಗಳೂರು ಮತ್ತು ದೆಹಲಿ ಉಸಾಬರಿಕೆಯಲ್ಲೇ ಸಮಯ ಕಳೆದು ಚುನಾವಣೆಯ ಹೊತ್ತಿಗೆ ಅಂದರೆ ಐದು ವರ್ಷಕ್ಕೊಮ್ಮೆ ಪ್ರತ್ಯಕ್ಷರಾಗುತ್ತಿದ್ದರು. ಜನಸಂಪರ್ಕವಿಲ್ಲ, ಹಳ್ಳಿಗಾಡಿನ ಹಂಗಿಲ್ಲ, ಮತದಾರರ ಒಡನಾಟವಿಲ್ಲದ ಚನ್ನಯ್ಯ ಒಡೆಯರ್ ವಿರುದ್ಧ ಬಿಜೆಪಿಯಿಂದ ಅಖಾಡಕ್ಕಿಳಿದದ್ದು ಗೌಡರ ಮಲ್ಲಿಕಾರ್ಜುನಪ್ಪ ಜಾತಿಯಿಂದ ಬಹುಸಂಖ್ಯಾತ ಲಿಂಗಾಯತ ಮತ್ತು ದಾವಣಗೆರೆಯ ಪಾಳೇಗಾರ ಶಾಮನೂರು ಶಿವಶಂಕರಪ್ಪಗೆ ದಾಯಾದಿ!

ಗೌಡರ ಮಲ್ಲಿಕಾರ್ಜುನಪ್ಪನ ಬಗ್ಗೆ ಈ ಭಾಗದ ಲಿಂಗಾಯತರಲ್ಲಿ ವಿಶೇಷ ಅಕ್ಕರೆಯಿದ್ದದ್ದಕ್ಕೂ ಕಾರಣವಿತ್ತು. ಅದು ಆತನ ಶ್ರೀಮಂತ ಮತ್ತು ಗುಟಕಾ ಸಾಮ್ರಾಜ್ಯ!


ಮೂಲತಃ ಚಿತ್ರದುರ್ಗ ಭೀಮಸಮುದ್ರದ ಗೌಡರ ಮಲ್ಲಿಕಾರ್ಜುನಪ್ಪ ತನ್ನ ಅಡಿಕೆ ಮತ್ತು ವ್ಯಾವಹಾರಿಕ ಕೌಶಲ್ಯ ಮಾತ್ರದಿಂದಲೇ ಶಾಮನೂರು ಸುಪ್ಪತ್ತಿಗೆಗೆ ಸವಾಲಾಗಿ ತಲೆಎತ್ತಿದ್ದ. ಭೀಮಸಮುದ್ರದ ನೂರಾರು ಎಕರೆಗಳ ಅಡಿಕೆ ಫಸಲು ಕಾಲಕ್ರಮೇಣ ಜಿ.ಎಂ. ಅರೇಕಾನಟ್ಸ್ ಲಿಮಿಟೆಡ್ ಅರ್ಥಾತ್ ಗೌಡರ ಮಲ್ಲಿಕಾರ್ಜುನಪ್ಪ ಅಡಿಕೆ ಕಂಪನಿಯಾಗಿ ತಲೆಎತ್ತಿತ್ತು. ಸಾಧಾರಣ ಹಳ್ಳಿಯಾಗಿದ್ದ ಭೀಮಸಮುದ್ರವೇ ಬರುಬರುತ್ತ ಆ ಭಾಗದ ಅಡಿಕೆ ಮಂಡಿಯಾಗಿ ತಲೆಎತ್ತಿತ್ತು. ಆ ಹೊತ್ತಿಗೆ ಗುಟಕಾ ಕ್ರಾಂತಿ (!) ಕ್ಷಮಿಸಿ; ಗುಟಕಾ ಭ್ರಾಂತಿ ದೇಶವನ್ನಾವರಿಸಿತು; ಪಾನ್‌ಪರಾಗ್, ಮಾಣಿಕ್‌ಚಂದ್, ಗೋವಾ, ಸ್ಟಾರ್ ಇತ್ಯಾದಿ ಗುಟಕಾಗಳ ಹಾಗೆ ಗೌಡರ ಮಲ್ಲಿಕಾರ್ಜುನಪ್ಪನ ಪ್ರಸಾದವೂ ಗುಟಕಾ ಮಾರುಕಟ್ಟೆ ಪ್ರವೇಶಿಸಿತು.


ಗುಟಕಾ ವಿಷ!


ಮೊದಲು ಬಂದದ್ದು ಜೆಮ್ ಗುಟಕಾ. ಆ ನಂತರ ಕೇವಲ ಕರ್ನಾಟಕವನ್ನಷ್ಟೇ ಅಲ್ಲದೆ ಅಕ್ಕಪಕ್ಕದ ಗೋವಾ, ಕೇರಳ, ಆಂಧ್ರ, ಮಹಾರಾಷ್ಟ್ರಕ್ಕೂ ಕಾಲಿಟ್ಟ 'ಸೂಪರ್' ಗುಟಕಾ. ಇದಲ್ಲದೆ ತನ್ನ ಮಗ ಸಿದ್ಧೇಶ್ವರನ ಹೆಸರಲ್ಲಿ 'ಸಿದ್ಧು' ಎಂಬ ಇನ್ನೊಂದು ಗುಟಕಾ!

ಒಂದಲ್ಲ ಎರಡಲ್ಲ ಮೂರು ಬ್ರಾಂಡಿನ ವಿಷಕಾರಿ ಗುಟಕಾಗಳನ್ನು ಸೃಷ್ಟಿಸಿ ಮಾರುಕಟ್ಟೆಗೆ ಬಿಟ್ಟ 'ಜಿಎಂ' ಕಂಪೆನಿ ದಾವಣಗೆರೆಯಲ್ಲಿ ರಾತ್ರೋರಾತ್ರಿ ದೈತ್ಯಾಕಾರ ತಾಳಿತು. ಶಾಮನೂರು ಪಾಳೇಗಾರರು ಲಿಕ್ಕರ್ ದಂಧೆ

ಉತ್ತರ ಭಾರತದ ಝಾಟ್ ಅಟ್ಟಹಾಸ ಮತ್ತು ಮರ್ಯಾದಾ ಹತ್ಯೆ!







ಉತ್ತರ ಪ್ರದೇಶದಲ್ಲಿ ಹೇಗೆ ಅಮಿತ್ ಷಾ ಮೇಲ್ಜಾತಿಗಳ ಧ್ರುವೀಕರಣಕ್ಕೆ ಕೈಯಿಟ್ಟು ಬಿಜೆಪಿಗೆ ಬಹುಮತ ಗಿಟ್ಟಿಸಿಕೊಂಡನೋ ಅದೇ ತಂತ್ರವನ್ನು ಈ ಸಾರಿ ದೇಶಾದ್ಯಂತ ಬಿಜೆಪಿ ಪ್ರಯೋಗಿಸಿತ್ತು.

ಕರ್ನಾಟಕದಲ್ಲಿ ಒಕ್ಕಲಿಗರು ಲಿಂಗಾಯತರನ್ನು ಮುಂದಿಟ್ಟುಕೊಂಡಂತೆ ಹಿಂದಿ ರಾಜ್ಯಗಳಲ್ಲಿ ಬಿಜೆಪಿ ಅವಲಂಬಿಸಿದ್ದು ಜಾಟ್ ರಜಪೂತರನ್ನು. ಯುಪಿ, ಮಧ್ಯಪ್ರದೇಶ, ಬಿಹಾರ, ಹರಿಯಾಣಾ, ದೆಹಲಿ, ಛತ್ತೀಸ್‌ಗಢ್, ರಾಜಸ್ತಾನ್ ಇತ್ಯಾದಿ ರಾಜ್ಯಗಳಿಂದ ಗೆದ್ದುಬಂದ ಬಿಜೆಪಿ ಸಂಸದರ ಪೈಕಿ ಅಧಿಕ ಸಂಖ್ಯೆಯಲ್ಲಿರುವುದು ಝಾಟ್ ಭೂ ಮಾಲೀಕರೆ. ಇಲ್ಲಿಗೆ ಮೂವತ್ತು ವರ್ಷದ ಹಿಂದೆ ಮೈಸೂರು ಪ್ರಾಂತ್ಯದ ಒಕ್ಕಲಿಗರು ಮತ್ತು ಉತ್ತರ ಕರ್ನಾಟಕದ ಲಿಂಗಾಯತರ ಮನಸ್ಥಿತಿ ಹೇಗಿತ್ತೋ ಅಂಥದ್ದೇ ಪಾಳೇಗಾರಿ ಪ್ರವೃತ್ತಿ ಈಗ ಉತ್ತರ ಭಾರತೀಯ ಝಾಟ್‌ರಲ್ಲಿದೆ. ಯಾರೇ ಯುವತಿಯೊಬ್ಬಳು ತನ್ನಿಷ್ಟದ ಹುಡುಗನನ್ನು ಪ್ರೀತಿಸಿ ಮದುವೆಯಾದಳೆಂದರೆ ಅವಳನ್ನು ಆಕೆಯ ಮನೆಯವರೇ ಕೊಲ್ಲಬೇಕೆಂದು ಆಯಾ ಗ್ರಾಮದ ಖಾಪ್ ಪಂಚಾಯ್ತಿಗಳು 'ಫತ್ವಾ' ಹೊರಡಿಸುತ್ತವೆ.

ಮುಸ್ಲಿಂ ಮೂಲಭೂತವಾದದ ನಿರಂಕುಶ ದೌರ್ಜನ್ಯದ ಪ್ರತೀಕವಾದ 'ಫತ್ವಾ' ಝಾಟ್‌ಗಳ ಖಾಪ್ ಪಂಚಾಯ್ತಿಯ ಆದೇಶದ ರೂಪ ತಾಳಿ ರಕ್ತ ಹರಿಸುತ್ತಿದೆ.

ಯಾರೋ ಹುಡುಗಿಯೊಬ್ಬಳು ಮುಸ್ಲಿಂ ಹುಡುಗನೊಬ್ಬನ ಜೊತೆ ಪರಾರಿಯಾದಳೆಂಬ ಒಂದೇ ಪ್ರಕರಣವನ್ನಿಟ್ಟುಕೊಂಡು 'ಬಹು ಭೇಟಿ ಮಾನಸಮ್ಮಾನ್ ರ್‍ಯಾಲಿ' ತೆಗೆದ ಉತ್ತರ ಪ್ರದೇಶದ ಝಾಟ್ ಭೂಮಾಲೀಕರ ಮೂಲಕವೇ ಮುಜಾಫರ್ ನಗರದಲ್ಲಿ ಬಿಜೆಪಿ ಕೋಮು ದಳ್ಳುರಿಯೆಬ್ಬಿಸಿತು. ಮುಸ್ಲಿಂ ಮತ್ತು ಝಾಟ್‌ಗಳ ನಡುವಿನ ದಾವಾಗ್ನಿಯೇ ಕಾಲಕ್ರಮೇಣ ಹಿಂದೂ ಮುಸ್ಲಿಂ ಗಲಭೆಯಾಗಿ ಬದಲಾಯಿತು. ಇಂಥ ಖಾಪ್ ಪಂಚಾಯ್ತಿ ಮತ್ತು ಝಾಟ್‌ಗಳ ಮರ್ಯಾದಾ ಹತ್ಯೆಯನ್ನು ಕತೆಯಾಗಿಟ್ಟುಕೊಂಡೇ ಇತ್ತೀಚೆಗೆ ಜಾಕಿ ಶ್ರಾಫ್‌ನ ಮಗನನ್ನು ಹೀರೋ ಮಾಡಿದ 'ಹೀರೋಪಂತಿ' ಎಂಬ ಬಾಲಿವುಡ್ ಚಿತ್ರವೂ ತೆರೆ ಕಂಡಿತು.

ದುರಂತವೆಂದರೆ ಝಾಟ್, ಠಾಕೂರ್, ಭೂಮಿಹಾರ್ ಇತ್ಯಾದಿ ಬಲಾಢ್ಯ ಜಾತಿಗಳ ನೆರಳಲ್ಲೇ ಬದುಕುವ ಉತ್ತರ ಭಾರತದ ದಲಿತರು, ಹಿಂದುಳಿದವರು ವಿಧಿಯಿಲ್ಲದೆ ಸಂಘ ಪರಿವಾರದ ಪ್ರಭಾವಕ್ಕೊಳಗಾಗುತ್ತಾರೆ. ನಿತೀಶ್ ಕುಮಾರ್, ಲಾಲೂ, ಶರದ್ ಯಾದವ್, ಮಾಯಾವತಿ, ಮುಲಾಯಂ ಮುಂತಾದವರೆಲ್ಲ ಏನೇ ಹಿಂದುಳಿದ ವರ್ಗಗಳ ಪರ ಪರಿವರ್ತನೆ ತಂದಿದ್ದರೂ ಬಿಜೆಪಿ ಅದನ್ನೆಲ್ಲ ಒಂದೇ ಒಂದು ಕೋಮು ಗಲಭೆಯ ಮೂಲಕ ಮಣ್ಣು ಪಾಲು ಮಾಡುತ್ತದೆ. ಇಂಥದ್ದೇ ಪ್ರಯೋಗಕ್ಕೀಗ ಕರ್ನಾಟಕವನ್ನು ಬಿಜೆಪಿ ಆಯ್ದುಕೊಂಡಿದೆ.



ಮುಜಾಫರ್ ನಗರ ಕೋಮು ಗಲಭೆ

...ಟ್ಟು ಏಕಾಏಕಿ ದೊಡ್ಡಸ್ತಾಗಿ ಕ್ರಮೇಣ ಮೆಡಿಕಲ್, ...ನಿಯರಿಂಗ್ ಕಾಲೇಜು ದಂಧೆಗೆ ಕೈಯಿಟ್ಟಂತೆಯೇ ...ರ ಮಲ್ಲಿಕಾರ್ಜುನಪ್ಪನೂ ಹರಿಹರ ದಾವಣಗೆರೆ ...ಲ್ಲಿ ತನ್ನ 'ಶಿಕ್ಷಣ ಸುಲಿಗೆ ಅಡ್ಡೆಯನ್ನು' ಪ್ರತಿಷ್ಠಾಪಿಸಿ ...ಅದೇ ಜೆಎಂಐಟಿ. ಅಂದರೆ ಗೌಡರ ಮಲ್ಲಿಕಾರ್ಜುನಪ್ಪ ...ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ!

...ಶಾಮನೂರರದ್ದು ಲಿಕ್ಕರಾದರೆ ಗೌಡರ ...ಕಾರ್ಜುನಪ್ಪನದ್ದು ಗುಟಖಾ. ಅವರದ್ದು ಮೆಡಿಕಲ್ಲು ...ದ್ದು ಇಂಜಿನಿಯರಿಂಗ್. ಇಬ್ಬರೂ ಲಿಂಗವಂತರೆ. ...ರು ಕಾಂಗ್ರೆಸ್ ಇವರು ಬಿಜೆಪಿ. ಹೀಗೆ ಶುರುವಾದ ...ಗಾರಿ ಜಿದ್ದಾಜಿದ್ದಿ ಇಸವಿ 2002ರ ಹೊತ್ತಿಗೆ ಅಂದರೆ ...ರ ಮಲ್ಲಿಕಾರ್ಜುನಪ್ಪ ಕಾಲಾಧೀನರಾದಾಗಲೇ ...ಗಾಣಬೇಕಿತ್ತು.

...ಕಾಗಲಿಲ್ಲ, ಬದಲಿಗೆ ಬಿಜೆಪಿ ಮಗ ಸಿದ್ಧೇಶ್ವರ್‌ಗೆ ...ಕೊಟ್ಟಿತು. ಹಳ್ಳಿಹಳ್ಳಿ ಸುತ್ತಿ ಊರಿನ ಹಿರೀಕರನ್ನೆಲ್ಲ ...ಹಿಡಿದು ಮಾತಾಡಿಸುತ್ತಿದ್ದ ತಂದೆ ಮಲ್ಲಿಕಾರ್ಜುನಪ್ಪ ...ಲ್ಲ ಎರಡು ಬಾರಿ ಸಂಸದರಾಗಿ ಮಾಡಿದ ಅಭಿವೃದ್ಧಿಯಿ ...ದೇ ಮಗ ಸಿದ್ಧೇಶ್‌ಗೆ ಶ್ರೀರಕ್ಷೆಯಾಯಿತು. ಕಾಂಗ್ರೆಸ್ಸಿನ ...ಮ್ಮ ಒಡೆಯರ್‌ಗಿಂತ ಬಿಜೆಪಿಯೇ ಲೇಸೆಂದು ...ಗ್ ಪ್ರಚಾರ ನಡೆಸಿತ್ತಾದರೂ ವಾಸ್ತವವಾಗಿ ಬಿಜೆಪಿ ...ಏಕ ಹಿಂದಿದ್ದದ್ದು ಲಿಂಗಾಯತರ ಜಾತಿ ಬಲ!

...ಮುಂದೆ ಸತತ ಮೂರು ಬಾರಿಯೂ ಮಗ ಸಿದ್ಧೇಶನೇ ...ಯಿಂದ ಗೆದ್ದು ಬಂದರೆ ಆತನ ವಿರುದ್ಧ ಸೋತಿದ್ದು ...ಮನೂರು ವಂಶದ ಕುಡಿ ಮಲ್ಲಿಯೆ. ಹಾಗಂತ ...ನಸಭಾ ಚುನಾವಣೆಗೆ ಬಂದರೆ ದಾವಣಗೆರೆಯ ಜನ ...ತ್ತಿಗೂ ಶಾಮನೂರು ಕೈಬಿಟ್ಟವರಲ್ಲ. ಸಿದ್ಧೇಶ್ವರ್ ...ಗಾರಿಕೆಗೆ ಹೋಲಿಸಿದರೆ ದಾವಣಗೆರೆ ಭಾಗದ ದಲಿತ, ...ರು, ಕೆಳಜಾತಿಗಳಿಗೆಲ್ಲ ಶಾಮನೂರು ಪಾಳೆಯವೇ ...ಮುತಾಣವಿದ್ದಂತೆ.



ಯಡ್ಡಿ ಲಿಂಗಾಯತರ ನಾಯಕನೆಂಬ ಬಗ್ಗೆ ಎರಡು ಮಾತಿಲ್ಲ. ಭ್ರಷ್ಟಾಚಾರದ ಆರೋಪ ಹೊತ್ತು ಜೈಲುಪಾಲಾದ ಯಡ್ಡಿ ವಿರುದ್ಧದ ಕೇಸುಗಳಿನ್ನೂ ಮುಗಿದಿಲ್ಲವಾದ್ದರಿಂದ ಎಲ್ಲಿ ದೆಹಲಿ ಮಟ್ಟದಲ್ಲಿ ಮುಖಭಂಗವಾಗುತ್ತೋ ಎಂದು ಆತನ ಸೂತ್ರದ ಬೊಂಬೆಯಂತೆ ಸಿದ್ಧೇಶ್ವರ್ ಮಂತ್ರಿಯಾಗಿದ್ದಾರೆಂಬುದೂ ರಹಸ್ಯವೇನಲ್ಲ. ಹಾಗಂತ ಸಿದ್ಧೇಶ್ವರ್ ಶುದ್ಧ ಹಸ್ತರೆ?


ಕಲ್ಲಡ್ಕನ ಬಂಟ

ಸಿದ್ಧೇಶ್ವರ್ ಮಂತ್ರಿಯಾಗಿರುವುದು ಲಿಂಗಾಯತರ ಓಟ್‌ಬ್ಯಾಂಕ್ ಬಲವರ್ಧನೆಗಾಗಿಯೇ ಹೊರತು ಆತ ಶುದ್ಧಹಸ್ತನೆಂದಾಗಲಿ, ಪ್ರಾಮಾಣಿಕ, ಸಮರ್ಥ ಮತ್ತು ಕಾರ್ಯದಕ್ಷನೆಂದಲ್ಲ. ಲಿಂಗಾಯತರಲ್ಲೇ ಸಮರ್ಥ ಸುರೇಶ್ ಅಂಗಡಿಯಿರಲಿಲ್ಲವೇ? ಬೇರೆಲ್ಲ ಸಮರ್ಥರನ್ನು ಬಿಟ್ಟು ಓರ್ವ ನಿಷ್ಪ್ರಯೋಜಕನನ್ನು ಕೇಂದ್ರದ ಪ್ರತಿಷ್ಠಿತ ಖಾತೆಯೊಂದರ ಮಂತ್ರಿಯನ್ನಾಗಿಸಿದ್ದರ ಹಿಂದಿರುವುದು ಭಟ್ಟನ ಕಾಲಿಗೆ ಬಿದ್ದರು. ಕಲ್ಲಡ್ಕ ಭಟ್ಟನ ಪಾದಕ್ಕೆರಗಿದ ನಂತರವೇ ಪೇಜಾವರರ ಕಾಲಿಗೆ ಬಿದ್ದದ್ದು ಮತ್ತು ಇಷ್ಟೆಲ್ಲಕ್ಕೂ ಕಾರಣಕರ್ತರಾದ ಯಡಿಯೂರಪ್ಪಗೆ ಕೈಕೊಟ್ಟದ್ದು!

ಸದಾನಂದಗೌಡ ಮುಖ್ಯಮಂತ್ರಿಯಾದ ಮರುಕ್ಷಣದಿಂದಲೂ ಮಾಡಿದ್ದು ಎರಡೇ. ಒಂದು ತಾನು ಭ್ರಷ್ಟನಲ್ಲ, ಪ್ರಾಮಾಣಿಕ ಎಂದು ಫೋಜು ಕೊಡುವುದು, ಎರಡನೆಯದು ತಾನೊಬ್ಬ ಒಕ್ಕಲಿಗರ ನಾಯಕನೆಂದು ಚಾಲ್ತಿಗೆ ಬರುವುದು. ಮೇಲುನೋಟಕ್ಕಿದು ಆರೆಸ್ಸೆಸ್‌ನ ಹಿಂದೂತ್ವಕ್ಕೆ ಪ್ರತಿಯಾಗಿ ಜೆಡಿಎಸ್ ಕಾರ್ಯತಂತ್ರದ ಸಮರ್ಥನೆಯಂತೆ ಕಂಡರೂ ಆಳದಲ್ಲಿ ದೇವೇಗೌಡರ ಬುಡಕ್ಕೆ ಕೊಳ್ಳಿಯಿಡುವ ಬಿಜೆಪಿ ರಣತಂತ್ರದ ಒಂದು ಅಂಗವೇ ಆಗಿತ್ತು.

ಅಂದರೆ ದೇವೇಗೌಡ, ಕುಮಾರಸ್ವಾಮಿಗೆ ಪರ್ಯಾಯವಾಗಿ ಬಿಜೆಪಿಯಲ್ಲೂ ಒಕ್ಕಲಿಗ ನಾಯಕರಿದ್ದಾರೆಂದು ಸೋಗು ಹಾಕುವುದು. ಇದರಿಂದಾಗಿ ಬೆಂಗಳೂರು ಸುತ್ತಮುತ್ತ ಅಶೋಕ್ ಮತ್ತು ಮೈಸೂರು ಭಾಗದಲ್ಲಿ ಸದಾನಂದಗೌಡ





ಒಕ್ಕಲಿಗ ನಾಯಕರಾಗಿ ದೇವೇಗೌಡರಿಗೆ ಪರ್ಯಾಯವೆಂಬಂತೆ ಬಿಂಬಿಸಲಾಯಿತಾದರೂ ಒಕ್ಕಲಿಗರು ಮಾತ್ರ ದೇವೇಗೌಡರನ್ನು ಬಿಟ್ಟು ಕದಲಲಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸಿದ್ದು ಮುಖ್ಯಮಂತ್ರಿಯಾದ ಮೇಲೆ ಸದಾನಂದಗೌಡ ಥೇಟು ಜೋಕರ್‌ನಂತೆ ತಲೆಬುಡವಿಲ್ಲದ ಹೇಳಿಕೆ ಕೊಟ್ಟದ್ದು ಬಿಟ್ಟರೆ ರಾಜ್ಯ ರಾಜಕಾರಣದಲ್ಲಾಗಲಿ, ಒಕ್ಕಲಿಗ ಜನಾಂಗದ ಮಟ್ಟಿಗಾಗಲಿ ಬಿಜೆಪಿಯ ಪಾಲಿಗಿದ್ದದ್ದು ಅಶೋಕ್ ಮಾತ್ರವೆ.

ಇಂಥಾದ್ದರಲ್ಲಿ ಮೋದಿ ಅಲೆಯೇರಿ ಭರ್ಜರಿ ಜಯ ಸಾಧಿಸಿದ ಸದಾನಂದಗೌಡ ತನ್ನ ಗೆಲುವಿಗಾಗಿ ಕೃತಜ್ಞತೆ ಸಲ್ಲಿಸಿದ್ದು ದೇವೇಗೌಡರಿಗೆ. ಏಕೆಂದರೆ ಜೆಡಿಎಸ್ ಅಬ್ದುಲ್ ಅಜೀಮ್‌ರನ್ನು ಬೆಂಗಳೂರು ಉತ್ತರದಲ್ಲಿ ಕಣಕ್ಕಿಳಿಸದೇ ಹೋಗಿದ್ದರೆ ಮುಸ್ಲಿಂ ಮತಗಳೆಲ್ಲ ನಿರಾಯಾಸವಾಗಿ ಕಾಂಗ್ರೆಸ್ ಪಾಲಾಗಿ ನಾರಾಯಣಸ್ವಾಮಿ ಗೆದ್ದು ಬಿಡುತ್ತಿದ್ದರು. ಜೆಡಿಎಸ್ ಮತ್ತು ದೇವೇಗೌಡರ ಕೃಪೆಯಲ್ಲೇ ಗೆದ್ದು ಬಂದ ಸದಾನಂದಗೌಡ ಹೆಸರಿಗಷ್ಟೇ ಗೌಡ ವ್ಯಕ್ತಿಗತವಾಗಿ ಕಲ್ಲಡ್ಕ ಭಟ್ಟನ ಮಾನಸ ಪುತ್ರ!

ದೆಹಲಿಯಲ್ಲಿ ಗೌಡ

ಆರೆಸ್ಸೆಸ್ ಪಾಲಿಗೆ ಬೌದ್ಧಿಕವಾಗಿ ಕಟ್ಟಾ ಚೆಡ್ಡಿಯಾದರೂ ಹೊರಜಗತ್ತಿಗೆ ಗೌಡನಾದರೆ ಸಾಕಿತ್ತು. ಹಾಗೊಮ್ಮೆ ಶೋಭಾ ಕರಂದ್ಲಾಜೆಯನ್ನು ಒಕ್ಕಲಿಗ ಖೋಟಾದ ಅಡಿ ಕೇಂದ್ರಮಂತ್ರಿಯಾಗಿಸಿದರೂ ಅದು ಯಡ್ಡಿ ಪಾಲಿಗೆ ಸಂದಾಯವಾದ ಲಿಂಗಾಯತ ಖೋಟಾದ ಲೆಕ್ಕಕ್ಕೆ ಸೇರುತ್ತಿತ್ತು. ಹಾಗೆ ನೋಡಿದರೆ ಕರ್ನಾಟಕದ ಮಟ್ಟಿಗೆ ಸದಾನಂದ ಗೌಡರಿಗೆ ರೈಲ್ವೇ ಖಾತೆ ಸಿಕ್ಕಿರುವುದು ಅವರ ಆರೆಸ್ಸೆಸ್ ನಿಷ್ಠೆ ಮತ್ತು ಹೆಸರಿನ ಜೊತೆಗಿರುವ ಗೌಡ ಎಂಬ ಶಬ್ದದ ಕಾರಣಕ್ಕೇ ಹೊರತು ಕನ್ನಡಿಗರ ಉದ್ಧಾರಕ್ಕಾಗಲಿ ಒಕ್ಕಲಿಗರ ಉತ್ಥಾನಕ್ಕಾಗಲಿ ಅಲ್ಲ.

ಮುಂಬರುವ ಚುನಾವಣೆಯ ಹೊತ್ತಿಗೆ ಜೆಡಿಎಸ್ ಮತ್ತು ದೇವೇಗೌಡರನ್ನು ಮತ್ತಷ್ಟು ದುರ್ಬಲರನ್ನಾಗಿಸಿ ಗಣನೀಯವಾಗಿ ಒಕ್ಕಲಿಗರನ್ನು ಯಾಮಾರಿಸುವ ಗುರಿಯಿಟ್ಟೇ ಕಾಡು ಗೌಡರಿಗೆ ರೈಲ್ವೇ ಪಟ್ಟ ಕಟ್ಟಲಾಗಿದೆ. ದೆಹಲಿ

ಸಾದರ ಸಾಮ್ರಾಜ್ಯ

...ನ್ನು ಸಂಸದನಾಗಿ ಸಿದ್ಧೇಶ್ವರ್ ದಾವಣಗೆರೆಗಾಗಲಿ, ...ಟಕಕ್ಕಾಗಲಿ ನಯಾಪೈಸೆಯ ಪ್ರಯೋಜನವಿಲ್ಲ. ...ರಿಯ ಮಾಡಾಳು ವಿರೂಪಾಕ್ಷಪ್ಪ ಹರಿಹರದ ಬಿ.ಪಿ. ...ಶ್, ಹೊನ್ನಾಳಿಯ ಎ.ಬಿ. ಹನುಮಂತಪ್ಪ ಹರಿಹರದ ...ಶ್, ಮಲೆಬೆನ್ನೂರಿನ ಮಂಜುನಾಥ ಸ್ವಾಮಿ ಮತ್ತು ...ಣಗೆರೆಯ ಬಿ.ಎಸ್. ಜಗದೀಶ್‌ರಂಥ ಸಾದರ ...ಯತ ಪುಢಾರಿಗಳಿಗಷ್ಟೇ ಸಿದ್ಧೇಶ್ ಆಸ್ಥಾನದಲ್ಲಿ ...ಶ. ಮಿಕ್ಕಂತೆ ಹೊನ್ನಾಳಿಯ ರೇಣುಕಾಚಾರ್ಯ ...ಮನಾದರೂ ಸಾಧನಲ್ಲ ಎಂಬ ಕಾರಣಕ್ಕೆ ಅಷ್ಟಕ್ಕಷ್ಟೆ. ...ಗರ್ಭಗುಡಿಯ ಏಕೈಕ ಲಿಂಗಾಯತೇತರನೆಂದರೆ ...ಜಗಳೂರಿನ ಎಸ್.ವಿ. ರಾಮಚಂದ್ರ ಎಂಬ ವಾಲ್ಮೀಕಿ ... ಮಾತ್ರ.

...ಮೊದಲೇ ವೃದ್ಧಾಪ್ಯ, ಮೈತುಂಬಾ ಕಾಯಿಲೆ. ವಿಪರೀತ ...ಮತ್ತು ಸಕ್ಕರೆ ಕಾಯಿಲೆಯಿಂದಾಗಿ ಸಂಜೆಯಾದರೆ ...ಕೈಕಾಲು ನಡುಗತೊಡಗುತ್ತದೆ. ಫರ್ಲಾಂಗು ದೂರಕ್ಕೂ ...ಲಾಗದ, ದಾವಣಗೆರೆಯ ಗಾಂವಟಿ ಭಾಷೆ ಬಿಟ್ಟರೆ ... ಕನ್ನಡ ಕೂಡ ಮಾತಾಡಲಾಗದ, ಕನ್ನಡ ಬಿಟ್ಟರೆ ... ಇಂಗ್ಲಿಷ್ ಏನೊಂದೂ ಗೊತ್ತಿಲ್ಲದ ಸಿದ್ಧೇಶ್ವರ್‌ರನ್ನು ...ಸ ಪುರುಷಾರ್ಥಕ್ಕೆಂದು ಮೋದಿ ಪ್ರತಿಷ್ಠಿತ ನಾಗರಿಕ ...ಯಾನ ಮಂತ್ರಿಯಾಗಿಸಿದ್ದಾರೋ ಭಗವಂತನಷ್ಟೆ ...ಅಂತರರಾಷ್ಟ್ರೀಯವಾಗಿ ವ್ಯವಹರಿಸಬೇಕಾದ ಪ್ರತಿಷ್ಠಿತ ...ಒಂದಕ್ಕೆ ಇಂಗ್ಲಿಷ್ ಹಾಳಾಗಲಿ ಹಿಂದಿ ಕೂಡ ...ದ ವೃದ್ಧಾಪ್ಯದ ಅನಾರೋಗ್ಯದ ಆಸಾಮಿಯೊಬ್ಬನನ್ನು ... ಮಂತ್ರಿಯಾಗಿಸುತ್ತಾರೆಂದರೆ ಅದಕ್ಕೊಂದು ವಿಕಟ ...ವಾದರೂ ಇರಲೇಬೇಕಲ್ಲವೆ?

...ದು ಬಿ.ಎಸ್. ಯಡಿಯೂರಪ್ಪ!

...ಡ್ಡಿಯ ನಂಬಿಕಸ್ತ ಬಂಟನೆಂಬ ಒಂದೇ ಕಾರಣಕ್ಕೆ ...ರ್‌ಗೆ ಕೇಂದ್ರ ಮಂತ್ರಿಗಿರಿ ಸಿಕ್ಕಿದೆ. ಅಂದರೆ ಮಂತ್ರಿಗಿರಿ ...ವುದು ಸಿದ್ಧೇಶ್ವರ್‌ಗಲ್ಲ, ಯಡ್ಡಿಗೆ ಮತ್ತು ಲಿಂಗಾಯತ ...ತಕ್ಕೆ!

ಅದೇ ಬಿಜೆಪಿಯ ಮೇಲ್ಜಾತಿ ಓಟ್‌ಬ್ಯಾಂಕ್ ತಂತ್ರ.

ಇದರ ಮುಂದುವರಿಕೆಯೇ ಸದಾನಂದ ಗೌಡ. ಹೇಗೆ ಲಿಂಗಾಯತ ಸಮೂಹಕ್ಕೊಂದು ಸಾಂಕೇತಿಕ ಪ್ರಾತಿನಿಧ್ಯದ ಅಗತ್ಯವಿತ್ತೋ ಹಾಗೆ ಕರ್ನಾಟಕದ ಒಕ್ಕಲಿಗರನ್ನು ಯಾಮಾರಿಸಲೆಂದೇ ಸದಾನಂದಗೌಡರನ್ನು ಬಳಸಲಾಯ್ತು. ಇಲ್ಲಿ ಸಿದ್ಧೇಶ್ವರ್ ನೇರವಾಗಿ ಯಡಿಯೂರಪ್ಪನವರ ಆಯ್ಕೆಯಾದರೆ ಸದಾನಂದಗೌಡ ಆರೆಸ್ಸೆಸ್ ಆಯ್ಕೆ. ಅದೂ ಕರಾವಳಿಯ ಕೋಮು ಕಾರ್ಕೋಟಕ ಕಲ್ಲಡ್ಕ ಪ್ರಭಾಕರ ಭಟ್ಟನ ಕಾಲಿಗೆ ಬಿದ್ದೇ ಸದಾನಂದಗೌಡ ಕೇಂದ್ರಮಂತ್ರಿ ಗಾದಿಗೇರಿದ್ದಾರೆ.

ಹೆಸರಿಗಷ್ಟೇ ಸದಾನಂದಗೌಡ ಒಕ್ಕಲಿಗನಾದರೂ ಬೌದ್ಧಿಕವಾಗಿ ಕಟ್ಟು ಬ್ರಾಹ್ಮಣ. ಕೊಡಗಿನ ಅರೆಭಾಷೆ ಗೌಡರೆಂದರೆ ಮಂಡ್ಯ ಮೈಸೂರು ಭಾಗದ ಒಕ್ಕಲಿಗರಿಗೆ ಯಾರೋ ಕಾಡುಜನರಿದ್ದಂತೆಯೇ ಲೆಕ್ಕ. ಬುಡಕಟ್ಟು ಜನಾಂಗವೊಂದು ತನ್ನ ಹೆಸರ ಕೊನೆಗೆ ಗೌಡ ಎಂದಿಟ್ಟುಕೊಂಡ ಮಾತ್ರಕ್ಕೇ ಅವರೆಲ್ಲ ಒಕ್ಕಲಿಗರಲ್ಲ ಎಂಬುದು ಮೈಸೂರು ಭಾಗದ ಒಕ್ಕಲಿಗರ ಕುಚೇಷ್ಟೆ. ಇದು ಗೊತ್ತಿದ್ದೂ ಯಡ್ಡಿ ತನ್ನ ಉತ್ತರಾಧಿಕಾರಿಯನ್ನಾಗಿ ಸದಾನಂದಗೌಡರನ್ನೇ ಆಯ್ದುಕೊಂಡಿದ್ದಕ್ಕೆ ಕಾರಣ ಆರ್. ಅಶೋಕ್ ವಿರುದ್ಧದ ತಂತ್ರವೇ ಹೊರತು ಒಕ್ಕಲಿಗ ಸಮೂಹದ ಕಾಳಜಿಯಿಂದಲ್ಲ. ಏಕೆಂದರೆ ಜಾತಿಯಲ್ಲಿ ತಮಿಳುನಾಡು ಮೂಲದ 'ಮರಸು' ಒಕ್ಕಲಿಗನಾದ ಅಶೋಕ್ ರಾಜಕೀಯವಾಗಿ ಅನಂತ್‌ಕುಮಾರ್‌ನ ಪರಮಾಪ್ತ ಕೂಡ.

ದೇ.ಗೌ. ಕೃಪೆಯಿಂದ...!

ಅಶೋಕ್ ಯಾವತ್ತಿದ್ದರೂ ಆಪತ್ತೇ ಎಂದು ಬಗೆದ ಯಡ್ಡಿ ತಾನೇ ನಿಂತು ಪಟ್ಟಕಟ್ಟಿದ ಸದಾನಂದಗೌಡ ತನ್ನ ಕಣ್ಣೆದುರೇ ದೇವೇಗೌಡರ ಕೈಗೊಂಬೆಯಾಗಿದ್ದನ್ನು ಕಂಡು ತಟ್ಟಾಡಿಬಿಟ್ಟರು. ಅದಕ್ಕೂ ಮುನ್ನ ಬಹುಶಃ ಯಾರೂ ಗಮನಿಸದ ಸಂಗತಿಯೆಂದರೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಮರುಕ್ಷಣಕ್ಕೇ ಸದಾನಂದಗೌಡ ನೇರವಾಗಿ ಮಂಗಳೂರಿಗೆ ಪ್ರಯಾಣ ಬೆಳೆಸಿದ್ದೇ ಕಲ್ಲಡ್ಕ ಪ್ರಭಾಕರ

ಪಟ್ಟದಲ್ಲಿ ದೇವೇಗೌಡರಿಗೊಬ್ಬ ಪರ್ಯಾಯ ಗೌಡನನ್ನು ಹುಟ್ಟುಹಾಕುವ ಬಿಜೆಪಿ ಒಳತಂತ್ರವೂ ಸಿದ್ಧಗೊಂಡಿದೆ. ಆದರೆ ಸತ್ಯವೇನೆಂದರೆ: ಕರ್ನಾಟಕದ ಒಕ್ಕಲಿಗ ಸಮೂಹದ ಹೃದಯದೊಳಗೆ ಎಲ್ಲಿಯವರೆಗೆ ದೇವೇಗೌಡರಿರುತ್ತಾರೋ ಅಲ್ಲಿಯತನಕ ಯಾವ ಚೆಡ್ಡಿ ಗೌಡ ಏನೇ ಲಗಾಟ ಹೊಡೆದರೂ ಏನು ಪ್ರಯೋಜನ?

ಅದೇರೀತಿ ಸದಾನಂದ ಗೌಡ ಏನೇ ಹಲ್ಲು ಕಿಸಿದರೂ ದೇವೇಗೌಡ ದೇವೇಗೌಡನೇ ಹೊರತು ಬಿಜೆಪಿಯ ಗೌಡ ಯಾವ ಗೌಡ?

ಅನಂತ್ ದುರ್ಗತಿ

ಕರ್ನಾಟಕದ ಪಾಲಿನ ಬಿಜೆಪಿ ದೊಡ್ಡ ನಾಯಕ ಅನಂತ್‌ಕುಮಾರ್‌ಗೆ ಇಂಥಾ ದುರ್ಗತಿ ಬರಲೇಬಾರದಿತ್ತು. ನೋಡಿದ ಯಾರಿಗಾದರೂ ಇದು ಅಯ್ಯೋ ಪಾಪ ಎನ್ನುವಂಥಾದ್ದೇ. ಬಹುಶಃ ಮೋದಿ ಪ್ರಮಾಣವಚನದ ಇಡೀ ಕಾರ್ಯಕ್ರಮವನ್ನು ಸೂಕ್ಷ್ಮವಾಗಿ ಗಮನಿಸಿದ ಯಾರಿಗಾದರೂ ಇದು ಅರ್ಥವಾಗಲೇಬೇಕು. ಮೊದಲು ಮೋದಿ ಆನಂತರ ರಾಜನಾಥ್, ಅರುಣ್ ಜೇಟ್ಲಿ, ಸುಷ್ಮಾ ಸ್ವರಾಜ್, ವೆಂಕಯ್ಯ ನಾಯ್ಡು ಗಡ್ಕರಿ ಮುಂತಾದ ಹಿರಿಯರೆಲ್ಲ ಒಬ್ಬೊಬ್ಬರಾಗಿ ಪ್ರಮಾಣವಚನ ಸ್ವೀಕರಿಸಿದರಲ್ಲವೆ?

ಹಾಗೆ ರಾಷ್ಟ್ರ ನಾಯಕ ಅನಂತ್‌ಕುಮಾರ್ ಹೆಸರೂ ವೆಂಕಯ್ಯ ನಾಯ್ಡು ಅಥವಾ ಗಡ್ಕರಿ ನಂತರ ಕೇಳಿಬರಬೇಕಿತ್ತಲ್ಲವೆ?

ಆದರೆ ಅನಂತ್ ಸರದಿ ಬಂದದ್ದು ತುಂಬಾ ಸಮಯದ ನಂತರ. ರಾಜನಾಥ್, ಜೇಟ್ಲಿ ಸುಷ್ಮಾ, ನಾಯ್ಡು ಗಡ್ಕರಿಯ ನಂತರ ಅಚಾನಕ್ಕೆಂಬಂತೆ ಸದಾನಂದ ಗೌಡರ ಹೆಸರು ಕೇಳಿಬಂತು. ಗೌಡ ಪ್ರಮಾಣವಚನ ಸ್ವೀಕರಿಸಿದ ನಂತರ ಅದೆಷ್ಟೋ ಕಿರಿಯ ಬಿಜೆಪಿ ನಾಯಕರಾದರೂ ಅನಂತ್ ಹೆಸರೇ ಕೇಳಿಬರದಿದ್ದಾಗ ಸಹಜವಾಗೇ ನೆರೆದವರೆಲ್ಲ ಅನಂತ್‌ಕುಮಾರ್ ಪಾಲಿಗೆ ಇನ್ನೇನು ಮಂತ್ರಿಗಿರಿಯಿಲ್ಲ ಎಂದೇ ಭಾವಿಸಿದ್ದರು. ಸಂಪುಟ ದರ್ಜೆಯ ಸಚಿವಗಿರಿ ಅನಂತ್ ಪಾಲಿಗೆ ದುರ್ಲಭವೆಂದೇ ಎಲ್ಲರೂ ಭಾವಿಸಿದ್ದರು. ಆಗ ಅನಂತ್ ಹೆಸರು ಕೇಳಿಬಂತು!

ಇದರರ್ಥ ಪ್ರಧಾನಿ ಮೋದಿಗೆ ಅನಂತ್ ಮಂತ್ರಿಯಾಗುವುದೇ ಇಷ್ಟವಿರಲಿಲ್ಲ. ಕೊನೆಕೊನೆಗೆ ಅಡ್ವಾಣಿ ಕಾಡಿಬೇಡಿ ತನ್ನ ಬಲಗೈ ಬಂಟನಿಗೆ ಮಂತ್ರಿಗಿರಿ ಕೊಡಿಸಬೇಕಾಯ್ತು. ಅದೂ ಬ್ರಾಹ್ಮಣ ಕೋಟಾದಲ್ಲಿ. ಮುಂಬರುವ ದಿನಗಳಲ್ಲಿ ಕರ್ನಾಟಕದ ಬಿಜೆಪಿ ಓಟ್‌ಬ್ಯಾಂಕ್ ಹೇಗೆ ದೀನದಲಿತರು ಹಿಂದುಳಿದ ಜಾತಿಗಳ ಪಾಲಿಗೆ ಮಾರಕವಾಗಿ ಪರಿಣಮಿಸಲಿದೆ ಎಂಬುದಕ್ಕೆ ಮುನ್ಸೂಚನೆಯಾಗಿಯೇ ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ವರ್ಗದ ಪ್ರತಿನಿಧಿಗಳನ್ನೇ ಆಯ್ದು ಮೋದಿ ಸಂಪುಟಕ್ಕೆ ಸೇರಿಸಲಾಗಿತ್ತು.

ಒಲಿಂಬ್ರಾ?

ಹಾಗೆ ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣರ ಒಗ್ಗಟ್ಟಿಗೆ ಅಡಿಪಾಯ ಹಾಕುತ್ತಲೇ ಯಡ್ಡಿಯನ್ನೂ ಉಪಾಯವಾಗಿ ತುಳಿಯುವಲ್ಲಿ ಬಿಜೆಪಿ ಯಶಸ್ವಿಯಾಗಿತ್ತು. ಏಕೆಂದರೆ ಭ್ರಷ್ಟಾಚಾರವೇ ಮುಖ್ಯವಾಗಿದ್ದರೆ ಯಡ್ಡಿಗೆ ಬಿಜೆಪಿ ಟಿಕೆಟ್ ಕೊಡಬೇಕಿರಲಿಲ್ಲ. ಟಿಕೆಟ್ ಕೊಡುವಾಗ ಪರಿಗಣಿಸದ ಭ್ರಷ್ಟಾಚಾರ ಮಂತ್ರಿಗಿರಿ ಹಂಚುವಾಗ ಹೇಗೆ ಮುಖ್ಯವಾಗಲು ಸಾಧ್ಯ.

ಹಾಗೆ ನೋಡಿದರೆ ಯಡ್ಡಿಗಿಂತಲೂ ಅನಂತ್‌ಕುಮಾರ್ ಮಹಾಭ್ರಷ್ಟ. 14 ಸಾವಿರ ಕೋಟಿಯ ಹುಡ್ಕೋ ಕರ್ಮಕಾಂಡದ ಮುಂದೆ ಯಡ್ಡಿ ಪಡೆದ ಮೂವತ್ತೋ ಇಪ್ಪತ್ತೋ ಕೋಟಿಯ ಗಣಿಲಂಚ ಯಾವ ಮಹಾ?

ಇನ್ನು ಸದಾನಂದಗೌಡ ಮುಖ್ಯಮಂತ್ರಿಯಾಗಿ ಜೈಲು ಪಾಲಾಗಲಿಲ್ಲ ಎಂಬುದನ್ನು ಬಿಟ್ಟರೆ ಸಾಚಾ ಏನಲ್ಲ. ಬಾಗಲೂರಿನಲ್ಲಿ ಸರ್ಕಾರಿ ಗೋಮಾಳ ಆಕ್ರಮಿಸಿ ಬಂಗಲೆ ನಿರ್ಮಿಸಿದ್ದು, ಅದನ್ನು ಮುಚ್ಚಿಟ್ಟು ಲೋಕಾಯುಕ್ತರನ್ನು ದಿಕ್ಕು ತಪ್ಪಿಸಿದ ಕೇಸು ಇವತ್ತಿಗೂ ಸದಾನಂದಗೌಡರ ಮೇಲಿದೆ. ಒಂದಲ್ಲ ಎರಡು ಕೇಸುಗಳಲ್ಲಿ ಲೋಕಾಯುಕ್ತ ಕೋರ್ಟಿನಿಂದ ಜಾಮೀನು ಪಡೆದೇ ಜೈಲು ಪಾಲಾಗುವುದರಿಂದ ಬಚಾವಾದ ಸದಾನಂದಗೌಡ ಕೂಡ ಭ್ರಷ್ಟಾಚಾರದಿಂದ ಮುಕ್ತರೇನಲ್ಲ.

ಹೀಗಾಗಿ ಯಡ್ಡಿ ಭ್ರಷ್ಟಾಚಾರದ ಕಾರಣಕ್ಕೆ ಕೇಂದ್ರ ಮಂತ್ರಿಯಾಗಲಿಲ್ಲ ಎಂಬುದೇ ಕಪಟ ನಾಟಕ. ಹಾಗೇ ಸದಾನಂದಗೌಡ ಶುದ್ಧ ಹಸ್ತನೆಂಬುದೂ ಅಷ್ಟೇ ಆತ್ಮವಂಚಕ. ಒಬ್ಬರನ್ನೊಬ್ಬರು ನುಂಗುವಷ್ಟು ಪ್ರಳಯಾಂತಕರನ್ನೇ ಹೆಕ್ಕಿ ಮೋದಿ ಸಂಪುಟವನ್ನು ತುಂಬಲಾಗಿದೆ. ಮೂರು ಬಲಾಢ್ಯ ಜಾತಿಗಳ ಧ್ರುವೀಕರಣವೆಂಬುದು ಮುಂಬರುವ ದಿನಗಳಲ್ಲಿ ಕರ್ನಾಟಕದ ಸಣ್ಣಪುಟ್ಟ ಶೋಷಿತ ಜಾತಿಗಳನ್ನು ಎಂಥಾ ದುರ್ಗತಿಗೆ ಕೊಂಡೊಯ್ಯಲಿದೆ ಎಂಬುದರ ಮುನ್ಸೂಚನೆಯೂ ಈ ಮೂಲಕವೇ ನಿಚ್ಚಳಗೊಂಡಿದೆ.

ಆಪಿಂದದ ವಿರುದ್ಧ ಒಲಿಂಬ್ರಾ, ಪದ್ಮಂತಕ್ಕಿದು ಮುನ್ಸೂಚನೆಯಷ್ಟೆ. ಕೆಳಜಾತಿ, ಅಲ್ಪಸಂಖ್ಯಾತರ ಪಾಲಿಗಿದು ಎಚ್ಚರಿಕೆ ಗಂಟೆಯೂ ಹೌದು

● ಡಾ. ಸೋಮನಾಥ್

ಮಂಡ್ಯ: ಮನ್‌ಮುಲ್ ಚುನಾವಣೆಯಲ್ಲಿ 'ಮನಿ'ಮಾಲ್!

ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ಮನ್‌ಮುಲ್) ಆಡಳಿತ ಮಂಡಳಿಯ 12 ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಚಾಣದ ಅಬ್ಬರ ಭರ್ಜರಿಯಾಗೇ ಸದ್ದು ಮಾಡಿದೆ. 12 ಸ್ಥಾನಗಳಲ್ಲಿ 7 ಸ್ಥಾನಗಳಲ್ಲಿ ದಿಗ್ವಿಜಯ ಸಾಧಿಸಿರುವ ಕಾಂಗ್ರೆಸ್, ಜೆಡಿಎಸ್ ಪಕ್ಷದ ತೆಕ್ಕೆಯಿಂದ ಮನ್‌ಮುಲ್ ಆಡಳಿತದ ಚುಕ್ಕಾಣಿ ಕಸಿದುಕೊಂಡಿದೆ. ಆಡಳಿತಾರೂಢ ಜೆಡಿಎಸ್ 5 ಸ್ಥಾನ ಗೆಲ್ಲುವುದಕ್ಕೇ ಸುಸ್ತು ಹೊಡೆದಿದೆ.

'ನಾ ನಿನಗೆ- ನೀ ನನಗೆ' ಎಂಬುದು ಸಹಕಾರಿ ಸಂಘದ ತತ್ವ. ಇದೇ ತತ್ವದ ಮನ್‌ಮುಲ್ ಕೂಡಾ ಜಿಲ್ಲೆಯ ಹಾಲು ಉತ್ಪಾದಕರ ಪಾಲಿಗೆ ಕಾಮಧೇನುವಿದ್ದಂತೆ. ಜಿಲ್ಲೆಯ ರೈತಾಪಿ ವರ್ಗದ ಆರ್ಥಿಕ ಸ್ವಾವಲಂಬನೆಯಲ್ಲಿ ಆದರ ಪಾತ್ರ ದೊಡ್ಡದು. ಹಾಲು ಹರಿದಾಡುವ ಮನಮುಲ್ ಆವರಣದಲ್ಲಿ ಮೊನ್ನೆ ನಡೆದ ಚುನಾವಣೆ ಸಂದರ್ಭದಲ್ಲಿ ಹಣದ ಹೊಳೆಯೇ ಹರಿದಾಡಿದ್ದು ವಿಶೇಷವಾಗಿತ್ತು. ಚುನಾವಣೆಯಲ್ಲಿ ಗೆಲ್ಲಲು ಕಾಂಗ್ರೆಸ್, ಜೆಡಿಎಸ್, ರೈತಸಂಘದ ಅಭ್ಯರ್ಥಿ ಸೇರಿದಂತೆ ಹಲವರು ಚೆಲ್ಲಿದ ಕೋಟ್ಯಾಂತರ ರೊಕ್ಕ ನೋಡಿದರೆ ರೈತರ ಪಾಲಿಗೆ ಕಾಮಧೇನುವಾಗಿರುವ ಮನ್‌ಮುಲ್‌ಗೆ ಮುಂದಿನ ದಿನಗಳ ಭ್ರಷ್ಟ ಭವಿಷ್ಯ ಕಾದಿರುವುದು ಗ್ಯಾರಂಟಿ. ಗೆಲ್ಲುವುದಕ್ಕೋಸ್ಕರ ಅಭ್ಯರ್ಥಿಗಳು ಪ್ರತಿ ಮತಕ್ಕೆ ಹರಿಸಿರುವ ಹಣದ ಲೆಕ್ಕ ನೋಡಿದರೆ ಮುಂದೊಂದು ದಿನ 'ಪೈಸಾ ವಸೂಲ್'ಗೆ ಅವರೆಲ್ಲಾ ಇಡೀ ಮನ್‌ಮುಲ್ ಅನ್ನೇ ಮುಂಡಾಯಿಸಿದರೂ ಅಚ್ಚರಿಪಡಬೇಕಿಲ್ಲ.

ಮಂಡ್ಯ ತಾಲ್ಲೂಕು ಕ್ಷೇತ್ರದಿಂದ 116 ಮತಪಡೆದು ಭರ್ಜರಿಯಾಗಿ ಗೆದ್ದಿರುವ ಕಾಂಗ್ರೆಸ್‌ನ ಯು.ಸಿ.ಶಿವಕುಮಾರ್ ಕೊಲೆ ಪ್ರಕರಣವೊಂದರ ಆರೋಪಿ! ಉಮ್ಮಡಹಳ್ಳಿ ಶಿವಪ್ಪ ಅಂತಲೇ ಹೆಸರಾಗಿರುವ ಈತ ಕಾಂಗ್ರೆಸ್‌ನ ಅಂಬಿ ಬಣದಲ್ಲಿದ್ದಾನೆ. ನಿರ್ದೇಶಕನಾಗುವುದಕ್ಕೋಸ್ಕರ ತನ್ನ ರೌಡಿ ಇಮೇಜ್ ಜೊತೆಗೆ ಪ್ರತಿ ಮತಕ್ಕೆ 25 ರಿಂದ 35 ಸಾವಿರ ಹಣವನ್ನೂ ಖರ್ಚು ಮಾಡಿದ್ದಾನೆ. ಅದೇರೀತಿ 96 ಮತಗಳಿಸಿ ಹಾಲಿ ನಿರ್ದೇಶಕ ಸ್ಥಾನವನ್ನು ಮರಳಿ ಪಡೆದಿರುವ ಸಾತನೂರು ಕಾಂಗ್ರೆಸ್‌ನ ಎಸ್.ಪಿ.ಮಹೇಶ್ ಕೂಡಾ ಒಂದೊಂದು ಮತಕ್ಕೆ 25-30 ಸಾವಿರ ಗೊಬ್ಬರ ಹಾಕಿದ್ದಾನೆ. ಅವನಿಗೆ ಬೆನ್ನೆಲುಬಾಗಿ ನಿಂತದ್ದು ಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿರುವ ಅವನಣ್ಣ ಎಸ್.ಪಿ.ಸತೀಶ್. ಇನ್ನು ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಮನ್‌ಮುಲ್‌ನ ಹಾಲಿ ನಿರ್ದೇಶಕ ಜೆಡಿಎಸ್‌ನ ಬಿಳಿದೇಗಲು ಚಂದ್ರು 97 ಮತ ಪಡೆದು ಪುನರ್ ಆಯ್ಕೆಯಾಗಿದ್ದಾನೆ.



ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಬೆಂಬಲಿಗನಾದ ಹುಳ್ಳೇನಹಳ್ಳಿಯ ಹೆಚ್.ಎಂ.ಶ್ಯಾಮ್‌ಸುಂದರ್ 94 ಮತ ಪಡೆದು ಗೆಲುವಿನ ಸನಿಹದಲ್ಲಿ ಮುಗ್ಗರಿಸಿದ್ದಾನೆ. ಕೆ.ಎಸ್.ಪುಟ್ಟಣ್ಣಯ್ಯನ ಸಹಕಾರ, ಸಹಾಯ ಎಲ್ಲಾ ಇದ್ದೂ ಅದಕ್ಕಿಂತಲೂ ಹೆಚ್ಚಾಗಿ ಬರೋಬ್ಬರಿ 35 ಲಕ್ಷ ರೂ.ಗಳನ್ನು ಚೆಲ್ಲಾಡಿಯೂ ಶ್ಯಾಮ್‌ಸುಂದರ್ ಸೋತಿರುವುದು ಅಚ್ಚರಿ ಮೂಡಿಸಿದೆ. ಸಂಸದ ಸಿ.ಎಸ್.ಪುಟ್ಟರಾಜು ಮತ್ತು ಶಾಸಕ ಚಲುವರಾಯಸ್ವಾಮಿ ಬೆಂಬಲಿಗ ಶ್ರೀಕಂಠೇಗೌಡ 65 ಮತ ಪಡೆದು ಹೀನಾಯವಾಗಿ ಸೋತಿದ್ದಾನೆ.

ಮದ್ದೂರು ತಾಲ್ಲೂಕು ಕ್ಷೇತ್ರದಿಂದ ಎಸ್.ಎಂ.ಕೃಷ್ಣ ಮಾನಸ ಪುತ್ರರೆಂದೇ ಹೆಸರಾದ ಮದ್ದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಂಟ್ರಾಕ್ಟರ್ ಕದಲೂರು ರಾಮಕೃಷ್ಣ 86 ಮತ ಪಡೆದು ವಿಜಯಿಯಾಗಿದ್ದಾನೆ. ಕೃಷ್ಣರ ನಾಮಬಲದ ಜೊತೆಗೆ ಲಕ್ಷ-ಲಕ್ಷ ರೊಕ್ಕವೂ ಈ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿರೋದು ತೆರೆದಿಟ್ಟ ಗುಟ್ಟು. ಎಂಎಲ್‌ಸಿ ಕದಲೂರು ರಾಮಕೃಷ್ಣ ಹಾಗೂ ತಮ್ಮಣ್ಣನ ಬೆಂಬಲ ಪಡೆದ ಜೆಡಿಎಸ್‌ನ ಕೆ.ಎಂ.ಉಮೇಶ್ 62 ಮತ ಪಡೆದು ಗೆಲುವಿನ ನಗೆ ಬೀರಿದ್ದಾನೆ. ಆದರೆ ಡಿ.ಸಿ.ತಮ್ಮಣ್ಣ ಹಾಗೂ ಚಲುವರಾಯಸ್ವಾಮಿ ನಡುವಿನ ಜಟಾಪಟಿಯಲ್ಲಿ ಜೆಡಿಎಸ್ ಮಾಜಿ ಅಧ್ಯಕ್ಷ ಚಿಕ್ಕೋನಹಳ್ಳಿ ತಮ್ಮಯ್ಯ ಕೇವಲ 35 ಮತ ಪಡೆದು ತನ್ನ ನಿರ್ದೇಶಕ ಸ್ಥಾನ ಉಳಿಸಿಕೊಳ್ಳುವಲ್ಲಿ ವಿಫಲನಾಗಿದ್ದಾನೆ. ಜೆಡಿಎಸ್‌ನ ಪಿ.ರಾಮೇಗೌಡ ಕೂಡಾ 60 ಮತ ಪಡೆದು ಸೋತಿದ್ದಾರೆ. ರಾಮೇಗೌಡ ಸೋಲಿಗೂ ಒನ್ಸ್‌ಎಗೇನ್ ತಮ್ಮಣ್ಣ-ಚೆಲುವಣ್ಣರ ಜಟಾಪಟಿಯೇ ಕಾರಣ. ಮಾಜಿ ಎಂಎಲ್‌ಸಿ ಮಧುಮಾದೇಗೌಡರ ಶಿಷ್ಯ ಅಣ್ಣೂರು ಸತೀಶ್ 35 ಮತ ಪಡೆದು ಸೋಲು ಕಂಡಿದ್ದಾನೆ.

ಮಳವಳ್ಳಿ ತಾಲ್ಲೂಕಿನಿಂದ ತನ್ನ ಸಂಘಟನಾ ಚತುರತೆ ಹಾಗೂ ಹಣಬಲದಿಂದ ಜೆಡಿಎಸ್‌ನ ವಿ.ಎಂ.ವಿಶ್ವನಾಥ್ ಆಯ್ಕೆಯಾಗಿದ್ದಾರೆ. ಪಾಂಡವಪುರ ತಾಲ್ಲೂಕಿನಿಂದ ಆಯ್ಕೆಯಾಗಿರುವ ಕಾಂಗ್ರೆಸ್ ಜಿ.ಇ. ರವಿಕುಮಾರ್ ಗೆಲುವಿಗೆ ಹಾಲಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಹಾಗೂ ಮಾಜಿ ಶಾಸಕ ಹಲಗೇಗೌಡರ ಪುತ್ರ ಜಿ.ಪಂ.ಮಾಜಿ ಸದಸ್ಯ ಮಂಜುನಾಥ್ ಬೆಂಬಲ ಕಾರಣವೆನ್ನುವುದು ಎಷ್ಟು ಸತ್ಯವೋ ಒಂದು ವೋಟಿಗೆ ಹಂಚಿದ 25 ಸಾವಿರ ಗಂಟು ಕೂಡಾ ಅಷ್ಟೇ ಕಾರಣ. ಇನ್ನು ಶ್ರೀರಂಗಪಟ್ಟಣ-ತಾಲ್ಲೂಕಿನಿಂದ ಜೆಡಿಎಸ್‌ನ ಬಿ.ಬೋರೇಗೌಡ, ಶಾಸಕ ರಮೇಶ್ ಬಂಡೀಸಿದ್ದೇಗೌಡರ ಬೆಂಬಲ ಹಾಗೂ ಕೈಬಿಚ್ಚಿ ಕೊಟ್ಟ ಕಾಂಚಾಣದಿಂದ 33 ಪಡೆದು ಮನ್‌ಮುಲ್ ನಿರ್ದೇಶಕರಾಗಿ ಪುನರಾಯ್ಕೆಯಾಗಿದ್ದಾರೆ. ಇಲ್ಲಿ ಕಾಂಗ್ರೆಸ್‌ನ ರಾಮಕೃಷ್ಣ 29 ಮತ ಪಡೆದು ಸೋಲು ಕಂಡಿದ್ದಾರೆ.

ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಎರಡು ಸ್ಥಾನಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳಾದ ಶೀಳನೆರೆ ಅಂಬರೀಶ್ ಮತ್ತು ಕೆ.ರವಿ ಆರಿಸಿಬಂದಿದ್ದಾರೆ. ಜಿ.ಪಂ. ಮಾಜಿ ಸದಸ್ಯರಾದ ಕಾಂಗ್ರೆಸ್‌ನ ಶೀಳನೆರೆ ಅಂಬರೀಶ್ ಅತಿ ಹೆಚ್ಚು 123 ಮತಗಳ ಅಂತರದಿಂದ ಗೆದ್ದಿದ್ದರೆ ಕೆ.ರವಿ 103 ಮತ ಪಡೆದು ಗೆಲುವಿನ ನಗೆ ಬೀರಿದ್ದಾರೆ. ಹಾಲು ಉತ್ಪಾದಕರ ಸಹಕಾರ ಸಂಘಗಳ ಮತದಾರರನ್ನು ಚುನಾವಣೆಗೂ ಮುನ್ನವೇ ಪ್ರವಾಸಕ್ಕೆ ಕರೆದುಕೊಂಡು ಹೋದ ಇವರಿಬ್ಬರ ಐಡಿಯಾ ಭರ್ಜರಿಯಾಗಿ ವರ್ಕ್‌ಔಟ್ ಆಗಿದೆ. ಅಲ್ಲದೆ ಯಥಾಪ್ರಕಾರ ಮದ್ಯ-ಮಾಂಸದ ಸಮಾರಾಧನೆ ಜೊತೆಗೆ ಕೈಗೆ 20-25 ಸಾವಿರ ತುರುಕಿದ್ದೂ ಅವರಿಗೆ ಮತಗಳ ರೂಪದಲ್ಲಿ ವಾಪಾಸ್ ಬಂದಿತ್ತು. ಎರಡು ಬಾರಿ ಮನ್‌ಮುಲ್ ಅಧ್ಯಕ್ಷನಾಗಿದ್ದ ಜೆಡಿಎಸ್‌ನ ಎಂ.ಬಿ.ಹರೀಶ್ ಕೇವಲ 64 ಮತ ಪಡೆದು ಹೀನಾಯವಾಗಿ ಸೋತಿರುವುದು ಭಾರೀ ಅಚ್ಚರಿ ಮೂಡಿಸಿದೆ. ತನ್ನ ಅಧ್ಯಕ್ಷ ಅವಧಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಟ್ಟಡಕ್ಕೆ ಆರ್ಥಿಕ ನೆರವು ನೀಡಿರುವುದು, ಸುತ್ತು ನಿಧಿ ಸಾಲ ನೀಡಿರುವುದು ಸೇರಿದಂತೆ ಹಲವು ಅಭಿವೃದ್ಧಿ ಕೆಲಸಗಳೇ ನನ್ನನ್ನು ಗೆಲ್ಲಿಸಿ ಬಿಡುತ್ತವೆ ಎನ್ನುವ ಅತಿಯಾದ ಆತ್ಮವಿಶ್ವಾಸದಿಂದ ಕೈ ಬಿಚ್ಚದ್ದು ಈಗವನ ಕೈಕಚ್ಚಿದೆ.


ನಾಗಮಂಗಲ ತಾಲ್ಲೂಕಿನ್ನ ಎರಡು ಸ್ಥಾನಗಳ ಪೈಕಿ ಕಾಂಗ್ರೆಸ್ ಮತ್ತು ಜೆಡಿಎಸ್ ತಲಾ ಒಂದೊಂದು ಸ್ಥಾನ ಗೆದ್ದುಕೊಂಡಿವೆ. ಮಾಜಿ ಶಾಸಕ ಸುರೇಶ್‌ಗೌಡ ಬಣದ ಕಾಂಗ್ರೆಸ್‌ನ ಚೆಟ್ಟಸ್ವಾಮಿಗೌಡ ಅತಿಹೆಚ್ಚು 126 ಮತಗಳಿಸಿ ಗೆದ್ದು ಬಂದಿದ್ದರೆ, ಶಾಸಕ ಚಲುವರಾಯಸ್ವಾಮಿ ಬೆಂಬಲಿಗ ಕೃಷ್ಣೇಗೌಡ 103 ಮತ ಪಡೆದು ಜೆಡಿಎಸ್ ಪರವಾಗಿ ವಿಜಯ ಪತಾಕೆ ಹಾರಿಸಿದ್ದಾರೆ. ನಾಗಮಂಗಲದಲ್ಲೂ

ದಾವಣಗೆರೆ: ಶಾಮನೂರರ ಎದುರೇ ರೈತರಿಗೆ ದ್ರೋಹ

ದಾವಣಗೆರೆ ಕೃಷಿಮಾರುಕಟ್ಟೆಯ ನೂರಾರು ಎಕರೆ ಭೂಮಿ ನುಂಗಣ್ಣರ ಪಾಲಾಗುತ್ತಿದೆ. ಸಾವಿರಾರು ದಲ್ಲಾಳಿ ಮಂಡಿಗಳು ವಹಿವಾಟು ನಡೆಸುವ ಈ ಎಪಿಎಂಸಿ ಮಾರುಕಟ್ಟೆ ದಾವಣಗೆರೆ ಮಾತ್ರವಲ್ಲದೆ ಸುತ್ತಮುತ್ತಲ ಚಿತ್ರದುರ್ಗ, ಬಳ್ಳಾರಿ, ಹಾವೇರಿ, ಶಿವಮೊಗ್ಗ ಜಿಲ್ಲೆಗಳ ರೈತರ ಪಾಲಿನ ವ್ಯವಹಾರ ಕೇಂದ್ರ. ಈರುಳ್ಳಿ-ತರಕಾರಿ-ತೆಂಗಿನಕಾಯಿ ಮೊದಲಾದ ಕಮರ್ಷಿಯಲ್ ಫಸಲುಗಳು ದಿನಕ್ಕೆ ಏನಿಲ್ಲವೆಂದರೂ ಕೋಟ್ಯಾಂತರ ರೂಪಾಯಿ ವಹಿವಾಟು ನಡೆಸುತ್ತವೆ. ಅಂತಹ ಮಾರುಕಟ್ಟೆಗೆ ಈಗ ನೆಲಗಳ್ಳರ ಕಾಟ ಶುರುವಾಗಿದೆ. ಈ ಹಿಂದೆ ಕೃಷಿಮಾರುಕಟ್ಟೆಯ ಬೆಲೆಬಾಳುವ ನಿವೇಶನವನ್ನೇ ಜಾತಿ ಪ್ರಭಾವದಿಂದ ಶಿವಾ ಬ್ಯಾಂಕಿಗೆ ಬರೆದುಕೊಡಲಾಗಿತ್ತು. ರೈತ ಸಂಘದವರು ಉಗ್ರವಾಗಿ ಪ್ರತಿಭಟಿಸಿದರೂ ಸಾರ್ವಜನಿಕ ನಿವೇಶನ ಉಳಿಸುವ ಉಸಾಬರಿಗೆ ಯಾರೂ ಮುಂದಾಗಲಿಲ್ಲ. ಚಿತ್ರದುರ್ಗ ಜಿಲ್ಲೆಯಿಂದ ದಾವಣಗೆರೆ ಪ್ರತ್ಯೇಕಗೊಂಡು ಹೊಸ ಜಿಲ್ಲೆಯಾದಾಗ ರೈತರು ತಂಗಲು ರೈತಭವನವನ್ನು ನಿರ್ಮಾಣ ಮಾಡಲಾಗಿತ್ತು. ರೈತರಿಗೆ ಉಪಯೋಗವಾಗ ಬೇಕಿದ್ದ ಭವನವನ್ನು ಜಿಲ್ಲಾಧಿಕಾರಿ ಕಚೇರಿಗೆ ಬಾಡಿಗೆ ನೀಡಿದ ಎಪಿಎಂಸಿಯ ಆಡಳಿತ ಮಂಡಳಿ ಐದಾರು ವರ್ಷ ವಸೂಲಿಮಾಡಿದ ಬಾಡಿಗೆಯ ಗಂಟನ್ನೇ ನಾಪತ್ತೆ ಮಾಡಿದ್ದು ಈಗ ಮುಗಿದ ಅಧ್ಯಾಯ.

ಸದ್ಯ ಹೊಗೆಯಾಡುತ್ತಿರುವ ಹಗರಣದ ಕಿಡಿ ಹೊತ್ತಿದ್ದು 1987ನೇ ಇಸವಿಯಲ್ಲಿ. ಆಗ ಚಿತ್ರದುರ್ಗ ಜಿಲ್ಲಾಧಿಕಾರಿಯಾಗಿದ್ದ (ದಾವಣಗೆರೆ ಆಗಿನ್ನೂ ಚಿತ್ರದುರ್ಗ ಜಿಲ್ಲೆಯಲ್ಲೇ ಇತ್ತು) ಅಮಿತಾ ಪ್ರಸಾದ್ ಎಂಬಾತ 'ತಿರುಮಲ ಬಾಲಾಜಿ' ಎನ್ನುವ ಒಂದು ನಿಗೂಢ ಟ್ರಸ್ಟಿಗೆ ದಾವಣಗೆರೆ ಎಪಿಎಂಸಿಯ ಬೆಲೆಬಾಳುವ ನಿವೇಶನವೊಂದನ್ನು ಬಿಡಿಗಾಸಿಗೆ ಬರೆದುಕೊಟ್ಟಿದ್ದರು. ಅಸಲಿಗೆ ಎಪಿಎಂಸಿಗೆ ಸಂಬಂಧಿಸಿದ ನಿವೇಶನವನ್ನು ಯಾವುದೇ ಧಾರ್ಮಿಕ ಸಂಸ್ಥೆಗಳಿಗಾಗಲಿ, ಸಾರ್ವಜನಿಕ ಸಂಘಗಳಿಗಾಗಲಿ ಪರಭಾರೆ ಮಾಡಬಾರದು. ಆದರೆ ನಿಯಮಗಳನ್ನೆಲ್ಲ ಗಾಳಿಗೆ ತೂರಿದ್ದ ಅಂದಿನ ಜಿಲ್ಲಾಧಿಕಾರಿ ಟ್ರಸ್ಟ್ ಹೆಸರಿಗೆ ನಿವೇಶನ ನೋಂದಣಿ ಮಾಡಿಕೊಟ್ಟಿದ್ದರು.

ಈ ತಿರುಮಲ ಬಾಲಾಜಿ ಟ್ರಸ್ಟ್ ವೀರಭದ್ರರಾವ್



ಎಂಬಾತನ ಹೆಸರಿಗೆ ನೋಂದಣಿಯಾಗಿದ್ದು ಈ ವ್ಯಕ್ತಿಯ ಕುಟುಂಬದವರೇ ಟ್ರಸ್ಟ್‌ನ ಸದಸ್ಯರಾಗಿರುವುದು ಆ ಟ್ರಸ್ಟ್‌ನ ಪ್ರಾಮಾಣಿಕತೆಯನ್ನು ಬಯಲು ಮಾಡುತ್ತದೆ. ಆದರೆ ಆ ಟ್ರಸ್ಟ್‌ನ ಚಹರೆಯೆ ಈಗ ಬದಲಾಗಿಹೋಗಿದೆ. ಏಕೆಂದರೆ ಆದರ ಅಧ್ಯಕ್ಷರಾಗಿ ಈಗ ಕುಳಿತಿರೋದು ದಾವಣಗೆರೆ ಧಣಿ ಶಾಮನೂರು ಶಿವಶಂಕರಪ್ಪ! 1987ರಿಂದ ಕಾಯಂ ವಿಳಾಸವೇ ಇಲ್ಲದೆ ಅಲೆದಾಡಿಕೊಂಡಿದ್ದ ಈ ಬೇನಾಮಿ ಟ್ರಸ್ಟ್ ಶಾಮನೂರು ಶಿವಶಂಕರಪ್ಪ ಮಂತ್ರಿಯಾಗುತ್ತಿದ್ದಂತೆಯೇ ಚುರುಕಾಗಿ ಎಪಿಎಂಸಿಯ ಖಾಲಿ ನಿವೇಶನದಲ್ಲಿ ತಿರುಪತಿ ತಿಮ್ಮಪ್ಪನ ದೇವಾಲಯದ ಕಟ್ಟಡವೆಬ್ಬಿಸಲು ತರಾತುರಿ ತೋರಿಸುತ್ತಿರೋದು ಹಲವು ಅನುಮಾನಗಳನ್ನು ಹುಟ್ಟುಹಾಕುತ್ತಿದೆ. ಪೂನಾ-ಬೆಂಗಳೂರು ಹೆದ್ದಾರಿಯಲ್ಲಿ ಹಳೇ ಜಿಲ್ಲಾಧಿಕಾರಿಗಳ ಕಟ್ಟಡದ ಮಗ್ಗುಲಲ್ಲೇ ಇರುವ ಆ ನಿವೇಶನ ಈಗಿನ ಮಾರುಕಟ್ಟೆಯಲ್ಲಿ ಏನಿಲ್ಲವೆಂದರೂ 20 ಕೋಟಿಗೆ ತೂಗುತ್ತದೆ.

ಜಿಲ್ಲಾಧಿಕಾರಿಯಿಂದ ಹೀಗೆ ಅಕ್ರಮವಾಗಿ ಪರಭಾರೆಯಾದ ನಿವೇಶನದ ಬಗ್ಗೆ ರೈತಸಂಘದವರು 2008ರಲ್ಲೇ ತಗಾದೆ ತೆಗೆದಿದ್ದರು. ಆಗಿನ್ನೂ ನಿವೇಶನ ಅಧಿಕೃತವಾಗಿ ಟ್ರಸ್ಟ್ ಹೆಸರಿಗೆ ನೋಂದಣಿ ಆಗಿರಲಿಲ್ಲ. ಗಲಾಟೆ ಶುರುವಾಗುತ್ತಿದ್ದಂತೆ ಆತುರಾತುರದಲ್ಲಿ ನಿವೇಶನವನ್ನು ಟ್ರಸ್ಟ್ ಹೆಸರಿಗೆ ರಿಜಿಸ್ಟರ್ ಮಾಡಿಕೊಡಲಾಗಿತ್ತು. ಇದರ ವಿರುದ್ಧ ರೈತಸಂಘ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ದಾವೆಯನ್ನೂ ಹೂಡಿತ್ತು. ಈ ಬಗ್ಗೆ ಸೂಕ್ತ ದಾಖಲೆ ಒದಗಿಸುವಂತೆ ನ್ಯಾಯಾಲಯದಿಂದ ಎಪಿಎಂಸಿಗೆ ನೋಟಿಸೂ ಜಾರಿಯಾಗಿತ್ತು. ದುರಂತವೆಂದರೆ ತಿರುಮಲ ಬಾಲಾಜಿ ಟ್ರಸ್ಟಿಗೆ ನಿವೇಶನ ನೀಡಿದ್ದರ ಬಗ್ಗೆ ಯಾವುದೇ ದಾಖಲೆಗಳನ್ನು ಎಪಿಎಂಸಿ ಆಡಳಿತ ವರ್ಗ ಸಮರ್ಪಕವಾಗಿ ಒದಗಿಸಲೇ ಇಲ್ಲ. ವರ್ಷಾನುಗಟ್ಟಲೆ ನ್ಯಾಯಾಲಯದಲ್ಲಿ ಕೊಳೆತ ಕೇಸು ಬಿದ್ದುಹೋಗಿತ್ತು. ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೂ ಮೊರೆ ಹೋಗಲಾಯಿತಾದರು ಎಪಿಎಂಸಿಯ ನಿರ್ಲಕ್ಷ್ಯ ಧೋರಣೆಯಿಂದ ಅಲ್ಲೂ ನಿವೇಶನಕ್ಕೆ ಸಂಬಂಧಿಸಿದ ತಕರಾರು ಅರ್ಜಿ ಬರಕತ್ತಾಗಲೇ ಇಲ್ಲ. ಸರ್ವೋಚ್ಚ ನ್ಯಾಯಾಲಯದಲ್ಲಿ ಎಪಿಎಂಸಿ ಕಾರ್ಯದರ್ಶಿ ಅದು ಮಾರುಕಟ್ಟೆ ಆಸ್ತಿ ಎಂದು ದೃಢೀಕರಿಸುವ ಯಾವೊಂದು ದಾಖಲಾತಿಯನ್ನೂ ಸಮರ್ಪಕವಾಗಿ ಸಲ್ಲಿಸದಿದ್ದುದು ಟ್ರಸ್ಟಿಗೆ ವರದಾನವಾಯಿತು. ಆಗಿನ ಎಪಿಎಂಸಿ ಕಾರ್ಯದರ್ಶಿ ಕುಬೇರನಾಯ್ಕ ಟ್ರಸ್ಟಿನಿಂದ ಅದೆಂಥಾ ಅಮೇಧ್ಯ ಮೇದಿದ್ದನೋ ಆ ತಿರುಪತಿ ತಿಮ್ಮಪ್ಪನೇ ಬಲ್ಲ.

ತೀರಾ ಇತ್ತೀಚೆಗೆ ಅಂದರೆ ಶಾಮನೂರು ಶಿವಶಂಕರಪ್ಪ ಮಂತ್ರಿಯಾದ ಮೇಲೆ 2013-14ರಲ್ಲಿ ಎಪಿಎಂಸಿ ಕಾರ್ಯದರ್ಶಿಯಾದ ನರಸಿಂಹಮೂರ್ತಿ ಎನ್ನುವ ದಗಲುಬಾಜಿ ಆಸಾಮಿ ಸಮಿತಿ ಎದುರು ನಿವೇಶನದ ಕಡತ ಇಟ್ಟವನಂಗೆ ಮಾಡಿ ಸರ್ವಾನುಮತದ ಮುದ್ರೆ ಒತ್ತಿಸಿ ನಿವೇಶನವನ್ನು ಶಾಮನೂರು ಅಧ್ಯಕ್ಷಗಿರಿಯ ತಿರುಮಲ ಬಾಲಾಜಿ ಟ್ರಸ್ಟ್‌ಗೆ ಬರೆದು ಕೊಟ್ಟುಬಿಟ್ಟ.

ಸ್ವತಃ ಶಾಮನೂರು ಶಿವಶಂಕರಪ್ಪನವರೇ ಕೃಷಿಮಾರುಕಟ್ಟೆ ಸಚಿವರು ಕಮ್ ತಿರುಮಲಾ ಬಾಲಾಜಿ ಟ್ರಸ್ಟಿನ ಹಾಲೀ ಅಧ್ಯಕ್ಷರೂ ಆಗಿರುವುದರಿಂದ ಯಾರ ಪ್ರತಿರೋಧವನ್ನೂ ಲೆಕ್ಕಿಸದೆ ಆ ನಿವೇಶನದಲ್ಲಿ ತಿಮ್ಮಪ್ಪನನ್ನು ನೆಲೆಗೊಳಿಸಲು ಭವ್ಯಕಟ್ಟಡ ಕಟ್ಟಡ ತಲೆ ಎತ್ತುತ್ತಿದೆ. ಹಾಗಂತ ರೈತಪರ ಸಂಘಟನೆಗಳೇನು ಸುಮ್ಮನಿರಲಿಲ್ಲ. ಕರ್ನಾಟಕ ರಾಜ್ಯರೈತರ ಸಂಘ ಮತ್ತು ಹಸಿರುಸೇನೆ ಕಾರ್ಯಕರ್ತರು ತಲೆಯತ್ತುತ್ತಿರುವ ಕಟ್ಟಡವನ್ನು ನೆಲಸಮ ಮಾಡುವ ಪ್ರಯತ್ನಕ್ಕೆ ಮುಂದಾಗಿದ್ದಾರಾದರು ಆ ಪ್ರತಿಭಟನೆಗೆ ಕವಡೆ ಕಿಮ್ಮತ್ತಿನ ಬೆಲೆ ಸಿಕ್ಕಿಲ್ಲ.

ಇಷ್ಟೆಲ್ಲಾ ಅಪರಾತಪರಾಗಳ ನಡುವೆಯೇ ಎಪಿಎಂಸಿ ಕಾರ್ಯದರ್ಶಿ ಮಗದೊಂದು ಅನಾಹುತ ಮಾಡಿದ್ದಾನೆ. ಇದೀಗಷ್ಟೆ ತಲೆ ಎತ್ತುತ್ತಿರುವ ತಿರುಮಲ ಬಾಲಾಜಿ ದೇವಾಲಯಕ್ಕೆ ಸಮರ್ಪಕವಾದ ರಸ್ತೆ ನಿರ್ಮಾಣಕ್ಕೆ ಅನುವು ಮಾಡಿಕೊಂಡಲೆಂದೇ ಕ್ರಮಸಂಖ್ಯೆ 6, 7, 8 ರಲ್ಲಿ ಈಗಲೂ ವಹಿವಾಟು ನಡೆಸುತ್ತಿರುವ ಸುಸಜ್ಜಿತ ಮೂರು ಮಳಿಗೆಗಳನ್ನು ನೆಲಸಮ ಮಾಡಿಸಲು ರಾಜ್ಯಕೃಷಿ ಮಾರುಕಟ್ಟೆ ನಿರ್ದೇಶಕ ವಸ್ತ್ರದ್‌ರಿಂದಲೇ ಆದೇಶ ಹೊರಡಿಸಿದ್ದಾನೆ. ಇಂಥದೊಂದು ಆದೇಶ ನೀಡುವ ಮುನ್ನ ನಿವೇಶನ ಯಾವ ಉದ್ದೇಶಕ್ಕಾಗಿ ಬಳಕೆಯಾಗುತ್ತಿದೆ, ಹಾಲಿ ಮಳಿಗೆಗಳನ್ನಾದರು ಯಾಕೆ ಡೆಮಾಲೀಶ್ ಮಾಡಬೇಕು ಎನ್ನುವ ವಿವೇಚನೆಯನ್ನೇ ವಸ್ತ್ರದ್ ಸಾಹೇಬರು ಮಾಡಬೇಕಿತ್ತು.

ಹಾಗೆ ನೋಡಿದರೆ ವಸ್ತ್ರದ್ 2009 ರಿಂದ 2013ರ ತನಕ ದಾವಣಗೆರೆ ಜಿಲ್ಲಾಧಿಕಾರಿಯಾಗಿದ್ದಂತವರು. ಕೃಷಿಮಾರುಕಟ್ಟೆಯ ವಹಿವಾಟಿನ ಒಳಮರ್ಮಗಳನ್ನೆಲ್ಲ ಹತ್ತಿರದಿಂದ ಕಂಡಿದ್ದರು. ಅಷ್ಟೇಅಲ್ಲ, ಎಪಿಎಂಸಿ ಅವ್ಯವಹಾರದ ಮೊಸರನ್ನೂ ತಮ್ಮ ಮುಸುಡಿಗೆ ಮೆತ್ತಿಕೊಂಡಿದ್ದರು. ಇವರು ಜಿಲ್ಲಾಧಿಕಾರಿಯಾಗಿದ್ದಾಗ ಎಪಿಎಂಸಿ ಕಾರ್ಯದರ್ಶಿ ಆರ್.ಎಂ.ಪಾಟೀಲ್ ಎಂಬ ಕಡುಭ್ರಷ್ಟನ ಜೊತೆ ಸೇರಿಕೊಂಡು ನಡೆಸಿದ ಗೋಲ್‌ಮಾಲ್ ಇವತ್ತಿಗೂ ಕರಾಳ ನೆನಪಿನಂತಿದೆ. ಈ ಆರ್.ಎಂ.ಪಾಟೀಲ್ ದಲ್ಲಾಳಿ ಅಂಗಡಿ ಮಾಲೀಕರಿಗೆಲ್ಲ ತೆರಿಗೆ ಕದಿಯುವ ಪಾಠಭೋದಿಸಿ, ಕದ್ದ ತೆರಿಗೆಯಲ್ಲಿ ಅಮೇಧ್ಯ ತಿಂದು ಸುದ್ದಿಯಾಗಿದ್ದಂತವ.

2011ರಲ್ಲಿ 46 ತರಕಾರಿ ಮಳಿಗೆಗಳನ್ನು ಹರಾಜು ಕರೆದ ಡಿ.ಸಿ ವಸ್ತ್ರದ್-ಎಪಿಎಂಸಿ ಕಾರ್ಯದರ್ಶಿ ಆರ್.ಎಂ.ಪಾಟೀಲ್ ಜೋಡಿ ಅನಾಮತ್ತು 46 ಲಕ್ಷವನ್ನು ಜೇಬಿಗಿಳಿಸಿಕೊಂಡಿತ್ತು. 19.05.2011ರಂದು (ಗುರುವಾರ) 46 ಮಾರುಕಟ್ಟೆ ಮಳಿಗೆಗಳನ್ನು ಮಾರಾಟಗಾರರಿಗೆ ಅಲಾಟ್‌ಮಾಡಲು ಚುನಾಯಿತ ಸಮಿತಿಯ ಮೀಟಿಂಗ್ ಕರೆದಿದ್ದರು. ಆ ಸಭೆಯಲ್ಲಿ 20x50 ಚದರ ಅಡಿ ಮಳಿಗೆಗಳನ್ನು 7.8 ಲಕ್ಷಕ್ಕೂ, 20x70 ಚದರ ಅಡಿ ವಿಸ್ತೀರ್ಣದ ಮಳಿಗೆಗಳನ್ನು 8 ಲಕ್ಷಕ್ಕೂ ಬಿಕರಿ ಮಾಡುವುದಾಗಿ ಒಪ್ಪಿಗೆ ತೆಗೆದುಕೊಂಡು ಎಲ್ಲಾ ಚುನಾಯಿತ ಸದಸ್ಯರ ಸಹಿ ಪಡೆದಿದ್ದರು. ಅನಂತರ ನಡೆದಿದ್ದೆಲ್ಲಾ ಈ ದಗಲ್ಬಾಜಿ ಜೋಡಿಯ ಕಣ್ಕಟ್ ಮೋಡಿ. ಯಾಕೆಂದರೆ

ಲುವಿಗೋಸ್ಕರ ಹಣ ಹರಿದಾಡಿದೆ ಅನ್ನೋದನ್ನು ತ್ಯೇಕವಾಗಿ ಹೇಳಬೇಕಿಲ್ಲ. ಮನ್‌ಮುಲ್‌ನಲ್ಲಿ ವ್ಯವಸ್ಥಾಪಕ ರ್ದೇಶಕನಾಗಿದ್ದ ಡಾ.ಕೆ.ಎಲ್.ಗಜೇಂದ್ರನ್ ಅಲ್ಲಿ ನಡೆಯುವ ರೀದಿ ಅವ್ಯವಹಾರ, ನೇಮಕಾತಿ ನೆಪದ ಸುಲಿಗೆಗಳನ್ನು ತ್ತಿರದಿಂದ ಕಂಡು ಪ್ರಚೋದಿತನಾಗಿ ನಿರ್ದೇಶಕನಾಗಿ ಂದಾಗಬಹುದೆಂದು ಚುನಾವಣೆಗೆ ಸ್ಪರ್ಧಿಸಿ ಕೇವಲ] ಮತ ಪಡೆದು ಹೀನಾಯವಾಗಿ ಸೋತಿದ್ದಾನೆ. ಡಿಎಸ್‌ನ ಕೆ.ಪಿ.ಶಿವನಂಜೇಗೌಡ 96 ಮತ ಪಡೆದು ಸೋತಿದ್ದರೆ, ಮಾಜಿ ಶಾಸಕ ಸುರೇಶ್‌ಗೌಡರ ಮತ್ತೋರ್ವ ಷ್ಯ ಎನ್.ಜೆ.ರಾಜೇಶ ಕೇವಲ 24 ಮತ ಪಡೆದು ಹೀನಾಯವಾಗಿ ಸೋತಿದ್ದಾರೆ.

ಕಾಂಚಾಣದ ನರ್ತನ

ಮಂಡ್ಯ ಜಿಲ್ಲೆಯ ರೈತರ ಪಾಲಿಗೆ ಸಂಜೀವಿನಿಯಾಗಿರುವ ಮಂಡ್ಯ ಜಿಲ್ಲಾ ಹಾಲು ಒಕ್ಕೂಟ (ಮನ್‌ಮುಲ್) ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಗೆದ್ದವರು ಮತ್ತು ಸೋತವರು ಖರ್ಚು ಮಾಡಿದ ಹಣ 10 ಕೋಟಿಗೂ ಹೆಚ್ಚು. ಚುನಾವಣೆಗೆ ನಿಂತ ಎಲ್ಲಾ ಅಭ್ಯರ್ಥಿಗಳು ಕಾಂಚಾಣದ ನರ್ತನ ಮಾಡಿಸಿದ್ದಾರೆ. ಲಕ್ಷ ಲಕ್ಷ ಸುರಿದು ಕೋಟಿಕೋಟಿ ರೊಕ್ಕ ಬಾಚುವ ಸಲುವಾಗಿಯೇ ಗೆದ್ದು ನಿರ್ದೇಶಕರಾಗುವ ಇಂತಹವರಿಂದ ಮನ್‌ಮುಲ್ ಅಭಿವೃದ್ಧಿ ಎಂಬುದು ಕನಸಿನ ಮಾತು. ಖರೀದಿಯಲ್ಲಿ ನಡೆಯುವ ವ್ಯವಹಾರ, ನೇಮಕಾತಿಯಲ್ಲಿ ಕೈಗೆ ಬರುವ ಲಕ್ಷಾಂತರ ಹಣದ ಆಸೆಗಾಗಿಯೇ ಗೆದ್ದು ಬರುವ ನಿರ್ದೇಶಕರು ತಮ್ಮ ಇಷ್ಟಾನುಸಾರ ಮನ್‌ಮುಲ್ ಲೂಟಿ ಹೊಡೆಯುತ್ತಾರೆಂಬುದು ಅಕ್ಷರಶಃ ಸತ್ಯ. ಇದನ್ನು ಚೆನ್ನಾಗಿ ಅರಿತಿರುವ ಹಾಲು ಉತ್ಪಾದಕರ ಸಂಘಗಳ ಮತದಾರರು ಕೂಡ 25-30 ಸಾವಿರಕ್ಕೆ ತಮ್ಮ ಮತವನ್ನು ಮಾರಿಕೊಂಡಿದ್ದಾರೆ. ಮದ್ಯ-ಬಾಡೂಟದ ಸಮಾರಾಧನೆಯನ್ನು ಎಲ್ಲರೂ ಮಾಡಿದ್ದಾರೆ. ಕಂಠಪೂರ್ತಿ ಕುಡಿದು, ತಿಂದು, ಕೈ ತುಂಬಾ ರೊಕ್ಕ ತೆಗೆದುಕೊಂಡ ಮತದಾರರು ಮನ್‌ಮುಲ್ ಲೂಟಿಗೆ ಹೊಸ ನಿರ್ದೇಶಕರಿಗೆ ಗ್ರೀನ್‌ಸಿಗ್ನಲ್ ನೀಡಿದ್ದಾರೆ. ಇತ್ತೀಚೆಗಷ್ಟೇ ವಿದೇಶಿ ಹಾಲಿನ ಉತ್ಪನ್ನಗಳು ಮಾರುಕಟ್ಟೆಗೆ ಬಂದ ಪರಿಣಾಮ ಮನ್‌ಮುಲ್ ಉತ್ಪನ್ನಗಳಿಗೆ ಹೊಡೆತ ಬಿದ್ದು ಸಂಕಷ್ಟಕ್ಕೆ ಸಿಲುಕಿತ್ತು. ಈಗಷ್ಟೆ ನಷ್ಟದಿಂದ ಚೇತರಿಸಿಕೊಳ್ಳುತ್ತಿದೆ. ಆದರೆ ಲಕ್ಷಾಂತರ ಹಣ ಹೂಡಿ ಮುಂದಿರುವ ನಿರ್ದೇಶಕರು ಮನ್‌ಮುಲ್ ಅದಿನ್ನಾವ ರೀತಿ ಹರಿದು ಮುಕ್ಕಿ ನಷ್ಟಕ್ಕೀಡುಮಾಡುತ್ತಾರೊ ಎಂಬ ಆತಂಕ ಹೈನುಗಾರ ರೈತರದ್ದು.

● ಎನ್.ನಾಗೇಶ್

ಸದಸ್ಯರಿಂದ ಸಹಿ ಪಡೆದಿದ್ದ ಪತ್ರದಲ್ಲಿ 7.8 ಲಕ್ಷದ ಮೇಲೆ ಟೆಂಡರ್ ಬಳಿದು ಕಡಿಮೆ ದರ 5.8 ಎಂದು ಟೈಪ್ ಮಾಡಿಸಿಕೊಂಡಿದ್ದರು. ಹಾಗೊಮ್ಮೆ ಸಭೆಯ ನಂತರ ದರಗಳು ಬದಲಾಗದೊಮ್ಮೆ ಪರಿಷ್ಕರಣೆಗೊಂಡಿದ್ದರೆ ಹೊಸದಾಗಿ ಠರಾವು ಸೃಷ್ಟಿಸಿ ಅದರ ಮೇಲೆ ಚುನಾಯಿತ ಸದಸ್ಯರ ಸಹಿ ಪಡೆಯಬೇಕಿತ್ತು, ಆದರೆ ಚುನಾಯಿತ ಸದಸ್ಯರು ಸಹಿ ಹಾಕಿದ ಮೂಲಪ್ರತಿಯನ್ನೆ ತಿದ್ದಿ ಕಡತದಲ್ಲಿ ಅದುಮಿಟ್ಟಿ, ಮೂಲದರವನ್ನು ಕಡಿಮೆಮಾಡಲು ಪ್ರತಿ ಮಳಿಗೆ ಮಾಲಿಕರಿಂದ 1 ಲಕ್ಷದಂತೆ ಅಜಮಾಸು 46 ಲಕ್ಷ ನುಂಗಿಳಿಸಿದ್ದರು. ಮತ್ತೂ ಒಂದು ಅಚ್ಚರಿಯ ಸಂಗತಿಯೆಂದರೆ ಟೆಂಡರ್ ಕರೆಯಾದ ಮಳಿಗೆಗಳ ನಡಾವಳಿಯನ್ನು ಕಚೇರಿ ಸಭೆಯಂದೇ ಮಾಡಬೇಕು. ಆದರೆ ಈ ಖತರನಾಕ್ ಜೋಡಿ ನಡಾವಳಿ ಮಾಡಿದ್ದು 22.05.2011ರ ಮಧ್ಯರಾತ್ರಿ! ಅವತ್ತು ಭಾನುವಾರವಾಗಿತ್ತು!! ಈ ಹಗಲು ದರೋಡೆ ಬೆಳಕಿಗೆ ಬರಲು ತುಂಬಾ ಸಮಯವೇನು ಹಿಡಿಯಲಿಲ್ಲ. ತಿರುಕಟ್ಟೆಯ ಚುನಾಯಿತ ಅಧ್ಯಕ್ಷ ಬಸವರಾಜಯ್ಯ ಇಡೀ ಸಿದ್ಧಾಂತ ಕಂಡು ದಂಗುಬಡಿದು 01.06.2011 ರಂದು ಕಾರ್ಯದರ್ಶಿ ಪಾಟೀಲ್‌ನ ವಿರುದ್ಧ ತನಿಖೆಗೆ ಆದೇಶಿಸಿದ್ದರು. ಈ ತನಿಖೆ ಶುರುವಾದದ್ದೇ ತಡ ವಸ್ತ್ರದ್ ಸಾಹೇಬರು ನಗಳೂರಿಗೂ, ಆರ್.ಎಂ.ಪಾಟೀಲ್ ಚಳ್ಳಕೆರೆಗೂ ವರ್ಗ ಮಾಡಿಸಿಕೊಂಡು ಬಚಾವಾಗಲು ನೋಡಿದರಾದರೂ ತನಿಖಾ ವರದಿ ಹೊರಬಂದು ವಸ್ತ್ರದ ಮತ್ತು ಆರ್.ಎಂ.ಪಾಟೀಲ ಇಬ್ಬರೂ ಅಪರಾಧಿಗಳೆಂದು ಸಾಬೀತು ಮಾಡಿತ್ತು. ಆರ್.ಎಂ.ಪಾಟೀಲನ ಬಡ್ತಿಗೆ ತಡೆ ನೀಡಿದ್ದಲ್ಲದೆ 16 ಲಕ್ಷ ರೂ. ದಂಡವನ್ನೂ ವಿಧಿಸಲಾಗಿದೆ. ದಾವಣಗೆರೆ ಎಪಿಎಂಸಿ ಸಮಿತಿಕ್ಕೆ ಕನ್ನಹಾಕಿದ್ದ ಪಾಟೀಲನಿಗೆ ಶಿಕ್ಷೆಯಾದರೂ ಬುದ್ಧಿ ಕಲಿಸದ ವಸ್ತ್ರದ್ ಮತ್ತೆ ಅದೇ ಆವರಣದ ತಿರುಮಲ [illegible] ಅವ್ಯವಹಾರದಲ್ಲೂ ಮೂಗು ತೂರಿಸಿ ಮೂರು ಮಳಿಗೆಗಳನ್ನು ಸಕಾರಣವಿಲ್ಲದೆ ಡೆಮಾಲಿಶ್ ಮಾಡಲು ಮುಂದಾಗಿರೋದು ದುರಂತವೇ ಸರಿ. ಹೋಗಲಿ ಕೃಷಿ [illegible] ಮಾರಾಟ ಮಂತ್ರಿ ಸಾಮನೂರು ಶಿವಶಂಕರಪ್ಪನವರಾದರೂ [illegible] ರೈತರ ಆಸ್ತಿ ಎಂಬ [illegible] ತೆಗೆದುಕೊಳ್ಳ [illegible]

[illegible] ಕಾಂಚಾಣದ ಮುಂದೆ ಎಲ್ಲರೂ [illegible]

● ಟಿ.ಎಸ್.ಹನ್ನಿಬಾಳ್

ಮಾಯಾ ಏಂಜೆಲೊ ಎಂಬ ವಿಶಿಷ್ಟ ಮಹಿಳೆ



ಮಾಯಾ ಏಂಜೆಲೊ ಸಾಮಾನ್ಯ ಮಹಿಳೆಯಾಗಿರಲಿಲ್ಲ. ಲೇಖಕಿ, ಕವಯಿತ್ರಿ, ಹಾಡುಗಾರ್ತಿ, ನಟಿ, ವೇಶ್ಯೆ, ಮಾನವ ಹಕ್ಕುಗಳ ಹೋರಾಟಗಾರ್ತಿ ಎಲ್ಲವೂ ಆಗಿದ್ದರು. ಬರಹಗಾರ್ತಿಯಾಗಿಯೂ, ಸಿನಿಮಾ ನಟಿಯಾಗಿಯೂ ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದರು. ಆಕೆ ಹೈಸ್ಕೂಲ್‌ತನಕ ಮಾತ್ರ ಓದಿದ್ದರೂ ಅವರಿಗೆ ಮೂವತ್ತು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪ್ರಶಸ್ತಿಗಳನ್ನು ನೀಡಿದ್ದವು.

ಅಮೆರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರಿಗೆ ಹತ್ತಿರವಾಗಿದ್ದ ಮಾಯಾ ಹಿಲರಿ ಕ್ಲಿಂಟನ್ ಅವರನ್ನು ಡೆಮಾಕ್ರಟಿಕ್ ಪಕ್ಷದ ಪ್ರೈಮರಿ ಚುನಾವಣೆಯಲ್ಲಿ ಅಧ್ಯಕ್ಷೆ ಅಭ್ಯರ್ಥಿಯಾಗಿ ಬೆಂಬಲಿಸಿದ್ದರು. ಆದರೆ ಹಿಲರಿ ವಿರುದ್ಧ ಗೆದ್ದ ಬರಾಕ್ ಒಬಾಮಾ ಆನಂತರ ಅಮೆರಿಕದ ಅಧ್ಯಕ್ಷ ಹುದ್ದೆಗೂ ಗೆದ್ದಾಗ ಮಾಯಾ ಸಂಭ್ರಮಿಸಿದ್ದರು. ಒಬಾಮಾ ಅವರು ಮೊದಲ ಬಾರಿ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ಸಮಾರಂಭದಲ್ಲಿ ಮಾಯಾ ಗೌರವ ಅತಿಥಿಯಾಗಿ ಒಂದು ಕವನವನ್ನು ವಾಚಿಸಿದ್ದರು.

ವಿಶಿಷ್ಟ ಮಹಿಳೆಯಾಗಿದ್ದ ಮಾಯಾ ಕಳೆದ ಬುಧವಾರ ತಮ್ಮ 86ನೇ ವಯಸ್ಸಿನಲ್ಲಿ ತೀರಿಕೊಂಡಿದ್ದಾರೆ. ಅವರಿಗೆ ಗೌರವಾರ್ಥವಾಗಿ ಇಲ್ಲಿ ಅವರ ಬಗ್ಗೆ ಸುಕನ್ಯಾ ಕನಾರಳ್ಳಿ ಬರೆದಿರುವ ಲೇಖನ ಮತ್ತು ಡಾ. ಎಚ್.ಎಸ್. ಅನುಪಮಾ ಅವರು ಅನುವಾದಿಸಿರುವ ಪ್ರಖ್ಯಾತ ಕವನವನ್ನು ಇಲ್ಲಿ ನೀಡಿದ್ದೇವೆ.

● ಗೌರಿ ಲಂಕೇಶ್

ಪಂಜರದೊಳಗಿನ ಹಕ್ಕಿ ಹಾಡುವುದೇಕೆ ಬಲ್ಲೆ

ಸ್ವಚ್ಛಂದ ಹಕ್ಕಿ ಗಾಳಿಯ ಬೆನ್ನೇರಿ ತೂಗುತ್ತದೆ
ಜುಳುಜುಳು ಹರಿವ ತೊರೆಯ
ತುತ್ತತುದಿಯವರೆಗೆ ತೇಲುತ್ತದೆ
ಸೂರ್ಯನ ಕಿತ್ತಳೆ ಕಿರಣಗಳಲಿ
ಪುಕ್ಕ ರೆಕ್ಕೆಗಳನದ್ದಿ
ಆಗಸವೆಲ್ಲ ನನದೇ ಎಂದು ಸಾರುತ್ತದೆ

ಆದರೆ
ಇಕ್ಕಟ್ಟಾದ ಪಂಜರದೊಳಗೆ
ನಿಧಾನ ನಡೆವ ಪುಟಾಣಿ ಹಕ್ಕಿ
ರೋಷದ ಸರಳ ಸಂದಿಯಿಂದ
ಹೊರಲೋಕ ಕಾಣಲಾರದು
ರೆಕ್ಕೆಗಳ ಹಿಂದೊತ್ತಿ
ಕಾಲುಗಳ ಕಟ್ಟಲಾಗಿದ
ಎಂದೇ ಅದು ಬಾಯ್ದೆರೆದು ಹಾಡುತ್ತದೆ..

ಭಯದಿಂದ ಕಂಪಿಸುತ್ತ ಹಾಡುತ್ತದೆ
ಕಾಣದುದರ ಕುರಿತು,
ಕಾಣಬೇಕೆನಿಸುವ ಹಂಬಲದ ಕುರಿತು.
ದೂರದ ಬೆಟ್ಟಕಣಿವೆಗಳಾಚೆಗೂ
ಅದರ ದನಿ ಮಾರ್ದನಿಸುತ್ತದೆ
ಏಕೆಂದರೆ ಪಂಜರದ ಪಕ್ಷಿ
ಬಿಡುಗಡೆಯ ಹಾಡು ಹಾಡುತ್ತದೆ

ಸ್ವಚ್ಛಂದ ಹಕ್ಕಿ ಬರಲಿರುವ ತಂಗಾಳಿಯ ನೆನೆಯುತ್ತದೆ
ಕಾಡುಮರಗಳ ನಡುವೆ ಗಾಳಿ ಸುಯ್ಯೆಂದು ಸುಳಿವಾಗ
ನಸುಕಿನ ಹೊಳೆವ ಹುಲ್ಲುಹಾಸಿನ ಮೇಲೆ
ಕೊಬ್ಬಿದ ಹುಳಹುಪ್ಪಟೆಗೆ ಕಾಯುತ್ತ
ಆಗಸವೇ ತನದೆಂದುಕೊಳುತ್ತದೆ

ಪಂಜರದ ಪಕ್ಷಿಯಾದರೋ ತನ್ನ ಕನಸುಗಳ ಗೋರಿ ಮೇಲೆ ನಿಲ್ಲುತ್ತದೆ
ಕೆಟ್ಟ ಕನಸ ಕಂಡು ಅದರ ನೆರಳೂ ಕಿಟಾರನೆ ಕಿರುಚುತ್ತದೆ
ರೆಕ್ಕೆಗಳ ಹೊಲಿಯಲಾಗಿದೆ, ಕಾಲುಗಳ ಕಟ್ಟಲಾಗಿದೆ
ಎಂದೇ ಹಾಡಲು ಅದು ಬಾಯಿ ಕಳೆಯುತ್ತದೆ.

ಭಯದಿಂದ ಕಂಪಿಸುತ್ತ ಹಾಡುತ್ತದೆ
ಕಾಣದುದರ ಕುರಿತು
ಕಾಣಬೇಕೆನಿಸುವ ಹಂಬಲಗಳ ಕುರಿತು.
ದೂರದ ಬೆಟ್ಟಕಣಿವೆಗಳಲಿ
ಹಕ್ಕಿ ದನಿ ಮಾರ್ದನಿಸುತ್ತದೆ,
ಏಕೆಂದರೆ
ಪಂಜರದ ಪಕ್ಷಿ
ಬಿಡುಗಡೆಯ ಹಾಡು ಹಾಡುತ್ತದೆ..



● ಮಾಯಾ ಏಂಜೆಲೊ

ಕನ್ನಡಕ್ಕೆ: ಡಾ.ಎಚ್.ಎಸ್.ಅನುಪಮಾ

ಮಾಯಾ ಏಂಜೆಲೊಳ ಹೋರಾಟದ ಬದುಕು

ಮಾರ್ಗರೀಟಾ ಜಾನ್ಸನ್ ಹುಟ್ಟಿದ್ದು ಮಿಸ್ಸೋರಿಯಲ್ಲಿ. ಅವಳ ಅಣ್ಣ ಬೈಲಿ ಅವಳಿಗಿತ್ತ ಹೆಸರು ಮಾಯಾ (my-a-sister). ಮಾಯಾಳ ಮುತ್ತಜ್ಜಿ ಲೀ ಸಿವಿಲ್ ಯುದ್ಧದ ನಂತರ ತನ್ನ ಗುಲಾಮಗಿರಿಯಿಂದ ಬಿಡುಗಡೆ ಹೊಂದಿದವಳು. ತನ್ನ ಬಿಳಿತೊಗಲಿನ ಒಡೆಯನಿಂದ ಗರ್ಭ ಧರಿಸಿದಾಗ ಲೀ ನ್ಯಾಯಾಲಯದ ಮೊರೆ ಹೊಕ್ಕಳು. ಪುರಾವೆ ಇದ್ದರೂ ಸಹ ನ್ಯಾಯಾಲಯ ಆತನನ್ನು ನಿರಪರಾಧಿಯೆಂದು ಘೋಷಿಸಿತು. ಲೀಯನ್ನು ಮಿಸ್ಸೋರಿಯ ಪೂರ್ ಹೌಸಿಗೆ ತಳ್ಳಲಾಯಿತು. "ದೈಹಿಕವಾಗಿ, ಮಾನಸಿಕವಾಗಿ ಜರ್ಝರಿತಳಾಗಿದ್ದ ಆ ಬಡ ಕಪ್ಪು ಹುಡುಗಿ" ಎಂದು ತನ್ನ ಮುತ್ತಜ್ಜಿ ಲೀಯನ್ನು ಮಾಯಾ ಆತ್ಮಕಥನದಲ್ಲಿ ವರ್ಣಿಸುತ್ತಾರೆ.

ಮಾಯಾಳ ಅಪ್ಪಅಮ್ಮರ ಮದುವೆ ಮುರಿದುಬಿದ್ದಾಗ ನಾಲ್ಕು ವರುಷದ ಬೈಲಿಯ ಜೊತೆ ಮೂರು ವರುಷದ ಮಾಯಾಳನ್ನು ಅಜ್ಜಿ ಆಯನಿ ಹೆಂಡರ್ಸನ್ ಊರಾದ ಅರ್ಕನ್ಸಾಸ್‌ಗೆ ರೈಲಿನಲ್ಲಿ ಕಳುಹಿಸಲಾಯಿತು. ಎರಡನೆಯ ಮಹಾಯುದ್ಧದ ಸಮಯದಂತಹ ದುರ್ಭರ ದಿನಗಳಲ್ಲಿ ಸಹ ಈ ಅಜ್ಜಿ ಆರ್ಥಿಕವಾಗಿ ಭಲೆ ಎಂಬಂತಹ ಸ್ಥಿತಿಯಲ್ಲಿದ್ದಳು. ಕಾರಣವಿಷ್ಟೆ: ಆಕೆ ಹಣ ಹೂಡಿದ್ದು ದಿನಸಿ ಅಂಗಡಿಯಲ್ಲಿ, ಪೂರೈಸುತ್ತಿದ್ದದ್ದು ದಿನನಿತ್ಯದ ಅತ್ಯಂತ ಆವಶ್ಯಕ ಸಾಮಗ್ರಿಗಳನ್ನು. ನಾಲ್ಕು ವರುಷ ಕಳೆಯುವ ಹೊತ್ತಿಗೆ ಆ ಮಕ್ಕಳ ಅಪ್ಪನೆನ್ನಿಸಿಕೊಂಡವನು ಬಂದು ಅವರನ್ನು ಪುನಃ ಕರೆದೊಯ್ದು ಅಮ್ಮನ ಹತ್ತಿರವೇ ಬಿಟ್ಟ. ಮಾಯಾಗೆ ಎಂಟು ವರುಷವಾಗಿದ್ದಾಗ ಅವಳ ಅಮ್ಮನ ಜೊತೆಗಾರ ಫ್ರೀಮನ್ ಅವಳ ಮೇಲೆ ಅತ್ಯಾಚಾರ ನಡೆಸಿದ. ಹುಡುಗಿ ಅಣ್ಣ ಬೈಲಿಯ ಹತ್ತಿರ ಹೇಳಿಕೊಂಡಳು. ಬೈಲಿ ಮನೆಯವರಿಗೆಲ್ಲ ಸುದ್ದಿ ಮುಟ್ಟಿಸಿದ. ಫ್ರೀಮನ್ ತಪ್ಪಿತಸ್ಥನೆಂದು ಘೋಷಿಸಲ್ಪಟ್ಟರೂ ಸಹ ಅವನಿಗೆ ಸಿಕ್ಕ ಶಿಕ್ಷೆ ಒಂದೇ ಒಂದು ದಿನದ ಜೈಲುವಾಸ ಅಷ್ಟೇ. ಬಿಡುಗಡೆಯಾದ ನಾಲ್ಕು ದಿನಗಳಲ್ಲಿ ಫ್ರೀಮನ್ ಕೊಲೆ ಮಾಡಲ್ಪಟ್ಟ. ಮಾಯಾಳ ಬಂಧುಗಳೇ ಕಾರಣ ಎಂಬ ಗುಮಾನಿಯಂತೂ ಇತ್ತು. ಯಾಕೋ ಏನೋ, ಮಾಯಾಳ ಮಾತೇ ನಿಂತುಹೋಯಿತು. ಸುಮಾರು ಐದು ವರುಷ ಬಿದ್ದ ನಾಲಿಗೆ ಜೀವ ಪಡೆಯಲಿಲ್ಲ. "ಅತ ಸತ್ತಿದ್ದು ನಾನು ಬಾಯಿ ಬಿಟ್ಟಿದ್ದರಿಂದಲೇ ಅಂತ ಅಂದುಕೊಂಡೆ. ಬಾಯಿಬಿಟ್ಟರೆ ಇನ್ಯಾರೋ ಸಾಯುತ್ತಾರೆ ಅನ್ನುವ ಭಯದಲ್ಲಿ ಮಾತನ್ನೇ ಮರೆತೆ" ಮಾಯಾಳ [illegible] ಬದುಕನ್ನು [illegible] ಪುಸ್ತಕ ಮತ್ತು [illegible] ಅಮ್ಮ ನೀಡಿದ [illegible] ಆ ಬಾಯಿ ಬಿಡದ ದಿನಗಳಲ್ಲೇ

ಜೊತೆಗೆ ಸಾಹಿತ್ಯ ಓದುವ ಹುಚ್ಚು, ತನ್ನ ಸುತ್ತಮುತ್ತಲ ಪ್ರತಿಯೊಂದಕ್ಕೂ ಹುಡುಗಿ ತೀವ್ರವಾಗಿ ತೆರೆದುಕೊಂಡಳು. ಪ್ರತಿಯೊಂದನ್ನೂ ಆಲಿಸಿ, ಗಮನಿಸಿ ದಾಖಲಿಸಿಕೊಂಡಳು.

ಫ್ರೀಮನ್ ಕೊಲೆಯಾದ ಕೆಲವೇ ದಿನಗಳಲ್ಲಿ ಅಣ್ಣತಂಗಿಯರಿಬ್ಬರನ್ನೂ ಮತ್ತೆ ಅಜ್ಜಿಯ ಊರಿಗೆ ಕಳಿಸಲಾಯಿತು. ಮತ್ತೆ ಮಾತು ಬರಲು ತುಂಬ ನೆರವಾದ ಬರ್ತಾ ಫ್ಲವರ್ಸ್ ಎಂಬ ಶಿಕ್ಷಕಿಯನ್ನು ಮಾಯಾ ಸ್ಮರಿಸುತ್ತಾರೆ. ಸಾಹಿತ್ಯದ ಹುಚ್ಚು ಹಿಡಿಸಿದ್ದೂ ಸಹ ಆಕೆಯೇ.

ಮಾಯಾ ಅವರ ಆತ್ಮಕಥನ ಮಾಲಿಕೆಯಲ್ಲಿ ಬರುವ ಕೃತಿಗಳು ಆರು. ಮೊದಲನೆಯದು **I Know Why the Caged Bird Sings** ಅವರ ಬದುಕಿನ ಮೊದಲ ಹದಿನೇಳು ವರುಷಗಳನ್ನು ದಾಖಲಿಸುತ್ತದೆ. ಎರಡನೆಯದು **Gather Together in My Name** ನಂತರದ ಎರಡು ವರುಷಗಳ ದಾರುಣ ಬದುಕನ್ನು ಕೇಂದ್ರವಾಗಿಸಿಕೊಂಡಿದೆ. ಹದಿನೈದರ ಹೊತ್ತಿಗೆ ಒಂಟಿ ತಾಯಾಗಿದ್ದ ಕಪ್ಪು ಹೆಣ್ಣೊಬ್ಬಳು ಮಗುವನ್ನು ಸಾಕಲು ಪಟ್ಟ ಪಾಡಿನ ದಾಖಲೆ ಅದು. "ಸಮಾಜದ ಕಣ್ಣಿನಲ್ಲಿ ತುಚ್ಛಳಾಗಿ, ಬಡತನ, ಅಪರಾಧಗಳ ಸುಳಿಗೆ ಸಿಕ್ಕಿ ಬದುಕಲು ಹರಸಾಹಸ ನಡೆಸಿದರ ಗಾಥೆ ಅದು." ಆ ವರುಷಗಳಲ್ಲಿ ಮಾಯಾ ವೇಶ್ಯಾವಾಟಿಕೆ ಕೇಂದ್ರದ ಮ್ಯಾನೇಜರ್ ಆಗಿ, ರೆಸ್ಟೋರೆಂಟ್‌ನಲ್ಲಿ ಅಡಿಗೆಯವಳಾಗಿ ಬದುಕನ್ನು ನೀಸಿದ್ದಷ್ಟೇ ಅಲ್ಲ, ತಾನೇ ವೇಶ್ಯೆಯಾಗಿಯೂ ಕೆಲಸ ಮಾಡಿದಳು.

ಮಾಯಾ ಮದುವೆಯಾಗಿದ್ದು ಆಕೆಯ ಪ್ರಕಾರ ಮೂರು ಸಲ. ಮೂರನೆಯ ಕೃತಿ **Singin` and swingin` and Gettin` Merry Like Christmas** ಮಾಯಾಳ ಮದುವೆಯ ಬದುಕನ್ನು ನಿರೂಪಿಸುತ್ತದೆ. ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡುತ್ತಿದ್ದ ಗ್ರೀಕ್ ವ್ಯಕ್ತಿ ಏಂಜಲೋಸ್ ಸಂಗೀತಗಾರನಾಗಲು ಪ್ರಯತ್ನಿಸುತ್ತಿದ್ದವನು. ಈ ಅಂತರ್ ಜನಾಂಗೀಯ ಮದುವೆಗೆ ಸಾಕಷ್ಟು ವಿರೋಧ ಬಂತು. ಮಾಯಾ ಆ ದಿನಗಳಲ್ಲಿ ನೃತ್ಯ ಕಲಿತಳು. ಮೂರು ವರುಷಗಳ ನಂತರ ಈ ಮದುವೆ ಮುರಿದುಬಿದ್ದಾಗ ಕ್ಲಬ್ಬುಗಳಲ್ಲಿ ನೃತ್ಯ ಮಾಡಿ ಬದುಕು ನಿರ್ವಹಿಸಿದಳು. ಮಾಯಾ ಏಂಜೆಲೊ ಎಂದು ಹೆಸರು ಬದಲಾಯಿಸಿಕೊಂಡಿದ್ದು ಆ ವರುಷಗಳಲ್ಲಿಯೇ.

ನಾಲ್ಕನೆಯ ಆತ್ಮಕಥಾನಕ ಕೃತಿ **The Heart of a Woman** [illegible] 1959 [illegible]


ಆತನ ಒತ್ತಾಯದ ಮೇರೆಗೆ ನ್ಯೂಯಾರ್ಕಿಗೆ ವಾಸ ಬದಲಾಯಿಸಿ **Harlem Writers Guild** ಸೇರಿದಳು. ಹಲವಾರು ಆಫ್ರಿಕನ್ ಅಮೆರಿಕನ್ ಬರಹಗಾರರನ್ನು ಸಂಧಿಸಿದ್ದು ಇಲ್ಲಿಯೇ. ನಾಗರಿಕ ಹಕ್ಕು ಚಳವಳಿಯ ಮುಂಚೂಣಿಯಲ್ಲಿದ್ದ ಡಾ. ಮಾರ್ಟಿನ್ ಲೂಥರ್ ಕಿಂಗ್ ಅವರನ್ನು ಭೇಟಿಯಾದ ನಂತರ ಮಾಯಾ ಚಳವಳಿಯಲ್ಲಿ ತೀವ್ರಾಸಕ್ತಿಯಿಂದ ಕೆಲಸ ಮಾಡಿದರು. ನಂತರ ಮಾಯಾ ಹೋಗಿದ್ದು ಘಾನಾಗೆ. ಅಲ್ಲಿ ಆಕೆಗೆ ಪ್ರಮುಖ ಹೋರಾಟಗಾರ ಮ್ಯಾಲ್ಕೋಮ್ ಎಕ್ಸ್ ಅವರ ಭೇಟಿ ಯಾಯಿತು. ಆಕೆಯ ಐದನೆಯ ಆತ್ಮಕಥೆ **All God's Children Need Traveling Shoes** ಅಲ್ಲಿಯ ಅನುಭವಗಳನ್ನು ದಾಖಲಿಸುತ್ತದೆ. ಕಿಂಗ್ ಹತ್ಯೆಯಾಗಿದ್ದು ಮಾಯಾ ಅವರ ಜನ್ಮದಿನ ಏಪ್ರಿಲ್ ನಾಲ್ಕರಂದು. 1965 ರಲ್ಲಿ ಮ್ಯಾಲ್ಕೋಮ್ ಎಕ್ಸ್ ಅವರ ಹತ್ಯೆ, ನಂತರ 68ರಲ್ಲಿ ಕಿಂಗ್ ಅವರ ಹತ್ಯೆ ಆಕೆಯ ಸ್ಥೈರ್ಯವನ್ನೇ ಹಿಡಿದು ಅಲ್ಲಾಡಿಸಿದ ಘಟನೆಗಳು. ಆತ್ಮಕಥನ ಸರಣಿಯಲ್ಲಿ ಆರನೆಯ ಮತ್ತು ಕೊನೆಯದು **A Song Flung Up to Heaven.** ಆರು ಕೃತಿಗಳಲ್ಲಿ ಹೊಮ್ಮಿರುವ ಮಾಯಾ ಅವರ ಬದುಕನ್ನು ಒಂದು ಟಿಪ್ಪಣಿಯಲ್ಲಿ ಹಿಡಿಯುವ ಪ್ರಯತ್ನವೇ ಹಾಸ್ಯಾಸ್ಪದವಾದೀತು. ಸುಪ್ರಸಿದ್ಧ ಟಿವಿ ತಾರೆ ಓಪ್ರಾ ವಿನ್ಫ್ರೆ ಮಾತುಗಳಲ್ಲಿ ಮಾಯಾ ಮೂಡುವುದು ಹೀಗೆ:

"ಇಲ್ಲಿಯತನಕದ ನನ್ನ ದಿನಗಳಲ್ಲಿ ಮಾಯಾ ಏಂಜೆಲೊ ಅಂತಹ ಹೆಣ್ಣನ್ನು ನಾನು ಕಂಡಿಲ್ಲ. ಆಕೆ ತನ್ನಲ್ಲಿ ತಾನು ಪೂರ್ಣತೆಯನ್ನು ಪಡೆದುಕೊಂಡಿರುವಂತವಳು. ತನ್ನ ಪ್ರತಿಯೊಂದು ಕಣಕ್ಕೆ ತೀವ್ರವಾಗಿ ಹರಡಿಕೊಂಡಿರುವಾಕೆ. ಅಲ್ಲಿ ಕೆಲಸಕ್ಕೆ ಬಾರದ ಬಿಂಕ ಬಿಗುಮಾನಗಳೇ ಇಲ್ಲ. ಆಕೆಯ ಇರುವಿಕೆಯಲ್ಲಿ ಅದೆಂತಹ ವಿಶಿಷ್ಟತೆ! ಕೊಠಡಿಯೊಂದಕ್ಕೆ ನೀವು ಕಾಲಿಟ್ಟರೆ ಆಕೆ ಅಲ್ಲಿರುವುದು ನಿಮ್ಮ ಕಣ್ಣು, ಮನಸ್ಸು, ಬುದ್ಧಿ ಭಾವಗಳನ್ನು ಸೆಳೆಯುತ್ತದೆ. ಮನುಷ್ಯತೆಯ ಅರ್ಥವನ್ನು ನಿಖರವಾಗಿ ಬಲ್ಲವಳು. ಅದರ ಅರ್ಥವನ್ನು ಕಣಕಣದಲ್ಲಿ ಹೊಮ್ಮಿಸುವವಳು! ನೀವಾಕೆಯ ಆಸುಪಾಸಿನಲ್ಲಿ ಇದ್ದರೆ ನಿಮ್ಮಲ್ಲಿ ನೀವು ಪೂರ್ಣವಾಗಿ ರಬೇಕೆಂಬ ತುಡಿತವನ್ನು ಮೂಡಿಸುವವಳು!"

● ಸುಕನ್ಯಾ ಕನಾರಳ್ಳಿ


[illegible]

ಭೂಮಿಯ ಮೇಲಿನ ಸ್ವರ್ಗ-ಶಿವನಪಳ್ಳಿ



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಶಿವನಪಳ್ಳಿಯು ನನಗೆ ಯಾವಾಗಲೂ ಪ್ರೀತಿಯ ಸುತ್ತಾಡುವ ಸ್ಥಳವಾಗಿತ್ತು. ಬೆಂಗಳೂರಿಗೆ ಹತ್ತಿರವಿದ್ದ ಇಲ್ಲಿಗೆ ವಾರಾಂತ್ಯದ ಪ್ರವಾಸಕ್ಕೋ ಅಥವಾ ಹುಣ್ಣಿಮೆಯ ರಾತ್ರಿಯಲ್ಲಿ ಕೆಲವು ಗಂಟೆಗಳ ತಿರುಗಾಟಕ್ಕೋ ಹೋಗಬಹುದಿತ್ತು. ಬೆಂಗಳೂರಿನಿಂದ ಸುಮಾರು ನಲವತ್ತು ಮೈಲು ದೂರದಲ್ಲಿದ್ದ ದೆಂಕನಿಕೋಟ್ಟೆ ಎಂಬ ಊರಿಗೆ ತಲುಪಿ, ಅಲ್ಲಿಂದ ಮುಂದೆ ನಾಲ್ಕು ಮೈಲು ಕಾರಿನಲ್ಲೇ ಹೋಗಿ ನಂತರ ಐದು ಮೈಲು ಕಾಲುದಾರಿಯಲ್ಲಿ ನಡೆದರೆ ಶಿವನಪಳ್ಳಿ ಸಿಗುತ್ತದೆ. ಸುರಕ್ಷಿತ ಅರಣ್ಯದ ತುದಿಯಲ್ಲಿರುವ ಇಲ್ಲಿಂದ ಪಶ್ಚಿಮಕ್ಕೆ ಮೂರು



ಮೈಲು ಹೋದರೆ ಭೂಮಿ ಸುಮಾರು ಮುನ್ನೂರು ಅಡಿಗಳಷ್ಟು ಆಳಕ್ಕೆ ಇಳಿದು ಚಿಕ್ಕ ಹೊಳೆಯೊಂದರಲ್ಲಿ ಕೊನೆಗೊಳ್ಳುತ್ತದೆ. ದಕ್ಷಿಣದ ಇಳಿಜಾರಿನಲ್ಲಿ ಹರಿಯುವ ಇನ್ನೊಂದು ತೊರೆ ಸುತ್ತಿಸುತ್ತಿ ಕೊನೆಗೆ ಪಶ್ಚಿಮದ ಹೊಳೆಗೆ ಸೇರಿಕೊಳ್ಳುತ್ತದೆ. ಶಿವನಪಳ್ಳಿಯ ಪೂರ್ವಕ್ಕೆ ಇರುವ ಕಾಡಿನಲ್ಲಿ 500 ಅಡಿಗಳ ಎತ್ತರದಲ್ಲಿ ಗುಲ್ಲಟ್ಟಿಯ ಅರಣ್ಯ ವಸತಿಗೃಹವಿದೆ. ಇಲ್ಲಿಂದ ಮುಂದೆ ನಾಲ್ಕೂವರೆ ಮೈಲು ದೂರದಲ್ಲಿ ಅಯ್ಯೂರಿನ ವಸತಿ ಗೃಹವಿದೆ. ಇನ್ನೂ ಮುಂದೆ ನಾಲ್ಕು ಮೈಲು ದೂರಕ್ಕೆ ಕುಚವಾಡಿ ಎಂಬ ಕಲ್ಲು ಬೆಟ್ಟದ ಹತ್ತಿರ ಅರಣ್ಯ ಇಲಾಖೆಯವರು ಶೆಡ್ ಹಾಕಿದ್ದರು. ಸುತ್ತಲೂ ಗಂಧದ ಮರಗಳು ಸಾಕಷ್ಟಿದ್ದು ಈ ಶೆಡ್‌ನಲ್ಲಿ ಅವುಗಳ ತೂಕ ಮತ್ತು ವಿಲೇವಾರಿ ನಡೆಯುತ್ತಿತ್ತು. ಶಿವನಪಳ್ಳಿಯ ಉತ್ತರ ದಿಕ್ಕಿನಲ್ಲಿ ಪೊದೆಗಳ ಕಾಡಿದ್ದು ಬೆಂಗಳೂರಿನಿಂದ ಬರುವ ಕಾಲುದಾರಿ ಹಾದುಹೋಗುತ್ತದೆ.

ಶಿವನಪಳ್ಳಿಯಲ್ಲಿ ಹೆಚ್ಚೆಂದರೆ ಐದಾರು ಮುರುಕು ಗುಡಿಸಲುಗಳಿದ್ದು, ಹಾಡಿ ಎಂದು ಕರೆಯುವಷ್ಟು ದೊಡ್ಡದಾಗಿಯೂ ಇರಲಿಲ್ಲ. ಬೆಂಗಳೂರಿನಿಂದ ಬರುವ ಮುಖ್ಯರಸ್ತೆಯ ದಿಕ್ಕಿನ ಕಾಲುಹಾದಿಯಲ್ಲಿದ್ದ ಸಲ್ಲೈವರಮ್ ಸ್ವಲ್ಪ ದೊಡ್ಡ ಹಳ್ಳಿಯಾಗಿತ್ತು. ಸುರಕ್ಷಿತ ಅರಣ್ಯವೆಂದು ಗುರುತಿಸಲು ಹಾಕಿದ ಗಡಿರೇಖೆಗಳು (ಇವುಗಳನ್ನು ಬೆಂಕಿರೇಖೆಗಳೂ ಎಂದೂ ಕರೆಯುತ್ತಾರೆ ಏಕೆಂದರೆ ನೆಲದಲ್ಲಿನ ಗಿಡಗಂಟಿಗಳನ್ನು ಸುಡುವುದರ ಮೂಲಕ ಗುರುತನ್ನು ಮಾಡಿರುತ್ತಾರೆ. ಬೆಂಕಿರೇಖೆಗಳು ಸುರಕ್ಷಿತ ಅರಣ್ಯಕ್ಕೆ ಬೆಂಕಿ ತಗಲುವ ಸಾಧ್ಯತೆಗಳನ್ನು ಕಡಿಮೆ ಮಾಡುತ್ತವೆ) -ಶಿವನಪಳ್ಳಿಯನ್ನು ಸುತ್ತುವರೆದಿತ್ತು. ಶಿವನಪಳ್ಳಿಯ ಪಶ್ಚಿಮಕ್ಕೆ ಸುಮಾರು ಎಂಟು ಮೈಲು ದೂರದಲ್ಲಿ ಎರಡು ಹಳ್ಳಗಳು ಸೇರುವ ಸ್ಥಳದಿಂದ ಮುಂದೆ ಅಂಚೆಟ್ಟಿ ಎನ್ನುವ ಹೆಸರಿನ ಇನ್ನೊಂದು ದೊಡ್ಡ ಹಳ್ಳಿಯಿತ್ತು. ನಾನು ಮುಂದೆ ಹೇಳಲಿರುವ ಸಾಹಸ ನಡೆದ ಸ್ಥಳದ ಪೂರ್ಣ ಚಿತ್ರ ನಿಮಗೆ ಸಿಗಲೆಂದು ಇಷ್ಟೆಲ್ಲಾ ವಿವರಣೆ ನೀಡಿದ್ದೇನೆ.

ಸುತ್ತಲಿನ ಚಿಕ್ಕಚಿಕ್ಕ ಕಲ್ಲಿನ ಬೆಟ್ಟಗಳು, ಪೊದೆಗಳಿಂದ ಕೂಡಿದ ದಟ್ಟ ಕಾಡು, ಹರಿಯುವ ಎರಡು ನದಿಗಳು, ಮತ್ತೊಂದು ನೀರಿನ ಹಳ್ಳ-ಇವೆಲ್ಲಾ ಶಿವನಪಳ್ಳಿಯ ಅರಣ್ಯವನ್ನು ಚಿರತೆಯ ವಾಸಕ್ಕೆ ಯೋಗ್ಯ ಸ್ಥಳವನ್ನಾಗಿ ಮಾಡಿತ್ತು. ಆಹಾರಕ್ಕಾಗಿ ದೊರೆಯುತ್ತಿದ್ದ ಸಾಕಷ್ಟು ಕಾಡುಪ್ರಾಣಿಗಳು ಚಿರತೆಗಳಿಗೆ ಮತ್ತೊಂದು ಆಕರ್ಷಣೆಯಾಗಿತ್ತು. ಜೊತೆಗೆ ವಿಫುಲವಾಗಿ ದೊರೆಯುತ್ತಿದ್ದ ನೀರಿನಿಂದಾಗಿ ಶಿವನಪಳ್ಳಿಯಲ್ಲಿದ್ದ ಸಾಕುಪ್ರಾಣಿಗಳೂ ಕೂಡ ಚಿರತೆಗಳಿಗೆ ಆಹಾರವನ್ನು ಒದಗಿಸುತ್ತಿದ್ದವು. ಹಾಗಾಗಿ ಶಿವನಪಳ್ಳಿಯ ಸುತ್ತಮುತ್ತಲಿನ ಕಾಡನ್ನು ಸಾಕಷ್ಟು ಚಿರತೆಗಳು ತಮ್ಮ ಕಾಯಂ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದವು. 1929ರಲ್ಲಿ ನಾನು ಪ್ರಥಮ ಬಾರಿ ಇಲ್ಲಿಗೆ ಭೇಟಿ ನೀಡಿದಾಗಿನಿಂದ ಇದರ ಸೆಳೆತಕ್ಕೆ ಒಳಗಾಗಿದ್ದೆ. ಪಶ್ಚಿಮದ ಹಳ್ಳದ ಪಕ್ಕದಲ್ಲಿದ್ದ ಬಿದಿರು ಮೆಳೆಗಳು, ಪಶ್ಚಿಮದ ಮತ್ತು ದಕ್ಷಿಣದ ದಟ್ಟಕಾಡುಗಳು ಹಾಗೂ ಪೂರ್ವದ ಮತ್ತು ಉತ್ತರದ ಪೊದೆಗಳ ಮಧ್ಯೆ ಇದ್ದ ಗಂಧದ ಮರಗಳು- ಹೀಗೆ ಇಲ್ಲಿನ ಕಾಡು ಕೂಡ ವೈವಿಧ್ಯಮಯವಾಗಿತ್ತು. ಸುತ್ತಲಿನ ಗುಡ್ಡಬೆಟ್ಟಗಳು ಮತ್ತು ಮಂಜು ಮುಸುಕಿದ ಆಕಾಶ-ಇವುಗಳಿಂದಾಗಿ ಹಳ್ಳಿಯ ಬಯಲು ಪ್ರದೇಶ ಅತ್ಯಂತ ಸುಂದರವಾಗಿತ್ತು. ಮುಂಜಾವಿನಲ್ಲಿ ಅರಣ್ಯದಿಂದ ಮೇಲೆದ್ದು ತೇಲುವ ಹಿಮ, ಗುಡ್ಡಗಳ ಬುಡವನ್ನು ಸಂಪೂರ್ಣವಾಗಿ ಮುಚ್ಚಿ ಅವುಗಳ ತುದಿಯನ್ನು ಬಿಳಿಯ ಉಣ್ಣೆಯ ಸಮುದ್ರದಿಂದ ಹೊರಚಾಚಿ ನಿಂತಿರುವ ದ್ವೀಪಗಳೇನೋ ಎನ್ನುವ ಭ್ರಮೆ ಹುಟ್ಟಿಸುತ್ತಿತ್ತು. ಮೋಡ ಮುಸುಕಿದ ದಿನಗಳಲ್ಲಿ ಇದರ ವಿರುದ್ಧ ಪರಿಣಾಮಗಳಿರುವಂತೆ ಭ್ರಮೆ ಹುಟ್ಟಿಸುತ್ತಿತ್ತು. ದಟ್ಟವಾದ ಮೋಡಗಳು ಗುಡ್ಡಗಳ ತುದಿಯನ್ನು ಮುಚ್ಚಿದಾಗ ಅವುಗಳ ಬುಡ ಮಾತ್ರ ದೃಷ್ಟಿಗೆ ನಿಲುಕುತ್ತಿದ್ದು ಅಲ್ಲೊಂದು ಬಯಲು ಪ್ರದೇಶವಿದ್ದಂತೆ ಅನಿಸುತ್ತಿತ್ತು.

ಇಂತಹ ಸುಂದರ ಶಿವನಪಳ್ಳಿಯ ಸುತ್ತಲಿನ ಕಾಡುಗಳಲ್ಲಿ ನಾನು ಹಲವಾರು ಹುಣ್ಣಿಮೆಯ ರಾತ್ರಿಗಳಲ್ಲಿ ಸುತ್ತಾಡಿದ್ದೇನೆ. ಆಗೆಲ್ಲಾ ಆನೆಯೊಡನೆ ಮುಖಾಮುಖಿಯಾಗುವುದು, ಹುಲಿಯ ಅಥವಾ ಚಿರತೆಯ ಕೂಗನ್ನು ಕೇಳುವುದು, ಮನುಷ್ಯನೊಬ್ಬ ಹತ್ತಿರ ಬರುತ್ತಿದ್ದುದನ್ನು ತಿಳಿದು ಗಿಡಗಂಟಿಗಳನ್ನು ತುಳಿಯುತ್ತ ಓಡುವ ಸಾಂಬಾರ್ ಜಿಂಕೆಯ ಸದ್ದನ್ನು ಆಲಿಸುವುದು ಸಾಧ್ಯವಿತ್ತು. ಕರಡಿಯೊಂದು ಗೆದ್ದಲು ಹುಳುವಿಗಾಗಿ ಅಥವಾ ಗೆಡ್ಡೆಗೆಣಸುಗಳಿಗಾಗಿ ನೆಲವನ್ನು ಕೆದಕುತ್ತಿರುವುದನ್ನು ಕಾಣಬಹುದಿತ್ತು. ಇಂತಹ ಕರಡಿಗಳನ್ನು ನೋಡುವ ಮೊದಲೇ ಅವುಗಳು ಮಾಡುವ ಸದ್ದಿನಿಂದ ಗುರುತಿಸಬಹುದಿತ್ತು. ಹಗಲಿನಲ್ಲಿ ಗಿಡಗಂಟಿಗಳ ಮಧ್ಯೆ ಕಪ್ಪು ಮುದ್ದೆಯಂತೆ ಕಾಣುವ ಅವು ಹುಣ್ಣಿಮೆಯ ಬೆಳಕಿನಲ್ಲಿ ಕಂದು ಬಣ್ಣದಲ್ಲಿ ಭಯಾನಕವಾಗಿ ತೋರುತ್ತಿದ್ದವು.

ಕಣ್ಣಿಗೆ ಬಿದ್ದ ವಿಚಿತ್ರ ಪ್ರಾಣಿ

1934ನೇ ಇಸವಿಯಷ್ಟು ಹಿಂದೆಯೇ ಶಿವನಪಳ್ಳಿಯ ಅರಣ್ಯದಲ್ಲಿ ಒಂದು ಆಶ್ಚರ್ಯ ಕಾದಿತ್ತು. ದನಕರುಗಳನ್ನು ಕಾಡಿನಿಂದ ಮೇಯಿಸಿಕೊಂಡು ಬರುವಾಗ ಗೋಪಾಲಕನೊಬ್ಬ ಹಳ್ಳದಲ್ಲಿ ನೀರು ಕುಡಿಯುತ್ತಿದ್ದ ಕಪ್ಪು ಚಿರತೆಯನ್ನು ನೋಡಿದ. ಸಂಜೆ ಐದು ಗಂಟೆಯ ಸಮಯದಲ್ಲಿ ಆ ಚಿರತೆ ಹಳ್ಳದ ಪಕ್ಕದ ಪೊದೆಯ ಮರೆಯಲ್ಲಿ ನಿಂತು ನೀರನ್ನು ಕುಡಿಯುತ್ತಿತ್ತು. ಚಿರತೆ ಕಡುಗಪ್ಪು ಬಣ್ಣದ್ದಾಗಿತ್ತು ಎಂದು ಹೇಳಿದ ಆ ವ್ಯಕ್ತಿಯ ಮಾತನ್ನು ಅನುಮಾನಿಸಲು ನನಗೆ ಕಾರಣಗಳಿರಲಿಲ್ಲ. ದನಕರುಗಳ ಗುಂಪಿನತ್ತ ಕಣ್ಣು ಹಾಯಿಸಿದ ಚಿರತೆ ಅವುಗಳ ಮಧ್ಯೆ ಗೋಪಾಲಕನನ್ನು ನೋಡಿದಾಗ ಸುಮ್ಮನೆ ಪೊದೆಗಳಲ್ಲಿ ಮರೆಯಾಯಿತು.

ಕಪ್ಪು ಚಿರತೆಗಳು ಭಿನ್ನ ಜಾತಿಯ ಪ್ರಾಣಿಗಳೇನೂ ಅಲ್ಲ. ಕೆಲವು ಚಿರತೆ ಮರಿಗಳಲ್ಲಿ ಚರ್ಮಕ್ಕೆ ಬಣ್ಣ ನೀಡುವ ಮೆಲನಿನ್ ಅಂಶಗಳ ಏರುಪೇರಿನಿಂದಾಗಿ ಚರ್ಮದ ಬಣ್ಣ ಕಪ್ಪಾಗಿರುತ್ತದೆ. ಮಲೇಶಿಯಾ, ಬರ್ಮಾ ಅಸ್ಸಾಂನಂತಹ ಪ್ರದೇಶಗಳ ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಇವು ಹೆಚ್ಚಾಗಿ ಕಂಡುಬರುತ್ತದೆ ಎಂದು ಹೇಳಲಾಗುತ್ತದೆ. ಭಾರತದ ಪಶ್ಚಿಮ ಘಟ್ಟಗಳಲ್ಲೂ ಇವು ಕೆಲವೊಮ್ಮೆ ಕಂಡುಬಂದಿವೆ. ದಟ್ಟವಾದ ಈ ಕಾಡುಗಳಲ್ಲಿ ದೇಹದ ಕಪ್ಪು ಬಣ್ಣದಿಂದಾಗಿ ಮರೆಮಾಚಿ ತಿರುಗುವುದು ಇವುಗಳಿಗೆ ಸುಲಭವಾಗುತ್ತದೆ ಎಂಬುದು ನನ್ನ ನಂಬಿಕೆ. ಕಪ್ಪು ಚಿರತೆಗಳು ಎಲ್ಲಾ ಕಡೆ ಇರುವ ಸಾಧ್ಯತೆಗಳಿದ್ದರೂ ನಾನು ಒಮ್ಮೆ ಮಾತ್ರ ಇಂತಹದ್ದನ್ನು ನೋಡಿದ್ದೆ. ಇವು ಇಲ್ಲಿಯವರೆಗೂ ಬಿಡಿಸಲಾಗದ ಪ್ರಕೃತಿಯ ಒಗಟಾಗಿಯೇ ಉಳಿದಿದೆ. ಮಾಮೂಲಿನ ಚಿರತೆಗಳಲ್ಲಿರುವ ಚುಕ್ಕೆ ಗುರುತುಗಳು ಇಂತಹ ಚಿರತೆಗಳ ಕಪ್ಪು ಕೂದಲಿನಡಿ ಅಸ್ಪಷ್ಟವಾಗಿ ಕಾಣುತ್ತದೆ ಎನ್ನುವ ಸತ್ಯ ಪ್ರಾಣಿ ಸಂಗ್ರಹಾಲಯದಲ್ಲಿರುವ ಕಪ್ಪು ಚಿರತೆಯನ್ನು ಗಮನಿಸಿದರೆ ತಿಳಿಯುತ್ತದೆ.

ಶಿವನಪಳ್ಳಿಯ ಗೋಪಾಲಕ ಕಪ್ಪು ಚಿರತೆಯನ್ನು ನೋಡಿದ್ದನ್ನು ಊರಿನವರಿಗೆ ಹೇಳಿದಾಗ ಅವರು ಅವನ ಮಾತನ್ನು ನಂಬಲಿಲ್ಲ. ಕಣ್ಣಾರೆ ಕಂಡ ಆ ಪ್ರಾಣಿ ಯಾವುದೋ ಸಾಮಾನ್ಯ ಜೀವಿಯಲ್ಲ, ತಮ್ಮಂತಹ ಬಡಪಾಯಿ ಹಳ್ಳಿಗರನ್ನು ಹೆದರಿಸಲು ಬಂದಿರುವ ಶನಿಯ ಒಂದು ರೂಪ ಎಂದು ಆ ದನಗಾಹಿ ಪ್ರಾಮಾಣಿಕವಾಗಿ ನಂಬಿದ್ದನು. ಆದರೆ ಮುಂದಿನ ಕೆಲವು ವಾರಗಳಲ್ಲಿ ಕಪ್ಪು ಚಿರತೆ ಮತ್ತೆ ಕಣ್ಣಿಗೆ ಬೀಳದಿದ್ದುದರಿಂದ ಜನ ಅದನ್ನು ಮರೆತರು.

ಕೆಲವು ತಿಂಗಳ ನಂತರ ಒಂದು ಬಿಸಿಲಿನ ಮಧ್ಯಾಹ್ನದಲ್ಲಿ ಇಬ್ಬರು ದನಗಾಹಿಗಳು ತಾವು ತಂದ ಬುತ್ತಿಯನ್ನು ತಿಂದು ಮಲಗಿದ್ದರು. ದನಕರುಗಳೂ ಕೂಡ ನಿದ್ದೆಗಣ್ಣಿನಲ್ಲಿ ತಿಂದ ಹುಲ್ಲನ್ನು ಮೆಲುಕು ಹಾಕುತ್ತಾ ಡೊಗ್ಗಾಲಿನಲ್ಲಿ ಕುಳಿತಿದ್ದವು. ಆಗ ದಿಢೀರನೆ ಆಕ್ರಮಣ ಮಾಡಿದ ಚಿರತೆ ಒಂದು ಹಸುವಿನ ಕುತ್ತಿಗೆಯಲ್ಲಿ ತನ್ನ ಕೋರೆಹಲ್ಲುಗಳನ್ನು ನೆಟ್ಟಿತು. ಆ ಹಸು ತನ್ನ ಮಾರಣಾಂತಿಕ ನೋವನ್ನು ನುಂಗಿ ಪ್ರತಿಭಟಿಸುವ ಮೊದಲೇ ಅದನ್ನು ತನ್ನ ದವಡೆಯಿಂದ ಎತ್ತಿ ಹಿಡಿಯಿತು. ಅದರ ನರಳಾಟದ ಕೂಗನ್ನು ಕೇಳಿದ ದನಗಾಹಿಯೊಬ್ಬ ಎಚ್ಚರಗೊಂಡು ಆ ದೃಶ್ಯವನ್ನು ನೋಡಿ ಸ್ತಂಭೀಭೂತನಾದ. ತನ್ನ ಜೊತೆಗಾರನನ್ನು ನಿದ್ದೆಯಿಂದ ಎಬ್ಬಿಸಿದಾಗ ಅವರಿಬ್ಬರೂ ಆ ಹಸು ಕಾಲನ್ನು ಬಡಿಯುತ್ತಾ ಕೊನೆಯುಸಿರು ಎಳೆಯುವುದನ್ನು ನೋಡಿದರು. ಸಾಮಾನ್ಯ ಸಮಯದಲ್ಲಾಗಿದ್ದರೆ ಆ ದನಗಾಹಿಗಳು ದೊಡ್ಡ ಧ್ವನಿಯಲ್ಲಿ ಕೂಗುತ್ತಾ ತಮ್ಮ ಕತ್ತಿಯನ್ನು ಝಳಪಿಸುತ್ತಾ ಚಿರತೆಯತ್ತ ನುಗ್ಗಿ ಕಡೆಯ ಪಕ್ಷ ಅದು ಹಸುವಿನ ಶವವನ್ನು ಎಳೆದೊಯ್ಯುವ ಮೊದಲು ಓಡಿಸುತ್ತಿದ್ದರು. ಆದರೆ ಆ ಕಪ್ಪು ಚಿರತೆಯನ್ನು ಅವರು ಎದುರಿಸುವ ಧೈರ್ಯ ಮಾಡದೆ ಭಯಾಶ್ಚರ್ಯಗಳಿಂದ ನೋಡುತ್ತಲೇ ನಿಂತುಬಿಟ್ಟರು. ಚಿರತೆ ಸತ್ತ ಹಸುವಿನ ಶವವನ್ನು ನೆಲಕ್ಕೆ ಹಾಕಿ ಇವರತ್ತ ನೋಡಿದ್ದೇ ತಡ, ಅವರಿಬ್ಬರೂ ಅಲ್ಲಿಂದ ಊರಿನ ಕಡೆ ಓಟಕಿತ್ತರು.

ಸಾಮಾನ್ಯ ಸಂದರ್ಭಗಳಲ್ಲಿ ಊರಿನ ಜನ ಹಸುವಿನ ಶವವನ್ನು ಹುಡುಕುವ ಪ್ರಯತ್ನ ಮಾಡುತ್ತಿದ್ದರು. ಇಲ್ಲಿಯವರೆಗೆ ಕೇಳಿರದ ಈ ಕಪ್ಪು ದೈತ್ಯನ ಕಥೆ ಅವರ ಧೈರ್ಯವನ್ನು ಉಡುಗಿಸಿತ್ತು. ಹಾಗಾಗಿ ಅವರು ಹಸುವಿನ ಶವವನ್ನು ಹುಡುಕುವ ಪ್ರಯತ್ನ ಮಾಡಲಿಲ್ಲ. ಮೊದಲ ಬಾರಿ ದನಗಾಹಿಯೊಬ್ಬ ಕಪ್ಪು ಚಿರತೆಯ ಬಗೆಗೆ ಹೇಳಿದಾಗ ನಂಬದಿದ್ದ ಜನ ಇದು ನಿಜವಿರಬಹುದೇ ಎಂದು ಯೋಚಿಸತೊಡಗಿದರು.

ಮುಂದಿನ ದಿನಗಳಲ್ಲಿ ಆ ಕಪ್ಪು ಖದೀಮ ಶಿವನಪಳ್ಳಿಯ ದನಕರುಗಳನ್ನು ಆಗಾಗ ಬಲಿತೆಗೆದುಕೊಳ್ಳತೊಡಗಿತು. ಹಾಗಾಗಿ ಅಲ್ಲಿನ ಜನರಿಗೆ ಕಪ್ಪು ಚಿರತೆಯ ಬಗೆಗೆ ಯಾವುದೇ ಅನುಮಾನಗಳು ಉಳಿಯಲಿಲ್ಲ. ಜನ ಇದರ ಬಗೆಗೆ ಹೆಚ್ಚುಹೆಚ್ಚು ಎಚ್ಚರ ವಹಿಸತೊಡಗಿದರು. ಕೊನೆಗೆ ದನಕರುಗಳನ್ನು ಹಳ್ಳಿಯ ಹತ್ತಿರ ಮಾತ್ರ ಮೇಯಲು ಬಿಡುವವರೆಗೆ ಇದು ಮುಂದುವರೆಯಿತು. ಇದರಿಂದ ಚಿರತೆಯ ಆಹಾರಕ್ಕೆ ಕೊರತೆಯಾಗಿ ಅದು ತನ್ನ ಬೇಟೆಯನ್ನು ಸುತ್ತಲಿನ ಇತರ ಹಳ್ಳಿಗಳಿಗೂ ವಿಸ್ತರಿಸಿತು. ರಕ್ಷಿತ ಅರಣ್ಯದಿಂದ ಹೊರಗಿದ್ದ ಸಲ್ಲೈವರಮ್ ಊರಿನ ಕತ್ತೆಯೊಂದನ್ನೂ ಕೂಡ ಹೊತ್ತೊಯ್ದಿತು!

ಸುಮಾರು ಇದೇ ಸಮಯದಲ್ಲಿ ನಾನು ಸ್ನೇಹಿತನೊಬ್ಬನ ಜೊತೆಗೆ ಶಿವನಪಳ್ಳಿಗೆ ಭೇಟಿನೀಡಿದೆ. ಭಾನುವಾರದ ಸಂಜೆಯ ತಿರುಗಾಟಕ್ಕೆ ಹೋಗಿದ್ದ ನಾವು ಚಿಕ್ಕಪುಟ್ಟ ಬೇಟೆಯಾಡುವ ಯೋಚನೆಯಲ್ಲಿದ್ದೆವು. ಈ ಕಪ್ಪು ಚಿರತೆಯ ಕಥೆಯನ್ನು ಕೇಳಿ ನಾನು ಇದರ ಚರ್ಮವನ್ನು ಸಾಧ್ಯವಿದ್ದರೆ ಸಂಗ್ರಹಿಸಬೇಕು ಎಂದುಕೊಂಡೆ. ಹಾಗಾಗಿ ಚಿರತೆ ಮತ್ತೊಮ್ಮೆ ಪ್ರಾಣಿಯನ್ನು ಕೊಂದಾಗ ಅದರ ಶವವನ್ನು ಹಾಗೆಯೇ ಬಿಟ್ಟು ನನಗೆ ಸುದ್ದಿ ಕಳಿಸಿದರೆ ನಾನು ಆ ಪ್ರಾಣಿಯ ಬೆಲೆಯನ್ನು ಮತ್ತು ಸುದ್ದಿ ಮುಟ್ಟಿಸಿದವರಿಗೆ ಐವತ್ತು ರೂಪಾಯಿ ಬಕ್ಷೀಸ್‌ನ್ನು ಕೊಡುತ್ತೇನೆಂದು ಹಳ್ಳಿಯವರಿಗೆ ಹೇಳಿದೆ. ನನಗೆ ಸುದ್ದಿ ಮುಟ್ಟಿಸಲು ಹತ್ತಿರದ ಹೊಸೂರಿಗೆ ಹೋಗಿ ಅಲ್ಲಿಂದ ತಂತಿ ಕಳಿಸಬೇಕೆಂದು ತಿಳಿಸಿದೆ.


ಕಗ್ಗತ್ತಲಿನಲ್ಲಿ ಚಿರತೆಯನ್ನು ಕೊಂದೆನೇ?

ಮುಂದಿನ ಕೆಲವೇ ದಿನಗಳಲ್ಲಿ ನನಗೆ ಕರೆ ಬರಬಹುದೆಂಬ ನಿರೀಕ್ಷೆಯಿಂ[...] ನನ್ನ ಸಾಮಾನುಗಳನ್ನು ತಯಾರಾಗಿ ಇಟ್ಟುಕೊಂಡಿದ್ದೆ. ಆದರೆ ನನಗೆ ಕ[...] ಬಂದಿದ್ದು ಹದಿನೈದು ದಿನಗಳ ನಂತರ, ಅದೂ ಕೂಡ ಸಂಜೆ ಸುಮಾರ[...] ನಾಲ್ಕು ಗಂಟೆಯ ಹೊತ್ತಿಗೆ. ಅವತ್ತು ಬೆಳಗ್ಗೆ ಮೇಯಲು ಹೋದ ತಕ್ಷ[...] ಚಿರತೆ ಒಂದು ಹಸುವನ್ನು ಕೊಂದಿತ್ತು. ಆದರೆ ಅವರು ಹೊಸೂರಿಗೆ ಬಂದ[...] ನನಗೆ ಕಳಿಸಿದ ತಂತಿ ತಲುಪುವಷ್ಟರಲ್ಲಿ ಸಂಜೆಯಾಗಿತ್ತು. ರಂಗಸ್ವಾಮಿ ಎನ್ನು[...] ನನ್ನ ಹಳೆಯ ಬೇಟೆಯ ಸ್ನೇಹಿತನೊಬ್ಬ ನನಗೆ ಸುದ್ದಿ ತಲುಪಿಸಿದ.

ನಾನು ತಕ್ಷಣ ಬೆಂಗಳೂರಿನಿಂದ ಹೊರಟು ಸುಮಾರು ಏಳು ಕಾ[...] ಗಂಟೆಯ ಹೊತ್ತಿಗೆ ಶಿವನಪಳ್ಳಿ ತಲುಪಿದೆ. ನಾನು ತಕ್ಷಣ ಕಾಡಿಗೆ ಹೋ[...] ನನ್ನ ಟಾರ್ಚ್ ಬೆಳಕಿನಲ್ಲಿ ಚಿರತೆಯನ್ನು ಬೇಟೆಯಾಡಲು ಯತ್ನಿಸಬಹುದಿ[...] ಅಥವಾ ಮರುದಿನ ರಾತ್ರಿಯವರೆಗೆ ಅಲ್ಲಿಯೇ ಉಳಿದು ಮಚಾನ[...] ಸಿದ್ಧಪಡಿಸಿಕೊಂಡು ಚಿರತೆಗಾಗಿ ಕಾಯಬಹುದಿತ್ತು. ಹೀಗೆ ನನ್ನ ಮುಂ[...] ಎರಡು ಆಯ್ಕೆಗಳಿದ್ದವು. ಸುಮ್ಮನೆ ಒಂದು ದಿನ ಕೆಲಸವಿಲ್ಲದೆ ಆ ಹಾಡಿಯ[...] ಕೂತಿರುವುದು ನನಗೆ ಸರ್ವಥಾ ಸಮ್ಮತವಿರಲಿಲ್ಲ. ಹಾಗಾಗಿ ಸಂಪೂ[...] ಅನಿಶ್ಚಿತತೆ ಮತ್ತು ರಂಗಸ್ವಾಮಿಯ ವಿರೋಧದ ನಡುವೆಯೂ ಆ ರಾತ್ರಿ[...] ಕಾಡಿಗೆ ಹೋಗಲು ನಾನು ನಿರ್ಧರಿಸಿದೆ. ನನ್ನ ಶಬ್ದ ಗ್ರಹಣಶಕ್ತಿ ಮತ್ತು ಕಾ[...] ಅನುಭವದ ಮೇಲೆ ಭರವಸೆ ಇಡಬಹುದು ಎಂದು ನನಗೆ ಅನ್ನಿಸಿತ್ತು.

ನಮ್ಮ ಈ ಎಲ್ಲಾ ಮಾತುಕತೆಗಳು ಮುಗಿಯುವಷ್ಟರಲ್ಲಿ ರಾತ್ರಿಯ ಎಂ[...] ಗಂಟೆಯಾಗಿತ್ತು. ಚಿರತೆ ಹಸುವನ್ನು ಬಲಿ ತೆಗೆದುಕೊಂಡ ಜಾಗಕ್ಕೆ ಕಾ[...]

ಮರೆತುಹೋದ ದಿನಗಳು





ಟಿಪ್ಪು ಸುಲ್ತಾನ ಇನ್ನೂ ಬಾಲಕನಾಗಿದ್ದ. ವೀರರಾಣಿ ರ ಚೆನ್ನಮ್ಮ ಇನ್ನೂ ಜನಿಸಿರಲಿಲ್ಲ. 1857ರಲ್ಲಿ ನಡೆದ ಿದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವೀರವನಿತೆ ಝಾನ್ಸಿ ಲಕ್ಷ್ಮೀಬಾಯಿ, ವೀರ ತಾತ್ಯಾಟೋಪಿ, ಬಹದ್ದೂರ ಶಾ ಮುಂತಾದ ಹುತಾತ್ಮರಿಗಿಂತ ಒಂದು ಶತಮಾನದಷ್ಟು ಲೇ ಫಕೀರ ಮಜ್ನು ಶಾ ಎಂಬ ಸೂಫಿ ಸಂತ, ಬ್ರಿಟಿಷ್ ಇಂಡಿಯಾ ಕಂಪನಿ ವಿರುದ್ಧ ಹೋರಾಟ ಪ್ರಾರಂಭಿಸಿದ. 00 ಅನುಯಾಯಿಗಳನ್ನು ಒಗ್ಗೂಡಿಸಿ ಕ್ರಿಸ್ತಶಕ 1763ರಲ್ಲೇ ಷರ ವಿರುದ್ಧ ಬಂಡಾಯದ ಧ್ವಜ ಹಾರಿಸಿದ. ಆಗ ಆತನ ಬಂಟನಾಗಿದ್ದವನು ಭವಾನಿ ಪಾಠಕ್ ಎಂಬ ಸನ್ಯಾಸಿ. ಆತ ತನ್ನ ಯಾಯಿಗಳೊಂದಿಗೆ ಮಜ್ನು ಶಾ ಜೊತೆ ಸೇರಿ ಬ್ರಿಟಿಷರ ವಿರುದ್ಧ ಾಡಿದ.

ಮಜ್ನು ಶಾ ಮತ್ತು ಭವಾನಿ ಪಾಠಕ್ ಅವರು ರೈತರಲ್ಲಿ ಸ್ವಾತಂತ್ರ್ಯದ ಪ್ರಜ್ಞೆ ವರು. ಸಂಸ್ಕೃತಿ, ಧರ್ಮ ಮತ್ತು ಭಾವೈಕ್ಯದ ಮಹತ್ವವನ್ನು ತಿಳಿಸಿದರು. ಮಜ್ನು ಶಾ ಸಮರ್ಥ ಸಂಘಟಕನಾಗಿದ್ದ, ಮಹಾನ್ 'ಕಮಾಂಡರ್ ಇನ್ " ಆಗಿದ್ದ. ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿದ್ದ ಬ್ರಿಟಿಷ್ ಈಸ್ಟ್ ಇಂಡಿಯಾ ವಿರುದ್ಧ ಹೋರಾಡುತ್ತ ಮುನ್ನಡೆದ. ಭವಾನಿ ಪಾಠಕ್, ದೇವಿ ಚೌಧುರಾಣಿ, ಗ್ ಅಲಿ, ಕೃಪಾನಾಥ, ನೂರುಲ್ ಮುಹಮ್ಮದ, ಪೀತಾಂಬರ, ತಮ್ಮ ಸಾ ಶಾ ಮುಂತಾದವರು ಆತನ ವೀರಸಂಗಾತಿಗಳಾಗಿದ್ದರು.

ಮಜ್ನು ಶಾ ಕ್ರಿಸ್ತ ಶಕ 1766ರಲ್ಲಿ ಮೆಕೆಂಜಿ ನೇತೃತ್ವದ ಬ್ರಿಟಿಷ್ ನ್ನು ಸೋಲಿಸಿದ. 1769ರಲ್ಲಿ ಯುದ್ಧದಲ್ಲಿ ಕಮಾಂಡರ್ ನ ಹತ್ಯೆಯಾಯಿತು. ರಲ್ಲಿ ಲೆಫ್ಟಿನೆಂಟ್ ಟೇಲರ್‌ನ ಚಳ್ಳೆಹಣ್ಣು ತಿನ್ನಿಸಿದ. ರಲ್ಲಿ ನಡೆದ ಯುದ್ಧದಲ್ಲಿ ಮತ್ತೆ ್ ಸೈನ್ಯವನ್ನು ಸೋಲಿಸಿದ. ನೂರಾರು ಮಂದಿ ಬ್ರಿಟಿಷ್ ರು ಸತ್ತು, ಲೆಫ್ಟಿನೆಂಟ್ ರ್ಗುಸನ್ ತೀವ್ರ ಗಾಯ ಶ. 1786ನೇ ಡಿಸೆಂಬರ್ ದು ಮಜ್ನು ಶಾ, ಬಗುರಾ ು ಮುಂಗ್ರಾ ಗ್ರಾಮದಲ್ಲಿ



ಅನಿರೀಕ್ಷಿತವಾಗಿ ಪ್ರತ್ಯಕ್ಷಗೊಂಡು ಬ್ರೆನ್‌ನ ಸೈನ್ಯವನ್ನು ಚಕಿತಗೊಳಿಸಿದ. ಆಗ ಮಜ್ನು ಗಾಯಗೊಂಡ. ಆದರೆ ಎದೆಗುಂದದೆ ಬಿಚ್ಚುಗತ್ತಿಯೊಂದಿಗೆ ತನ್ನ ಕುದುರೆ ಓಡಿಸಿದ. ನಂತರ ತೀವ್ರಗಾಯಗಳಿಂದಾಗಿ ಬಂಗಾಲದ ಮಾಖನಪುರದಲ್ಲಿನ ಗ್ರಾಮವೊಂದರಲ್ಲಿ ಅಸುನೀಗಿದ. ಮಿಜ್ನಾಪುರದಲ್ಲಿ ಆ ಸ್ವಾತಂತ್ರ್ಯವೀರನ ಸಮಾಧಿ ಅನಾಥವಾಗಿ ಉಳಿದಿದೆ. ಆತನ ವೀರಮರಣದ ನಂತರ ತಮ್ಮ ಮೂಸಾ ಶಾ ಹೋರಾಟವನ್ನು ಮುಂದುವರಿಸಿದ.

ಭವಾನಿ ಪಾಠಕ್, ದೇವಿ ಚೌಧುರಾಣಿ, ಫೆರಾಗುಲ್ ಶಾ ಮತ್ತು ಚಿರಾಗ್ ಅಲಿ ಶಾ ಅವರು 1787ರಿಂದ ಅನೇಕ ಯುದ್ಧಗಳನ್ನು ಮಾಡಿ ಮಯೇಮಸಿಂಗ್ ಮತ್ತು ರಂಗಪುರಗಳಲ್ಲಿ ಭಾರಿ ಹಾನಿಯನ್ನುಂಟು ಮಾಡಿದರು. ಇನ್ನೊಂದು ಗುಂಪು ರಂಜಾನಿ ಶಾ ಮತ್ತು ಜಹೂರಿ ಶಾ ಅವರ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯವನ್ನು ಎದುರಿಸಲು ಅಸ್ಸಾಮಿಗೆ ಹೋಯಿತು. ಹೀಗೆ ಹೋರಾಟ ಕ್ರಿಸ್ತ ಶಕ 1800ರ ವರೆಗೆ ಮುಂದುವರಿಯಿತು. ಈ ಅನುಪಮ ಹೋರಾಟದ ಹಿನ್ನೆಲೆಯಲ್ಲಿ 'ವರ್ತಮಾನವ ನೆನೆದು' ಕವನ ಬರೆಯಲಾಗಿದೆ.

ಮಜ್ನು ಶಾ ಮತ್ತು ಭವಾನಿ ಪಾಠಕ್ ಅವರು ಒಂದಾಗಿ ವರ್ತಮಾನದ ಕುರಿತು ಇಲ್ಲಿ ಮಾತನಾಡುತ್ತಾರೆ.

ವರ್ತಮಾನವ ನೆನೆದು

ನಾವೆಲ್ಲ ಫಕೀರರು ಸನ್ಯಾಸಿಗಳು ಒಂದಾಗಿ ಅಂದು;
ನಾಡ ಬಿಡುಗಡೆ ಬಯಸಿ ಕತ್ತಿ ಹಿರಿದೆವು ನೊಂದು.

ಸದಾ ನಿಜದ ನೆಲೆಯನು ಅರಸುವ ನಾವು ಎಲ್ಲ ಬಿಟ್ಟು
ತುಂಬ ಹೋರಾಡಿದೆವು ನಿಮಗಾಗಿ, ಎಂಥ ಕಟ್ಟುನಿಟ್ಟು!

ಸನ್ಯಾಸಿಗಳ ಕೇಸರಿ, ಫಕೀರರ ಹಸಿರು ಮನಸ್ಸು ಬಿಳಿ
ನಾವು ಒಂದಾಗಿ ಸೃಷ್ಟಿಸಿದೆವು ಭಾರತದ ಹೊಸ ತಳಿ.

ಅಂಜಲಿಲ್ಲ ಅಳುಕಲಿಲ್ಲ ನಾವು ಫಕೀರರು, ಸನ್ಯಾಸಿಗಳು;
ಇತ್ತು ನಮ್ಮ ಮೈಮನಗಳ ತುಂಬೆಲ್ಲ ಸ್ವಾತಂತ್ರ್ಯದ ಗೀಳು.

ಬೆಳ್ಳಿಚುಕ್ಕಿ ಮೂಡುವ ಹೊತ್ತಿಗೆಲ್ಲ ನಾವು ಸಿದ್ಧ ಯುದ್ಧಕ್ಕೆ;
ಮತ್ತೆ ಸಾಗುತ್ತಿದ್ದೆವು ಧ್ರುವತಾರೆ ನೋಡಿ ಮಹಾಪ್ರಸ್ಥಾನಕ್ಕೆ.

ಕಲ್ಲು-ಮುಳ್ಳು ತಗ್ಗು-ದಿನ್ನೆಗಳೆನ್ನದೆ ಸವೆಸಿದೆವು ದೂರ ದಾರಿ;
ಪರಂಗಿಗಳ ಫಿರಂಗಿಗಳೆದುರೇ ಎದೆಗುಂದದೆ ಮಾರಾಮಾರಿ.

ನಮ್ಮ ಹೋರಾಟ ಎಲ್ಲೆಂದರಲ್ಲಿ ಅಸ್ಸಾಂ, ಬಿಹಾರ, ಬಂಗಾಲ.
ಫಕೀರ ಸನ್ಯಾಸಿಗಳ ಸ್ವಾತಂತ್ರ್ಯದಾಹಕ್ಕೆ ಬಿಳಿಯರು ಕಂಗಾಲ.

ಎಷ್ಟೊಂದು ಸುಖವಿತ್ತು ನಾವೆಲ್ಲ ಒಂದಾಗಿ ಕಷ್ಟ ಸಹಿಸುವಲ್ಲಿ;
ಮಜ್ನು ಶಾ, ಭವಾನಿ ಪಾಠಕ್ ಸ್ವಾತಂತ್ರ್ಯಗೀತವ ಹಾಡುವಲ್ಲಿ.

ನಮ್ಮೊಳಗಿನ ಭಾವೈಕ್ಯದ ಮಿಡಿತಕ್ಕೆ ಸ್ಪಂದಿಸಿದವರೆಲ್ಲ ಬಂಧು;
ಖಡ್ಗಗಳ ಹೊಳಪು, ಖುರಪುಟಗಳ ಸದ್ದು, ಜನಮನ ಸಿಂಧು.


ಅಯ್ಯೋ ಈಗ ನೋಡಿ ಹೇಗಿದೆ ನಿಮ್ಮ ಸ್ಥಿತಿ ನಾಚಿಕೆಗೇಡು;
ಅರೆರೆ ಹೀಗೆಲ್ಲ ಲಾಠಿಗಳನು ಬೀಸುವುದು ಭವಿಷ್ಯಕ್ಕೆ ಕೇಡು.

ಎಲೆಲೆ ಮಾನವ ನಿನ್ನ ವರ್ತಮಾನವ ನೋಡಿ ಬಳಲಿದ್ದೇವೆಂದು;
ಸಾಕುಬಿಡು, ಅನ್ನದಿರು, ನಾ ಸಿಖ್, ಮುಸ್ಲಿಂ, ಕ್ರೈಸ್ತ ನಾ ಹಿಂದು.

ಹೇಳುತ್ತೇವೆ ಕೇಳಿರಿ, ನಿಮಗಾಗಿ ಹುತಾತ್ಮರಾದವರು ನಾವು,
ಕೂಡಿ ಬಾಳದಿರೆ ಮತ್ತೆ ಕಚ್ಚಾಡಿ ಗುಲಾಮರಾಗುವಿರಿ ನೀವು.

ಎಲ್ಲ ಫಕೀರ ಸನ್ಯಾಸಿಗಳೆಲ್ಲ ಜನರೊಡನೆ ಮುನ್ನಡೆಯಲಿ;
ಇದುವೆ ನಮ್ಮೆಲ್ಲರ ಬೀಡೆನ್ನಲಿ, ನೆಲದ ಹಾಡು ಹಾಡಲಿ.

ಸಂಸ್ಕೃತಿ ಸಮ್ಮಿಶ್ರ, ಒಂದೇ ಭಾರತ ಸಮುದಾಯ ನಾವು;
ನಮ್ಮೆಲ್ಲ ಧರ್ಮಗಳ ಗುರಿ ಒಂದೇ, ಕಚ್ಚಾಡಬೇಡಿ ನೀವು.



● ರಂಜಾನ್ ದರ್ಗಾ

ದೂರದವರೆಗೆ ನನ್ನನ್ನು ಕರೆದುಕೊಂಡು ಹೋಗಿ ನಂತರ ಶವವಿರುವ ತೋರಿಸಿದರೆ ಮುಂದಿನದನ್ನು ನಾನು ನಿಭಾಯಿಸುತ್ತೇನೆ ಎಂದು ಗೆ ತಿಳಿಸಿದೆ. ತಕ್ಷಣ ನನ್ನ ಬಂದೂಕು ಮತ್ತು ಟಾರ್ಚ್‌ನೊಂದಿಗೆ ಸಿದ್ಧನಾದೆ. ಮಾಡದೆ ಹೆಜ್ಜೆ ಇಡಲು ಅನುಕೂಲವಾಗುವಂತೆ ರಬ್ಬರ್ ಬೂಟುಗಳನ್ನು ಕತ್ತಲಿಗೆ ಹೊಂದಿಕೆಯಾಗುವಂತೆ ಕಪ್ಪು ಅಂಗಿಯನ್ನು ಧರಿಸಿದೆ.

ಂಗಸ್ವಾಮಿ ಮತ್ತು ಆ ದನಗಾಹಿ ನನ್ನೊಡನೆ ಹೊರಟು ಒಂದು ಒಣಗಿದ ಮು ಹತ್ತಿರ ಕರೆತಂದರು. ಅಲ್ಲಿಂದ ಮುಂದೆ ಅದು ಎರಡು ಬಾರಿ ನ್ನು ಪಡೆದುಕೊಳ್ಳುತ್ತದೆಯೆಂದೂ ಮತ್ತು ಎರಡನೇ ತಿರುವಿನಿಂದ ಉತ್ತರಕ್ಕೆ ರು ಇನ್ನೂರ ಗಜ ದೂರದಲ್ಲಿ ಚಿರತೆ ಹಸುವನ್ನು ಕೊಂದ ಸ್ಥಳವಿದೆಯೆಂದೂ ದರು. ಅವರನ್ನು ಊರಿಗೆ ಹಿಂದಿರುಗಲು ತಿಳಿಸಿ ನಾನು ಮುನ್ನಡೆದೆ.

ಹೊಳೆಯ ದಂಡೆಯ ಮೇಲೆ ನಡೆಯುವುದಕ್ಕಿಂತ ಅದರ ಪಾತ್ರದಲ್ಲಿ ವುದು ಹೆಚ್ಚು ಅನುಕೂಲ ಕರವೆಂದು ಅನ್ನಿಸಿತು. ಗಿಡಗಂಟಿಗಳು ಕಲ್ಲುಗಳು ಇಲ್ಲದೇ ಇದ್ದುದರಿಂದ ಅಲ್ಲಿ ಸದ್ದಿಲ್ಲದೆ ನಡೆಯ ಬಹುದಿತ್ತು. ಗಳ ಶಬ್ದಗ್ರಹಣ ಶಕ್ತಿ ಅತ್ಯುತ್ತಮವಾಗಿರುವುದರಿಂದ ನಾನು ಬಹಳ ಯಿಂದ ಹೆಜ್ಜೆ ಹಾಕತೊಡಗಿದೆ.

ಹೊಳೆಯ ಪಾತ್ರದ ಎರಡನೇ ತಿರುವನ್ನು ತಲುಪಿ ನೆಲಕ್ಕೆ ಕಿವಿಗೊಟ್ಟು ದಾದರೂ ಸದ್ದು ಕೇಳಿಬರುತ್ತಿ ದೆಯೇ ಎಂದು ಆಲಿಸತೊಡಗಿದೆ. ಕಡೆ ಸಂಪೂರ್ಣ ನಿಶಬ್ದವಾಗಿತ್ತು. ಹೊಳೆಯ ದಂಡೆಯನ್ನೇರಿ ಹಸುವಿನ ಬಹುದಾದ ದಿಕ್ಕಿನಲ್ಲಿ ನಿಧಾನವಾಗಿ ನಡೆಯತೊಡಗಿದೆ. ಕತ್ತಲು ಾಗಿತ್ತು, ಚಿರತೆ ನರಹಂತಕನಲ್ಲವೆಂದು ಖಾತ್ರಿ ಇದ್ದುದರಿಂದ ನಾನು ಪಡುವ ಅಗತ್ಯವಿಲ್ಲ ಎನ್ನಿಸಿತು. ಹಾಗಿದ್ದರೂ ಕಪ್ಪು ಚಿರತೆಯ ಬಗೆಗೆ ನ್ನ ಪ್ರಥಮ ಅನುಭವಾಗಿತ್ತು, ಇಂತಹ ಚಿರತೆಗಳು ಬಹಳ ಆಕ್ರಮಣಕಾರಿ ಅಪಾಯಕಾರಿ ಎಂದು ನಾಮ ಕೇಳಿದ್ದೆ. ಆದ್ದರಿಂದ ಪ್ರಾಮಾಣಿಕವಾಗಿ ಬೇಕೆಂದರೆ ನನಗೆ ಬಹಳ ಭಯವಾಗಿತ್ತು!

ಂತಹ ಗಾಢಾಂಧಕಾರದಲ್ಲಿಯೂ ನಾನು ಬಂದೂಕನ್ನು ಚಲಾಯಿಸುವ ತಲುಪುವ ಮೊದಲು ಟಾರ್ಚ್‌ನ್ನು ಬೆಳಗಿಸುವಂತಿರಲಿಲ್ಲ. ಚಿರತೆ ಬಲಿಯನ್ನು ತಿನ್ನುತ್ತಿರುವ ಶಬ್ದವೇನಾದರೂ ಕೇಳುತ್ತದೆಯೇ ಎಂದು ನಿಂತು ಆಲಿಸುತ್ತಾ ನಾನು ನಿಧಾನವಾಗಿ ಮುನ್ನಡೆಯತೊಡಗಿದೆ. ದು ಏಪ್ಪತ್ತೈದು ಗಜ ಮುಂದೆ ಹೋಗುವಷ್ಟರಲ್ಲಿ ಒಮ್ಮೆ ಹಗುರವಾದ ಕೇಳಿದಂತೆ ಅನಿಸಿತು. ಆದರೆ ಮರುಕ್ಷಣದಲ್ಲಿಯೇ ನಿಶಬ್ದ ಆವರಿಸಿತು. ಕಾಡು ದಟ್ಟವಾಗತೊಡಗಿದ್ದುದರಿಂದ ನನ್ನೆಲ್ಲಾ ಎಚ್ಚರಿಕೆಯನ್ನೂ ಮೀರಿ ಬಸೆಯಿಂದ ಸದ್ದು ಉಂಟಾಗುತ್ತಿತ್ತು, ಕಾಲನ್ನು ಸ್ವಲ್ಪವೇ ಎತ್ತಿ ಹೆಜ್ಜೆ ದ್ದೆ. ಇದರಿಂದ ಚಿರತೆ ಯಾವುದೋ ರಾತ್ರಿಯ ಜೀವಿ ಹುಲ್ಲಿನಲ್ಲಿ ತ್ತಿದೆ ಎಂದುಕೊಳ್ಳುವ ಸಾಧ್ಯತೆ ಇತ್ತು, ಯಾವುದಾದರೂ ಹಾವಿನ ಕಾಲಿಟ್ಟರೆ ನನ್ನ ರಬ್ಬರ್ ಬೂಟುಗಳು ಕಾಲನ್ನು ರಕ್ಷಿಸಲಾರವು ಎನ್ನುವ ಆಲೋಚನೆ ನನ್ನಲ್ಲಿ ಸುಳಿಯಿತು. ಇಂತಹ ಯೋಚನೆಯನ್ನು ಂದ ಹೊರನೂಕಿ ನಡೆಯುತ್ತಿರುವಾಗ ನಾನು ರಂಗಸ್ವಾಮಿ ಹೇಳಿದ ಸ್ವಲ್ಪ ತಪ್ಪು ನಡೆದಿರಬೇಕು. ಹೀಗೆ ಮುಂದುವರೆದಂತೆ ನಾನು ಆ ಹೇಳಿದ ದೂರಕ್ಕಿಂತ ಹೆಚ್ಚು ನಡೆದಿದ್ದೇನೆ ಅನ್ನಿಸಿತು. ಮೋಡ ಮುಸುಕಿದ ಆಕಾಶದಡಿಯ ದಟ್ಟ ಅರಣ್ಯದಲ್ಲಿ ನಾನು ದಿಕ್ಕುದೆಸೆಯಿಲ್ಲದೆ ನಿಂತಿದ್ದೆ.

ಆದರೆ ನನ್ನ ಅದೃಷ್ಟ ನೆಟ್ಟಗಿತ್ತು, ಮರುಕ್ಷಣದಲ್ಲಿ ಮಾಂಸವನ್ನು ಕಚ್ಚಿ ಎಳೆಯುವ ಮತ್ತು ಮೂಳೆಗಳನ್ನು ಅಗಿಯುವ ಸದ್ದು ಕೇಳಿತು. ಚಿರತೆ ತನ್ನ ಭೋಜನದಲ್ಲಿ ಮಗ್ನವಾಗಿದೆ, ಇನ್ನು ಆದಷ್ಟು ಹತ್ತಿರ ಹೋಗಿ ಟಾರ್ಚ್‌ನ್ನು ಬೆಳಗಿಸಿ ಗುಂಡು ಹಾರಿಸುವುದೊಂದೇ ಬಾಕಿ ಉಳಿದಿರುವುದು ಎಂದುಕೊಂಡೆ. ಆದರೆ ಇದು ಹೇಳಿದಷ್ಟು ಸುಲಭವಾಗಿರಲಿಲ್ಲ. ಸದ್ದು ನನ್ನ ಹಿಂದಿನಿಂದ ಎಡದಿಕ್ಕಿನಲ್ಲಿ ಬರುತ್ತಿತ್ತು, ಅಂದರೆ ಹಸುವಿನ ಶವವನ್ನು ದಾಟಿ ಮುನ್ನಡೆದಿದ್ದೆ ಎನ್ನುವ ನನ್ನ ಸಂಶಯ ನಿಜವಾಗಿತ್ತು, ಚಿರತೆ ಆಗಷ್ಟೇ ಬಂದಿರಬೇಕು ಅಥವಾ ನನ್ನ ಸದ್ದನ್ನು ಈಗಾಗಲೇ ಆಲಿಸಿರಬೇಕು. ಇಂತಹ ಯೋಚನೆ ಬಂದಕೂಡಲೆ ನಾನು ಸ್ಥಬ್ಧನಾಗಿ ನಿಂತುಕೊಂಡೆ.

ಶಬ್ದದ ತೀವ್ರತೆಯನ್ನು ಆಲಿಸಿದ ನಾನು ಚಿರತೆ ಸುಮಾರು ಐವತ್ತರಿಂದ ನೂರು ಗಜ ದೂರದಲ್ಲಿರಬಹುದೆಂದು ಅಂದಾಜು ಮಾಡಿ ಆ ದಿಕ್ಕಿನಲ್ಲಿ ಎಚ್ಚರಿಕೆಯಿಂದ ನಿಧಾನವಾಗಿ ಹೆಜ್ಜೆ ಇಡತೊಡಗಿದೆ. ಚಿರತೆ ಹಸುವಿನ ಶವವನ್ನು ಪೊದೆಯೊಳಗೆ ಎಳೆದುಕೊಂಡು ಹೋಗಿದ್ದರೆ ನನಗೆ ಗುರಿ ಇಡುವುದು ಕಷ್ಟವಾಗುತ್ತಿತ್ತಲ್ಲದೆ ಅದಕ್ಕೆ ನನ್ನ ಮೇಲೆ ಆಕ್ರಮಣ ಮಾಡಲು ಅನುಕೂಲವಾಗುತ್ತಿತ್ತು, ಇದು ನಿರಾಶಾದಾಯಕ ಯೋಚನೆ, ಇವುಗಳನ್ನು ನಾನು ತಡೆಯಲೇಬೇಕು ಎಂದುಕೊಂಡೆ. ಆ ಕ್ಷಣಗಳಲ್ಲಿ ನನ್ನ ತಲೆಯಲ್ಲಿ ಏನು ನಡೆಯುತ್ತಿತ್ತು ಎಂದು ಈಗ ನೆನಪಿಸಿಕೊಳ್ಳುವುದು ಕಷ್ಟ ಏಕೆಂದರೆ ನನ್ನ ದೇಹ ಬುದ್ಧಿಗಳೆರಡನ್ನೂ ಎಚ್ಚರಿಕೆಯಿಂದ ಮುಂದುವರೆಯುವು ದರಲ್ಲಿ ತೊಡಗಿಸಿದ್ದೆ. ಚಿರತೆಯು ಹಸುವಿನ ಶವವನ್ನು ತಿನ್ನುತ್ತಿರುವ ಸದ್ದು ಬರುತ್ತಿರುವವರೆಗೆ ನನಗೆ ಭಯವಿರಲಿಲ್ಲ, ಒಮ್ಮೆ ಸದ್ದು ನಿಂತರೆ, ಅದು ನನ್ನ ಇರುವನ್ನು ಗುರುತಿಸರಬಹುದೇ ಎಂದು ನಾನು ಚುರುಕಾಗಬೇಕಿತ್ತು, ಕಣ್ಣನ್ನು ಕತ್ತಲೆಯಲ್ಲಿ ನೆಟ್ಟು, ಕಿವಿಯನ್ನು ಬರುತ್ತಿದ್ದ ಸದ್ದಿಗೆ ಅಂಟಿಸಿ ನಾನು ನಡೆಯತೊಡಗಿದೆ.

ಸ್ವಲ್ಪ ಹೊತ್ತಿನಲ್ಲಿ ಸದ್ದು ಒಮ್ಮೆಲೆ ನಿಂತಿತು. ಚಿರತೆ ಊಟ ಮುಗಿಸಿ ಹೊರಟಿದೆಯೇ ಅಥವಾ ಅದು ಆಕ್ರಮಣದ ತಯಾರಿಯಲ್ಲಿದೆಯೇ? ನನ್ನ ಯಾವುದೇ ಸಣ್ಣ ಚಲನೆಯೂ ಚಿರತೆಯ ಸೂಕ್ಷ್ಮ ಕಿವಿಗಳಿಗೆ ಎಚ್ಚರಿಕೆಯಾಗಬಹುದಿತ್ತು, ನಿಶ್ಚಲನಾಗಿ ನಿಂತಿದ್ದರೆ ನನಗೆ ಅದು ಮಾಡುವ ಸದ್ದನ್ನು ಕೇಳುವ ಸಾಧ್ಯತೆ ಇತ್ತು, ಹಾಗಾಗಿ ಎಷ್ಟು ಹೊತ್ತು ಅದೇ ಸ್ಥಿತಿಯಲ್ಲಿದ್ದೆ ಎನ್ನುವ ಅರಿವಿಲ್ಲದೆ ನಿಂತೇ ಇದ್ದೆ, ನಾನು ಹಾಗೆ ಮಾಡಿದ್ದೇ ಒಳ್ಳೆಯದಾಯಿತು ಎಂದು ನನಗೆ ಮುಂದೆ ತಿಳಿಯಿತು.

ಮುಂದಿನ ಕೆಲವೇ ಕ್ಷಣಗಳಲ್ಲಿ ಚರಪರ ಸದ್ದು ಕೇಳಿಸಿತು. ನನ್ನ ಮುಂದೆ ಏನೋ ಚಲಿಸುತ್ತಿದೆ ಎಂದು ನನಗೆ ಖಾತ್ರಿಯಾಯಿತು. ಚಿರತೆ ನನ್ನ ಕಡೆ ತೆವಳಿಕೊಂಡು ಬರುತ್ತಿರಬಹುದೇ ಎನ್ನುವ ಯೋಚನೆಯಿಂದ ಮತ್ತೆ ಭಯವಾಯಿತು. ಬರುತ್ತಿರುವ ಸದ್ದು ನಿಧಾನವಾಗಿ ಮತ್ತು ನಿರಂತರವಾಗಿದ್ದುದರಿಂದ ಇಲಿ ಅಥವಾ ಇನ್ಯಾವುದೇ ಕಾಡಿನ ಪ್ರಾಣಿಯದಾಗಿರಲು ಸಾಧ್ಯವೇ ಇರಲಿಲ್ಲ, ಹಾಗಾಗಿ ಚಿರತೆ ಅಥವಾ ಹಾವು ಚಲಿಸುತ್ತಿದೆ ಎನ್ನುವುದರಲ್ಲಿ ಅನುಮಾನವೇ ಇರಲಿಲ್ಲ, ನಾನು ಇಲ್ಲಿ ನನ್ನ ಮನಸ್ಥಿತಿಯ ಬಗೆಗೆ ಇಷ್ಟೆಲ್ಲಾ ದೀರ್ಘ ವಿವರಣೆ ನೀಡಿದ್ದರೂ ಈ ಎಲ್ಲಾ ಯೋಚನೆಗಳು ಕೆಲವೇ ಸೆಕೆಂಡುಗಳಲ್ಲಿ ಸುಳಿದು ಮಾಯವಾಗಿತ್ತು.

ಮುಂದಿನ ಕೆಲವು ಕ್ಷಣಗಳಲ್ಲಿ ಚಲನೆಯ ಸದ್ದು ನಿಂತು ಹಿಸ್ಸೆಂದು ಜೋರಾಗಿ ಉಸಿರೆಳೆಯುವ ಸದ್ದು ಕೇಳಿಸಿತು. ಚಿರತೆ ಇನ್ನೇನು ಗುಟುರು ಹಾಕುತ್ತಾ ಆಕ್ರಮಣಕ್ಕೆ ಸಿದ್ಧವಾಗಿದೆ ಎಂದು ನನ್ನ ಹಿಂದಿನ ಅನುಭವಗಳ ಆಧಾರದ ಮೇಲೆ ತಿಳಿದುಕೊಂಡೆ. ತಕ್ಷಣ ಬಂದೂಕನ್ನು ಹೆಗಲಿಗೇರಿಸಿ ಟಾರ್ಚ್‌ನ ಗುಂಡಿ ಒತ್ತಿದೆ. ಮುಂದಕ್ಕೆ ಹರಡಿದ ಬೆಳಕಿನಲ್ಲಿ ಎರಡು ದ್ವೇಷಪೂರಿತ ಕಣ್ಣುಗಳು ನನ್ನನ್ನು ದುರುಗುಟ್ಟಿ ನೋಡುತ್ತಿರುವುದು ಕಂಡಿತೇ ಹೊರತು ಯಾವುದೇ ಪ್ರಾಣಿ ಕಾಣಲೇ ಇಲ್ಲ, ಆಗ ನನಗೆ ನೆನಪಾಯಿತು, ನನ್ನೆದುರಿಗಿರುವುದು ಕಪ್ಪು ಚಿರತೆ ಎಂದು! ತನ್ನ ಶತ್ರುವಾದ ಮನುಷ್ಯನನ್ನು ಕಂಡಕೂಡಲೆ ಅದು ಆಕ್ರಮಣ ಮಾಡಲು ನಿರ್ಧರಿಸಿದಂತಿತ್ತು.

ನನಗೆ ಗುರಿಯಿಡಲು ಸಾಕಷ್ಟು ಸಮಯವಿತ್ತು, ಚಿರತೆಯ ಕಣ್ಣುಗಳ ಮಧ್ಯೆ ಗುರಿಯನ್ನು ಹಿಡಿದು ನಾನು ಗುಂಡು ಹಾರಿಸಿದೆ. ಚಿರತೆ ಕುಸಿದು ಬೀಳುವುದನ್ನು ಅಥವಾ ಸಾವಿನ ಅಂಚಿನಲ್ಲಿ ಹೊರಳಾಡುವುದನ್ನು ನಿರೀಕ್ಷಿಸಿದ್ದ ನನಗೆ ಅಚ್ಚರಿ ಕಾದಿತ್ತು, ಪದೇ ಪದೇ ಗುಟುರು ಹಾಕುತ್ತಾ ಅದು ನೆಗೆದು ದೂರ ಓಡಿತು. ನಾನು ಗುರಿ ತಪ್ಪಿದ್ದೇನೇ ಅಥವಾ ಚಿರತೆಗೆ ಕೇವಲ ಗಾಯವಾಗಿದೆಯೇ?

ನಾನು ಗುರಿ ತಪ್ಪಿರಲು ಸಾಧ್ಯವೇ ಇಲ್ಲ ಎಂದು ನನಗೆ ಖಾತ್ರಿಯಿತ್ತು, ಆದರೆ ವಾಸ್ತವದಲ್ಲಿ ಏನಾಗಿದೆ ಎನ್ನುವುದನ್ನು ಹಗಲಿನಲ್ಲಿ ಮಾತ್ರ ತಿಳಿಯಲು ಸಾಧ್ಯವಿತ್ತು, ಹಾಗಾಗಿ ನಾನು ಶಿವನಪಳ್ಳಿಗೆ ಹಿಂತಿರುಗಲು ನಿರ್ಧರಿಸಿದೆ. ಈಗ ಟಾರ್ಚ್‌ನ್ನು ಧೈರ್ಯವಾಗಿ ಉಪಯೋಗಿಸಲು ಸಾಧ್ಯವಿದ್ದರೂ ನಾನು ದಾರಿ ತಪ್ಪಿದೆ. ಮೋಡಕವಿದ ಆಕಾಶದಿಂದ ದಿಕ್ಕನ್ನು ಗುರುತಿಸುವುದು ಸಾಧ್ಯವಿರಲಿಲ್ಲ, ಏನೇನೋ ಲೆಕ್ಕಾಚಾರಗಳನ್ನು ಹಾಕಿ ರಾತ್ರಿ ಹನ್ನೊಂದೂವರೆಯ ಹೊತ್ತಿಗೆ ನಾನು ತಲುಪಿದ್ದು ಸಲೈವರಮ್‌ನ್ನು! ಅಲ್ಲಿಂದ ಶಿವನಪಳ್ಳಿಗೆ ನಡೆದು ರಂಗಸ್ವಾಮಿಗೆ ಎಲ್ಲಾ ವರದಿ ಒಪ್ಪಿಸಿದೆ.

ನಂತರ ಮಲಗುವುದಕ್ಕಾಗಿ ಹತ್ತಿರದ ಹುಲ್ಲಿನ ಗೊಣಬೆಯನ್ನು ಆರಿಸಿಕೊಂಡೆ. ಆಗಲೇ ಹಿಮದಿಂದ ಒದ್ದೆಯಾಗಿದ್ದ ಹುಲ್ಲನ್ನೇ ಮೈಮೇಲೆ ಎಳೆದುಕೊಂಡು ಛಳಿಯಿಂದ ರಕ್ಷಿಸಿಕೊಳ್ಳಲು ಯತ್ನಿಸಿದೆ. ಯಾವುದಾದರೂ ಪ್ರಾಣಿ ನಿಮ್ಮನ್ನು ಜೀವಂತವಾಗಿ ಅರ್ಧ ತಿಂದ ಅನುಭವವಾಗಬೇಕಾದರೆ ಇಂತಹ ಹುಲ್ಲಿನಲ್ಲಿ ನೀವು ಮಲಗಬೇಕು! ಇದರಲ್ಲಿ ಅಡಗಿರುವ ಗುಂಡುಸೂಜಿಯ ತಲೆಯಷ್ಟು ದೊಡ್ಡದಿರುವ ಹುಳುಗಳು ನಿಮ್ಮನ್ನು ಕಚ್ಚಿ ರಕ್ತವನ್ನು ಹೀರಿ ಉಬ್ಬಿಕೊಳ್ಳುತ್ತವೆ. ಅಷ್ಟೇ ಅಲ್ಲದೆ ಅದು ಕಚ್ಚಿದ ಜಾಗದಲ್ಲಿ ಆಗುವ ಸಣ್ಣ ಗಾಯ ನೀವು ತುರಿಸಿದಷ್ಟೂ ದೊಡ್ಡದಾಗುತ್ತಾ ಕೊನೆಗೆ ಗುಳ್ಳೆಯಂತಾಗಿ ನೀರು ತುಂಬಿಕೊಳ್ಳುತ್ತದೆ. ಸಾಕಷ್ಟು ಹುಳುಗಳು ಒಮ್ಮೆಲೇ ಕಚ್ಚಿದರೆ ಮರುದಿನ ಜ್ವರವೂ ಬರುತ್ತದೆ. ಇಂತಹ ಸ್ಥಳದಲ್ಲಿ ಮಲಗಿ ಇಡೀ ರಾತ್ರಿ ಮೈಯನ್ನು ಪರಚಿಕೊಳ್ಳುತ್ತಾ ನಿದ್ದೆಯಿಲ್ಲದೆ ಕಳೆದ ನಾನು ಬೆಳಗಾಗುವಷ್ಟರಲ್ಲಿ ಸುಸ್ತಾಗಿದ್ದೆ. ರಂಗಸ್ವಾಮಿ ತಂದುಕೊಟ್ಟ ಕೊಳಕು ಮಡಿಕೆಯಲ್ಲಿ ಚಹಾ ಕಾಯಿಸಿ, ಎರಡು ಮೊಟ್ಟೆಯನ್ನು ಬೇಯಿಸಿ ತಿನ್ನುವಷ್ಟರಲ್ಲಿ ನನ್ನ ಉತ್ಸಾಹ ಮರಳಿ ಬಂದಿತ್ತು, ಮತ್ತೆ ಕಪ್ಪು ಚಿರತೆಯನ್ನು ಹುಡುಕುವ ಯೋಚನೆ ಮಾಡತೊಡಗಿದೆ. ●

ಮೋದಿ ಆಡಳಿತದಲ್ಲಿ ಭಾರತಕ್ಕೆ ಕೆಡುಕಾಗಲಿದೆ

ಈಗ ನರೇಂದ್ರ ಮೋದಿಯ ಭಕ್ತರು ಆತನ ಗುಣಗಾನ ಪ್ರಾರಂಭಿಸಿದ್ದಾರೆ. ಹಲವು ಬರಹಗಾರರು ಮತ್ತು ಸಾಮಾಜಿಕ ವಿಜ್ಞಾನಿಗಳು ಮೋದಿಯನ್ನು ರಕ್ಷಿಸಲು ಟೊಂಕಕಟ್ಟಿ ನಿಂತಿದ್ದಾರೆ. ಅವರೆಲ್ಲ ಗುಜರಾತಿನ ಮುಸ್ಲಿಮರ ಸಾಮೂಹಿಕ ಕಗ್ಗೊಲೆಗೆ ಕಾರಣನಾದ ಮನುಷ್ಯನಲ್ಲಿ ಸದ್ಗುಣ ಮತ್ತು ಪ್ರತಿಭೆಯನ್ನು ಕಾಣುತ್ತಿದ್ದಾರಲ್ಲದೆ ಸಂತ ಕಬೀರ್‌ನಲ್ಲಿದ್ದ ಕಾವ್ಯ ಪ್ರತಿಭೆ ಆತನಲ್ಲೂ ಇದೆ ಎಂದೆಲ್ಲ ಬಣ್ಣಿಸುತ್ತಿದ್ದಾರೆ.

ಕೆಲವರು ಕಿಂಚಿತ್ತೂ ನಾಚಿಕೆ ಇಲ್ಲದೆ ವಿವಿಧ ಹುದ್ದೆಗಳಿಗೆ ಅರ್ಜಿಗಳನ್ನು ಗುಜರಾಯಿಸುತ್ತಿದ್ದಾರೆ. ತೀವ್ರ ಬಲಪಂಥೀಯ ವಿವೇಕಾನಂದ ಅಂತರರಾಷ್ಟ್ರೀಯ ಪ್ರತಿಷ್ಠಾನಕ್ಕೆ ಸೇರಿರುವ ಮಾಜಿ ರಾಜತಂತ್ರಜ್ಞರು ಮತ್ತು ಗುಪ್ತಚರ ಅಧಿಕಾರಿಗಳು ಇಂತಹ ಜನರ ಸಾಲಿನಲ್ಲಿದ್ದಾರಲ್ಲದೆ, ಅಮೆರಿಕದಲ್ಲಿ ನೆಲೆಸಿರುವ ನವಉದಾರವಾದಿ ಅರ್ಥಶಾಸ್ತ್ರಜ್ಞ ಅರವಿಂದ್ ಪನಗಾರಿಯಾ ಮತ್ತವರ ಗುರು ಜಗದೀಶ್ ಭಗವತಿ ತರಹದವರೂ ಇದ್ದಾರೆ.

ಪನಗಾರಿಯಾ ಅವರು ಮೋದಿ ಸರ್ಕಾರದಲ್ಲಿ ಮುಖ್ಯ ಆರ್ಥಿಕ ಸಲಹೆಗಾರ ಆಗಲು ಲಾಬಿ ನಡೆಸುತ್ತಿದ್ದಾರೆ. ಸಾಧಾರಣ ಅರ್ಥಶಾಸ್ತ್ರಜ್ಞನಾದ ಈತ ಇಲ್ಲಿಯ ತನಕ ಹೆಚ್ಚು ಸಾಧಿಸಿಲ್ಲ; ಮತ್ತು ಸಾಧಿಸಿದ್ದ ಅಲ್ಪಸ್ವಲ್ಪವೂ ಆತ ಇತ್ತೀಚೆಗೆ ನೀಡಿದ ಒಂದು 'ಸಿದ್ಧಾಂತ'ದಿಂದಾಗಿ ಕೊಚ್ಚಿಹೋಗಿದೆ. ಈ ಮನುಷ್ಯ ಇತ್ತೀಚೆಗೆ ಮಂಡಿಸಿದ 'ಸಿದ್ಧಾಂತ'ದ ಪ್ರಕಾರ ಭಾರತೀಯರು ತಳೀಯವಾಗಿ ಇತರೆ ಮಾನವರಿಗಿಂತ ವಿಭಿನ್ನವಾಗಿರುವುದರಿಂದ ಅವರು ಇತರರಿಗಿಂತ ಕುಳ್ಳರಂತೆ. ಆದ್ದರಿಂದ ಪೌಷ್ಟಿಕ ಆಹಾರ ಮತ್ತು ದೈಹಿಕ ಬೆಳವಣಿಗೆ ನಡುವಿನ ಸಂಬಂಧವನ್ನು ಅಳೆಯಲು ಅಂತಾರಾಷ್ಟ್ರೀಯವಾಗಿ ಬಳಸುವ ಮಾನದಂಡವನ್ನು ಇಲ್ಲಿ ಬಳಸುವುದು ಸರಿ ಅಲ್ಲವಂತೆ!

ಇತ್ತೀಚೆಗಿನ ವರ್ಷಗಳಲ್ಲಿ ಭಾರತದ ನವ ಉದಾರವಾದಿ ಆರ್ಥಿಕ ನೀತಿಯಿಂದಾಗಿ ದೇಶದಲ್ಲಿ ಅಭಿವೃದ್ಧಿ ಆಗಿದ್ದರೂ ನಮ್ಮ ಬಡಮಕ್ಕಳಿಗೆ ಆಫ್ರಿಕಾದ ಸಹಾರ ಮರುಭೂಮಿಯಲ್ಲಿ ಸಿಗುವಷ್ಟೂ ಪೌಷ್ಟಿಕ ಆಹಾರ ಸಿಗುತ್ತಿಲ್ಲ ಎಂಬ ಟೀಕೆಗಳು ಕೇಳಿಬರುತ್ತಿರುವಾಗ ಪನಗಾರಿಯ ಮಂಡಿಸುತ್ತಿರುವ 'ಸಿದ್ಧಾಂತ'ವಿದು. ಪನಗಾರಿಯಾನ ಇಂತಹ ಪೊಳ್ಳು ಸಿದ್ಧಾಂತವನ್ನು ಆಗಲೇ ಆರ್ಥಿಕ ತಜ್ಞರು ಮತ್ತು ಪೋಷಣ ಶಾಸ್ತ್ರಜ್ಞರು ಅಲ್ಲಗಳೆದಿದ್ದಾರೆ. ಬಡತನ ಮತ್ತು ಅಪೌಷ್ಟಿಕತೆಯ ನಿವಾರಣೆಗಿಂತ ಜಿಡಿಪಿ ಬೆಳವಣಿಗೆಯೇ ಮುಖ್ಯ ಎನ್ನುವ ಪನಗಾರಿಯಾ ತರಹದವರ ವಾದದ ಹಿಂದೆ ಅಂಕಿಅಂಶಗಳ ಮಾಟಮಂತ್ರ, ರಾಷ್ಟ್ರೀಯತೆಯ ತಪ್ಪು ಗ್ರಹಿಕೆ ಮತ್ತು ಆನುವಂಶಿಕ ವರ್ಣಭೇದದಂತಹ ಅಪಾಯಗಳು ಅಡಗಿವೆ.

ಅಪೌಷ್ಟಿಕತೆಯು ಭಾರತದ ಅರ್ಧದಷ್ಟು ಮಕ್ಕಳನ್ನು ವಿವಿಧ ಸೋಂಕುಗಳಿಗೆ ಮತ್ತು ಮರುಕಳಿಸುವ ರೋಗಗಳಿಗೆ ತುತ್ತು ಮಾಡುತ್ತದಲ್ಲದೆ ಅವರು ಸಾಮಾನ್ಯ ಮಕ್ಕಳಂತೆ ಬೆಳೆಯಲು ಮತ್ತು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗದಂತೆ ಮಾಡುತ್ತಿದೆ. ಇಂತಹ ಮಾನವ ಸಾಮರ್ಥ್ಯ ಪೋಲಾಗುತ್ತಿರುವುದರ ಬಗ್ಗೆ ನಾಚಿಕೆ ಪಟ್ಟು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುವ ಬದಲು ಇಂತಹ ಮಕ್ಕಳ ದುಃಸ್ಥಿತಿಯನ್ನು ಹೆಚ್ಚಿಸುವಂತಹ ಆರ್ಥಿಕ ನೀತಿಯನ್ನು ಮೋದಿ ಪಕ್ಷಪಾತಿಗಳು ಪ್ರಚಾರ ಮಾಡುತ್ತಿದ್ದಾರೆ.

ಮೋದಿಯ ಇತರೆ ವಕ್ತಾರರು 2002ರ ನರಮೇಧದಲ್ಲಿ ಆತನ ಪಾತ್ರವನ್ನು ಮರೆಮಾಚುತ್ತಿದ್ದಾರೆ. ಅದಕ್ಕೆ ಅವರು ಕೊಡುತ್ತಿರುವ ಸಬೂಬು ಎಸ್‌ಐಟಿ ನಡೆಸಿರುವ ಅಸಮರ್ಪಕ ತನಿಖೆ. ಈ ತನಿಖೆ ಅದೆಷ್ಟು ದೋಷಪೂರಿತವಾಗಿತ್ತು ಎಂಬುದನ್ನು ಪತ್ರಕರ್ತ ಮನೋಜ್ ಮಿಟ್ಟಾ ಅವರು ಇತ್ತೀಚೆಗೆ ಬಿಡುಗಡೆಯಾದ ತಮ್ಮ 'ದಿ ಫಿಕ್ಷನ್ ಆಫ್ ಫ್ಯಾಕ್ಟ್ ಫೈಂಡಿಂಗ್' ಪುಸ್ತಕದಲ್ಲಿ ತೆರೆದಿಟ್ಟಿದ್ದಾರೆ.

ಹಾಗೆಯೇ ಅಭಿವೃದ್ಧಿ ಕುರಿತಂತೆ ಮೋದಿಯ 'ಸಾಧನೆ'ಗಳನ್ನೂ ಅಟುಲ್ ಸೂದ್ ಅವರು 'ಪಾವರ್ಟಿ ಅಮಿಡ್‌ಸ್ಟ್ ಪ್ರಾಸ್ಪರಿಟಿ' ಲೇಖನದಲ್ಲಿ ಬೆತ್ತಲೆ ಮಾಡಿದ್ದಾರೆ. ಮೋದಿಯ ಗುಜರಾತಿನಲ್ಲಿ ವ್ಯಾಪಕವಾಗಿರುವ ಕ್ರೋನಿ ಕಪಿಟಲಿಸಮ್ ಬಗ್ಗೆಯೂ ಟ್ರೂಥ್ ಆಫ್ ಗುಜರಾತ್ ಡಾಟ್ ಕಾಮ್ ವಿಸ್ತೃತವಾಗಿ ದಾಖಲೆ ಸಮೇತ ವಿವರಿಸಿದೆ.

ಇಷ್ಟೆಲ್ಲ ಗೊತ್ತಿದ್ದರೂ ಮೋದಿಯ ಸಮರ್ಥಕರು ಮತ್ತಷ್ಟು ವಿಲಕ್ಷಣವಾದಗಳನ್ನು ಮಂಡಿಸುತ್ತಿದ್ದಾರೆ. ಕಾರ್ಪೊರೇಟ್ ಕಂಪನಿಯೊಂದರ ಮಾಜಿ ಸಿಇಒ ಆಗಿರುವ ಗುರುಚರಣ್ ದಾಸ್ ಎಂಬುವವರ ಪ್ರಕಾರ: "ಈಗ ಭಾರತದ ಮುಂದೆ ಎರಡು ಆಯ್ಕೆಗಳಿವೆ. ಒಂದು ಜಾತ್ಯತೀತವಾದ, ಮತ್ತೊಂದು ಜಿಡಿಪಿಯ ಬೆಳವಣಿಗೆ. ಜಿಡಿಪಿಯ ಬೆಳವಣಿಗೆಯಿಂದ ಮಾತ್ರ 'ಡಿಮಾಗ್ರಫಿಕ್ ಡಿವಿಡೆಂಡ್' ಸಾಧ್ಯವಾಗುತ್ತದೆ. ಇಂತಹ ಬೆಳವಣಿಗೆ ಮೋದಿಯಿಂದ ಮಾತ್ರ ಸಾಧ್ಯ." ಇವರ ವಾದದ ಅರ್ಥ ಭಾರತೀಯರು ಜಾತ್ಯತೀತತೆಯನ್ನು ತಿರಸ್ಕರಿಸುವ ಮೂಲಕ ನಮ್ಮ ಸಂವಿಧಾನವನ್ನೇ ಅಪವಿತ್ರಗೊಳಿಸಬೇಕು ಮತ್ತು ಹಿಂದೂಗಳಲ್ಲದ ಲಕ್ಷಾಂತರ ಜನರ ಬದುಕನ್ನೇ ಅತಂತ್ರಗೊಳಿಸಬೇಕು!

ಸ್ವಲ್ಪಮಟ್ಟಿಗೆ ಸುಶಿಕ್ಷಿತವಾಗಿ ವಾದಿಸುವವರ ಪ್ರಕಾರ ಮೋದಿ ಈಗ "ಮಧ್ಯಮಾರ್ಗಿ" ಆಗಿದ್ದಾರೆ. ಅದಕ್ಕೆ ಅವರು ಕೊಡುವ ಪುರಾವೆಗಳು ಹೀಗಿವೆ: "ಮೋದಿ ಅವರು ಈ ಚುನಾವಣೆಯಲ್ಲಿ ಧರ್ಮದ ಮೇಲೆ ಮತಗಳನ್ನು ಪಡೆಯುವುದಕ್ಕಿಂತ ಸೋಲುವುದೇ ಮೇಲು ಎಂದಿದ್ದರು. ಮಾತ್ರವಲ್ಲ ಬಿಜೆಪಿ ಈ ಬಾರಿ ಆರ್ಟಿಕಲ್ 370, ರಾಮ ಮಂದಿರ ಮತ್ತು ಏಕರೂಪ ಮಾದರಿ ಸಂಹಿತೆ ತರಹದ 'ತ್ರಿಶೂಲ' ವಿಷಯಗಳನ್ನು ದೂರ ಇಟ್ಟಿತ್ತು."


ಆದರೆ ವಾಸ್ತವವಾಗಿ ಮೋದಿಯ ಚುನಾವಣಾ ಪ್ರಚಾರವು ಸಂಪೂರ್ಣವಾಗಿ ಕೋಮುವಾದದಿಂದ ತುಂಬಿತ್ತು, ಭಾರತ ಇಲ್ಲಿಯತನಕ ಕಂಡಿರುವ



ಚುನಾವಣೆಗಳಲ್ಲಿ ಈ ಬಾರಿಯದ್ದು ಅತಿ ಒರಟು ಮತ್ತು ಹೊಲಸುತನದಿಂದ ಕೂಡಿತ್ತು, ಯಾಕೆಂದರೆ ಮೋದಿಯೇ ಸ್ವತಃ ಪ್ರಚಾರದ ಸಂದರ್ಭದಲ್ಲಿ ಬಾಂಗ್ಲಾದೇಶದಿಂದ ಬಂದಿರುವ (ಮುಸಲ್ಮಾನ) ವಲಸಿಗರನ್ನು ಮೇ 16ರ ನಂತರ ಒದ್ದೋಡಿಸುತ್ತೇನೆ, ದನದ ಮಾಂಸದ ರಫ್ತನ್ನು ತಡೆಗಟ್ಟುತ್ತೇನೆ ಎಂದನಲ್ಲದೆ ಆಜಂಗರ್ ಅನ್ನು "ಭಯೋತ್ಪಾದಕರ ಕಾರ್ಯಸ್ಥಾನ" ಎಂದು ವರ್ಣಿಸಿದ.

ಭಾರತವನ್ನು ಮುನ್ನಡೆಸಲು 'ದೇವರೇ' ತನ್ನನ್ನು ಆಯ್ಕೆ ಮಾಡಿದ್ದಾನೆಂದು ಮೋದಿ ಹೇಳಿದನಲ್ಲದೆ 'ಗಂಗಾಮಾತೆ' ತನ್ನನ್ನು ವಾರಾಣಸಿಗೆ ಕರೆತಂದು ಚುನಾವಣಾ ಕಣಕ್ಕಿಳಿಸಿದ್ದಾಳೆ ಎಂದ. ಇವೆರಡೂ ಪ್ರಭಾವಿ ಧಾರ್ಮಿಕ ನಂಬಿಕೆಗಳು. ಹೀಗೆ ಆತ ಹೇಳಿದ್ದು ಮೇ 5ರಂದು ಫೈಜಾಬಾದಿನ ರ್‍ಯಾಲಿಯಲ್ಲಿ ರಾಮ ಮತ್ತು ಮಂದಿರದ ಚಿತ್ರಗಳನ್ನು ಬಳಸಿಕೊಂಡಷ್ಟೇ ಕಾನೂನುಬಾಹಿರ ಕೃತ್ಯ.

ಮುಜಾಫರ್‌ನಗರ್ ಮತ್ತು ಶಾಮ್ಲಿಯಲ್ಲಿ ಕೋಮು ಗಲಭೆಗಳನ್ನೆಬ್ಬಿಸಿದವರಿಗೇ ಬಿಜೆಪಿ ಟಿಕೆಟ್ ಕೊಟ್ಟಿತ್ತು, ಆದರೆ ಇತರೆ ಪಕ್ಷಗಳೊಂದಿಗೆ ಮೈತ್ರಿ ಸಾಧಿಸಲು ಮಾತ್ರ ಮೇಲುನೋಟಕ್ಕೆ ಆರ್ಟಿಕಲ್ 370, ರಾಮಮಂದಿರ ಮತ್ತು ಏಕರೂಪ ಮಾದರಿ ಸಂಹಿತೆ ತರಹದ 'ತ್ರಿಶೂಲ' ವಿಷಯಗಳನ್ನು 1998ರಲ್ಲಿ ಮಾಡಿದಂತೆ ಪಕ್ಕಕ್ಕಿಟ್ಟಿತ್ತು. (ಈ ವಿಷಯಗಳಿಗೆ ಬಿಜೆಪಿ 2004



ಮತ್ತು 2009ರಲ್ಲಿ ಹಿಂದಿರುಗಿತ್ತು ಎಂಬುದನ್ನು ಮರೆಯದಿರೋಣ).

ಮೋದಿಯ ರಾಜಕೀಯ ತಂತ್ರವೂ ಮೇಲ್ಜಾತಿ ಒಲವನ್ನು ಹೊಂದಿತ್ತು. "ರಾಹುಲ್ ಗಾಂಧಿ ದಲಿತರ ಮನೆಗಳಿಗೆ ಹನಿಮೂನ್‌ಗೆ ಹೋಗುತ್ತಾರೆ" ಎಂದು ರಾಮದೇವ್ ಆರೋಪಿಸಿದ್ದು ಮತ್ತು ಬಿಹಾರದ ಹಿರಿಯ ಬಿಜೆಪಿ ನಾಯಕ ಸಿ.ಪಿ.ಠಾಕೂರ್ ಶೋಷಿತ ವರ್ಗಗಳಿಗೆ ಮೀಸಲಾತಿಯನ್ನು ನಿಲ್ಲಿಸಬೇಕು ಎಂದದ್ದು ಇದಕ್ಕೆ ಸಾಕ್ಷಿ. ಮೇಲ್ಜಾತಿಗಳಿಂದಲೇ ತನಗೆ ಹೆಚ್ಚು ಮತಗಳು ಬರುತ್ತವೆಂದು ಬಿಜೆಪಿಗೆ ಗೊತ್ತಿತ್ತು. ಇದೆಲ್ಲದರ ಅರ್ಥ ಮೋದಿ 'ಮಾಧ್ಯಮಾರ್ಗಿ' ಆಗಿದ್ದಾನೆ ಎಂದಲ್ಲ, ಬದಲಾಗಿ ನಿಷ್ಕಾರುಣವಾಗಿರುವ ಹಿಂದೂತ್ವವನ್ನು ಮೋದಿ ಅನುಸರಿಸುತ್ತಿದ್ದಾನೆ ಎಂದು.

ಮೋದಿಯ ಸಮರ್ಥಕರು ಇನ್ನೊಂದು ತರ್ಕವನ್ನು ಮಂಡಿಸುತ್ತಾರೆ. ಅದ ಹೀಗಿದೆ: "ಪ್ರಧಾನಮಂತ್ರಿಯಾಗಿ ಮೋದಿ ಭಾರತದ ಪ್ರಜಾತಾಂತ್ರಿಕ ಸಂಸ್ಥೆಗ ನಿರ್ಬಂಧಗಳ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ; ಈ ಸಂಸ್ಥೆಗಳು ಬಹ ಬಲವಾಗಿದ್ದು ಇವನ್ನು ಅಷ್ಟು ಸುಲಭವಾಗಿ ತಲೆಕೆಳಗು ಮಾಡಲಾಗುವುದಿಲ್ಲ. ಆದರೆ ಕಳೆದ 12 ವರ್ಷಗಳ ಕಾಲ ಮೋದಿ ಗುಜರಾತಿನಲ್ಲಿ ಪೊಲೀಸ್ ಆಡಳಿತ ಮತ್ತು ಕಾನೂನು ವ್ಯವಸ್ಥೆಗಳನ್ನೇ ಭ್ರಷ್ಟಗೊಳಿಸುವಲ್ಲಿ ಮತ್ತು ತಲೆಕೆಳಗ ಮಾಡುವಲ್ಲಿ ದಾಖಲೆಯನ್ನೇ ಸ್ಥಾಪಿಸಿದ್ದಾನೆ. ಹೀಗೆ ಮಾಡದಿದ್ದರೆ, ಆತ 2002 ಕೋಮುಗಲಭೆಯಲ್ಲಿ ಭಾಗಿ ಆಗುತ್ತಿರಲಿಲ್ಲ, ನಕಲಿ 'ಎನ್‌ಕೌಂಟರ್' ಹತ್ಯೆಗಳ ನಡೆಯುತ್ತಿರಲಿಲ್ಲ, ಗಲಭೆಯಲ್ಲಿ ನೊಂದವರಿಗೆ ಅನ್ಯಾಯವಾಗುತ್ತಿರಲಿಲ್ಲ.

ಇವತ್ತು ಭಾರತದ ಪ್ರಜಾತಾಂತ್ರಿಕ ಸಂಸ್ಥೆಗಳು ದುರ್ಬಲಗೊಂಡಿವೆ; ರಾಜಕೀಯ ಪಕ್ಷಗಳೂ ಸೇರಿದಂತೆ ಪೊಲೀಸ್, ಮಾಧ್ಯಮ ಮತ್ತು ನ್ಯಾಯಾಂಗ ವ್ಯವಸ್ಥೆಗಳ ಚಿಂದಿಪಿಂದಿ ಆಗಿವೆ. ಮಾಧ್ಯಮಗಳಲ್ಲಿ 'ಪೇಯ್ಡ್ ನ್ಯೂಸ್' ಹೆಚ್ಚಾಗಿದೆಯಲ್ಲ ಅವುಗಳ ಮೇಲಿನ ಹಿಡಿತ ಮತ್ತು ಮಾಲೀಕತ್ವ ಕಾರ್ಪೊರೇಟ್ ಕಂಪನಿಗಳ ಸೇರಿದೆ. ಇದೆಲ್ಲದರಿಂದಾಗಿ ಇವತ್ತು ಮಾಧ್ಯಮದ ಪ್ರಾಮಾಣಿಕತೆ ಮತ ವಿಶ್ವಾಸಾರ್ಹತೆಯೇ ಕುಗ್ಗಿದೆ. ಹಾಗೆಯೇ ಹೆಚ್ಚಿನ ರಾಜಕೀಯ ಪಕ್ಷಗಳು ವ ಕೇಂದ್ರಿತವಾಗಿರುವುದರಿಂದ ಅವುಗಳಲ್ಲಿ ಪ್ರಜಾಸತ್ತೆಯೇ ಇಲ್ಲದಂತಾಗಿದೆ.

ಇತ್ತೀಚೆಗಿನ ಹಲವಾರು ಹಗರಣಗಳು ಸಾಬೀತುಪಡಿಸಿರುವಂ ಕಾರ್ಯಾಂಗದಡಿ ಬರುವ ಪೊಲೀಸ್, ನಾಗರಿಕ ಸೇವೆ ಮತ್ತು ಗುಪ್ತಚ ವಿಭಾಗಗಳು ಮಾತ್ರ ತುಕ್ಕು ಹಿಡಿದಿಲ್ಲ; ಸಂಸತ್ತು ಮತ್ತು ನ್ಯಾಯಾಲಯಗ ಸೇರಿದಂತೆ ಚುನಾವಣಾ ಆಯೋಗಕ್ಕೂ ಇದೆಲ್ಲ ಸ್ವಲ್ಪಮಟ್ಟಿಗೆ ಹಬ್ಬಿದೆ. ಇಲ್ಲವೆಂದ ಚುನಾವಣೆಯಲ್ಲಿ ಮಾಡಿದ ಅಕ್ರಮ ವೆಚ್ಚವನ್ನು ಮತ್ತು ಕೋಮುವಾದಿ ಪ್ರಚಾರವ ಚುನಾವಣಾ ಆಯೋಗ ನಿಯಮಗಳ ಅನುಸಾರ ತಡೆಯಬಹುದಿತ್ತು.

ಭಾರತದ ನ್ಯಾಯ ವಿತರಣಾ ವ್ಯವಸ್ಥೆಯೂ ಹಲವಾರು ಬಾರಿ ಸೋತಿ 1984ರ ಸಿಖ್ಖರ ನರಮೇಧಕ್ಕೆ ಕಾರಣರಾದವರನ್ನು, 2000ರಲ್ಲಿ ಪಾರಿಬಲ್‌ನ ಅಮಾಯಕರನ್ನು ನಿರ್ದಯವಾಗಿ ಕೊಂದ ಸೈನಿಕರನ್ನು, ಛತ್ತೀಸಗಡದಲ್ಲಿ ಕೊಲೆಗಡ ಸಲ್ವಾ ಜುಡುಂ ಸ್ಥಾಪಿಸಿದವರನ್ನು, ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯ ವ್ಯಾಪಕವಾಗಿ ದುರ್ಬಳಕೆ ಮಾಡಿಕೊಂಡವರ ವಿರುದ್ಧ ಯಾವುದೇ ಕ್ರ ತೆಗೆದುಕೊಂಡಿಲ್ಲದಿರುವುದು ನ್ಯಾಯಾಂಗದ ವಿಫಲತೆಗೆ ಸಾಕ್ಷಿಗಳಾಗಿವೆ.

ಹೆಚ್ಚಿನ ಸಂಸ್ಥೆಗಳು ಇವತ್ತು ಸಂಸತ್ತಿಗೂ ಉತ್ತರವಾದಿಯಾಗಿಲ್ಲ, ಉದಾಹರಣ ಬಿಜೆಪಿ ಕಳೆದ ಐದು ವರ್ಷ ಸಂಸತ್ತು ಸರಿಯಾಗಿ ಕಾರ್ಯನಿರ್ವಹಿಸದ ನೋಡಿಕೊಂಡಿತಲ್ಲದೆ, ಅದನ್ನು ದಕ್ಕಿಸಿಕೊಂಡಿತು ಕೂಡ. ನಮ್ಮ ಪ್ರಜಾತಾಂ ಸಂಸ್ಥೆಗಳು ತುಕ್ಕುಹಿಡಿದಷ್ಟೂ ಬಿಜೆಪಿ ಲಾಭ ಮಾಡಿಕೊಳ್ಳುತ್ತಾ ಸಾಗಿದೆ.

ಬಿಜೆಪಿ ನೇತೃತ್ವದ ಸರ್ಕಾರದಡಿ ಶಿಕ್ಷಣ, ಸಂಸ್ಕೃತಿ, ಲಿಂಗ ಭೇದ, ಆಂತ ಮತ್ತು ಬಾಹ್ಯ ಭದ್ರತೆ, ಮೋವಾ ಚಳವಳಿ, ಮೀಸಲಾತಿ, ಅಂತರ್ ಸಮುದಾಯ ಸಂಬಂಧಗಳು - ಇವೆಲ್ಲವುಗಳಲ್ಲಿನ ಧ್ಯೇಯಗಳಲ್ಲಿ ಸಂಪೂರ್ಣ ಬದಲಾವಣೆಗಳ ನಾವು ನೋಡುತ್ತೇವೆ. ಇವೆಲ್ಲವೂ ಸಾರ್ವಜನಿಕ ವ್ಯಾಖ್ಯಾನ ಮತ್ತು ಅಭಿ ಸ್ವಾತಂತ್ರದ ಮೇಲೆ ಭೀಕರ ಪರಿಣಾಮವನ್ನು ಬೀರಲಿವೆ.

ಪಠ್ಯಪುಸ್ತಕಗಳ ಕೇಸರೀಕರಣ, ಸೃಜನಶೀಲ ಶೈಕ್ಷಣಿಕ ಸಂಶೋಧನೆ ನಿಗ್ರಹ, ತನ್ನ ಪಕ್ಷಪಾತಿ ಧೋರಣೆಗೆ ತಕ್ಕಂತೆ ಅಕಾಡೆಮಿಗಳ ಮತ್ತು ವಿ ಸಂಸ್ಥೆಗಳ ಮಲಿನಗೊಳಿಸುವಿಕೆ, ಪುಸ್ತಕ ಸಿನಿಮಾ ನಾಟಕ ಮತ್ತು ಕಲೆ ಮೇಲೆ ಸೆನ್ಸಾರ್ ಹೇರುವುದು, ಅದನ್ನು ಒಪ್ಪದವರ ಮೇಲೆ ಹಿಂದೂತ್ವವ ಅವಮಾನಿಸಲಾಗಿದೆ ಎಂದು ದಾಳಿ ಮಾಡುವುದು - ಇವೆಲ್ಲ ಬಿಜೆಪಿ ಸರ್ಕಾರ ನಡೆಯಲಿವೆ.

ಬಿಜೆಪಿ ನೇತೃತ್ವದ ಸರ್ಕಾರ ಬಡಜನರ ಪರವಾದ ಯೋಜನೆಗಳ ನಿಲ್ಲಿಸುತ್ತದೆ ಅಥವಾ ದುರ್ಬಲಗೊಳಿಸುತ್ತದೆ. ಯಾಕೆಂದರೆ ಸಾಮಾಜಿಕ, ಆರ್ಥಿ ಮತ್ತು ಪ್ರಾದೇಶಿಕ ಅಸಮಾನತೆಯನ್ನು ಹೆಚ್ಚಿಸುವ, ಬೊಕ್ಕಸವನ್ನು ಬರಿದಾಗಿಸ ಸಾರ್ವಜನಿಕ ಉದ್ಯಮಗಳ ಮತ್ತು ಸೇವೆಗಳ ಖಾಸಗೀಕರಣಗೊಳಿಸುವ ವ ಕಾರ್ಪೊರೇಟ್ ಕಂಪನಿಗಳನ್ನು ಬೆಂಬಲಿಸುವ ಆರ್ಥಿಕ ನೀತಿಯನ್ನು ಬಿ ಪಾಲಿಸುತ್ತದೆ.

ಭಾರತದ ಧಾರ್ಮಿಕ ಅಲ್ಪಸಂಖ್ಯಾತರು ಬಿಜೆಪಿಯ ಬಗ್ಗೆ ಆತಂಕ ಹೊಂದಿ ಕಾರಣಗಳಿವೆ. ಯಾಕೆಂದರೆ ಗುಜರಾತಿನಲ್ಲಿ ಆಗಿರುವಂತೆ ದೇಶದೆಲ್ಲೆಡೆ ಅವ ಬೆದರಿಕೆಯಲ್ಲಿಡಲಾಗುತ್ತದೆಯಲ್ಲದೆ, ಸಾಮಾಜಿಕವಾಗಿ ಮತ್ತು ರಾಜಕೀಯ ಅವರ ಹಕ್ಕುಗಳನ್ನು ಕಸಿದುಕೊಂಡು ಎರಡನೆ ದರ್ಜೆಯ ಪ್ರಜೆಗಳನ್ನಾಗಿಸು ಮಾನವ ಹಕ್ಕುಗಳ ಉಲ್ಲಂಘನೆ ಅತಿರೇಕಕ್ಕೇರುತ್ತದೆ ಮತ್ತು ಕಾನೂ ಉಲ್ಲಂಘಿಸಿದವರ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದೆ ಸುಮ್ಮನಿರು 'ಬಲವಾದ ಸರ್ಕಾರ' ಎಂಬ ಗೀಳು ನಮ್ಮ ಸಮಾಜವನ್ನೇ ಸೈನ್ಯೀಕರಣಗೊಳಿಸು

ವಾಜಪೇಯಿ ಕಾಲದಲ್ಲಿ ಇದ್ದದ್ದಕ್ಕಿಂತ ಕೆಟ್ಟದಾಗಿ ಭಾರತದ ಸವ ಕರುಣೆ ಇಲ್ಲದ, 'ಇಸ್ಲಾಮೋಫೋಬಿಯಾ' ತುಂಬಿರುವ ಸಮಾಜ ಪರಿವರ್ತನೆಗೊಳ್ಳಲಿದೆ.

ಈ ಎಲ್ಲ ಕಾರಣಕ್ಕೆ ಸ್ವಾತಂತ್ರವನ್ನು ಇಷ್ಟಪಡುವ, ಪ್ರಜಾತಾಂತ್ರಿಕ ಮೌಲ್ಯಗ ನಂಬಿರುವ ಭಾರತೀಯರು ಮೋದಿಯನ್ನು ವಿರೋಧಿಸಬೇಕಿದೆ.

● ಪ್ರಫುಲ್ ಬಿದ್ವಾ




ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಗೊಡ್ಡು ಪುರಾಣದ ವೈಜ್ಞಾನಿಕ ಅಸ್ತ್ರ

ಧಾರ್ಮಿಕ ಕ್ಷೇತ್ರದಲ್ಲಿ ವೈಜ್ಞಾನಿಕ ವಿಶ್ಲೇಷಣೆಯು ...ಮು ಹೊಸ ಸಂಚಲನೆಯನ್ನು ಉಂಟುಮಾಡಿದ್ದು ...ಶಾಸ್ತ್ರ ಮತ್ತು ಮನಶಾಸ್ತ್ರಗಳ ನೆರವು. ಈ ಎರಡೂ ...ಜ್ಞಾನದ ಕ್ಷೇತ್ರಗಳಲ್ಲಿ ಒಂದು ಜಗತ್ತಿನ ತರಂಗಗಳಿಗೆ ...ನ್ನೊಂದು ಅಂತರಂಗದ ತರಂಗಗಳಿಗೆ ಸಂಬಂಧಪಟ್ಟಂತಹ ...ಧ್ಯಯನ ಮತ್ತು ಪ್ರಯೋಗಗಳಿಗೆ ಆಸ್ಪದವಿರುವುದರಿಂದ ...ರ್ಮಿಕವಾಗಿರುವ ಶ್ರದ್ಧಾನಂಬಿಕೆಗಳೂ, ಕಾಗಕ್ಕ ಗುಬ್ಬಕ್ಕನ ...ಗಳಂತಹ ಪುರಾಣದ ಕಥೆಗಳೂ, ಅತ್ಯಂತ ...ಚಾರಿಕವಾಗಿರುವಂತಹ ನಿರೂಪಣೆಗಳೂ ಕೂಡ ಒಂದು ...ತಕ್ಕೆ ಅಧ್ಯಯನ ವಸ್ತುಗಳಾದವು. ಹಾಗಾಗಿಯೇ ...ಲೋಹಿತರಂತೆ ದಡ್ಡತನದ ಮಾತುಗಳನ್ನು, ಪೊಳ್ಳು ...ಸವನ್ನು ಪ್ರತಿಷ್ಠಾಪಿಸಲು ಹೋಗದ ಬುದ್ಧಿವಂತರಲ್ಲಿ ...ವರು ನಮ್ಮ ಧಾರ್ಮಿಕ ಆಚರಣೆಗಳು ವೈಜ್ಞಾನಿಕವಾಗಿ ...ಷ್ಟ ಸರಿ, ನಮ್ಮ ಪುರಾಣಗಳು ಮನಶಾಸ್ತ್ರೀಯವಾಗಿ ...ು ಹೇಳುತ್ತಿವೆ, ಪೂಜೆ, ಪುನಸ್ಕಾರ, ಯಜ್ಞ ...ಯಾಗಾದಿಗಳನ್ನು ಏಕೆ ಮಾಡಬೇಕು ಎಂದು ಈಗಿನ ...ಬುದ್ಧಿವಂತ ಪೀಳಿಗೆಗೆ ಒಪ್ಪಿಸಲು ತೊಡಗಿದರು. ಅದೊಂದು ...ಯಲ್ಲಿ ಯಶಸ್ವಿಯೂ ಆಯಿತು. ವಿದ್ಯಾವಂತರು, ...ಬುದ್ಧಿವಂತರು, ವಿಜ್ಞಾನಿಗಳೂ ಕೂಡ ರುದ್ರಾಕ್ಷಿ ಮಾಲೆಗಳನ್ನು, ...ಕದ ಸರಗಳನ್ನು, ಇನ್ನಾವುದೊ ರತ್ನ ಅಥವಾ ...ಲೋಹಗಳನ್ನು, ಮ್ಯಾಗ್ನೆಟ್ಟುಗಳನ್ನು ಮೈಮೇಲೆ ಉಂಗುರ ...ವಾ ಸರಗಳ ಮೂಲಕ ಧರಿಸಿಕೊಂಡು. ಲಿಂಗದ ...ಜೆ, ಸಾಲಿಗ್ರಾಮದ ಮೇಲೆ ಅಥವಾ ಲೋಹದ ...ಮೂರ್ತಿಗಳ ಮೇಲೆ ಸುರಿದ ನೀರು ದೇಹಕ್ಕೆ ಅವಶ್ಯವಿರುವ ...ಪೋಷಕಾಂಶಗಳನ್ನು ಅಥವಾ ಮತ್ತೊಂದೇನನ್ನೋ ನೀಡುತ್ತದೆ



...ಮ ಶ್ರದ್ಧೆಯಿಂದ ಸೇವಿಸುತ್ತಾ ವೈಜ್ಞಾನಿಕವಾಗಿ ನಾವಿದನ್ನು ...ಮಾಡುತ್ತೇವೆಯೇ ಹೊರತು ಮೌಢ್ಯವೋ ಅಥವಾ ...ಅನಾಚಾರವೋ ಅಲ್ಲ ಅಂತ ನಿರೂಪಿಸಲು ಯತ್ನಿಸುತ್ತಾರೆ. ...ಮಂತ್ರಗಳೂ ಕೂಡ ಶಬ್ದವಿಜ್ಞಾನದ ಸಾಲಿಗೇ ಸೇರಿವೆ. ...ಗಳ ಉಚ್ಚಾರಣೆ, ಆ ಉಚ್ಚಾರಣೆಯಿಂದ ನಮ್ಮ ...ದೇಹದಲ್ಲಿ ಉಂಟಾಗುವ ತರಂಗಗಳು, ಆ ತರಂಗಗಳಿಂದ ...ಉಂಟಾಗುವ ಸಂಚಲನಗಳು- ಹೀಗೆ ಹತ್ತು ಹಲವು ...ಯುಗಳು ಮಂತ್ರಗಳನ್ನು, ಶ್ಲೋಕಗಳನ್ನು, ಬೀಜಮಂತ್ರ ...ನ್ನು, ಓಂಕಾರಾದಿ ಹಲವು ಅಕ್ಷರ ಸಂಕೀರ್ಣಗಳನ್ನು ...ಭಾವದಿಂದಲೂ, ಶ್ರದ್ಧೆಯಿಂದಲೂ ಸ್ವೀಕರಿಸುವಂತಾಗಿದೆ. ...ಇದರಲ್ಲಿ ಕೆಲವಾರು ವಿಷಯಗಳು ಹೌದೆನ್ನಬಹು ...ದರೂ, ಬಹುಪಾಲು ವೈಜ್ಞಾನಿಕ ಮೂಢನಂಬಿಕೆಗಳೇ. ...ವುದೇ ಗೊಡ್ಡು ಶಾಸ್ತ್ರವನ್ನೂ ವೈಜ್ಞಾನಿಕ ಪದಗಳಿಂದ ...ವಿಸಿದರೆ, ವೈಚಾರಿಕವಾಗಿ ವಿಶ್ಲೇಷಿಸತೊಡಗಿದರೆ ಅಲ್ಲಿ ...ನೆನ್ನಲು ಪ್ರೇರಣೆ ಉಂಟಾಗುತ್ತದೆ. ಆಕ್ಯುಪಂಕ್ಚರ್, ...ಪ್ರೆಶರ್, ರೇಕಿ ಇತ್ಯಾದಿ ಪರ್ಯಾಯ ಚಿಕಿತ್ಸೆಗಳು ಕೂಡ, ...) ಧಾರ್ಮಿಕವಾಗಿರ ದಿದ್ದರೂ, ಧಾರ್ಮಿಕ ...ವಿಧಾನಗಳಿಗೆ ಪೂರಕವಾಗಿ ತಳುಕುಹಾಕಿಕೊಂಡಿವೆ. ...ಹಾಗಿಯೇ ಮೂಢನಂಬಿಕೆಯ ತೆಕ್ಕೆಯಲ್ಲಿ ಹಲವಾರು ...ಗುರುಗಳೂ, ವಿಚಾರವಾದಿಗಳೂ ಸೇರಿಹೋಗಿರುವುದು. ...ಏ ಯಾವುದೋ ಆಚಾರವನ್ನು ಮೌಢ್ಯ ಎಂದು ...ಇದೇ ವಿಜ್ಞಾನ ಎಂದು ಆಚರಿಸುತ್ತಾರೆ.

...ಹಾಗಾಗಿಯೇ ಬೊಟ್ಟನ್ನು ಇಟ್ಟುಕೊಳ್ಳುವುದಕ್ಕೂ, ...ಹಾರವನ್ನು ಧರಿಸುವುದಕ್ಕೂ, ಕೈಗೆ ಬಳೆಗಳನ್ನು ...ತೊಟ್ಟುಕೊಳ್ಳುವುದಕ್ಕೂ, ಕಾಲುಂಗುರ ಧರಿಸುವುದಕ್ಕೂ ಚಿಕಿತ್ಸಕ ...ಗುಣಗಳು ದೊರಕುತ್ತಾ ಆ ಆಚರಣೆಗಳನ್ನು ...ಸಮರ್ಥವಾಗಿರಿಸುವ ಪ್ರಯತ್ನಗಳು ನಡೆಯುತ್ತಿವೆ. ಧ್ಯಾನ ...ಪ್ರಾರ್ಥನೆಗಳೂ ಕೂಡ ಇದೇ ಬಗೆಯ ವೈಜ್ಞಾನಿಕ ...ಕರಣೆಗೆ ಒಳಗಾಗುತ್ತಾ ಹೆಚ್ಚುಹೆಚ್ಚು ಜನಪ್ರಿಯವಾಗುತ್ತಿವೆ. ...ಬಿಡದಿಯ ನಿತ್ಯಾನಂದರ ಆಶ್ರಮದಲ್ಲಿ ಕುಂಡಲಿನೀ ...ಯೋಗವಾಗಲಿ, ಆರ್ಟ್ ಆಫ್ ಲಿವಿಂಗ್‌ನ ರವಿಶಂಕರರ ...ಸುಂದರ್ಶನ ಕ್ರಿಯಾ ಯೋಗದ ...ಶಿಬಿರವಾಗಲಿ ವಿದ್ಯಾವಂತರನ್ನೂ, ವಿಚಾರಪರರನ್ನೂ, ...ನಿಕ ಮನೋಭಾವ ಇರುವಂತಹವರನ್ನೂ ಹೆಚ್ಚುಹೆಚ್ಚು ...ಸುತ್ತಿವೆ.

ವೇದವಿಜ್ಞಾನ

ವೇದಗಳೇ ಉತ್ಕೃಷ್ಟ, ಅವೇ ಜ್ಞಾನಕ್ಕೆ ಮೂಲ, ಅವುಗಳಿಂದಲೇ ಇಡೀ ಲೋಕವು ಜ್ಞಾನವನ್ನು ಪಡೆದಿರುವುದು ಎಂದು ನಂಬಿರುವ ಉನ್ಮತ್ತರು ಜಗತ್ತಿನಲ್ಲಿ ನಡೆದಿರುವ ಯಾವುದೇ ಆವಿಷ್ಕಾರವಾಗಲಿ, ಸಂಶೋಧನೆಯಾಗಲಿ, ಪ್ರಯೋಗಗಳಾಗಲಿ ನಮ್ಮಲ್ಲಿ ಮೊದಲೇ ನಡೆದಿತ್ತು ಎನ್ನುವುದು ಒಂದಾದರೆ, ಕೆಲವರು ಇನ್ನೂ ಮುಂದುವರೆದು, ನಮ್ಮಿಂದಲೇ ಅವುಗಳನ್ನು ಪಡೆದು, ತಮ್ಮದಾಗಿಸಿಕೊಂಡು ಅದನ್ನು ಜಗತ್ತಿಗೆ ನೀಡಿ, ವೇದ ವಿಜ್ಞಾನವನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದ್ದಾರೆ ಎಂದೂ ವಾದಿಸುವವರುಂಟು. ಎಲ್ಲವೂ ನಮ್ಮದೇ, ಎಲ್ಲವೂ ನಮ್ಮಲ್ಲೇ ಮೊದಲೇ ಇತ್ತು ಎಂದು ಶ್ರೇಷ್ಠತೆಯ ಗೀಳು ಹತ್ತಿಸಿಕೊಂಡಿರುವ ಯಾರಿಗಾದರೂ ಪರರ ಸಾಧನೆಗಳನ್ನು ಒಪ್ಪುವುದಾಗಲಿ, ಪ್ರಶಂಸಿಸುವುದಾಗಲಿ ಕಷ್ಟ. ಹಾಗಾಗಿಯೇ ಪರರ ಸಾಧನೆಗಳನ್ನು ನಮ್ಮ ಅಗತ್ಯಕ್ಕೆ ಉಪಯೋಗಿಸಿಕೊಳ್ಳುವ ಅನಿವಾರ್ಯತೆ ಇದ್ದು ಪರರ ಖಂಡನೆ, ಸ್ವಂತಿಕೆಯ ಮಂಡನೆ ಮಾಡಲು ನಮ್ಮದೇ ಎಲ್ಲದಕ್ಕೂ ಮೂಲ ಎನ್ನುವುದು ಒಂದು ಗೀಳಲ್ಲದೇ ಇಂತಹ ಮಾತುಗಳಿಗೆ ಯಾವುದೇ ಗಂಭೀರವಾದಂತಹ ಗಮನವನ್ನು ಕೊಡಲಾಗುವುದಿಲ್ಲ.

ಪರಿಕಲ್ಪನೆಗಳು, ಆಲೋಚನೆಗಳು, ಚಿಂತನೆಗಳು ಜಗತ್ತಿನಲ್ಲಿ ವ್ಯಾಪಕವಾಗಿದ್ದು, ಅದು ಯಾರೊಬ್ಬರ ಸೊತ್ತೂ ಅಲ್ಲ. ಚಿಂತನೆಗಳಾಗಲಿ, ಪರಿಕಲ್ಪನೆ ಅಥವಾ ಪ್ರಯೋಗಶೀಲತೆಗಳು ಪ್ರಕೃತಿಯ ಆಧಾರವಾಗಿರುವುದರಿಂದ ಸಮಾನವಾದ ಚಿಂತನೆಗಳು ಜಗತ್ತಿನ ವಿವಿಧ ಭಾಗಗಳಲ್ಲಿ ಸಹಜವಾಗಿ ಕಂಡುಬರುತ್ತವೆ. ಅವರವರ ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆಯಿಂದ ಅವರು ಅವುಗಳನ್ನು ತಮ್ಮ ಪರಿಭಾಷೆಗಳಲ್ಲಿ ಇತರರೊಡನೆ ಹಂಚಿಕೊಳ್ಳುತ್ತಾರೆ. ಹಾಗಾಗಿ,



ಅದ್ಯಾವುದೋ ಸಂಸ್ಕೃತಿ ಅಥವಾ ದೇಶದವರು ನಮ್ಮದ್ದನ್ನು ಕದ್ದುಬಿಟ್ಟರು ಅಥವಾ ನಮ್ಮದ್ದನ್ನೇ ಅನುಕರಿಸಿ ತಮ್ಮ ಲೇಬಲ್ಲನ್ನು ಹಚ್ಚಿಕೊಂಡರು ಎಂದು ಭಾವಿಸುವುದು ಶ್ರೇಷ್ಠತೆಯ ಗೀಳನ್ನು ಹಚ್ಚಿಕೊಂಡಿರುವವರ ಮನಸ್ಥಿತಿಯಲ್ಲದೇ ಬೇರಿನ್ನೇನೂ ಅಲ್ಲ.

ಭಾರತೀಯ ಪುರಾಣಗಳಲ್ಲಿ ಆಗಾಗ್ಗೆ ಅಲ್ಲಿಂದಿಲ್ಲಿಗೆ ಹಾರುವ ಪುಷ್ಪಕ ವಿಮಾನವೂ ಕೂಡ ಅಸ್ತಿತ್ವದಲ್ಲಿದ್ದು, ನಮ್ಮ ಪೂರ್ವಿಕರು ರೈಟ್ ಸೋದರರು ವಿಮಾನವನ್ನು ಜಗತ್ತಿಗೆ ಕೊಡುವ ಮುನ್ನವೇ ನಾವು ವಿಮಾನದಲ್ಲಿ ಹಾರಾಡುತ್ತಿದ್ದೆವು ಎಂದು ಸಾಧಿಸಲು ಹೋಗುವುದು ಮೂರ್ಖತನವೇ ಸರಿ. ರೈಟ್ ಸೋದರರ ಮುನ್ನವೇ ವಿಮಾನದ ಪ್ರಯೋಗವನ್ನು ಯಶಸ್ವಿಯಾಗಿಯೇ ಮಾಡಿರುವವರು ಇದ್ದಾರೆ, ಜೊತೆಗೆ ಹಾರುವ ಪ್ರಯತ್ನಗಳು ಹೊಸತೇನೂ ಅಲ್ಲ. ವಿಷಯಾಂತರವಾಗುವ ಕಾರಣದಿಂದ ಅದರ ಬಗ್ಗೆ ಈಗ ಚರ್ಚೆ ಬೇಡ.

ವಿಜ್ಞಾನದ ಹೆಸರು ಬಂದಕೂಡಲೇ ಅದನ್ನು ಕುರುಡಾಗಿ ಅನುಸರಿಸುವುದು ಶುದ್ಧ ಅವೈಜ್ಞಾನಿಕ ಮನೋಭಾವ. ಸಹಜ ವಿವೇಚನೆಯಿಂದ, ಗಮನಪೂರ್ವಕವಾಗಿ ವಸ್ತು ವಿಶ್ಲೇಷಣೆಗಳನ್ನು ಮಾಡುವುದರಿಂದ ನೋಡುಗರಿಗೆ ಒಂದು ಸ್ಪಷ್ಟತೆ ಸಿಗುತ್ತದೆ. ಈ ಬಗೆಯ ವಿಷಯಗಳನ್ನು ಗಮನಿಸುವಾಗ ನಾವು ಬಹು ಎಚ್ಚರದಲ್ಲಿರಬೇಕಾದ ಒಂದು ಅಂಶವೆಂದರೆ, ವಿಷಯವನ್ನು ಗಮನಿಸುವ ಮೊದಲೇ ವಿಷಯದ ಪರವಾಗಿಯಾಗಲಿ ಅಥವಾ ವಿರೋಧವಾಗಿಯಾಗಲಿ ಪೂರ್ವನಿರ್ಧಾರಗಳನ್ನು ತೆಗೆದುಕೊಳ್ಳಬಾರದು. ವಿಷಯ ಗ್ರಹಣದ ಮೊದಲೇ ಸಮ್ಮತಿ ಅಥವಾ ನಿರಾಕರಣೆಯಾಗಿ ಬಿಟ್ಟಲ್ಲಿ ಯಥಾರ್ಥವಾಗಿ ವಿವೇಚಿಸಲು ಸಾಧ್ಯವಾಗದೇ, ಮೊದಲೇ ಮೂಡಿರುವ ನಮ್ಮ ಅಭಿಪ್ರಾಯಗಳನ್ನು ಸಮರ್ಥಿಸುವಂತಹ ಅಂಶಗಳನ್ನೇ ನೋಡಲು ಪ್ರಾರಂಭಿಸುತ್ತೇವೆ.

ಕುಂಡಲಿನಿ ಯೋಗ

ಇತ್ತೀಚಿನ ದಿನಗಳಲ್ಲಿ ಕುಂಡಲಿನಿ ಶಕ್ತಿ ಬಗ್ಗೆ ಮಾತಾಡುವುದು, ಅದರ ಸಂಬಂಧಿತ ವಿಚಾರಗಳನ್ನು ಚರ್ಚಿಸುವುದು, ಅದರ ಧ್ಯಾನ ಶಿಬಿರಗಳಿಗೆ ದಾಖಲಾಗುವುದು; ಇತ್ಯಾದಿ ಹೈಪ್ರೊಫೈಲ್‌ಗೆ ಪೂರಕವಾಗಿರುವವು ಎಂಬ ಭ್ರಮೆ ಹುಟ್ಟಿರುವುದರಿಂದ ಹೈಫೈ ಸೊಸೈಟಿಗಳಿಂದ ಹಿಡಿದು,



ವಿಚಾರವಂತ ಮಧ್ಯಮವರ್ಗದವರೆಗೂ ನುಸುಳಾಡುತ್ತಿರುತ್ತದೆ.

ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು, ವೈದ್ಯರು, ರಾಜಕಾರಣಿಗಳು, ಬರಹಗಾರರು, ಕಲಾವಿದರು, ಶಿಕ್ಷಣತಜ್ಞರು, ವಿಜ್ಞಾನಿಗಳೂ ಕೂಡ ಇಂತಹ ಶಿಬಿರಗಳಲ್ಲಿ ಕಾಣಬರುವುದರಿಂದ ಮಧ್ಯಮವರ್ಗದ ಹಲವರಿಗೆ ವಿಶೇಷ ಆಕರ್ಷಣೆ. ಅಂತಹ ಶಿಬಿರಗಳಲ್ಲಿ ತಾವೂ ಭಾಗವಹಿಸಿ ತಾವು ಆಶಿಸುವಂತಹ ಸ್ಥಾನಮಾನದವರ ಜೊತೆ ಸಮಾನವಾಗಿ ಇರುವಂತಹ ತೃಪ್ತಿ ಮತ್ತು ಸಾರ್ಥಕತೆ.

ಹೀಗೆ, ಹಿರಿಯ ಲೆಕ್ಕಾಧಿಕಾರಿಗಳೊಬ್ಬರು ನಿತ್ಯಾನಂದರ ಬಿಡದಿಯ ಆಶ್ರಮಕ್ಕೆ ನನ್ನನ್ನು ಒಯ್ದರು. ಅವರು ದೇವಿಯ ಆರಾಧಕರು. ಅಕಲ್ಟ್‌ಸೈನ್ಸ್ ಬಗ್ಗೆ, ಮನೋವಿಜ್ಞಾನದ ಸೂಕ್ಷ್ಮತೆಗಳ ಬಗ್ಗೆ ಮಾತಾಡುವ ನಾನು ದೇವಿಯ ಬಗ್ಗೆ ಬರೆಯುತ್ತಿದ್ದುದರಿಂದ ಹಾಗೂ ದೇವಿಯ ಕುರಿತಾದ ಸಕಾರಾತ್ಮಕವಾದ ವಿವರಣೆಗಳನ್ನು ಕೊಡುತ್ತಿದ್ದುದರಿಂದ ನನ್ನ ಬಗ್ಗೆ ಗೌರವವೂ ಮತ್ತು ಅಭಿಮಾನವೂ ಇದ್ದು ನಿತ್ಯಾನಂದರ ವಿಶೇಷ ಶಕ್ತಿಗಳನ್ನು ನನಗೆ ಪರಿಚಯ ಮಾಡಿಕೊಡುವ ಸಲುವಾಗಿ ಕರೆದೊಯ್ದರು. ಅಂದೋ ನಿತ್ಯಾನಂದರ ಹುಟ್ಟಿದ



ಹಬ್ಬ. ನಿತ್ಯಾನಂದ ಮಹಾಸ್ವಾಮಿಗಳು ಜೀಪಿನ ಮೇಲೆ ಪ್ರತಿಷ್ಠಾಪಿತವಾಗಿದ್ದ ತಮ್ಮ ಅಮೋಘವಾದ ರಥದಲ್ಲಿ ಕುಳಿತುಕೊಂಡು, ಥಳಥಳಿಸುವ ಕಿರೀಟವನ್ನು ಧರಿಸಿ, ನೆರಿಗೆಗಳನ್ನು ಇಟ್ಟು ನೀಟಾಗಿ ಹೊಲಿದಂತಹ ಕಾಸ್ಟ್ಯೂಮನ್ನು ತೊಟ್ಟು, ನಿತ್ಯಾನಂದದ ನಗೆ ಬೀರುತ್ತಾ, ಅಭಯ ಹಸ್ತವನ್ನು ತೋರುತ್ತಾ ಆಸೀನರಾಗಿದ್ದರು. ಅವರ ಮುಂದೆ ಅವರ ಭಕ್ತಸ್ತೋಮವು ತಮಿಳು ಜಾನಪದ ಶೈಲಿಯೊಂದಿಗೆ ಮಾಡರ್ನ್ ಡ್ರಂ ಸೌಂಡುಗಳು ಬೆರೆತ ಲಯಕ್ಕೆ ಟಪ್ಪಾಂಗೋಚಿ ಸ್ಟೆಪ್ಸ್ ಹಾಕುತ್ತಾ ನಡೆಯುತ್ತಿತ್ತು.

ಇದಕ್ಕೆ ಯಾವ ಆಕ್ಷೇಪಣೆ? ಅವರ ಅನುಯಾಯಿಗಳು, ಅವರ ಹುಟ್ಟಿದ ಹಬ್ಬವನ್ನು ಅವರಿಷ್ಟ ಬಂದಂತೆ, ಅವರದೇ ಆದ ಕೋಟೆಯೊಳಗೆ ಆಚರಿಸಿಕೊಂಡು ಹೋಗುತ್ತಿದ್ದಾರೆ. ನಗೆಯುಕ್ಕಿಸುತ್ತಿದ್ದ ಆ ದೃಶ್ಯ ವೈಭವವನ್ನು ಸವಿದೆ. ನಂತರ ಅವರ ಮಂದಿರದೊಳಗೆ ಕಂಡದ್ದು ಮಾತ್ರ ಕೊಂಚ ಕಸಿವಿಸಿಯುಂಟುಮಾಡಿತು. ಗರ್ಭಗುಡಿಯಂತಹ ಒಳಭಾಗದಲ್ಲಿ ಸಾಕ್ಷಾತ್ ಸುಬ್ರಹ್ಮಣ್ಯ ಸ್ವಾಮಿಯಂತೆ ತಿರುವೇಲ್ ಕೂಡ ಹಿಡಿದು ಪೀಠದಲ್ಲಿ ಒಂದು ಕಾಲನ್ನು ಮಡಿಸಿಕೊಂಡು ಕುಳಿತಿದ್ದ ನಿತ್ಯಾನಂದನ ಪದತಲದಲ್ಲಿ ಅನೇಕಾನೇಕ ಭಕ್ತರು. ಅದರಲ್ಲೂ ಬಹುಪಾಲು ಭಾರತೀಯ ಮೂಲದ ವಿದೇಶಿವಾಸಿಗಳು. ಅವರೋ ಆತನ ಪಾದಗಳನ್ನು ತೊಳೆದು ಧನ್ಯತಾಭಾವವನ್ನು ಅನುಭವಿಸುತ್ತಿದ್ದರು. ಅಲ್ಲಾದ ಕಸಿವಿಸಿಯ ಕಾರಣವೆಂದರೆ, ತನ್ನಂತೇ ಇರುವ ಫೆಲೋಬೀಯಿಂಗ್‌ಗಳನ್ನು ತನಗಿಂತ ಕೆಳಗೆ ಕುಳ್ಳರಿಸಿ, ತಾನು ಧಾರ್ಮಿಕವೋ, ಆಧ್ಯಾತ್ಮವೋ; ಎಂತದ್ದೋ ಅಧಿಕಾರದಿಂದ ತನ್ನ ಕಾಲುಗಳನ್ನು ತೊಳೆಸಿಕೊಳ್ಳುತ್ತಾ ತನ್ನ ಅಧೀನದಲ್ಲಿಟ್ಟು ಕೊಂಡಿರುವುದು ನನಗೆ ಶೋಷಣೆಯಾಗಿ ಕಂಡಿತು.

ಆ ಸಮೂಹದಲ್ಲಿದ್ದವರೆಲ್ಲರೂ ಭ್ರಾಮಕರಾಗಿರುವಂತೆ ಅಥವಾ ಉನ್ಮತ್ತರಾಗಿರುವಂತೆ ಕಂಡರೇ ಹೊರತು ಒಬ್ಬರೂ ಸಹಜವಾಗಿರುವಂತೆ ಕಾಣಲೇ ಇಲ್ಲ. ಹಾಗೆಯೇ ಇದ್ದಕ್ಕಿದ್ದಂತೆ ಪಕ್ಕದಲ್ಲಿರುವವರಿಗೆ ಗಾಬರಿ ಹುಟ್ಟಿಸುವಂತೆ ಕುಂಡೆಯನ್ನು ಟಪಟಪನೆ ಎತ್ತೆತ್ತಿ ಹೊಡೆಯುತ್ತಾ ಎಗರೆಗರಿ ಬೀಳುತ್ತಿದ್ದ ಮಂದಿಯನ್ನು ಕಂಡೆ. ನನ್ನ ಜೊತೆಗಿದ್ದ ಲೆಕ್ಕಾಧಿಕಾರಿ ಮಿತ್ರ ಹೇಳಿದರು, "ಅವರು ಕುಂಡಲಿನಿ ಶಕ್ತಿಯ ಪ್ರಭಾವಕ್ಕೆ ಒಳಗಾಗಿದ್ದಾರೆ. ಆ ಶಕ್ತಿಯ ಪ್ರಭಾವವನ್ನು ತಡೆದುಕೊಳ್ಳಲಾರದೇ ಹಾಗೆ ವರ್ತಿಸುತ್ತಿದ್ದಾರೆ. ಈಗ ಭಸ್ಮವನ್ನು ಸೇವಿಸಿದರೆ ಅವರು ತಹಬಂದಿಗೆ ಬರುತ್ತಾರೆ."

ಅಂತೆಯೇ ಒಬ್ಬ ಶ್ವೇತವಸ್ತ್ರಧಾರಿ ಸ್ವಯಂಸೇವಕ ಕಿಟಕಿಯ ಸರಳುಗಳನ್ನು ಹಿಡಿದುಕೊಂಡು ಹೇಗೇಗೋ ತೂರಾಡುತ್ತಾ ವಿಚಿತ್ರವಾಗಿ ವರ್ತಿಸತೊಡಗಿದ. ಅವನ ಕಣ್ಣುಗಳು ತನ್ನ ಗಮನಿಸುವವರಾರಾದರೂ ಇದ್ದಾರೆಯೇ, ತನ್ನ ಬಳಿ ಬರುತ್ತಾರೆಯೇ ಎಂದು ಆದಷ್ಟು ಬೇರೆಯವರ ಗಮನಕ್ಕೆ ಬರದಂತೆ ನೋಡುತ್ತಿದ್ದವು. ಆತನ ನಿರೀಕ್ಷೆಯಂತೆ ಇನ್ನೊಬ್ಬ ಶ್ವೇತವಸ್ತ್ರಧಾರಿಯೇ ಮುನ್ನುಗ್ಗಿ ಆತನನ್ನು ಘಾಸಿ ಮಾಡಿಕೊಳ್ಳದಂತೆ ತಡೆಯುತ್ತಾ ಆತನಿಗೆ ವಿಭೂತಿಯನ್ನು ತಿನ್ನಿಸಿದ. ಕುಂಡಲಿನಿ ಶಕ್ತಿ ತಹಬಂದಿಗೆ ಬಂದಿತು.

"ಕುಂಡಲಿನಿ ಶಕ್ತಿ ಜಾಗೃತವಾದರೆ ಕುಂಡೆ ಹೊಡೆದು ಹೋಗುವಷ್ಟು ರೋಷಾವೇಶ ಉಂಟಾಗುತ್ತದೆಯೇ?" ಇದು ನನ್ನ ಲೇವಡಿಯ ಪ್ರಶ್ನೆ.

"ಕುಂಡಲಿನಿ ಶಕ್ತಿಯು ಮಹಾಶಕ್ತಿ. ಅದರ ಶಕ್ತಿ ಪ್ರಭಾವವನ್ನು ಸಾಮಾನ್ಯ ದೇಹ ತಡೆದುಕೊಳ್ಳಲಾಗದು" ಎಂಬುದು ಲೆಕ್ಕಾಧಿಕಾರಿಯ ಪ್ರಾಮಾಣಿಕ ಉತ್ತರ. ರಂಗನಿರ್ದೇಶಕನಾಗಿ ನೂರಾರು ನಾಟಕಗಳ ನೂರಾರು ಪಾತ್ರಗಳನ್ನು ನೂರಾರು ಜನರಿಗೆ ಪಾಠ ಮಾಡಿರುವ ನನಗೆ ಅಲ್ಲಿನ ಕಲಾವಿದರಲ್ಲಿ ಕೃತಕತೆ ಕಂಡಿತು. ತರಬೇತಿ ಸಾಲದು ಎಂಬ ವಿಮರ್ಶೆ ಮಾಡುವಂತಾಯಿತು.

ಇರಲಿ, ನಾಟಕವಾಡುವ ಜನರ ಜೊತೆಗೆ ಅಂತಹ ಉನ್ಮತ್ತತೆಯನ್ನು ಮರುಳಾಗಿ ಅನುಭವಿಸುವ, ಭ್ರಾಂತಿಗೆ ಒಳಗಾಗಿರುವ ಅನೇಕ ಮನೋರೋಗಿಗಳಂತಹ ಕುಂಡಲಿನಿ ವಿಜ್ಞಾನದ ಪ್ರಯೋಗಶೀಲರನ್ನು ನೋಡಿ ಮನಸ್ಸು ನೊಂದಿತು.

ಅಲ್ಲಿಯೇ ಕೆಲವು ಭಕ್ತರನ್ನು ಕಂಡು ಅಲ್ಲಿಗೆ ಬಂದಿರುವ




ಕಾರಣವನ್ನು ಕೇಳಿ ಮಾತಾಡಿಸಿದೆ. "ಕುಂಡಲಿನೀ ಯೋಗವು ಪ್ರಕೃತಿಯಲ್ಲಿರುವ ಅಪರೂಪವಾದ ಮತ್ತು ಪ್ರಭಾವಶಾಲಿಯಾದ ಶಕ್ತಿಯಾಗಿದ್ದು, ಅದು ನಮ್ಮ ದೇಹದಲ್ಲಿದೆ, ಅದೇ ಅಧ್ಯಾತ್ಮಕ್ಕೂ, ಲೌಕಿಕ ಜೀವನದ ಉತ್ತಮ ನಿರ್ವಹಣೆಗೂ ಬೇಕಾಗಿರುವಂತಹದ್ದು. ಅದು ನಿದ್ರಿಸುತ್ತಿರುವ ಸರ್ಪದ ರೀತಿಯಲ್ಲಿ ಮಲಗಿದ್ದು, ಧ್ಯಾನ ಮತ್ತು ಇತರ ಆಧ್ಯಾತ್ಮಿಕ ಸಾಧನೆಗಳಿಂದ ಎಚ್ಚೆತ್ತು ಸಹಸ್ರಾರದವರೆಗೂ ಪ್ರಯಾಣ ಮಾಡುತ್ತದೆ. ಹಾಗಾಗಿ, ಇಲ್ಲಿ ನಾವು ಅದರ ಜಾಗೃತಿಗೆ ಬಂದಿದ್ದೇವೆ. ನಾವು ರಿಲೀಜಿಯಸ್ ಅಲ್ಲ, ಬಟ್ ಸ್ಪಿರಿಚ್ಯುಯಲ್ ಅಷ್ಟೇ. ಇಲ್ಲಿ ಪಾಷಾಣ ಲಿಂಗವಿದೆ. ಇದನ್ನು ತೊಳೆದ ನೀರು ಡೇಂಜರಸ್ ರೋಗಗಳಿಗೂ ಮದ್ದು. ಇದು ಧಾರ್ಮಿಕವಾದ ಶ್ರದ್ಧೆಯೋ, ನಂಬುಗೆಯೋ ಅಲ್ಲ. ಇದೊಂದು ಪ್ಯೂರ್ ಸೈನ್ಸ್. ಸೈಂಟಿಫಿಕ್ ಆಗಿಯೇ ನಾವೂ ಇದನ್ನು ಪ್ರಯೋಗ ಮಾಡುತ್ತಿದ್ದೇವೆ. ಫಲವನ್ನೂ ಕಾಣುತ್ತಿದ್ದೇವೆ" ಎಂದರು.

ಮುಚ್ಚಿದ ಕೋಣೆಯೊಳಗೆ ಪರಸ್ಪರ ಸಮ್ಮತದಿಂದ ಹೆಣ್ಣಿನೊಂದಿಗೆ ಮಲಗುವುದು ನನಗೆ ಅಪರಾಧವಾಗಿ ಎಂದಿಗೂ ಕಂಡಿರಲಿಲ್ಲ. ಆಕೆಯ ಇಚ್ಛೆಗೆ ವಿರುದ್ಧವಾಗಿ ಎಳೆದೊಯ್ದು ಬಲತ್ಕರಿಸಿದ್ದರೆ ಶೋಷಣೆ ಮತ್ತು ಅತ್ಯಾಚಾರವಾಗಿರುತ್ತಿತ್ತು ಎಂದು ನಿತ್ಯಾನಂದನ ಕಾಮ ಪ್ರಕರಣದ ವಿಡಿಯೋಗಳು ಹರಿದಾಡಿದಾಗ ಅಭಿಪ್ರಾಯಪಟ್ಟಿದ್ದೆ. ಆದರೆ, ಈಗ ಆತನಿಂದ ಉಂಟಾಗಿರುವ ಭ್ರಾಮಕ ಜಗತ್ತಿನಲ್ಲಿರುವ ಉನ್ಮತ್ತ ಜನರನ್ನು ಕಂಡಾಗ ಆತ ಅಪರಾಧಿ ಎಂದು ಅನ್ನಿಸತೊಡಗಿತು. ಅತ್ಯಾಚಾರವೆಂದರೆ ಕೂಗಾಡುತ್ತಾ ಪ್ರತಿರೋಧ ಒಡ್ಡುವವಳನ್ನು ಎಳೆದೊಯ್ದು ಬಟ್ಟೆಬರೆಗಳನ್ನು ಹರಿದು ಹಾಕಿ ಮೇಲೆರಗುವುದು ಮಾತ್ರವಲ್ಲ, ಅವರ ವೈಚಾರಿಕತೆಯನ್ನೇ ಬಲಿ ತೆಗೆದುಕೊಂಡು, ಭ್ರಾಮಕ ಜಗತ್ತನ್ನು ಸೃಷ್ಟಿಸಿ, ಅದಕ್ಕೆ ಮರುಳಾಗಿ, ಉನ್ಮತ್ತರಾಗಿ ಒಬ್ಬನ ತೀಟೆಗೆ ಅಥವಾ ಮೊಂಡು ಸಿದ್ಧಾಂತಕ್ಕೆ ತನ್ನ ದೇಹವನ್ನು, ಜೀವನವನ್ನು ಅರ್ಪಿಸಬಯಸುವುದು ಕೂಡ ಅತ್ಯಾಚಾರವೇ, ಶೋಷಣೆಯೇ ಎಂದು ಅರ್ಥವಾಗತೊಡಗಿತು.

ಏನೀ ಕುಂಡಲಿನಿಯ ಕರ್ಮಗಳು? ಮುಂದೆ ನೋಡೋಣ.

ಅದಾನಿಯ ಲಾಭಕ್ಕೆ ಪಾಕ್ ಪ್ರಧಾನಿಗೆ ಆಹ್ವಾನ!



ಅಂದು ಪಾಕಿಸ್ತಾನದ ಪ್ರಧಾನಿ ಜೊತೆ ಮಾತುಕತೆಗೆ ಕೈಚಾಚಿದುದಕ್ಕೆ ಡಾ.ಮನಮೋಹನ ಸಿಂಗ್ ವಿರುದ್ಧ ಹರಿಹಾಯ್ದಿದ್ದ ಅದೇ ನರೇಂದ್ರ ಮೋದಿ ಇದೀಗ ಖುದ್ದು ತಾನೇ ಪಾಕ್ ಪ್ರಧಾನಿಯನ್ನು ತನ್ನ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಆಹ್ವಾನಿಸಿದ್ದಾನೆ! ಹೀಗೆ ಯೂ ಟರ್ನ್ ಹೊಡೆದಿರುವುದು ದೊಡ್ಡ ವಿಪರ್ಯಾಸವೆಂದು ಕಂಡರೂ ಇದರ ಹಿಂದುಗಡೆ ಅದರದೆ ಆದ ಲೆಕ್ಕಾಚಾರಗಳಿವೆ.

ಚುನಾವಣಾಪೂರ್ವದಲ್ಲೂ ಚುನಾವಣಾ ಕಾಲದಲ್ಲೂ 'ನಮ್ಮ ಯೋಧರ ರುಂಡ ಚೆಂಡಾಡಿದವರಿಗೆ ಚಿಕನ್ ಬಿರಿಯಾನಿ ತಿನ್ನಿಸುವಿರಾ...... ಬಾಂಬ್, ಬಂದೂಕು ಅಥವಾ ಪಿಸ್ತೂಲಿನ ಸದ್ದಿನ ನಡುವೆ ಮಾತುಕತೆಗಳು ಕಿವಿಗೆ ಬೀಳಲು ಸಾಧ್ಯವೇ?" ಎಂದೆಲ್ಲ ಆಕ್ರೋಶ ವ್ಯಕ್ತಪಡಿಸಿದವನು ಮೋದಿ. ಚುನಾವಣಾ ಕಾಲದಲ್ಲೊಮ್ಮೆ ಟೈಮ್ಸ್ ನೌ ವಾಹಿನಿಯ ಪ್ರಧಾನ ಸಂಪಾದಕ ಆರ್ನಾಬ್ ಗೋಸ್ವಾಮಿ ಜೊತೆ ಮಾತನಾಡಿದ ಸಂದರ್ಭದಲ್ಲೂ 'ಭಯೋತ್ಪಾದನೆಯ ಕೃತ್ಯಗಳು ಮುಂದುವರಿದಲ್ಲಿ ಮಾತುಕತೆಗಳ ಪ್ರಶ್ನೆಯೆ ಇಲ್ಲ' ಎಂದು ಹೇಳಿದವನೀತ. ಇವತ್ತು ಇದನ್ನೆಲ್ಲ ಮುಖ್ಯವಾಹಿನಿಯ ಯಾವೊಂದು ಮಾಧ್ಯಮವೂ ಚರ್ಚೆಯ ವಿಷಯವನ್ನಾಗಿ ಎತ್ತಿಕೊಂಡಿಲ್ಲ, ಅವೆಲ್ಲವೂ ಗಾದೆಯ ಮೂರು ಮಂಗಗಳ ಹಾಗೆ ಗಪ್‌ಚಿಪ್ ಆಗಿ ಕೂತಿವೆ. ಇದರಲ್ಲಿ ಆಶ್ಚರ್ಯಪಡಬೇಕಾದ್ದೇನೂ ಇಲ್ಲ ಬಿಡಿ. ಯಾಕೆಂದರೆ ಈ ಮಾಧ್ಯಮಗಳಿಗಿಂದು ಮೋದಿ ಗುಣಗಾನ ಮಾಡಲು 24 ಗಂಟೆಗಳೂ ಸಾಕಾಗುತ್ತಿಲ್ಲವಂತೆ.

ಮೋದಿಯ ಫ್ಯಾನ್ ಆಗಿರುವ ಲಲನಾಮಣಿಗಳಿಂದ ಹಿಡಿದು ಮೋದಿಯ ಜನ್ಮಕುಂಡಲಿ ಮತ್ತು ಪ್ರಮಾಣವಚನ ಸ್ವೀಕಾರದ ಮುಹೂರ್ತ ವಿಶ್ಲೇಷಣೆ ಮಾಡಲು ಕಾತರಿಸುತ್ತಿರುವ ಜ್ಯೋತಿಷಿಗಳವರೆಗೆ ನೂರಾರು ಜನ ಮೈಲುದ್ದ ಕ್ಯೂನಲ್ಲಿ ನಿಂತಿದ್ದಾರಂತೆ! ಪರಿಸ್ಥಿತಿ ಹೀಗಿರುವಾಗ ಚುನಾವಣಾ ಪ್ರಚಾರದ ವೇಳೆ ಮೋದಿ ಏನು ಹೇಳಿದ್ದನೆಂಬ ವಿಷಯ ಅಪ್ರಸ್ತುತ ಹಾಗೂ ಅಮುಖ್ಯವಾಗುವುದಿಲ್ಲವೇ?!!


ಮೋದಿಯ ಭಾಷಣಗಳು ಬೆಂಬಲಿಗರನ್ನು ಭಾವನಾತ್ಮಕವಾಗಿ ಸೆಳೆಯುವ ರೀತಿಯಲ್ಲಿ ತಯಾರಿಸಲ್ಪಟ್ಟಿರುತ್ತವೆ. ಆದರೆ ಆತನ ಕೃತ್ಯಗಳ ಹಿಂದೆ ಬೇರೆಯೆ ಉದ್ದೇಶಗಳಿರುತ್ತವೆ. ಕಾರ್ಪೋರೇಟ್‌ಗಳಿಗೆ ಲಾಭ ಬಾಚಲು ಅನುಕೂಲ ಮಾಡಿಕೊಡುವ, ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುವ ಸಕಲ ಅವಕಾಶಗಳನ್ನು ಕಲ್ಪಿಸಿಕೊಡುವ ಉದ್ದೇಶಗಳು. ಉದಾಹರಣೆಗೆ ಮೋದಿಯನ್ನು ಪ್ರಧಾನಿ ಅಭ್ಯರ್ಥಿಯಾಗಿ ಘೋಷಿಸಿದ 2013ರ ಸಪ್ಟೆಂಬರ್ 13ರ ನಂತರದಲ್ಲಿ ಮುಖೇಶ್ ಅಂಬಾನಿ ಸಂಪತ್ತಿನಲ್ಲಿ 6 ಬಿಲಿಯ ಡಾಲರು ಏರಿಕೆಯಾಗಿದೆ. ಗೌತಮ್ ಅದಾನಿ ಸಂಪತ್ತಿನಲ್ಲಿ ನಾಲ್ಕು ಪಟ್ಟು ಹೆಚ್ಚಳವಾಗಿದೆ. ಅಂದು 1.9 ಬಿಲಿಯ ಡಾಲರು ಇದ್ದ ಅದಾನಿ ಸಂಪತ್ತು ಇಂದು 7.6 ಬಿಲಿಯ ಡಾಲರುಗಳಿಗೇರಿದೆ. 2013ರ ಮೊದಲ ಮೂರು ತಿಂಗಳ ಅವಧಿಯಲ್ಲಿ ರೂ 585.52 ಕೋಟಿ ಸಾಲದಲ್ಲಿದ್ದ ಅದಾನಿ ಪವರ್ ಕಂಪೆನಿ ಪ್ರಸಕ್ತ ವರ್ಷದ ಅದೇ ಅವಧಿಯಲ್ಲಿ ರೂ 2529 ಕೋಟಿ ಲಾಭ ಗಳಿಸಿದೆ.

ಮೋದಿ ಈಗ ನವಾಜ್ ಷರೀಫ್‌ಗೆ ಆಹ್ವಾನವಿತ್ತಿರುವ ವಿಷಯ ಮೇಲುನೋಟಕ್ಕೆ ವಿಚಿತ್ರ ಎನಿಸಬಹುದಾದರೂ ವಾಸ್ತವದಲ್ಲಿ ಇದರ ಹಿಂದೆ ಚುನಾವಣಾ ವೆಚ್ಚದ ಋಣ ತೀರಿಸುವ ಲೆಕ್ಕಾಚಾರಗಳಿವೆ. ನವಾಜ್ ಷರೀಫ್‌ಗೆ ಆಹ್ವಾನ ನೀಡಿರುವುದು ಶಾಂತಿಮಾತುಕತೆಗಲ್ಲ, ಕಾರ್ಪೋರೇಟ್ ಕು[...] ಅದಾನಿ ಪರವಾಗಿ ವ್ಯಾಪಾರ ಕುದುರಿಸಲು! ಅದಾ[...] ಪವರ್ ಕಂಪೆನಿ ಗುಜರಾತಿನ ಕಚ್‌ನ ಭದ್ರೇಶ್ವರ್ ಎಂಬ[...] 10,000 ಮೆವಾ ಸಾಮರ್ಥ್ಯದ ವಿದ್ಯುತ್ ಉತ್ಪಾದ[...] ಘಟಕವೊಂದನ್ನು ಸ್ಥಾಪಿಸುತ್ತಿದೆ. ಇದಕ್ಕೆ ಬೇಕಿರು[...] ಜಮೀನನ್ನು ಈಗಾಗಲೆ ಪಡೆಯಲಾಗಿದೆಯೆಂದ[...] ತಿಳಿದುಬಂದಿದೆ. ಭದ್ರೇಶ್ವರ್ ಘಟಕದಲ್ಲಿ ಉತ್ಪಾದನೆಯಾಗು[...] ಹೆಚ್ಚಿನ ವಿದ್ಯುತ್ತನ್ನು ನೆರೆಯ ಪಾಕಿಸ್ತಾನಕ್ಕೆ ರಫ್ತು ಮಾಡು[...] ಯೋಜನೆ ಅದಾನಿಯದ್ದು. ಪಾಕ್ ಪ್ರಧಾನಿಯನ[...] ಆಹ್ವಾನಿಸಿರುವುದರ ಮುಖ್ಯ ಉದ್ದೇಶವೆ ಆ ಕುರಿತಾ[...] ಮಾತುಕತೆ ನಡೆಸಲು.

"ಒಳ್ಳೆಯ ದಿನಗಳಿಗಾಗಿ" ನಿರೀಕ್ಷೆ ಮಾಡುತ್ತಿರು[...] ಜನಸಾಮಾನ್ಯರಿಗೆ ಶುಭ ಹಾರೈಕೆಗಳ ಹೊರತಾಗಿ ಹೇಳ[...] ಇನ್ನೇನು ಉಳಿದಿದೆ?

(http://www.truthofgujarat.com)

ಬೂಸಿ ಬಸ್ಯ... ಮೋದಿ!



ಯುವಶಕ್ತಿಯ ಮೇಲೆ ದುಷ್ಟಶಕ್ತಿಗಳ ಕಣ್ಣು


ಅವಿನಾಶ್ ಪತ್ರಕ್ಕೆ ಪೂರಕವಾಗಿ ಇದನ್ನು ಬರೆಯುತ್ತಿದ್ದೇನೆ. ಬೆಟ್ಟವನ್ನೇ ಕುಟ್ಟಿ ಪುಡಿಮಾಡುವಂತ ಬಿಸಿರಕ್ತದ ಹುಮ್ಮಸ್ಸಿನ ವಯಸ್ಸದು. ಅದರ ಸದ್ಬಳಕೆಯಾಗುವುದಾದರೆ ಅದರಷ್ಟು ಉತ್ಕೃಷ್ಟ ಹಾಗು ಶಕ್ತಿಶಾಲಿಯಾದುದು ಬೇರಿಲ್ಲ. ದುರಂತವೆಂದರೆ ಈ ಬಿಸಿರಕ್ತದ ಅಗಾಧ ಹುಮ್ಮಸ್ಸಿನ ಮೇಲೇ ಕಣ್ಣಿಟ್ಟ ಕೆಲ ದುಷ್ಟಶಕ್ತಿಗಳು ಅವರನ್ನು ಸುಲಭದಲ್ಲಿ ಅಡ್ಡದಾರಿಗೆಳೆಯುತ್ತಿರುವುದು ಅಕ್ಷರಶಃ ಸತ್ಯ. ಭಯೋತ್ಪಾದನಾ ಚಟುವಟಿಕೆಯಿಂದ ತೊಡಗಿಸಿ ಮೊನ್ನೆಯ ಸುರೇಶ್ ಭಟ್ ಪ್ರಕರಣದ ಹಲ್ಲೆಯವರೆಗೂ ಯುವಜನತೆಯನ್ನೇ ಸುಲಭದಲ್ಲಿ ಬಲಿಪಶುಗಳನ್ನಾಗಿ ಮಾಡಲಾಗುತ್ತಿದೆ.

ಕೆಲ ಸಮಯದ ಹಿಂದೆ ಗುಲಾಬಿ ಬಿಳಿಮಲೆಯವರು ಈ ರೀತಿಯಾಗಿ 'ಅಮಲು' ಹತ್ತಿಸಿಕೊಂಡ ಕಾಲೇಜು ಯುವತಿಯೊಬ್ಬಳ ಬಗ್ಗೆ 'ಲಂಕೇಶ್'ನಲ್ಲಿ ಬರೆದಿದ್ದರು. ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗಿ ಹಿಡಿಯಲ್ಪಟ್ಟವರಲ್ಲಿ ಕಾಣಸಿಗುವುದು ಕೂಡಾ ಇಂತಹ 18-25 ವರ್ಷ ವಯಸ್ಸಿನವರೇ ಎಂಬುದನ್ನಿಲ್ಲಿ ಗಮನಿಸಬೇಕು. 'ಬ್ರೈನ್ ವಾಷ್' ತಂತ್ರಕ್ಕೆ ಸುಲಭದಲ್ಲಿ ಬಲಿಬೀಳುವ ಇವರನ್ನು ಬುಟ್ಟಿಗೆ ಹಾಕಿಕೊಳ್ಳುವುದು ಕಷ್ಟದ ಕೆಲಸವೇನಲ್ಲ, ಯಾವುಯಾವುದನ್ನೋ ಎಲ್ಲೆಲ್ಲೋ ಲಿಂಕ್ ಹಾಕಿ ಮರಳು ಮಾಡುವ ಮಾತಿನ ಕಲೆಗಾರಿಕೆ ಗೊತ್ತಿದ್ದರೆ ಸಾಕು ಅಷ್ಟೆ.

ನಿನ್ನೆ ನನ್ನೊಂದಿಗೆ ಕೆಲಸ ಮಾಡುವ ನಿವೇದಿತಾ ಜೈನ್ ಎಂಬ 20 ವರ್ಷದ ಯುವತಿ ಯಾವುದೋ ಸಾಂದರ್ಭಿಕ ಮಾತಿಗೆ 'ಹಾಗೆ ಮಾಡಬೇಕು ಹೀಗೆ ಮಾಡಬೇಕು' ಅಂದಿದ್ದಕ್ಕೆ ನಾನು "ಅದೆಲ್ಲ ಹೇಳುವಷ್ಟು ಸುಲಭ ಅಲ್ಲಮ್ಮ" ಎಂದಿದ್ದೆ, ಆಗ ನನ್ನ ಮಾತಿಗೆ ಅವಳು ಕೊಟ್ಟ ಉತ್ತರ ಯಾವುದು ಗೊತ್ತಾ? "ನೀವು ಅನಿಲ್‌ಕಪೂರನ 'ನಾಯಕ್' ಸಿನಿಮಾ ನೋಡಿದ್ದೀರಾ? ಅದನ್ನ ನೋಡಿ" ಎಂದು. (ಅದೊಂದು ರಿಮೇಕ್ ಸಿನಿಮಾ, ಅದರ ಮೂಲ ಸಿನಿಮಾ 'ಮುದಲ್ವನ್'ನ ಹೀರೋ ಕನ್ನಡಿಗ ಅರ್ಜುನ್ ಸರ್ಜಾ ಎಂಬುದೂ ಗೊತ್ತಿರದಿದ್ದ ಹಾಗು ಅವತ್ತು ಪ್ರಚಾರವಿದ್ದಂತೆ ಆ ಕಥೆಗೆ ಪ್ರೇರಣೆ ಎಂದು ಕರೆಸಿಕೊಂಡ ಚಂದ್ರಬಾಬುನಾಯ್ಡು ಯಾರೆಂಬುದೂ ಸಹ ಗೊತ್ತಿರದಿದ್ದ ಮುಗ್ಧೆ ಆಕೆ) ಒಂದು ದಿನದಲ್ಲಿ ದೇಶವನ್ನೇ ಬದಲಾವಣೆ ಮಾಡಿದ ಆ ಕಥೆಯನ್ನೇ ವಾಸ್ತವತೆಗೆ ಹತ್ತಿರ ಎಂದು ಆಕೆ ಭಾವಿಸಿದ್ದಳು. ಅದಕ್ಕೆ ನಾನು "ವಸ್ತುಸ್ಥಿತಿ ಹಾಗಿರೋದಿಲ್ಲ, ಉದಾಹರಣೆಗೆ 2ನೇ ಸ್ವಾತಂತ್ರ್ಯದ ಸಂಗ್ರಾಮವೆಂದೇ ಮೆರೆದು ಮಿಂಚಲ್ಪಟ್ಟ ಅಣ್ಣಾ ಹಜಾರೆ ಚಳವಳಿಗೆ ಇಡೀ ದೇಶವೇ ಎದ್ದು ನಿಂತಿತ್ತು, ಹಾಗೆ ನಿಂತವರಲ್ಲಿ ಹೆಚ್ಚಿನವರು ಯುವಜನತೆಯೇ ಇದ್ದಿತ್ತು, ಆದರೆ ಆ ಚಳವಳಿ ಈಗ ಚೂರುಚೂರಾಗಿ ಹಳ್ಳಹಿಡಿದಿದೆಯೇ ಹೊರತು ನಯಾ ಪೈಸೆಯ ಪ್ರಯೋಜನಕ್ಕೆ ಬರಲಿಲ್ಲ ಯಾಕೆ?" ಎಂದೆ. ಸಿನಿಮಾದ ಭಾಷಣದಲ್ಲಿ ಹೇಳಿದ್ದನ್ನೇ ವಸ್ತುಸ್ಥಿತಿಗೆ ಹತ್ತಿರವೆಂದು ನಂಬುವ, ಸಾಮಾಜಿಕ ಬದುಕಿನ ಸಹಜ ಅನುಭವದ ಕೊರತೆಯಿರುವ ಯುವಶಕ್ತಿಯನ್ನು ದಾರಿ ತಪ್ಪಿಸುವ ವ್ಯವಸ್ಥೆಯಿಂದ ಆದಷ್ಟು ದೂರವಿಡುವುದೇ ಸಮಾಜದ ಹಿತ ದೃಷ್ಟಿಯಿಂದ ಯಾವತ್ತಿಗೂ ಒಳ್ಳೆಯದು.

-ಶಶಿ ಪುತ್ತೂರು, ದಕ

ಹೊಗಳಿಕೆ ತೆಗಳಿಕೆ



ಭಾರತಕ್ಕೆ ಈಗ ಒಬ್ಬ ಪ್ರಧಾನಿ ಇಲ್ಲ. ಬದಲ[...] ಹಲವಾರು ಪ್ರಧಾನಿಗಳಿದ್ದಾರೆ. ಅವರಿಗೆಲ್ಲ ಮೋದಿ ಒಂ[...] ಮುಖವಾಡ ಮಾತ್ರ. ನಿಜವಾದ ಪ್ರಧಾನಿಗಳು ಅದಾ[...] ಅಂಬಾಣಿ, ಮೋಹನ್ ಭಾಗವತ್, ಅಮಿತ್ [...] ತೊಗಾಡಿಯಾ, ಪೇರುಪೇಟೆಯ ಗೂಳಿಗಳು, ಇತ್ಯಾ[...] ಸಾಕಪ್ಪಾ ಸಾಕು. ಭಾರತವನ್ನು 333 ಕೋಟಿ ದೇವರು[...] ಕಾಪಾಡಬೇಕು.


ಅಂದಹಾಗೆ, ನಾನು ಪ್ರತಿ ವಾರ ಪತ್ರಿಕೆಯ[...] ಖರೀದಿಸುವ ಅಂಗಡಿಯವನು ಮೇ 17, 201[...]

ನರಭಕ್ಷಕ ಮೊಸಳೆಗಳಿಂದ ಮೋದಿ ಪಾರಾದನಂತೆ

ಪ್ರೊ. ಕೆ.ಎಸ್.ನಾರಾಯಣಾಚಾರಿ ಎಂಬ 80 ವರ್ಷದ ಸೋ-ಕಾಲ್ಡ್ ಧಾರ್ಮಿಕ ಸಂಶೋಧಕನೊಬ್ಬ ಎರಡು ತಿಂಗಳ ಹಿಂದೆ 'ವಾಲ್ಮೀಕಿ ಯಾರು' ಎಂಬ ಪುಸ್ತಕ ಬರೆದು ರಾಮಾಯಣ ರಚಿಸಿದ ವಾಲ್ಮೀಕಿ ಋಷಿಯು ಬೇಡ ಜನಾಂಗದವನಲ್ಲ; ಅವನು ಮೂಲತಃ ಬ್ರಾಹ್ಮಣ ಜಾತಿಯವನು ಎಂಬ ವಿತಂಡವಾದವನ್ನು ಮಂಡಿಸಿ ವಾಲ್ಮೀಕಿ ಜನಾಂಗದವರನ್ನು ಅವಮಾನಿಸಿದ್ದ. ಆದರೆ ಆಗ ಚುನಾವಣೆ ನೀತಿಸಂಹಿತೆ ಜಾರಿಯಲ್ಲಿ ಇದ್ದುದರಿಂದ ಈ ವಿಷಯ ಹೆಚ್ಚು ಪ್ರಸಾರಗೊಳ್ಳಲಿಲ್ಲ.

ಈ ವಿವಾದಿತ ಪುಸ್ತಕವನ್ನು ಇತ್ತೀಚೆಗೆ ನಾನು ಓದಿದ ಮೇಲೆ ನನಗೆ ಅರ್ಥವಾಗಿದ್ದು ಈ ಮನುವಾದಿ ಮನಃಸ್ಥಿತಿಯವರು ಭಾರತದ ಇತಿಹಾಸದಲ್ಲಿ ಪ್ರಸಿದ್ಧರಾದ ಋಷಿ-ಮುನಿಗಳು, ಪುರಾಣಕರ್ತರು, ಮಹಾಕವಿಗಳು, ಧರ್ಮ ಪ್ರವರ್ತಕರೆಲ್ಲಾ ಮೂಲತಃ ಬ್ರಾಹ್ಮಣರಿಗೆ ನೈತಿಕ ಅಥವಾ ಅನೈತಿಕವಾಗಿ ಹುಟ್ಟಿದವರು ಎಂಬ ಸಿದ್ಧಾಂತವನ್ನು ಮಂಡಿಸುತ್ತಿದ್ದಾರೆ. ಶೂದ್ರ ಜಾತಿಗಳಲ್ಲಿ ಮಹಾಪುರುಷರು ಹುಟ್ಟುವುದು ಸಾಧ್ಯವೇ ಇಲ್ಲ ಎನ್ನುವುದು ಅವರ ಕುರುಡು ಸಿದ್ಧಾಂತ (ಬ್ರಾಹ್ಮಣ ತಂದೆ-ಶೂದ್ರ ತಾಯಿಗೆ ಮಹಾ ಪುರುಷರು ಹುಟ್ಟಬಹುದಂತೆ, ಆದರೆ ಬ್ರಾಹ್ಮಣ ತಾಯಿ-ಶೂದ್ರ ತಂದೆಗೆ ಮಹಾಪುರುಷರು ಹುಟ್ಟುವುದೇ ಇಲ್ಲವಂತೆ. ಯಾಕೆಂದರೆ ಶೂದ್ರ ಹೆಂಗಸು ಬ್ರಾಹ್ಮಣನೊಟ್ಟಿಗೆ ಅನೈತಿಕ ಸಂಬಂಧ ಇಟ್ಟುಕೊಳ್ಳುತ್ತಾಳೆ ಆದರೆ ಬ್ರಾಹ್ಮಣ ಹೆಂಗಸು ಶೂದ್ರ ಗಂಡಸಿನೊಟ್ಟಿಗೆ ಎಂದೂ ಅನೈತಿಕ ಸಂಬಂಧ ಇಟ್ಟುಕೊಳ್ಳುವುದಿಲ್ಲ ಎಂಬುದು ವೈದಿಕರ ಸಾಮಾಜಿಕ ಸಿದ್ಧಾಂತ).

ಇದಕ್ಕೆ ಪೂರಕವೆಂಬಂತೆ ಮೇ 16ಕ್ಕೆ ಲೋಕಸಭಾ ಚುನಾವಣೆಯ ಫಲಿತಾಂಶ ಬಂದ ನಂತರ ಸುಬ್ರಹ್ಮಣ್ಯ ಸ್ವಾಮಿ ಎಂಬ ವಿಕ್ಷಿಪ್ತ ರಾಜಕಾರಣಿ ನರೇಂದ್ರ ಮೋದಿಯಲ್ಲೂ 'ಬ್ರಾಹ್ಮಣ ಗುಣಗಳಿವೆ' ಎಂದು ಟ್ವೀಟ್ ಮಾಡಿ ತನ್ನ ಮನುವಾದಿ ಬುದ್ಧಿಯನ್ನು ತೋರಿಸಿದ್ದಾನೆ. ಬ್ರಾಹ್ಮಣ ಗುಣಗಳೆಂದರೆ ಏನು? ಅಭಿವೃದ್ಧಿ ಬಗ್ಗೆ ಸುಳ್ಳು ಹೇಳುವುದಾ? ಇತರ ಧರ್ಮದವರ ಮಾರಣಹೋಮ ನಡೆಸುವುದಾ? ಅಥವಾ ಮೋದಿಯನ್ನು ಹೆತ್ತವರ ಬಗ್ಗೆ ಆ ಸುಬ್ಬಸ್ವಾಮಿ ಅನುಮಾನ ಪಡುತ್ತಿದ್ದಾನೆಯೇ?!



ನಿಜವಾಗಿ ಇಡೀ ಹಿಂದೂ ಧರ್ಮ ನಿಂತಿರುವುದೇ ಕಾಲ್ಪನಿಕ ಕಥೆಗಳ ಆಧಾರದ ಮೇಲೆ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ತಮ್ಮ ಪರವಾಗಿ ಕಾಲ್ಪನಿಕ ಕಥೆ ಹೆಣೆದು ಅದಕ್ಕೆ ಪವಿತ್ರ ಪುರಾಣ ಎಂದು ಕರೆದು ಅದರಡಿ ತಮ್ಮ ಕುತಂತ್ರ ಸ್ವಾರ್ಥಗಳನ್ನೆಲ್ಲಾ ಸಮರ್ಥಿಸಿಕೊಳ್ಳುವುದು ವೈದಿಕರು ಮೂರು ಸಾವಿರ ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಕಾಯಕ. ಈಗ ಅದೇ ಹಾದಿಯಲ್ಲಿ ಮುಂದೆ ಸಾಗಿ ನರೇಂದ್ರ ಮೋದಿಯ ಬಾಲ್ಯದ ಬಗ್ಗೆಯೂ ಅಲೌಕಿಕ ಘಟನೆಗಳ ಕಟ್ಟುಕಥೆಗಳನ್ನು ಹೆಣೆದು ಹರಡಲಾಗುತ್ತಿದೆ. ಮೋದಿ ಬಾಲ್ಯದಲ್ಲಿ ತನ್ನ ಊ[...] ಕೆರೆಯ ನಟ್ಟ ನಡುವಿದ್ದ ದೇವಸ್ಥಾನಕ್ಕೆ ದಿನಾಲೂ ಬ[...] ಬರಿಮೈಯಲ್ಲಿ ಈಜಿಕೊಂಡು ಹೋಗಿ ಪೂಜೆ ಮ[...] ಹಿಂತಿರುಗುತ್ತಿದ್ದನಂತೆ. ಆ ಕೆರೆಯಲ್ಲಿ 29 ಭಯ[...] ನರಭಕ್ಷಕ ಮೊಸಳೆಗಳಿದ್ದವಂತೆ. ಆದರೆ ಮೋದಿ[...] ಭಯಂಕರ ಭಕ್ತಿಯ ಪರಿಣಾಮವಾಗಿ ಆ ಭಯ[...] ಮೊಸಳೆಗಳೂ ಮೋದಿಯನ್ನು ಮುಟ್ಟುತ್ತಲೇ ಇರಲಿಲ್ಲ[...] ಕೇವಲ ಒಮ್ಮೆ ಒಂದು ತಿಳಿಗೇಡಿ ನಾಸ್ತಿಕ ಮ[...] ಮೋದಿಯ ಕಾಲಿಗೆ ಕಚ್ಚಿತಂತೆ. ಮೋದಿ ಅದರ ವ[...] ದೇವರ ಪ್ರಸಾದ ಹಾಕಿದಾಗ ಅದು ಮೋದಿಯ ಕಾ[...] ಬಿಟ್ಟಿತಂತೆ. ಮೋದಿಯ ಕಾಲಿನ ಹಿಮ್ಮಡಿಗೆ ಆಗ [...] ಗಾಯದ ಕಲೆ ಈಗಲೂ ಇದೆಯಂತೆ.


ಒಂದು ಹಳ್ಳಿಯ ಸಣ್ಣ ಕೆರೆಯಲ್ಲಿ 29 ದ[...] ನರಭಕ್ಷಕ ಮೊಸಳೆಗಳಿದ್ದವು ಎನ್ನುವುದೇ ಹಾಸ್ಯ[...] ಹಾಗಿರುವಾಗ ಬಾಲ್ಯದಲ್ಲಿ ಮೋದಿಗೆ ಮೊಸಳೆ ಕ[...] (ನಂತರ ಆ ಮೊಸಳೆ ತನ್ನ ಪಾಪ ತೊಳೆಯಲು ಅ[...] ಷಾ ಎಂಬ ಹೆಸರಲ್ಲಿ ಹುಟ್ಟಿಬಂದು ಬಿಜೆಪಿ ಸೇರಿ[...] ಎಲ್ಲವೂ ವೈದಿಕರ ತಲೆಯಲ್ಲಿ ಹುಟ್ಟಿದ ಕಟ್ಟು[...] ಎನ್ನುವುದರಲ್ಲಿ ಸಂಶಯವಿಲ್ಲ.

ವಂಶಪಾರಂಪರ್ಯವಾಗಿ ವೈದಿಕರು ಹೆಣೆಯುತ್ತಿ[...] ಇಂತಹ ಕಟ್ಟುಕತೆಗಳಿಂದಲೇ ಹಿಂದೂ ಸಮಾಜ[...] ಮೂರು ಸಾವಿರ ವರ್ಷಗಳಿಂದ ಸವರ್ಣೀಯರು [...] ಕಪಿಮುಷ್ಟಿಯಲ್ಲಿ ಇಟ್ಟುಕೊಂಡು ಶೋಷಿಸುತ್ತಿರು[...] ತಾನೇ. ಇಂತಹ ಚಂದಾಮಾಮ ಕಥೆಗಳನ್ನು ನಂ[...] ಶೂದ್ರರು ಇರುವತನಕ ಹೀಗೆ ಕಥೆ ಕಟ್ಟಿ ಸ್ವಾರ್ಥ ಸಾಧಿ[...] ಸವರ್ಣೀಯರೂ ಇದ್ದೇ ಇರುತ್ತಾರೆ ಅಷ್ಟೇ.

- ಪಿ. ಎಸ್. ಶೆಟ್ಟಿ, ಮಂಗಳ[...]



ಕನಸುಗಾರ ರವಿಯ ಮಾಂತ್ರಿಕ ಲೋಕ



ನಟ, ನಿರ್ದೇಶಕ, ನಿರ್ಮಾಪಕ, ಸಂಕಲನಕಾರ, ಗೀತರಚನೆಕಾರ, ಸಂಗೀತ ನಿರ್ದೇಶಕ ಕನಸುಗಾರ ವಿ.ರವಿಚಂದ್ರನ್ ಮೇ 30ರಂದು ತಮ್ಮ ಜನ್ಮದಿನ ಆಚರಿಕೊಳ್ಳುತ್ತಿದ್ದಾರೆ. ಆ ಸಲುವಾಗಿ ಹೀಗೊಂದು ಬರಹ...

ಅದೊಂದು ಜಮಾನ. ರವಿಚಂದ್ರನ್ ಸಿನಿಮಾಗಳೆಂದರೆ ಒಂದು ಬಗೆಯ ವಿಶೇಷ ಆಸಕ್ತಿ ಇತರ ಕನ್ನಡ ಸಿನಿಮಾಗಳಲ್ಲಿ ಕಾಣಸಿಗದ ಯಾವುದೋ ಒಂದು ಚುಂಬಕ ಶಕ್ತಿ ರವಿಚಂದ್ರನ್ ಸಿನಿಮಾಗಳ ಮೂಲಕ ಮೈಮನಸುಗಳನ್ನು ಬೆಚ್ಚಗೆ ಮಾಡುತ್ತಿತ್ತು. ಸದ್ಯಕ್ಕೆ ನೆನಪಾಗುವಂತೆ ರವಿಚಂದ್ರನ್ ಚಿತ್ರಗಳ ಮೋಹಕ ಚೆಲುವೆಯರು ಜೂಹಿ ಚಾವ್ಲಾ ರಂಭಾ, ರಮ್ಯಕೃಷ್ಣ ರೋಜ, ಸೌಂದರ್ಯ, ಮೀನಾ, ಊರ್ವಶಿ, ಗೌತಮಿ, ಮೋಹಿನಿ, ಮಧುಬಾಲ, ನಗ್ಮಾ, ಶಿಲ್ಪಾ ಶೆಟ್ಟಿ ಮುಂತಾದವರು. ಆಗಷ್ಟೇ ಚಿಗುರುತ್ತಿದ್ದ ಹರೆಯದ ಹೃದಯಗಳಲ್ಲಿ ರವಿಚಂದ್ರನ್ ಸಿನಿಮಾಗಳು ಹಾಗೂ ಹಾಡುಗಳು ತೀವ್ರವಾಗಿ ಕಚಗುಳಿ ಇಡುತ್ತಿದ್ದವು. ಆ ಹಾಡುಗಳಲ್ಲಿನ ಮಾದಕತೆ, ಶೃಂಗಾರ; ನಟಿಯರ ಸೊಂಟ, ಮೈಮಾಟ, ತುಟಿ, ಕೆನ್ನೆ ಮುಂತಾದವುಗಳು. ಎಷ್ಟೋ ಸಲ ಯುವಸಮುದಾಯ ರವಿಚಂದ್ರನ್ ಸಿನಿಮಾಗಳ ಹಾಡುಗಳನ್ನು ನೋಡುವ ಸಲುವಾಗಿಯೇ, ಆ ರಸಾನುಭವ ಪಡೆಯುವ ಸಲುವಾಗಿಯೇ ಅವರ ಸಿನಿಮಾಗಳಿಗೆ ಹೋಗುತ್ತಿದ್ದದ್ದೂ ಉಂಟು. ರವಿಚಂದ್ರನ್ ಕಾಡುವ ನಟ; ಆತ ಗಿಟಾರ್ ಹಿಡಿದು ಹಾಡುವುದೆಂದರೆ ಎಂಥವರ ಪಾಲಿಗೂ ರೋಮಾಂಚಕ ಸಂಗತಿ. ಆತ ಹೂಗಳನ್ನು ಪ್ರೀತಿಸುತ್ತಿದ್ದ ಕಲೆ ಬೇರೆ ಯಾರಿಗೂ ಒಲಿಯುವಂಥದ್ದಲ್ಲ.

ರವಿಚಂದ್ರನ್ ಸಿನಿಮಾಗಳು ಎಂದಿನ ಕನ್ನಡ ಸಿನಿಮಾಗಳಂತೆ ಎನಿಸುತ್ತಿರಲಿಲ್ಲ- ಇಲ್ಲಿಯ ನಿರ್ದೇಶಕ ರವಿಚಂದ್ರನ್, ಉಳಿದ ನಿರ್ದೇಶಕರಂತೆ ಇರಲಿಲ್ಲ. ತೀರಾ ಡ್ರೈವ್ ಲಿ ಎನಿಸುವಂಥ ಚಿತ್ರಕತೆ, ರಸಿಕತೆ, ಮನರಂಜನೆ, ದೃಶ್ಯ ಶ್ರೀಮಂತಿಕೆ ಹಾಗೂ ಹೊಸತನ. ಗುಂಗುರು ಕೂದಲಿನ ಈತನ ಕಣ್ಣುಗಳಿಗೆ ಯುವತಿಯರೆದೆಯಲ್ಲಿ ಕಿಚ್ಚು ಹಚ್ಚಿಸುವಂಥ ಗುಣ; ಯುವಕರನ್ನು ಸೆಳೆಯುವ ಡಿಫರೆಂಟ್ ಡಿಫರೆಂಟ್ ಕಾಸ್ಟ್ಯೂಮ್ಸ್. ಅದೇರೀತಿ ಈತನ ನೇರನುಡಿ, ತನ್ನ ಅನಿಸಿಕೆಯನ್ನು ಪ್ರಾಮಾಣಿಕವಾಗಿ ವ್ಯಕ್ತಪಡಿಸುವ ರೀತಿ, ಸಿನಿಮಾಯೆಡೆಗಿನ ಅದಮ್ಯ ಒಲವು ಎಂಥವರನ್ನು ಚಕಿತಗೊಳಿಸುವಂಥದ್ದು. ಮುಲಾಜಿಲ್ಲದೆ ಕೋಟಿ ಕೋಟಿ ಸುರಿಯುವುದು, ತನ್ನ ಕೆಲಸದಲ್ಲಿ ಕ್ರಿಯಾಶೀಲತೆಯಲ್ಲಿ, ಪ್ರಯೋಗಶೀಲತೆಯಲ್ಲಿ ಖುಷಿ ಕಾಣೋದು. ಸಿನಿಮಾ ಹೊರತಾದ ಬದುಕನ್ನು ಕನಸಿನಲ್ಲಿಯೂ ಕಲ್ಪಿಸಿಕೊಳ್ಳದೇ ಉಳಿಯೋದು. ಇಂಥವೇ ಒಬ್ಬ ಫಿಲಂ ಮೇಕರ್‌ಗೆ ಇರುವಂಥ ನಿಜವಾದ ಲಕ್ಷಣಗಳು ಅಲ್ಲವೇ? ಚಿತ್ರನಟರೆಂದರೆ, ಗ್ಲಾಮರ್, ಸ್ಟೈಲ್, ಕ್ರೇಜ್, ಸ್ಟಾರ್ ಡಂ, ಬಿಲ್ಡ್ ಅಪ್ ಎಂದು ತಿಳಿದುಕೊಂಡಿದ್ದ ಅದೆಷ್ಟೋ ಯುವಜನರು ರವಿಚಂದ್ರನ್ ಮೂಲಕ ಹೊಸದನ್ನು ಕಾಣಲಾರಂಭಿಸಿದರು.

ರವಿಚಂದ್ರನ್ ಬಗ್ಗೆ ತಿಳಿದುಕೊಳ್ಳುತ್ತಾ ಹೋದಂತೆಲ್ಲಾ ನಮ್ಮನ್ನು ಎಚ್ಚರಿಸುವುದು ಅವರ ಧೈರ್ಯ ಹಾಗೂ ಪ್ರಯೋಗಶೀಲತೆ. 'ಪ್ರೇಮಲೋಕ' ಚಿತ್ರದ ಮೂಲಕ ಮೊದಲಬಾರಿಗೆ ನಿರ್ದೇಶಕರಾದ ರವಿಚಂದ್ರನ್ ಆ ಚಿತ್ರದ ಮೂಲಕ ಒಂದು ಮೈಲಿಗಲ್ಲನ್ನೇ ನೆಟ್ಟರು. ಆಗಿನ ಕಾಲಕ್ಕೆ ಅತಿಹೆಚ್ಚು ಹಣ ಖರ್ಚುಮಾಡಿಸಿಕೊಂಡ ಸಿನಿಮಾ ಎಂಬ ಹೆಗ್ಗಳಿಕೆ ಆ ಚಿತ್ರ ಪಾತ್ರವಾಗಿತ್ತು. 'ಅಪ್ಪ ಮಾಡಿದ್ದನ್ನ ಮಗ ಹಾಳುಮಾಡುತ್ತಾನೆ' ಎಂಬ ಆರೋಪವನ್ನು ಎದುರಿಸುತ್ತಲೇ ರವಿಚಂದ್ರನ್ ಅಂಥದೊಂದು ಅದ್ಭುತ ಸಿನಿಮಾ ಮಾಡಿ ಗೆದ್ದುಬಿಟ್ಟರು. ಆ ಮೂಲಕ ಅಂಥವರ ಬಾಯಿ ಮುಚ್ಚಿಸಿದರು. 'ಪ್ರೇಮಲೋಕ'ದ ಮತ್ತೊಂದು ಹೆಮ್ಮೆಯೆಂದರೆ ಹಂಸಲೇಖಾ ಅವರು ಸಂಗೀತ ನಿರ್ದೇಶಕರಾಗಿ ಬೆಳಕಿಗೆ ಬಂದಿದ್ದು. 'ಪ್ರೇಮಲೋಕ'ದ ನಂತರ ಈ ಜೋಡಿ ದಶಕಕ್ಕೂ ಹೆಚ್ಚು ಕಾಲ ಹಿಟ್ ಮೇಲೆ ಹಿಟ್ ಕೊಡುತ್ತಾ ಹೋಯಿತು. ಅದರ ಬೆನ್ನಲ್ಲೇ ದಾಖಲೆ ನಿರ್ಮಿಸಿದ ಚಿತ್ರ 'ರಣಧೀರ'. ಈ ಚಿತ್ರದ ಮೂಲಕ ರವಿಚಂದ್ರನ್ ಮತ್ತೊಂದು ಮೈಲಿಗಲ್ಲು ನೆಟ್ಟರು. ಹಂಸಲೇಖಾ ಹಾಡುಗಳು ಸೂಪರ್‌ಹಿಟ್ ಆದವು. ಖುಷ್ಬೂ ದಕ್ಷಿಣ ಭಾರತದಲ್ಲಿ ಬ್ಯುಸಿ ನಟಿ ಆದದ್ದೇ ಈ ಚಿತ್ರದಲ್ಲಿ ನಟಿಸಿದ ನಂತರ. ಬೇಸಿಕಲಿ, ಸುಭಾಶ್ ಘಾಯ್ ಹಿಂದಿಯಲ್ಲಿ ನಿರ್ದೇಶಿಸಿದ್ದ 'ಹೀರೋ' ಚಿತ್ರವನ್ನು ರವಿಚಂದ್ರನ್ ಕನ್ನಡಕ್ಕೆ 'ರಣಧೀರ'ನಾಗಿಸಿದ್ದರು. ಆನಂತರ ಬೇರೆ ಬೇರೆ ನಿರ್ದೇಶಕರ ಅಡಿಯಲ್ಲಿಯೂ ನಟಿಸಿದ ರವಿಚಂದ್ರನ್ ತಮ್ಮದೇ ಒಂದು ಯುಗ, ತಮ್ಮದೇ ಒಂದು ಅಭಿಮಾನಿ ಬಳಗವನ್ನು ನಿರ್ಮಿಸಿದ್ದರಲ್ಲಿ ಅನುಮಾನವಿಲ್ಲ. ವಿ.ಸೋಮಶೇಖರ್ ನಿರ್ದೇಶನದಲ್ಲಿ 'ಚಕ್ರವ್ಯೂಹ', 'ಪ್ರೇಮಿಗಳ ಸವಾಲ್', ಡಿ.ರಾಜೇಂದ್ರಬಾಬು ನಿರ್ದೇಶನದಲ್ಲಿ 'ಅಸಂಭವ', 'ಸ್ವಾಭಿಮಾನ', 'ನಾನು ನನ್ನ ಹೆಂಡ್ತಿ', 'ಯುಗ ಪುರುಷ', 'ರಾಮಾಚಾರಿ', 'ಶ್ರೀರಾಮಚಂದ್ರ', 'ಯಾರೇ ನೀನು ಚೆಲುವೆ', ಸಿದ್ದಲಿಂಗಯ್ಯ ನಿರ್ದೇಶನದಲ್ಲಿ 'ಬಾ ನನ್ನ ಪ್ರೀತಿಸು', ಕರಣ್ ನಿರ್ದೇಶನದಲ್ಲಿ 'ಕನಸುಗಾರ', ರೇಣುಕ ಶರ್ಮ ನಿರ್ದೇಶನದಲ್ಲಿ 'ಅಂಜದ ಗಂಡು', ಸಾಯಿ ಪ್ರಕಾಶ್ ನಿರ್ದೇಶನದಲ್ಲಿ 'ಚಿಕ್ಕೆಜಮಾನ್ರು', 'ರಾಮಕೃಷ್ಣ', 'ಒಡಹುಟ್ಟಿದವಳು', ಕೆ.ವಿ.ರಾಜು ನಿರ್ದೇಶನದಲ್ಲಿ 'ಯುದ್ಧಕಾಂಡ', 'ಸಂಗ್ರಾಮ', ಸುಬ್ಬರಾವ್.ಬಿ ನಿರ್ದೇಶನದಲ್ಲಿ 'ಪ್ರಳಯಾಂತಕ', 'ಸಾವಿರ ಸುಳ್ಳು', 'ರಾಮಣ್ಣ ಶಾಮಣ್ಣ', ವಿ.ಎಸ್.ರೆಡ್ಡಿ ನಿರ್ದೇಶನದಲ್ಲಿ 'ಗಡಿಬಿಡಿ ಗಂಡ', 'ಮಾಂಗಲ್ಯಂ ತಂತು ನಾನೇನಾ', 'ನಾನು ನನ್ನ ಹೆಂಡ್ತೀರು', ದ್ವಾರಕೀಶ್ ನಿರ್ದೇಶನದಲ್ಲಿ 'ರಸಿಕ', ಶಿವಮಣಿ ನಿರ್ದೇಶನದಲ್ಲಿ 'ಜಾಣ', ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನಿರ್ದೇಶನದಲ್ಲಿ 'ಅಣ್ಣಯ್ಯ', ಪಿ.ವಾಸು ನಿರ್ದೇಶನದಲ್ಲಿ 'ದೃಶ್ಯ', ನಾಗಣ್ಣ ನಿರ್ದೇಶನದಲ್ಲಿ 'ಓ ಪ್ರೇಮವೇ', ಎಸ್.ನಾರಾಯಣ್ ನಿರ್ದೇಶನದಲ್ಲಿ 'ರವಿಮಾಮ', ಕವಿತಾ ಲಂಕೇಶ್ ನಿರ್ದೇಶನದಲ್ಲಿ 'ಕ್ರೇಜಿಲೋಕ', ಸುದೀಪ್ ನಿರ್ದೇಶನದಲ್ಲಿ 'ಮಾಣಿಕ್ಯ' ಸೇರಿದಂತೆ ಅನೇಕ ಚಿತ್ರಗಲ್ಲಿ ನಟಿಸಿದರು.

ಜೊತೆಗೆ ತಮ್ಮೊಳಗಿನ ನಿರ್ದೇಶಕ ಸದಾ ಜಾಗೃತನಾಗಿರುವಂತೆ ಕಾಯ್ದುಕೊಳ್ಳುವಲ್ಲಿಯೂ ರವಿಚಂದ್ರನ್ ಹಿಂದೆ ಬೀಳಲಿಲ್ಲ, ಆ ನಿಟ್ಟಿನಲ್ಲಿ 'ಕಿಂದರಿ ಜೋಗಿ', 'ಶಾಂತಿ ಕ್ರಾಂತಿ', 'ಗೋಪಿಕೃಷ್ಣ', 'ಮನೆ ದೇವ್ರು', 'ಪುಟ್ನಂಜ', 'ಕಲಾವಿದ', 'ಚೆಲುವ', 'ಪ್ರೀತ್ಸೋದ್ ತಪ್ಪಾ', 'ಓ ನನ್ನ ನಲ್ಲೆ', 'ಏಕಾಂಗಿ', 'ಮಲ್ಲ', 'ಅಹಂ ಪ್ರೇಮಾಸ್ಮಿ', 'ಹಠವಾದಿ', 'ಹೂ', 'ಕ್ರೇಜಿಸ್ಟಾರ್' ಸೇರಿದಂತೆ ಅನೇಕ ಸಿನಿಮಾಗಳನ್ನು ನಿರ್ದೇಶಿಸಿದರು. 'ಮಂಜಿನ ಹನಿ' ಅವರ ಮತ್ತೊಂದು ಕನಸು.

ರವಿಚಂದ್ರನ್ ಬಗ್ಗೆ ಧ್ಯಾನಿಸುವಾಗ ಅವರ ಚಿತ್ರಗಳಿಗಿಂತ ವಿಶೇಷವಾದದ್ದು ಏನೋ ಕಣ್ಮುಂದೆ ಸುಳಿಯುತ್ತೆ- ಆತ ನಿರ್ದೇಶಿಸಿದ ಉತ್ತಮ ಸಿನಿಮಾಗಳಾದ 'ಪ್ರೇಮಲೋಕ', 'ರಣಧೀರ', 'ಕಿಂದರಜೋಗಿ', 'ಮನೆ ದೇವ್ರು', 'ಪುಟ್ನಂಜ', 'ಸಿಪಾಯಿ' ಮಟ್ಟಕ್ಕೆ 'ಕ್ರೇಜಿಸ್ಟಾರ್', 'ಹೂ', 'ಹಠವಾದಿ', 'ಅಹಂ ಪ್ರೇಮಾಸ್ಮಿ' ಚಿತ್ರಗಳು ನಿಲ್ಲುವುದಿಲ್ಲ- ಆತ 'ನೀ ಟಾಟ ನಾ ಬಿರ್ಲಾ', 'ರವಿಶಾಸ್ತ್ರಿ', 'ಮಲ್ಲಿಕಾರ್ಜುನ', 'ಕಳ್ಳ ಮಳ್ಳ ಸುಳ್ಳ' ತರಹದ ಸಾಧಾರಣ ಚಿತ್ರಗಳಲ್ಲಿಯೂ ನಟಿಸಿದ್ದುಂಟು. ಇವೆಲ್ಲದರ ಆಚೆಗೂ 'ಶ್ರೀರಾಮಚಂದ್ರ' ಚಿತ್ರದ ದ್ವಿಪಾತ್ರ, ರಾಮಾಚಾರಿಯ ಮುಗ್ಧ ಹಳ್ಳಿಗನ ಪಾತ್ರ, 'ಕನಸುಗಾರ' ಚಿತ್ರದಲ್ಲಿ ಆತ ಪ್ರೇಕ್ಷಕರನ್ನು ನಗಿಸುವುದರ ಜೊತೆಗೆ ಒಬ್ಬ ಗಾಯಕಿಯಾಗಬಯಸುವವಳಿಗೆ ನೀಡುವ ಪ್ರೋತ್ಸಾಹ, 'ಓ ನನ್ನ ನಲ್ಲೆ' ಚಿತ್ರದಲ್ಲಿನ ತ್ಯಾಗ, 'ಯಾರೇ ನೀ ಚೆಲುವೆ'ಯಲ್ಲಿನ ಹೃದಯಸ್ಪರ್ಶಿ ಅಭಿನಯ ನಮ್ಮನ್ನು ಸದಾ ಕಾಡುವಂಥದ್ದು.

ರವಿಚಂದ್ರನ್ ನಟ, ನಿರ್ದೇಶಕ, ನಿರ್ಮಾಪಕ, ಸಂಕಲನಕಾರ ಮಾತ್ರವಲ್ಲದೆ ನಮ್ಮ ಪಾಲಿಗೆ ಸಂಗೀತ ನಿರ್ದೇಶಕರಾಗಿಯೂ ಸಿಗುತ್ತಾರೆ. ದಶಕಕ್ಕೂ ಹೆಚ್ಚುಕಾಲ ರವಿಚಂದ್ರನ್ ಚಿತ್ರಗಳಿಗೆ ಸಂಗೀತ-ಸಾಹಿತ್ಯ ನೀಡಿ ಕನ್ನಡ ಕಲಾಸಕ್ತರನ್ನು ರಂಜಿಸಿದ ಹಂಸಲೇಖಾರ ಹಾಡುಗಳು ಆನಂತರದ ರವಿಚಂದ್ರನ್ ಸಿನಿಮಾಗಳಲ್ಲಿ ಇರಲಿಲ್ಲ. ಕಾರಣ ಏನೇ ಇದ್ದರೂ ಕನ್ನಡ ಚಿತ್ರರಂಗದ ಮಟ್ಟಿಗೆ ಅದೊಂದು ದುರಂತ ಕಾಲ. ಚಿತ್ರ ಸಂಗೀತ, ಚಿತ್ರ ಸಾಹಿತ್ಯಕ್ಕೆ ಹೊಸ ಮೆರುಗು ಕೊಟ್ಟ ಹಂಸಲೇಖಾ ಇನ್ನಷ್ಟು ಕಾಲ ರವಿಚಂದ್ರನ್ ಸಿನಿಮಾಗಳಿಗೆ ಕೆಲಸ ಮಾಡಬೇಕಿತ್ತು. ಅಥವಾ ಹಂಸಲೇಖಾರಿಂದ ರವಿಚಂದ್ರನ್ ಇನ್ನಷ್ಟು ಕಾಲ ಕೆಲಸ ಮಾಡಿಸಿಕೊಳ್ಳಬೇಕಿತ್ತು. ಆ ಮೂಲಕ ಮತ್ತೊಂದಿಷ್ಟು ಸಾರ್ವಕಾಲಿಕವಾಗಿ ಉಳಿಯಬಲ್ಲಂಥ ಹಾಡುಗಳನ್ನು ಕನ್ನಡಿಗರಿಗೆ ದೊರಕಿಸಿಕೊಡಬೇಕಿತ್ತು. ಆದರೆ ಅದಾಗಲಿಲ್ಲ. ಆ ಅದ್ಭುತ ಜೋಡಿ ಬೇರೆಬೇರೆಯಾಯಿತು. ಆ ದೆಸೆಯಿಂದಾಗಿ ಸ್ವತಃ ರವಿಚಂದ್ರನ್ ಅವರೇ ಸಂಗೀತ-ಸಾಹಿತ್ಯ ಸೃಷ್ಟಿಯ ಪ್ರಯತ್ನಕ್ಕೆ ಇಳಿಯಬೇಕಾಯಿತು. 'ಏಕಾಂಗಿ', 'ಅಹಂ ಪ್ರೇಮಾಸ್ಮಿ', 'ಮಲ್ಲ', 'ಹಠವಾದಿ' ತರಹದ ಒಂದಿಷ್ಟು ಚಿತ್ರಗಳನ್ನು ಹೊರತುಪಡಿಸಿದರೆ ಉಳಿದ ಚಿತ್ರಗಳಲ್ಲಿ ಗೀತರಚನೆಕಾರ-ಸಂಗೀತ ನಿರ್ದೇಶಕರಾಗಿ ರವಿಚಂದ್ರನ್ ನಿರೀಕ್ಷಿತ ಮಟ್ಟದಲ್ಲಿ ಅದೇಕೋ ಯಶಸ್ವಿಯಾಗಲಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ರವಿಚಂದ್ರನ್ ಏನೇ ಮಾಡಿದರೂ ತುಂಬಾ ಪ್ರೀತಿಯಿಂದ ಮಾಡುವಂಥ ವ್ಯಕ್ತಿ. ಸಹಜ ಅಭಿನಯದ ಜೊತೆಗೆ ಅದ್ಭುತ ತಂತ್ರಜ್ಞಾನ ಹೊಂದಿರುವಾತ. ಸಾಧಾರಣ ಸಿನಿಮಾಗಳನ್ನು ಮಾಡಿ ಚಾಲ್ತಿಯಲ್ಲಿ ಇರಬಯಸದ ಪ್ರಯೋಗಶೀಲ ಕ್ರಿಯಾಶೀಲ ಜೀವ. ದೇಶದ ಬ್ಯೂಟಿಫುಲ್ ಹುಡುಗಿಯರ ದರ್ಶನವನ್ನು ಕನ್ನಡಿಗರಿಗೆ ಮಾಡಿಸಿದ ಕ್ರೆಡಿಟ್ಟಿಗೆ ಭಾಜನರಾಗುವ ಸದಭಿರುಚಿಯ ಫಿಲಂ ಮೇಕರ್. ಇಷ್ಟೆಲ್ಲಾ ಹೇಳಿದ ನಂತರವೂ ರವಿಚಂದ್ರನ್ ಬಗ್ಗೆ ಎಲ್ಲ ಹೇಳಿದಂತಾಗುವುದಿಲ್ಲ. ಯುವಜನರನ್ನು ಆಕರ್ಷಿಸುತ್ತಿದ್ದ, ಹೊಸತನಕ್ಕೆ ತುಡಿಯುತ್ತಿದ್ದ ಈ ವ್ಯಕ್ತಿಯ ಸೀಕ್ರೆಟ್ ಏನು? ಭಾರತೀಯ ಚಿತ್ರರಂಗವೇ ಹೇಳುವಂತೆ 'ರವಿಚಂದ್ರನ್ ಥರದ ವಿಶಿಷ್ಟ ಪ್ರತಿಭೆ ಅಪರೂಪ' ಎಂಬ ಮಾತು. ಇದು ಒಪ್ಪಬಹುದಾದ ಮಾತು ಕೂಡ. ಶಂಕರ್ ನಾಗ್ ಥರದವರನ್ನು ಕಳೆದುಕೊಂಡ ಕನ್ನಡ ಚಿತ್ರರಂಗ ರವಿಚಂದ್ರನ್‌ರಿಂದ ಸಾಕಷ್ಟು ಪಡೆದುಕೊಂಡಿದೆ ಎಂಬುದನ್ನು ಮರೆಯಬಾರದು. ಅವರ ಸಿನಿಮಾ ಪ್ರೀತಿಯ ಹಿಂದೆ ಅವರ ತಂದೆ ವೀರಸ್ವಾಮಿಯವರ ಪ್ರಭಾವವಿದೆ.

ಮಗುವಿನ ಮನಸು ಮತ್ತು ನೇರನುಡಿಯ ಸ್ವಚ್ಛಂದತೆ ಅವರಲ್ಲಿದೆ. ಇವುಗಳಲ್ಲದೆ ಮಾಂತ್ರಿಕತೆ, ಕನಸು, ಹೊಸತನದೆಡೆಗಿನ ತುಡಿತ ಅವರಲ್ಲಿದೆ. ರವಿಚಂದ್ರನ್ ಇನ್ನೂ ಇಡಿಯಾಗಿ ನಮಗೆ ಬೇಕು. ಅದು ಅವರಿಂದ ಸಾಧ್ಯ. ಅದೇ ರೀತಿ ಇದೇ ಮೇ 30ಕ್ಕೆ ತಮ್ಮ 53ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಅಪೂರ್ವ ಪ್ರತಿಭೆಗೆ ಜನ್ಮದಿನದ ಶುಭಾಶಯ ಹೇಳುವ ಸಂದರ್ಭ ರವಿಚಂದ್ರನ್ ಅಭಿಮಾನಿ ವಲಯದಲ್ಲಿ ಎದುರಾಗಿದೆ.



ಹೃದಯಶಿವ

ಪಂಚಿಕೆಯನ್ನು ಸಂಜೆಯಾದರೂ ಡಿಸ್ಪ್ಲೆ ಮಾಡಿರಲಿಲ್ಲ, ಯಾಕೆಂದರೆ ಅದರ ಮುಖಪುಟದಲ್ಲಿ 'ಭಾರತಕ್ಕೆ ಗ್ರಹಣ' ಎಂದು ಪ್ರಕಟಿಸಲಾಗಿತ್ತು. ನಾನು ಪತ್ರಿಕೆಗಾಗಿ ಕೇಳಿ ಪಡೆಯಬೇಕಾಯಿತು.

ನೋಡೋಣ, ಎಷ್ಟು ದಿನಾ ಅಂತ ಸತ್ಯವನ್ನು ಮುಚ್ಚಿಡುತ್ತಾರೆ ಅಂತ. ಮೋದಿಯಾಭಿಮಾನಿಗಳು ಎಕ್ಕ ಎದ್ದು ಹೋಗಿದ್ದಾರೆ. ದೂರದೃಷ್ಟಿ ಇಲ್ಲದ ಮೋದಿಗೆ ಬುದ್ಧಿ ಇಲ್ಲದ ಹಿಂಬಾಲಕರಿದ್ದಾರಷ್ಟೇ.

- ರವಿಕುಮಾರ್, ಹಾಸನ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯ ಸರ್ಕಾರ ಅದು ಯಾವ ರೀತಿ ಕೋಮು ಸೌಹಾರ್ದತೆಯನ್ನು ಕಾಪಾಡುತ್ತದೆ? ನಾವು ವಿಧಾನಸಭೆಗೆ ಆರಿಸಿದ ಮಂತ್ರಿ ಮಹಾಶಯರು ಕೋಮುಗಲಭೆ ಆದಾಗ ಅದನ್ನು ಬಲವಾಗಿ ಖಂಡಿಸುವುದೂ ಇಲ್ಲ, ಇನ್ನು ತಡೆಯುವ ಮಾತು ಎಲ್ಲಿಂದ ಬಂದೀತು?

-ಮಂಜುಳಾ, ಪುತ್ತೂರು

ಭಾರತದ ಕರಾಳ ದಿನಗಳು ಪ್ರಾರಂಭವಾಗಿವೆ. ಹಿಟ್ಲರ್ ಮತ್ತು ಅವನ ಚೆಡ್ಡಿ ದೋಸ್ತ್‌ಗಳ ಯುಗ ಪ್ರಾರಂಭವಾಗಿದೆ. ಇನ್ನೇನಿದ್ದರೂ ಹಿಂಸಾಚಾರ. ಏಕೆಂದರೆ ಅಬ್ ಕಿ ಬಾರ್ ಮೋದಿ ಸರ್ಕಾರ್.

-ಗಣೇಶ್ ಕೆ. ಕುಂದಾಪುರ

ಇನ್ನು ಎರಡು ವರ್ಷಗಳಲ್ಲಿ ಮೋದಿಯನ್ನು ಹೊಗಳಲು ಶುರುಮಾಡುತ್ತೀರಿ. ನೂರಕ್ಕೆ ನೂರರಷ್ಟು ಇದು ಸತ್ಯ ಅಲ್ಲಿಯವರೆಗೂ ನಿಮ್ಮ ಪತ್ರಿಕೆ ಅಸ್ತಿತ್ವದಲ್ಲಿ ಇದ್ದರೆ ಮಾತ್ರ.

-ವಿಶ್ವ, ಚಿಕ್ಕಮಗಳೂರು

'ಗೌರಿ ಲಂಕೇಶ್ ಪತ್ರಿಕೆ' ಪ್ರಜಾಪ್ರಭುತ್ವದ ನಿಜವಾದ ನಾಲ್ಕನೆ ಸ್ತಂಭ. ಪತ್ರಿಕೆ ಹೀಗೇ ಮುಂದುವರೆಯಲಿ.

-ಸುನೀಲ್ ಬಾ ಫುಲೆ, ದಾವಣಗೆರೆ

ಶೋಷಿತರಿಗೆ ಬುದ್ಧನೆಂಬ ಆಲದಮರವೇ ನಿಜವಾದ ನೆರಳು...

ಇದರಲ್ಲಿ ಅನುಮಾನವಿಲ್ಲ, ಧರ್ಮರಹಿತ ತಬ್ಬಲಿಗಳಾಗಿ ಬದುಕುತ್ತಿರುವ ಶೋಷಿತ ದಲಿತ ಸಮುದಾಯಗಳಿಗೆ ನೆರಳು ನೀಡಿ ರಮಿಸಬಲ್ಲ ಚಾತ್ಯತೀತ ವಿವೇಕವಿರುವುದು ಆ ಬೋಧಿಸತ್ವ ಅರಳಿಮರಕ್ಕೆ ಮಾತ್ರ!

ಗಮನಿಸಿ: ಬಹುತೇಕ ದಲಿತಗಣ್ಯರ ಪ್ರಗತಿಪರರ ಆಶಯ, ದಲಿತರಿಗೆ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಮೀಸಲಾತಿ ಸೌಲಭ್ಯ ಕಲ್ಪಿಸಿಕೊಟ್ಟರು ಎಂಬಲ್ಲಿಗೆ ನಿಂತುಬಿಡುತ್ತದೆ. ಇದು ದುರಂತ! ಮೀಸಲಾತಿಯನ್ನೇ ಮೀರಿಸಿದ ಸಾಮಾಜಿಕ-ಸಮಾನತೆಯ ಅಂಶವೆಂದರೆ, ಡಾ. ಬಿ.ಆರ್. ಅಂಬೇಡ್ಕರ್ ದಲಿತ ಸಮುದಾಯಗಳಿಗೆ ಒದಗಿಸಿದ ಶಾಶ್ವತ ನೆಲೆ ಬೌದ್ಧಧಮ್ಮ.....! ಈ ಬಗ್ಗೆ ಈ ಕುರಿತ ಚರ್ಚೆ ಬಹುಮುಖ್ಯವಾಗಿದೆ. ಬುದ್ಧನ ವಿವೇಕದಿಂದ ವಿಕಸಿಸಿದ ಬೌದ್ಧ ಧರ್ಮ ದಲಿತಪಾಲಿಗೆ 'ಮೀಸಲಾಗಿಟ್ಟ' ರುಚಿಕರವಾದ ಶುಚಿಕರವಾದ ಮತ್ತು ಆರೋಗ್ಯಪೂರ್ಣ ಆಹಾರವಾಗಿದೆ. ಈ ಸಮಾನತೆಯ ಆಧಾರ ದಲಿತ ಭಾರತದ (23 ಕೋಟಿ) ಜನತೆಯ ಸಾಮಾಜಿಕ, ಶಿಕ್ಷಣ, ಆರ್ಥಿಕ ಹಾಗು ರಾಜಕೀಯ ಹಸಿವನ್ನು ನೀಗಿಸಬಲ್ಲದೆಂದು ಸ್ವಾಭಿಮಾನಿ ಅಂಬೇಡ್ಕರ್ ಅವರ ವೈಚಾರಿಕ ಬುದ್ಧಪ್ರಜ್ಞೆ ಸ್ಪಷ್ಟಪಡಿಸಿತ್ತು.

ಧರ್ಮಾಂತರಗೊಳ್ಳುವ ದಲಿತರು 'ಜಾತಿ ಆಧಾರದಲ್ಲಿ ಮೀಸಲಾತಿ ಬೇಡ' ಎಂದರೂ ಅಲ್ಪಸಂಖ್ಯಾತರು ಎನ್ನುವ ವಿಷಯದಲ್ಲಿ ಮೀಸಲಾತಿ ಸೌಲಭ್ಯವನ್ನು; ಕ್ರೈಸ್ತರ, ಮುಸ್ಲಿಮರ ಹಾಗೆ ಸಿಖ್ಖರ, ಬೌದ್ಧರೂ ಪಡೆದುಕೊಳ್ಳಬಹುದಾಗಿದೆ.

ದಲಿತರು ವೈದಿಕರನ್ನು ಅನುಕರಣೆ ಮಾಡಿದರೂ ಆರ್ಥಿಕವಾಗಿ ಒಂದಿಷ್ಟು ಸಫಲತೆಯನ್ನು ಪಡೆದುಕೊಂಡರೂ 'ಹಿಂದೂ ಧರ್ಮ ಗುಲಾಮರು' ಎಂಬ ಸ್ಥಾನಮಾನದಿಂದ ಕಿಂಚಿತ್ತು ಮೇಲೆ ಚಲಿಸಲಾರರು. ಪಕ್ಕದಲ್ಲಿ ನಿಂತ ಬಸ್ಸು ಚಲಿಸಿದರೆ ನಮ್ಮ ಬಸ್ಸು ಚಲಿಸುತ್ತಿದೆ ಎಂಬಂಥ ಭ್ರಮೆ ದಲಿತರದ್ದು!

ಭ್ರಮೆಯನ್ನು ಸೀಳಬೇಕಾದ ದಸಂಸ, ದಲಿತ ಬರಹಗಾರರು, ಪ್ರಗತಿಪರ ಚಿಂತಕರು ಬೌದ್ಧಧರ್ಮ ಬಗ್ಗೆ ಮಾತಾಡುತ್ತಲೇ ಇರಬೇಕಾದ ಅಗತ್ಯವಿದೆ. ಆ ಮೂಲಕ ದಲಿತ ಭಾರತದೊಂದಿಗೆ ಹಿಂದುಳಿದ ಸಮುದಾಯಗಳು ಬೌದ್ಧ ಧರ್ಮದತ್ತ ಚಲಿಸುವಂತೆ ಮಾಡಬೇಕಿದೆ ಸಾಧ್ಯವೇ? ಖಂಡಿತ ಪರಿಶ್ರಮ ಕೆಲಸ....

ಬುದ್ಧ; ಜನರೊಂದಿಗೆ ವಿದ್ವಾಂಸರೊಂದಿಗೆ, ರಾಜರೊಂದಿಗೆ, ಬ್ರಾಹ್ಮಣರೊಂದಿಗೆ ನಿರಂತರ 45 ವರ್ಷ ಮಾತಾಡಿದ್ದರು; ಈ 45 ವರ್ಷ ನಮ್ಮ ಧಿಕ್ಕಾರ ಬೇಕಿದೆ.

ಗಮನಿಸಬೇಕಾದ ವಿಷಯವೆಂದರೆ, ದಲಿತಕೇರಿಗಳ, ಅರಳಿಮರಗಳನ್ನು ನಾಶಗೊಳಿಸಿ, ಆ ಕೇರಿಗಳಲ್ಲಿನ 'ರಾಮಮಂದಿರ' ಉಳಿಸುವ ಕ್ರಿಯೆಗೆ ವೈದಿಕ(ಬ್ರಾಹ್ಮಣ) ಧರ್ಮ ದಲಿತರನ್ನು ಬಳಸಿಕೊಂಡೇ ಚಾಲನೆ ನೀಡಿದೆ. 'ದೂರ' ನಿಂತ ದಸಂಸಮಿತಿ, ದಲಿತ ಪ್ರಜ್ಞಾವಂತರು 'ಹತ್ತಿರ'ವಾದಲ್ಲಿ ಮಾತ್ರ;

ದಲಿತ ಸಮುದಾಯ 'ಅರಳಿಮರ'ಗಳನ್ನು ಉಳಿಸಿಕೊಳ್ಳಲು ಸಾಧ್ಯವಿದೆ. ಆಗ ಮಾತ್ರ ಈ ವೈದಿಕ ಕ್ರಿಮಿಗಳನ್ನು ಹೊರದಬ್ಬುವ ಕೆಲಸವನ್ನು ಬುದ್ಧಪ್ರಜ್ಞೆ ಅಹಿಂಸಾತ್ಮಕವಾಗಿ ರೂಪಿಸಬಲ್ಲದು.

-ಮೂರ್ಖಾದ್ ರಾಂಸ್ವಾಮಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಸ್ಪಷ್ಟವಾಗಿ ಮತ್ತು ಚುಟುಕಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 11-06-2014 RNI No. KARKAN2005/14648



ರೈ ಅಡುಗೆ ದಿನಕರ್ ಬಡಿಸುತ್ತಾರೆ

ಪ್ರಕಾಶ್ ರೈ ನಿರ್ದೇಶನದ 'ಒಗ್ಗರಣೆ' ಚಿತ್ರವು ಏಕಕಾಲಕ್ಕೆ ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಜೂನ್ ಮೊದಲವಾರ ತೆರೆಗೆ ಬರುತ್ತಿದೆ. ಈ ಚಿತ್ರದ ಮತ್ತೊಂದು ವಿಶೇಷತೆಯೆಂದರೆ ದಿನಕರ್ ತೂಗುದೀಪ್ ಈ ಚಿತ್ರದ ವಿತರಣಾ ಹಕ್ಕುಗಳನ್ನು ಪಡೆದಿದ್ದು ಮೂರು ಭಾಷೆಗಳಲ್ಲಿಯೂ ತಾವೇ ಬಿಡುಗಡೆ ಮಾಡುತ್ತಿರುವುದು. ಕನ್ನಡದಲ್ಲಿ ಎಪ್ಪತ್ತು ಟಾಕೀಸುಗಳಲ್ಲಿಯೂ, ತೆಲುಗಿನಲ್ಲಿ ಐವತ್ತಕ್ಕೂ ಹೆಚ್ಚು ಟಾಕೀಸುಗಳಲ್ಲಿಯೂ ಬಿಡುಗಡೆ ಮಾಡುತ್ತಿದ್ದಾರೆ. ತಮಿಳಿನಲ್ಲಿ ಎಷ್ಟು ಟಾಕೀಸುಗಳಲ್ಲಿ ಬಿಡುಗಡೆ ಮಾಡಬೇಕೆಂದು ದಿನಕರ್ ಇನ್ನಷ್ಟೇ ಯೋಚಿಸುತ್ತಿದ್ದಾರಂತೆ. ಅಂದಹಾಗೆ, 'ಸಾಲ್ಟ್ ಅಂಡ್ ಪೆಪ್ಪರ್' ಎಂಬ ಮಲಯಾಳಂ ಚಿತ್ರವನ್ನು ಪ್ರಕಾಶ್ ರೈ ರೀಮೇಕ್ ಮಾಡಿದ್ದಾರೆ. ನಿರ್ದೇಶನದ ಜೊತೆಗೆ ಪ್ರಮುಖ ಪಾತ್ರದಲ್ಲಿಯೂ ರೈ ನಟಿಸಿರುವ ಈ ಚಿತ್ರಕ್ಕೆ ಇಳಯರಾಜ ಸಂಗೀತ ಹಾಗೂ ಪ್ರೀತಾ ನಾಗರಾಜ್ ಛಾಯಾಗ್ರಹಣವಿದ್ದು ಚಿತ್ರವು ಈಗಾಗಲೇ ಒಂದು ಮಟ್ಟಿಗೆ ಕ್ರೇಜ್ ಹುಟ್ಟುಹಾಕುವಲ್ಲಿ ಯಶಸ್ವಿಯಾಗಿದೆ ಎಂದೇ ಹೇಳಬಹುದು.

ಜೇಬುಗಳ್ಳ ಪ್ರಜ್ವಲ್



ಪ್ರಜ್ವಲ್ ದೇವರಾಜ್ ಎಂಬ ನಟ ನಟಿಸಿರುವ 'ಜಂಬೂಸವಾರಿ' ಎಂಬ ಹೆಸರನ್ನುಳ್ಳ ಚಿತ್ರವೊಂದು ತನ್ನ ಸಿಡಿಗಳನ್ನು ಬಿಡುಗಡೆ ಮಾಡಿಕೊಂಡಿದೆ. ಈ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ಜೇಬುಗಳ್ಳನ ಪಾತ್ರ ನಿರ್ವಹಿಸಿದ್ದು, ತುಂಬಾ ಚಾಣಾಕ್ಷತೆಯಿಂದ ಜೇಬುಗಳ್ಳತನ ಮಾಡಿದ್ದಾರಂತೆ. ಪ್ರಸಾದ್ ಚೌಧರಿ ಹಾಗೂ ಹರಿಪ್ರಸಾದ್ ರಾವ್ ನಿರ್ಮಿಸುತ್ತಿರುವ ಈ ಸಿನಿಮಾವನ್ನು ವೇಣು ಗೋಪಾಲ್ ನಿರ್ದೇಶಿಸಿದ್ದಾರೆ. ಈ ಮೊದಲು ಇವರು 'ಈ ಭೂಮಿ ಆ ಬಾನು' ಎಂದು ಹೇಳಲ್ಪಡುವ ಸಿನಿಮಾ ಮಾಡಿದ್ದರಂತೆ. ಪ್ರಜ್ವಲ್ ಜೊತೆ ನಾಯಕಿಯಾಗಿ ನಟಿಸಿರುವ

ನಿಕಿ ಗಲ್ರಾನಿ ತಮ್ಮ ಪಾತ್ರಕ್ಕೆ ತಾವೇ ಡಬ್ ಮಾಡಿದ್ದಾರಂತೆ. ಉಳಿದಂತೆ ನಿರ್ಮಾಪಕ, ವಿತರಕ ಎಂ.ಎನ್. ಕುಮಾರ್, ಸಂಜನಾ ಗಲ್ರಾನಿ, ಮಿತ್ರ ಸಮಾ ರಂಭದಲ್ಲಿ ಪಾಲ್ಗೊಂಡಿದ್ದರಂತೆ.

ಜೈ ಲಲಿತ ಹಾಡು ಔಟ್

ಟೈಟಲ್ ಮೂಲಕ ವಿವಾದಕ್ಕೆ ಗುರಿಯಾಗಿದ್ದ 'ಜೈ ಲಲಿತ' ಚಿತ್ರವು ತನ್ನ ಆಡಿಯೋ ಬಿಡುಗಡೆ ಮಾಡಿಕೊಂಡಿದೆ. ವಿ.ಶ್ರೀಧರ್ ಸಂಗೀತ ನೀಡಿರುವ ಈ ಚಿತ್ರದಲ್ಲಿ ಶರಣ್ ನಾಯಕನಟರಾಗಿ ನಟಿಸಿದ್ದು, ಈ ಚಿತ್ರದ ಮೂಲಕ ಶ್ರೀಧರ್, ಸುಪ್ರಿಯಾ ಲೋಹಿತ್ ಎಂಬ ಗಾಯಕಿಯನ್ನೂ, ಶಶಾಂಕ್ ಲೋಹಿತ್ ಎಂಬ ಗಾಯಕನನ್ನೂ ಸಿನಿಮಾ ಪ್ರಪಂಚಕ್ಕೆ ಹೊಸದಾಗಿ ಇಂಟ್ರಡ್ಯೂಸ್ ಮಾಡಿದ್ದಾರೆ. ಅನೇಕ ಮಂದಿ ತುಂಬಿ ತುಳುಕುತ್ತಿದ್ದ ಈ ಸಿಡಿ ಬಿಡುಗಡೆ



ಕಾರ್ಯಕ್ರಮಕ್ಕೆ ಶರಣ್ ಸೇರಿದಂತೆ ದಿನಕರ್ ತೂಗುದೀಪ್, ಟಿ.ಎ.ನಾರಾಯಣ ಗೌಡ, ಅಂಜಲಿ ನಾಗರಾಜ್, ತಬಲಾ ನಾಣಿ, ರವಿಶಂಕರ್ ಗೌಡ, ಹರೀಶ್ ರಾಜ್ ಆಗಮಿಸಿದ್ದರು. ಹಾಡುಗಳು ಸಕತ್ತಾಗಿ ಮೂಡಿಬಂದಿವೆ ಎಂಬ ಖುಷಿ ಶರಣ್ ಅವರದ್ದಾದರೆ, "ನಮ್ಮ ನಿರ್ಮಾಪಕರು ಈ ಚಿತ್ರವನ್ನು ತುಂಬಾ ಕಷ್ಟಪಟ್ಟು ಮಾಡಿದ್ದಾರೆ" ಎಂಬ ಅಭಿಪ್ರಾಯ ನಿರ್ದೇಶಕ ಪ್ರೊನ್ ಕುಮಾರ್ ಅವರದ್ದು.



ಬೆಂಕಿ ಪಟ್ಟಣ ಅನುಶ್ರೀ

ಕಲಬೆರಕೆ ಅನಿರುದ್ಧ್



'ಚಿತ್ರ' ಚಿತ್ರದ ಮೂಲಕ ಒಂದಿಷ್ಟು ಹೆಸರು ಮಾಡಿಕೊಂಡು 'ಚಿಟ್ಟೆ' ಚಿತ್ರದ ಮೂಲಕ ಹೀರೋ ಆಗಿ ಅಭಿನಯಿಸಿದ ಅನಿರುದ್ಧ್ ಎಷ್ಟೇ ಪ್ರಯತ್ನಿಸಿದರೂ ಸಕ್ಸಸ್ ಕಾಣದ ಪಾಪದ ನಟ. ಸ್ವತಃ 'ಡಾ.ವಿಷ್ಣುವರ್ಧನ್ ಅಳಿಯ' ಎಂಬ ಪವರ್ ಫುಲ್ ಬ್ಯಾಕ್ ಗ್ರೌಂಡ್ ಇದ್ದರೂ ಅನಿರುದ್ಧ್ ಅದೇಕೋ ಹೀರೋ ಆಗಿ ಕ್ಲಿಕ್ ಆಗಲಿಲ್ಲ. 'ತುಂಟಾಟ' ಚೂರು ಹೆಸರು ಮಾಡಿತಾದರೂ ಅನಿರುದ್ಧ್‌ಗೆ ಬ್ರೇಕ್ ಕೊಡುವ[ಲ್ಲಿ] ಸೋತಿತ್ತು ಎಂದೇ ಹೇಳಬಹುದು. ಅದೇ ರೀತಿ, 'ನೀನೆಲ್ಲೊ ನಾನಲ್ಲೇ' ಹಾಗೂ 'ಜ್ಯೇಷ್ಠ' ಚಿತ್ರಗಳಲ್ಲಿ ಸಾಕ್ಷಾತ್ ಡಾ.ವಿಷ್ಣುವರ್ಧನ್ ಜೊತೆಯಲ್ಲೇ ನಟಿಸಿದ್ದರೂ ಅನಿರುದ್ಧ್ ಹೀರೋ ಆಗಲಾಗಲಿ[ಲ್ಲ]. ರಮೇಶ್ ಅರವಿಂದ್ ಜೊತೆ 'ಸತ್ಯವಾನ್ ಸಾವಿತ್ರಿ' ಚಿತ್ರದ[ಲ್ಲಿ] ನಟಿಸಿಯೂ, ಚಿತ್ರ ಒಂದು ರೇಂಜಿಗೆ ಹಿಟ್ ಆಗಿಯೂ ಅನಿರುದ್ಧ್ ಮಾತ್ರ ಮನೆಯಲ್ಲಿ ಮಂಡಕ್ಕಿ ತಿನ್ನುವಂತೆ ಮಾಡಿತ್ತು. ಈ ನಡು[ವೆ] ಸುಮ್ಮನೇ ಕೂರಲಾಗದ ಅನಿರುದ್ಧ್, 'ಯಾರೇ ನೀ ಹುಡುಗಿ', 'ರಕ್ಷಣಾ', 'ಗುಡ್ ಲಕ್', 'ನಲಿನಲಿಯುತ', 'ತಮಾಷೆಗಾಗಿ', 'ಮೊಗ್ಗಿನ ಜಡೆ', 'ಈಡಿಯಟ್ಸ್', 'ಇಜ್ಜೋಡು', 'ಐದೊಂದ್ಲ ಐದು', 'ಕುಣಿದು ಕುಣಿದು ಬಾರೆ' ಎಂದು ಹೆಸರಿಸಲ್ಪಡುವ ಚಿತ್ರಗಳಲ್ಲಿ ನಟಿಸಿದರು. ಉಹು[ಂ] ಏನೂ ಗಿಟ್ಟಲಿಲ್ಲ, ಮತ್ತದೇ ರಾಗ... ಅವಕಾಶಗಳಿಲ್ಲದ ಅಜ್ಞಾತವಾ[ಸ] ಯಾಕೋ ಕನ್ನಡ ಚಿತ್ರರಂಗದಲ್ಲಿ ಸರಿಬರುತ್ತಿಲ್ಲ ಎಂದು ಭಾವಿಸಿ ಅನಿರುದ್ಧ್ ಕ್ರಮೇಣ 'ಆರುಮುಗಂ' ಎಂಬ ತಮಿಳು ಚಿತ್ರದಲ್ಲಿ, 'ಚೆಟ್' ಎಂಬ ತೆಲುಗು ಚಿತ್ರದಲ್ಲೂ, 'ಸಹಪಾಠಿ' ಎಂ[ಬ] ಮಲಯಾಳಂ ಚಿತ್ರದಲ್ಲೂ ಒಂದು ಕೈ ನೋಡಿದರು. ಪಾಪ ಅದೇಕೋ ಅಲ್ಲೂ ಕೂಡ ವರ್ಕ್‌ಔಟ್ ಆಗಲಿ[ಲ್ಲ]. ಹೀಗೆ ಸತತ ಸೋಲಿನಿಂದ ಕಂಗೆಟ್ಟಿರುವ ಅನಿರು[ದ್ಧ್] ಬರೋಬ್ಬರಿ ನಾಲ್ಕು ವರ್ಷಗಳ ನಂತರ 'ಕಲಬೆರ[ಕೆ]' ಎನ್ನುವ ಕನ್ನಡ ಸಿನಿಮಾದಲ್ಲಿ ನಟಿಸಲು ಮುಂದಾಗಿದ್ದಾ[ರೆ]. ಮಧು ದಿವಾಕರ್ ಎಂಬ ವ್ಯಕ್ತಿ ನಿರ್ದೇಶಿಸುತ್ತಿರು[ವ] ಈ 'ಕಲಬೆರಕೆ' ಚಿತ್ರವು ಈಗಾಗಲೇ ಶೂಟಿಂಗ್ ಶು[ರು] ಮಾಡಿಕೊಂಡಿದ್ದು ಜುಲೈ ತಿಂಗಳಲ್ಲಿ ಪ್ರೇಕ್ಷಕರ ಮುಂ[ದೆ] ಬರುತ್ತದಂತೆ.

ಲವ್ ಇನ್ ಮಂಡ್ಯಾ[ಗೆ] ಡಿಟಿಎಸ್

ಶೂಟಿಂಗ್, ಎಡಿಟಿಂಗ್, ಡಬ್ಬಿಂಗ್ ಮುಗಿಸಿಕೊಂ[ಡು] ಈಗ ಡಿಟಿಎಸ್ ಕೆಲಸದಲ್ಲಿ ಬ್ಯುಸಿಯಾಗಿರು[ವ] ಚಿತ್ರದ ಹೆಸರು 'ಲವ್ ಇನ್ ಮಂಡ್ಯ'. ಗ[...] ಸಾಹಿತಿ ಅರಸು ಪ್ರಥಮ ಬಾರಿಗೆ ನಿರ್ದೇಶಿ[ಸು]ತ್ತಿರುವ ಈ ಚಿತ್ರದಲ್ಲಿ ನೀನಾಸಂ ಸತೀಶ್ ಹಾ[ಗೂ] ಸಿಂಧು ಲೋಕನಾಥ್ ಜೋಡಿ ಅಭಿನಯಿಸಿ[...] ಜೂನ್‌ನಲ್ಲಿ ಪೋಸ್ಟ್ ಪ್ರೊಡಕ್ಷನ್ ಕೆಲಸಗಳ[ನ್ನು] ಮುಗಿಸಿಕೊಳ್ಳುವ ಅಂದಾಜಿನಲ್ಲಿರುವ ಈ ಚಿತ್ರ[ವನ್ನು] ಜುಲೈನಲ್ಲಿ ಬಿಡುಗಡೆ ಮಾಡಬೇಕೆಂಬು[ದು] ನಿರ್ಮಾಪಕ ಉದಯ್ ಮೆಹತಾ ಅವರ ಪ್ಲಾ[ನ್]. ಒಟ್ಟು ನಲವತ್ತೈದು ದಿನಗಳ ಚಿತ್ರೀಕ[ರಣ] ನಡೆಸಿಕೊಂಡಿರುವ ಈ ಸಿನಿಮಾಗೆ ಬೆಂಗಳೂ[ರು], ಮಂಡ್ಯ, ಹೊಸೂರು, ಕೃಷ್ಣಗಿರಿ ಮುಂತಾ[ದ] ಸ್ಥಳಗಳನ್ನು ಬಳಸಿಕೊಳ್ಳಲಾಗಿದೆ.

ಜ್ಞಾನಮೂರ್ತಿ ಎಂಬುವವರು ಈ ಚಿ[ತ್ರದ] ಪ್ರಮುಖ ವಿಭಾಗವಾದ ಛಾಯಾಗ್ರಹ[ಣದ] ಹೊಣೆ ಹೊತ್ತಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 2667...
Fax : 26604536, E-mail :lankesh70@rediffm...